ಲಂಕೇಶ್


ಏಪ್ರಿಲ್ 14, 2010 ರೂ. 12/-

ಕೆಂಡಸಂಪಿಗೆ ವಿರುದ್ಧ ದೇವನೂರು ಕಿಡಿ

ಪಾಲ್ ಗಣೇಶ್ ಕೊಲೆ ಯತ್ನ


ಪ್ರೀಂ ಕೋರ್ಟ್ ಉರುಳು

00 ಕೋಟಿ ರೂ. ಅದಿರು ಲೂಟಿ




ರೌಡಿ ರೆಡ್ಡೀಸ್

ಟೇರಿಪಾಳ್ಯ, ರೌಡಿ ತೆನಾಲಿಯನ್ನು ಕೊಂದಿದ್ದು ಯಾರು?




ಗಳೂರು ತಮ್ ನ್ಯಾಪ್ ದೆ ಮಾರ್?



ನಕಲಿ ವೈದ್ಯರ ಬೆಂಬಲಕ್ಕೆ ಸ್ವಾಮಿ




ಗುಲ್ಬರ್ಗಾ ದರ್ಶನಾಪುರನ ರಕ್ತಸಿಕ್ತ ರಾಜಕೀಯ




ಜೆಕೆ-ಕೆಂಪೇಗೌಡನ ಅವತಾರ!

ಹೇಮಂತ್ ಕರ್ಕರೆಯನ್ನು ಕೊಂದವರು ಯಾರು?


ಹೇಮಂತ್ ಕರ್ಕರೆ

ಹೇಮಂತ್ ಕರ್ಕರೆ. ಭಾರತದ ಪೊಲೀಸ್ ಅಧಿಕಾರಿಗಳಲ್ಲಿ ಕೆಲವರಾದರೂ ಪ್ರಾಮಾಣಿಕರೂ ಮತ್ತು ನ್ಯಾಯನಿಷ್ಠುರರೂ ಆಗಿರುತ್ತಾರೆ ಎಂಬ ಭರವಸೆ ಹುಟ್ಟಿಸಿದ್ದ ಧೀಮಂತ ಪೊಲೀಸ್ ಅಧಿಕಾರಿ. ಸ್ವಾತಂತ್ರ್ಯಾನಂತರದಲ್ಲಿ ಈ ದೇಶ ಎದುರಿಸುತ್ತಿರುವ ಅತಿದೊಡ್ಡ ಆಂತರಿಕ ಭಯೋತ್ಪಾದನೆ (ಇಂಟರ್ನಲ್ ಸೆಕ್ಯೂರಿಟಿ ಥ್ರೆಟ್!) ಆರೆಸ್ಸೆಸ್ ನಾಯಕತ್ವದ ಬ್ರಾಹ್ಮಣವಾದಿ ಉಗ್ರಗಾಮಿಗಳದ್ದು ಎಂದು ಅನುಮಾನಕ್ಕೆಡೆಯಿಲ್ಲದಂತೆ ಸಾಬೀತುಮಾಡಿದ್ದ ಹೇಮಂತ್ ಕರ್ಕರೆಯವರು, ವಿನಾಕಾರಣ ಈ ದೇಶದ ಮುಸ್ಲಿಮರ ಮೇಲೆ ಭಯೋತ್ಪಾದನೆಯ ಗೂಬೆ ಕೂರಿಸಿ ದೇಶವನ್ನು ಮತ್ತೊಮ್ಮೆ ವಿಭಜನೆ ಮಾಡಲು ಹೊರಟಿದ್ದವರ ಜಾಲವನ್ನು ಯಶಸ್ವಿಯಾಗಿ ಬೇಧಿಸಿದ್ದರು. 2008ರಲ್ಲಿ ಮಾಲೆಗಾಂವ್‌ನಲ್ಲಿ ನಡೆದ ಸ್ಫೋಟದ ಕುರುಹನ್ನು ಬೆನ್ನುಹತ್ತಿ ಈ ದೇಶದ ಸೇನೆಯಲ್ಲಿ ಗುಪ್ತದಳದಲ್ಲಿ ಮತ್ತು ಸರ್ಕಾರದಲ್ಲಿ ಪ್ರಮುಖ ಸ್ಥಾನದಲ್ಲಿರುವವರು ಹೇಗೆ ಸಂಘಪರಿವಾರದೊಂದಿಗೆ ಸಂಚು ನಡೆಸಿದ್ದರು ಎಂಬುದನ್ನೂ ಸಹ ಅವರು ಬಯಲುಗೊಳಿಸಿದ್ದರು. 2008ರ ನವಂಬರ್ ವೇಳೆಗೆ ಹೇಮಂತ್ ಕರ್ಕರೆ ನೇತೃತ್ವದ 'ಭಯೋತ್ಪಾದನಾ ನಿಗ್ರಹ ದಳ' ಈ ಬೃಹತ್ ರಾಷ್ಟ್ರದ್ರೋಹದ ಸಂಚಿನಲ್ಲಿ ಪಾಲ್ಗೊಂಡ ಹಲವು ಪ್ರಮುಖರನ್ನು ಬಂಧಿಸಿತ್ತಲ್ಲದೆ, ಅವರ ತನಿಖೆ ಇದೇ ರೀತಿ ಮುಂದುವರೆದಿದ್ದರೆ ಬಹಳ ಬೇಗ ದೇಶಭಕ್ತರ ಮುಸುಕಿನಲ್ಲಿರುವ ಎಲ್ಲಾ ದ್ರೋಹಿಗಳನ್ನೂ ಸೆರೆಹಿಡಿದುಬಿಡುತ್ತಿದ್ದರು.



ಆದರೆ 2008ರ 26/11ರ ಮುಂಬೈ ದಾಳಿಯ ಸಂದರ್ಭದಲ್ಲಿ ಅತ್ಯಂತ ನಿಗೂಢ ರೀತಿಯಲ್ಲಿ ಹೇಮಂತ್ ಕರ್ಕರೆ, ಸಾಲಸ್ಕರ್ ಇನ್ನಿತರರು ನಿಗೂಢ "ಉಗ್ರಗಾಮಿಗಳ" ಗುಂಡಿಗೆ ಬಲಿಯಾಗಿಬಿಟ್ಟರು. ಅಂದಿನಿಂದಲೂ "ಹೇಮಂತ್ ಕರ್ಕರೆಯನ್ನು ಕೊಂದವರು ಯಾರು?", "ಅವರನ್ನು ಕೊಂದವರು ನಿಜಕ್ಕೂ ಪಾಕಿಸ್ತಾನದಿಂದ ಬಂದ ಉಗ್ರಗಾಮಿಗಳೇ?" ಎಂಬ ಪ್ರಶ್ನೆಗಳು ಎಲ್ಲಾ ದೇಶವಾಸಿಗಳನ್ನು ಕಾಡುತ್ತಲೇ ಇದ್ದವು.

ಈಗ ಈ ಎಲ್ಲಾ ಪ್ರಶ್ನೆಗಳಿಗೆ ಮಹಾರಾಷ್ಟ್ರದ ಖ್ಯಾತ ಮತ್ತು ನಿರ್ಭೀತ ಪೊಲೀಸ್ ಅಧಿಕಾರಿ ಮುಶ್ರಿಫ್ ಅವರು ತಮ್ಮ ಪ್ರಖ್ಯಾತ 'Who Killed Hemant Karkare' ಪುಸ್ತಕದ ಮೂಲಕ ದಿಗ್ಭ್ರಾಂತಿಗೊಳಿಸುವಂಥ ಉತ್ತರಗಳನ್ನು ನೀಡಿದ್ದಾರೆ. ತೆಲಗಿ ಹಗರಣದಂತಹ ಹಲವು ಮಹತ್ವದ ಪ್ರಕರಣಗಳನ್ನು ಬಯಲಿಗೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನಿವೃತ್ತ ಪೊಲೀಸ್ ಮಹಾನಿರೀಕ್ಷಕರಾದ ಮುಶ್ರಿಫ್ ಅವರು ತಮ್ಮ ದೀರ್ಘ ಅವಧಿಯ ಅನುಭವದ ನೆರವಿನೊಂದಿಗೆ ತೆರೆಯ ಹಿಂದಿದ್ದ ಸತ್ಯವನ್ನು ಹೊರತಂದಿದ್ದಾರೆ. ಇಂದು ಭಾರತದಲ್ಲಿ ಆರೋಪಿಸಲಾಗುತ್ತಿರುವ 'ಇಸ್ಲಾಮಿಕ್ ಭಯೋತ್ಪಾದನೆ'ಯ ಹಿಂದಿರುವ ನಿಜವಾದ ಶಕ್ತಿಗಳನ್ನು ಬಯಲಿಗೆಳೆಯುವ ಪ್ರಕ್ರಿಯೆಯಲ್ಲಿ ತಮ್ಮ ಜೀವವನ್ನೇ ಬಲಿಗೊಟ್ಟ ಮಹಾರಾಷ್ಟ್ರದ ಎಟಿಎಸ್ ಮುಖ್ಯಸ್ಥ ಹೇಮಂತ್ ಕರ್ಕರೆಯ ಹತ್ಯೆಯ ಹಿಂದೆ ಇರುವ 'ಸ್ವದೇಶಿ ಉಗ್ರಗಾಮಿಗಳ' ಕೈವಾಡವನ್ನು ಮುಶ್ರಿಫ್ ಈ ಪುಸ್ತಕದಲ್ಲಿ ಸವಿವರವಾಗಿ ಬಹಿರಂಗಪಡಿಸಿದ್ದಾರೆ. ಹೀಗಾಗಿಯೇ ಅಲ್ಪಾವಧಿಯಲ್ಲೇ ಅತ್ಯಂತ ಪ್ರಖ್ಯಾತಿ ಪಡೆದ ಈ ಪುಸ್ತಕದ ಮಲಯಾಳಂ ಮತ್ತು ಉರ್ದು ಆವೃತ್ತಿಗಳು ಈಗಾಗಲೇ ಮರುಮುದ್ರಣಗಳನ್ನು ಕಂಡಿವೆ.

ಅದರ ಕನ್ನಡ ಅವತರಣಿಕೆಯಾದ 'ಹೇಮಂತ್ ಕರ್ಕರೆಯನ್ನು ಕೊಂದವರು ಯಾರು?–ಇಂಡಿಯಾದಲ್ಲಿರುವ ಭಯೋತ್ಪಾದನೆಯ ನೈಜ ಮುಖ'ವನ್ನು ಮಾನವ ಹಕ್ಕು ಹೋರಾಟಗಾರ ಸುರೇಶ್ ಭಟ್ ಬಾಕ್ರಬೈಲು ಕನ್ನಡಕ್ಕೆ ಅತ್ಯುತ್ತಮವಾಗಿ ಅನುವಾದಿಸಿದ್ದರೆ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (PFI) ಸ್ತುತಿ ಪಬ್ಲಿಕೇಷನ್ಸ್ ಅವರು ಅದನ್ನು ಪ್ರಕಟಿಸುವ ಸಾಹಸ ಮಾಡಿದ್ದಾರೆ.


ಒಂದರ್ಥದಲ್ಲಿ 'ಹೇಮಂತ್ ಕರ್ಕರೆಯವರನ್ನು ಕೊಂದವರು ಯಾರು?' ಎಂಬ ಪುಸ್ತಕ ಈ ದೇಶದ ಆಡಳಿತ ವ್ಯವಸ್ಥೆ ಮತ್ತು ಆರೆಸ್ಸೆಸ್ ಹಾಗೂ ಅದರ ಬ್ರಾಹ್ಮಣವಾದಿ ಸಂಸ್ಥೆಗಳ ಮೇಲೆ ಹಾಕಿರುವ ಸುದೀರ್ಘ ಚಾರ್ಜ್‌ಶೀಟ್ ಆಗಿದೆ. ಹೀಗಾಗಿ ಯಾವುದೇ ಚಾರ್ಜ್‌ಶೀಟ್‌ನಲ್ಲಿ ಇರುವಂತೆ ಇದರಲ್ಲೂ ಅಪರಾಧ ಎಸಗಲು ಯಾರಿಗೆ ಯಾವ ಮೋಟಿವ್ ಇತ್ತು ಎಂಬುದನ್ನೂ ಮತ್ತು ಅಪರಾಧ ಕ್ರಿಯೆಯನ್ನೂ ಬಣ್ಣಿಸುತ್ತದೆ.

ಮೊದಲನೆಯದು ಮೋಟಿವ್–ಉದ್ದೇಶ. ಈ ದೇಶವನ್ನು ಮತ್ತೆ ಹಿಂದೂ ರಾಷ್ಟ್ರ ಅರ್ಥಾತ್ ಒಂದು ಬ್ರಾಹ್ಮಣವಾದಿಗಳ ಅಧೀನದಲ್ಲಿರುವ ರಾಷ್ಟ್ರವನ್ನಾಗಿ ಮಾಡಲು ಮುಶ್ರಿಫ್‌ರವರ ಪ್ರಕಾರ 1893ರಿಂದಲೂ ಬ್ರಾಹ್ಮಣವಾದಿಗಳು ಪ್ರಯತ್ನಿಸುತ್ತಲೇ ಇದ್ದಾರೆ. (ಹೀಗೆ ಹೇಳುವಾಗ ಅವರು ಪ್ರಜ್ಞಾಪೂರ್ವಕವಾಗಿ ಹಿಂದೂವಾದಿಗಳು ಎಂಬ ಪದವನ್ನಾಗಲೀ ಅಥವಾ ಬ್ರಾಹ್ಮಣರು ಎಂಬ ಪದವನ್ನಾಗಲೀ ಬಳಸುವುದಿಲ್ಲ, ಏಕೆಂದರೆ ಅವರ ಪ್ರಕಾರ ಎಲ್ಲಾ ಬ್ರಾಹ್ಮಣರು





ಬ್ರಾಹ್ಮಣವಾದಿಗಳಲ್ಲ, ಬದಲಾಗಿ ಬ್ರಾಹ್ಮಣವಾದಕ್ಕೆ ಅಧೀನರಾಗಿರಲು ಇತರರು ಒಪ್ಪಿಕೊಳ್ಳುವಂತೆ ಮಾಡುವುದಕ್ಕಾಗಿಯೇ ತಮ್ಮ ಬ್ರಾಹ್ಮಣವಾದವನ್ನು ಹಲವರು 'ಹಿಂದೂವಾದ' ಎಂದು ಕರೆದುಕೊಳ್ಳುತ್ತಾರೆ ಎಂಬುದು ಮುಶ್ರಿಫ್ ಅವರ ವಾದ. ಹೀಗಾಗಿ ತಮ್ಮ ವಾದದಲ್ಲಿ ಅವರು ಉದ್ದಕ್ಕೂ ಬ್ರಾಹ್ಮಣವಾದಿಗಳು ಎಂದೇ ಬಳಸುತ್ತಾರೆ. ಇದಕ್ಕೆ ಅವರು ಬಳಸುತ್ತಿರುವ ಅಸ್ತ್ರ ಹಿಂದೂ–ಮುಸ್ಲಿಮ್ ಕೋಮು ಗಲಭೆಗಳು.



ಆದರೆ ಅದು ದಿನಗಳೆದಂತೆ ಅವರು ಬಯಸಿದ ಪರಿಣಾಮವನ್ನು ಸಮಾಜದಲ್ಲಿ ಉಂಟುಮಾಡಲು ವಿಫಲವಾಗತೊಡಗಿದವು. ಹಾಗೆಯೇ ಬಾಬ್ರಿ ಮಸೀದಿಯ ನಾಶದ ಪರಿಣಾಮವಾಗಲೀ, ಗುಜರಾತ್ ಹತ್ಯಾಕಾಂಡದ ನಂತರದ ಪರಿಣಾಮವಾಗಲೀ ಈ ದೇಶದ ಬ್ರಾಹ್ಮಣವಾದಿಗಳು ಊಹಿಸಿದಂತೆ ಆಗಲಿಲ್ಲ. ಅದು ಹಿಂದೂ–ಮುಸ್ಲಿಮರಲ್ಲಿ ಇನ್ನಷ್ಟು ಒಡಕನ್ನುಂಟುಮಾಡುವ ಬದಲು ಸಂಘಪರಿವಾರವನ್ನೇ ದೋಷಿಯ ಸ್ಥಾನದಲ್ಲಿ ನಿಲ್ಲಿಸಿತು. ಹೀಗಾಗಿ ಕೇವಲ ಕೋಮುಗಲಭೆಗಳಿಂದ ಜನರಲ್ಲಿ ಒಡಕು ತರಲು ಕಷ್ಟವೆಂದು ಅರ್ಥಮಾಡಿಕೊಂಡ ಈ ರಾಷ್ಟ್ರದ್ರೋಹಿಗಳು ಸಮಾಜದಲ್ಲಿ ಮುಸ್ಲಿಮರ ಬಗ್ಗೆ ಉನ್ಮತ್ತ ಭಯೋತ್ಪಾದಕರೆಂಬ ಚಿತ್ರಣ ಉಂಟುಮಾಡಲು 2006ರಿಂದೀಚೆಗೆ ಹಲವು ಕಡೆ ಬಾಂಬ್ ಸ್ಫೋಟಗಳನ್ನು ನಡೆಸಿ ನೂರಾರು ಅಮಾಯಕರನ್ನು ಕೊಂದುಹಾಕಿದರು. ಅವನ್ನೆಲ್ಲಾ 'ಮುಸ್ಲಿಂ ಉಗ್ರಗಾಮಿಗಳೇ' ಮಾಡಿದ್ದಾರೆಂದು ದೇಶದ ಗುಪ್ತದಳ ತನಿಖೆ ನಡೆಯುವ ಮುನ್ನವೇ ಪ್ರಚಾರ ಮಾಡಿದರು. ಹಲವಾರು ಕಡೆ ಮುಸ್ಲಿಮರ ಪಾತ್ರವಿಲ್ಲವೆಂಬುದು ತನಿಖೆಯಲ್ಲಿ ಸ್ಪಷ್ಟವಾಗಿ ಕಂಡು ಬರತೊಡಗಿದೊಡನೆ ಗುಪ್ತದಳವು ಮಧ್ಯಪ್ರವೇಶ ಮಾಡಿ ತಾವು ಹೇಳಿದ ದಿಕ್ಕಿನಲ್ಲೇ ತನಿಖೆ ಮುಂದೆಹೋಗುವಂತೆ ಆದೇಶಿಸುತ್ತಿದ್ದರು. ಇವೆಲ್ಲವನ್ನೂ ಅವರು "ದೇಶದ ಹಿತಾಸಕ್ತಿ", "ಗೌಪ್ಯ ಮಾಹಿತಿ" ಇನ್ನಿತ್ಯಾದಿ ಹೆಸರಿನಲ್ಲಿ ನಡೆಸುತ್ತಾ ಇಡೀ ದೇಶವನ್ನೇ ತಪ್ಪುದಾರಿಗೆಳೆದಿದ್ದರು.

ಆದರೆ 2008ರ ಜನವರಿಯಲ್ಲಿ ಹೇಮಂತ್ ಕರ್ಕರೆಯವರು ಎಟಿಎಸ್ ಮುಖ್ಯಸ್ಥರಾದ ಮೇಲೆ ಪರಿಸ್ಥಿತಿಯೇ ಬದಲಾಯಿತು. 2006ರಲ್ಲಿ ನಾಂದೇಡ್‌ನಲ್ಲಿ ಆರೆಸ್ಸೆಸ್ ಕಚೇರಿಯಲ್ಲಿ ಬಾಂಬ್ ತಯಾರಿಸುತ್ತಿರುವಾಗ ಆದ ಸ್ಫೋಟದಿಂದ ಹಲವು ಸಂಘಪರಿವಾರದ ಕಾರ್ಯಕರ್ತರು ಸತ್ತಿದ್ದರು. ಆದರೆ ಆಗಿನ ಎಟಿಎಸ್ ಅದರ ತನಿಖೆಯಲ್ಲಿ ಯಾವುದೇ ಮುನ್ನಡೆ ಸಾಧಿಸಿರಲಿಲ್ಲ. ಹೇಮಂತ್ ಕರ್ಕರೆ ಆ ತನಿಖೆಯನ್ನು ಮುಂದುವರೆಸಿ ಅಭಿನವ್ ಭಾರತ್ ಇನ್ನಿತ್ಯಾದಿ ಹೊಸ ಹಿಂದೂತ್ವವಾದಿ ಉಗ್ರಗಾಮಿ ಸಂಘಟನೆಗಳು ತಮ್ಮ ಉಗ್ರಗಾಮಿ ಚಟುವಟಿಕೆಗಳಿಂದ ದೇಶದಲ್ಲಿ ಅಸ್ಥಿರತೆ ಉಂಟುಮಾಡಲು ಯತ್ನಿಸುತ್ತಿರುವ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಸಿದ್ದರು. ಅದೇ ಸಮಯದಲ್ಲಿ 2008ರ ಸೆಪ್ಟೆಂಬರ್ 29ರಂದು ಮಾಲೆಗಾಂವ್‌ನ ಮಸೀದಿಯ ಬಳಿ ಒಂದು ಸ್ಕೂಟರ್ ಬಾಂಬ್ ಸ್ಫೋಟವಾಗಿ ಹಲವು ಅಮಾಯಕರು ಸತ್ತರು. ಆದರೆ ಹೇಮಂತ ಕರ್ಕರೆ ನೇತೃತ್ವದ ಎಟಿಎಸ್ ಅದರ ತನಿಖೆಯನ್ನು ಶೀಘ್ರವಾಗಿ ನಡೆಸಿ ಈ ಸ್ಫೋಟದ ಹಿಂದೆ ಅಭಿನವ್ ಭಾರತ್‌ಗೆ ಸೇರಿದ್ದ ಸಾಧ್ವಿ ಪ್ರಗ್ಯಾ ಸಿಂಗ್ ಇರುವುದನ್ನು ಪತ್ತೆಹಚ್ಚಿದರು. ಆಕೆಯ ವಿಚಾರಣೆಯಿಂದ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿರುವ ಪುರೋಹಿತ್ ಎಂಬಾತನೂ ಇದರ ಪ್ರಮುಖ ಪಾತ್ರಧಾರಿ ಎಂಬುದನ್ನು ಪುರಾವೆ ಸಮೇತ ಪತ್ತೆಹಚ್ಚಿದರು. 2008ರ ನವಂಬರ್ 4ರಂದು ಆತನನ್ನು ಬಂಧಿಸಿ ಆತನ ಲ್ಯಾಪ್‌ಟಾಪ್ ಹಾಗೂ ಮನೆಯಲ್ಲಿದ್ದ ದಾಖಲೆಗಳನ್ನು ವಶಪಡಿಸಿಕೊಂಡು ವಿಚಾರಣೆ ನಡೆಸಿದಾಗ 2007ರ ಫೆಬ್ರವರಿಯಲ್ಲಿ ಸಂಜೋತಾ ಎಕ್ಸ್‌ಪ್ರೆಸ್‌ನಲ್ಲಿ ನಡೆದ ಸ್ಫೋಟದಿಂದ ಹಿಡಿದು ಮುಂಬೈ ರೈಲು ಸ್ಫೋಟ, ಹೈದರಾಬಾದ್ ಮೆಕ್ಕಾ ಮಸೀದಿ ಸ್ಫೋಟ, ಅಜ್ಮೀರ ದರ್ಗಾ ಸ್ಫೋಟ, 2008ರ ದೆಹಲಿ ಸ್ಫೋಟ ಎಲ್ಲದರ ಹಿಂದೆ ಈ ಅಭಿನವ್ ಭಾರತ್ ಸಂಘಟನೆ ಇರುವುದನ್ನು ಕರ್ಕರೆ ಪತ್ತೆಹಚ್ಚಿದರು. ಇದನ್ನು ಸಾಧ್ವಿ ಪ್ರಗ್ಯಾ ಮತ್ತು ಕರ್ನಲ್ ಪುರೋಹಿತ್ ಇಬ್ಬರೂ ಒಪ್ಪಿಕೊಂಡಿದ್ದರು. ಅವರು ಕೊಟ್ಟ ಮಾಹಿತಿಯಿಂದ 2008ರ ನವಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಕರ್ಕರೆಯವರು ಸೇನೆ ಮತ್ತು ಇನ್ನಿತರೆಡೆ ಪ್ರತಿಷ್ಠಾಪಿತರಾಗಿದ್ದ ಹಲವು ಬ್ರಾಹ್ಮಣವಾದಿಗಳನ್ನು ಸೆರೆಹಿಡಿಯುವವರಿದ್ದರು. ಹೀಗಾಗಿ ಅಧಿಕಾರಸ್ಥಾನದಲ್ಲಿದ್ದವರು ಮತ್ತು ಸಂಘಪರಿವಾರದ ನಾಯಕರು ಹೇಗಾದರೂ ಮಾಡಿ ಕರ್ಕರೆಯನ್ನು ನಿವಾರಿಸಿಕೊಳ್ಳಲೇಬೇಕೆಂಬ ನಿರ್ಧಾರವನ್ನು ಮಾಡಿದ್ದರು.

ಆ ಸಂದರ್ಭದಲ್ಲಿ ಅಮೆರಿಕದ ಗುಪ್ತದಳ ನವಂಬರ್ 15ರ ಸುಮಾರಿಗೆ ಮುಂಬೈ ಮೇಲೆ ದಾಳಿ ಮಾಡಲೆಂದು ಪಾಕಿಸ್ತಾನದ ಒಂದು ಭಯೋತ್ಪಾದಕರ ತಂಡ ಭಾರತದ ಕಡೆ ಹೊರಟಿರುವ ಬಗ್ಗೆ ಭಾರತ ಸರ್ಕಾರಕ್ಕೆ ಸ್ಪಷ್ಟ ಮಾಹಿತಿಯನ್ನು ನೀಡಿತ್ತು. ಈ ಮಾಹಿತಿ ಎಷ್ಟು ನಿಖರವಾಗಿತ್ತೆಂದರೆ ಆ ಭಯೋತ್ಪಾದಕರ ನೌಕೆ ಯಾವ ಅಕ್ಷಾಂಶ ಮತ್ತು ರೇಖಾಂಶದಲ್ಲಿ ಚಲಿಸುತ್ತಿದೆ ಎಂಬ ವಿವರವನ್ನೂ ಅಮೆರಿಕ ಒದಗಿಸಿತ್ತು. ಅದಕ್ಕೆ ಅವರದ್ದೇ ಆದ ಕಾರಣವಿತ್ತೆಂಬುದು ಹೆಡ್ಲೀ ಪ್ರಕರಣದ ಮೂಲಕ ಬಯಲಿಗೆ ಬರುತ್ತಿರುವುದು ಮತ್ತೊಂದು ವಿಷಯ. ಅದಿರಲಿ, ಸದ್ಯಕ್ಕೆ ಈ ನಿಖರ ಮಾಹಿತಿ ಪಡೆದುಕೊಂಡ ಭಾರತದ ಗುಪ್ತದಳ ಏನು ಮಾಡಿತೆಂಬುದು ಮುಖ್ಯ ವಿಷಯ. ಗುಪ್ತದಳದಲ್ಲಿರುವ ಆರೆಸ್ಸೆಸ್ ದಳ ಈ ಮಾಹಿತಿಯನ್ನು ತಲುಪಿಸಬೇಕಾದ ಕಡೆ ತಲುಪಿಸದೆ ಈ ಅವಕಾಶವನ್ನು ಹೇಮಂತ್ ಕರ್ಕರೆಯನ್ನು ಹತ್ಯೆಮಾಡಲು ಬಳಸಿಕೊಂಡಿತೆಂಬುದು ಹಿರಿಯ ಪೊಲೀಸ್ ಅಧಿಕಾರಿ ಮುಶ್ರಿಫ್ ಅವರ ವಾದ.

▶▶ 13

ನೋ ಕಾಮೆಂಟ್ಸ್

"ಬಂಡವಾಳಶಾಹಿಗೆ ಪ್ರಗತಿಪರ ಮುಖವಿದ್ದದ್ದು 19[...] ಶತಮಾನದಲ್ಲಿ ಮಾತ್ರ. ಈ ಶತಮಾನದಲ್ಲಿ ಜಾಗತೀಕರಣ[...] ಹೆಸರಿನಲ್ಲಿ ಚಲಾವಣೆಯಲ್ಲಿರುವ ಬಂಡವಾಳಶಾಹಿ ಅತ್ಯ[...] ಪ್ರತಿಗಾಮಿ ಬಂಡವಾಳಶಾಹಿಯಾಗಿದೆ. ಆರಂಭಕಾಲ[...] ಬಂಡವಾಳಶಾಹಿ ಏನಿಲ್ಲವೆಂದರೂ ಉತ್ಪಾದನಾ ಶಕ್ತಿ[...] ಸಾಮರ್ಥ್ಯವನ್ನು ಹೆಚ್ಚಿಸಿ ಪ್ರತಿಯೊಬ್ಬರಿಗ[...] ಉದ್ಯೋಗವನ್ನಾದರೂ ಕಲ್ಪಿಸುವ ವ್ಯವಸ್ಥೆಯೊಂದ[...] ಹುಟ್ಟುಹಾಕಿತ್ತು. ಏಕೆಂದರೆ ಆ ವ್ಯವಸ್ಥೆಯಲ್ಲಿ ಸರ[...] ಉತ್ಪಾದನೆಗೂ ಕಾರ್ಮಿಕ ಬೇಕಿದ್ದ ಅದೇರೀತಿ ಅಂತಿಮವಾ[...] ಅದನ್ನು ಬಳಸಲೂ ಗ್ರಾಹಕನಾಗಿ ಕಾರ್ಮಿಕ ಬೇಕಿದ್ದ ಹೀಗ[...] ಕಾರ್ಮಿಕ ಬದುಕುವಂತೆ ಮಾಡುವುದು ಆ ವ್ಯವಸ್ಥೆ[...] ಅಗತ್ಯವಿತ್ತು. ಆದರೆ ಜಾಗತೀಕರಣದ ಹಿಂದಿನ ಮಾರುಕ[...] ಶಕ್ತಿಗಳಿಗೆ ತಂತ್ರಜ್ಞಾನದ ಬಲದಿಂದಾಗಿ ಈಗ ಕಾರ್ಮಿಕವ[...] ಬೇಡವಾಗಿದೆ. ಈ ಭೂಮಿಗೆ 300 ಕೋಟಿ ಜನರ[...] ಹೊರಲು ಮಾತ್ರ ಸಾಧ್ಯವಿದೆ ಎನ್ನುವುದಾದರೆ ಇನ್ನುಳಿ[...] 350 ಕೋಟಿ ಜನರು ಭೂಮಿಯ ಮೇಲೆ ಇರುವು[...] ಅನಗತ್ಯ ಎಂಬುದೇ ಅವರ ಎಲ್ಲಾ ಯೋಜನೆಗ[...] ಸಾರಾಂಶವಾಗಿದೆ. ಪದೇಪದೇ ಕಾಣಿಸಿಕೊಳ್ಳುತ್ತಿರುವ ಕೃ[...] ಆಹಾರ ಬಿಕ್ಕಟ್ಟು, ನಿರುದ್ಯೋಗ ಇವೆಲ್ಲವನ್ನೂ [...] ಹಿನ್ನೆಲೆಯಲ್ಲೇ ಅರ್ಥಮಾಡಿಕೊಳ್ಳಬೇಕು."

–ಆನಂದ್ ತೇಲ್‌ತುಂ[...]

"ಆಹಾರೋತ್ಪಾದನೆಯ ಪ್ರಮುಖ ಉದ್ದೇಶವೇ ಜನತೆ[...] ಆಹಾರದ ಅಗತ್ಯಗಳನ್ನು ಪೂರೈಸಿ ಪೋಷಿಸುವುದು. ಆ[...] ದುರದೃಷ್ಟವಶಾತ್ ಬೀಜ ಉತ್ಪಾದನೆಯಿಂದ ಹಿಡಿ[...] ಆಹಾರ ವಿತರಣೆಯ ತನಕದ ಎಲ್ಲಾ ಹಂತಗಳನ್ನು ಕೆಲ[...] ಕೆಲವು ಬಹುರಾಷ್ಟ್ರೀಯ ಕಂಪನಿಗಳು ಸಂಪೂರ್ಣವ[...] ತಮ್ಮ ಏಕಸ್ವಾಮ್ಯದಲ್ಲಿಟ್ಟುಕೊಂಡಿವೆ. ವಾಸ್ತವವ[...] ಇದರಿಂದಾಗಿ 2007ರಿಂದ ವಿಶ್ವದಲ್ಲಿ ತಲೆದೋರಿರ[...] ಆಹಾರ ಬಿಕ್ಕಟ್ಟಿನ ಪ್ರಧಾನ ಫಲಾನುಭವಿಗಳು ಈ ಕಂಪನಿ[...] ಆಗಿವೆ. ಈ ಆಹಾರ ಬಿಕ್ಕಟ್ಟು ಪ್ರಾರಂಭವಾದ ನಂ[...] ಬೃಹತ್ ಕೃಷಿ ಬಹುರಾಷ್ಟ್ರೀಯ ಕಂಪನಿಗಳಾದ ಮೊನ್ಸಾಂಟೊ[...] ಮತ್ತು ಕಾರ್ಗಿಲ್‌ಗಳ ಒಟ್ಟು ಲಾಭ ಶೇ.45–50ರ[...] ಜಾಸ್ತಿಯಾಗಿದೆ."

–ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ[...] ೨೦೦೮ರಲ್ಲಿ ಮಾಡಿದ ಭಾ[...]

"ಆರೆಸ್ಸೆಸ್ ಕಾರ್ಯಕರ್ತರಿಗೆ ಉದ್ಯೋಗ ಸೃಷ್ಟಿಸಿಕೊಡ[...] ಸಲುವಾಗಿಯೇ ಗೋಹತ್ಯೆ ನಿಷೇಧ ಕಾಯಿದೆಯನ್ನು ಜಾ[...] ತಂದಿದ್ದಾರೆ."

- ಸಿದ್ಧರಾಮ[...]

"ಕನ್ನಡ ಭಾಷೆ ಮುಳುಗುತ್ತಿದೆಯೋ, ಮೊಳಗುತ್ತಿದೆ[...] ಎಂಬ ಜಿಜ್ಞಾಸೆ ಸಾರ್ವಜನಿಕರಲ್ಲಿ ಶುರುವಾಗಿದೆ."

- ಚ[...]

"ದೇಶದ ಮುಸ್ಲಿಮರಲ್ಲಿ ಶೇ.31ರಷ್ಟು [...] ಬಡತನರೇಖೆಗಿಂತ ಕೆಳಗಿದ್ದರೆ ಆದಿವಾಸಿಗಳಲ್ಲಿ ಶೇ.50[...] ಮತ್ತು ದಲಿತರಲ್ಲಿ ಶೇ.40ರಷ್ಟು ಜನ ಬಡತನ ರೇಖೆ[...] ಕೆಳಗಿದ್ದಾರೆ."

- ಕೇಂದ್ರ ಸರ್ಕಾರದ ಎನ್‌ಸಿಎಇಆರ್ [...]

"ರಾಜ್ಯ ಸರ್ಕಾರದ ಇಂದಿನ ಆರ್ಥಿಕ ಪರಿಸ್ಥಿತಿ[...] ಗಮನದಲ್ಲಿಟ್ಟುಕೊಂಡು ಮಾತನಾಡುವುದಾದರೆ ಅತಿ[...] ಅನಾವೃಷ್ಟಿ, ರೋಗರುಜಿನಗಳಿಂದ ನಾಶವಾದ [...] ಬೆಳೆಗಳಿಗೆಲ್ಲಾ ಪರಿಹಾರ ನೀಡಲು ಸಾಧ್ಯವಿಲ್ಲ."

- ಉಮೇಶ[...]

"ಇನ್ನು ಮುಂದೆ ರಕ್ಷಣಾ ಕ್ಷೇತ್ರದಲ್ಲೂ ಶೇ.100[...] ವಿದೇಶಿ ಬಂಡವಾಳ ಹೂಡಿಕೆಗೆ ಅವ[...] ಮಾಡಿಕೊಡಲಾಗುವುದು."

- ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಾ[...]

ನಂಬಿದ್ರೆನಂಬಿ ಬಿಟ್ರೆಬಿಡಿ

"ಹಸುವನ್ನು ಮಹಾಮಾತೆಯೆಂದು ನಂಬು[...] ನಿಜವಾದ ಹಿಂದೂಗಳು ಎನ್ನುವ ಅನಾಗರಿಕ [...] ಮೂರ್ಖ ಸಂಸ್ಕಾರಕ್ಕೆ ತಿಲಾಂಜಲಿ ನೀಡುವುದೇ [...] ಧರ್ಮ ಮತ್ತು ಸಂಸ್ಕೃತಿಗೆ ಶೋಭಿಸುವ ಮಾರ್ಗ. [...] ವೈಜ್ಞಾನಿಕ ಯುಗದಲ್ಲಿ ಗೋರಕ್ಷಣೆಯ ದೃಷ್ಟಿ[...] ಹಸುವನ್ನು ದೇವತೆ ಎಂದು ಒಪ್ಪುವುದು ಮೂಖ[...] ಗೋರಕ್ಷಣೆಗೆ ಧಾರ್ಮಿಕ ಸ್ವರೂಪ ಬಿಟ್ಟು ಆರ್ಥಿಕ [...] ವೈಜ್ಞಾನಿಕ ಸ್ವರೂಪ ನೀಡುವುದು ಉಚಿತ. ಹಸು, ಎತ್ತು[...] ದೇವರೆಂದು ತೋರಿಸುತ್ತಾ ತಿರುಗುವ ಗೋಭಕ್ತರನ್ನು [...] ನೊಗಕ್ಕೆ ಹೂಡಬೇಕು. ದೇಶಸೇವೆಗೆ ತೊಡಗಿಸಬೇ[...]"

- ಸಾವರ್ಕರ್ (ಪ್ರಜಾವಾಣಿಯ [...] ಅಂಕಣದಲ್ಲಿ ಡಾ.ಪಂಡಿತಾರಾಧ್ಯ ಅವರಿಂದ ಉಲ್ಲೇ[...]


"ವಿವಾಹ ರಹಿತ ಸಹವಾಸ ತಪ್ಪೆಂದು ಹೇಳು[...] ಮೊದಲು ನಮ್ಮ ಮೇಲೆ ದೂರು ದಾಖಲಿಸಬೇಕು. [...] ಅದಕ್ಕೆ ನಾವು ಅನುಮತಿ ನೀಡಿದ್ದೇವೆ."

- ಸುಪ್ರೀಂಕೋ[...]

"ಕುರುಕ್ಷೇತ್ರದಲ್ಲಿ ನಡೆದ ಆರೆಸ್ಸೆಸ್ಸಿನ ಅಖಿಲ ಭಾ[...] ವಾರ್ಷಿಕ ಮಹಾಸಭಾದಲ್ಲಿ ಕಮ್ಯುನಿಸ್ಟ್ ಮುಖಂಡ [...] ಬಸುಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು."

- ಪತ್ರಿಕಾ[...]

ಮನುಷ್ಯರಿಗೆ ಬಹಿಷ್ಕಾರ ಹಾಕಿರುವ ಗುಬ್ಬಚ್ಚಿಗಳು





ಕಂಡಹಾಗೆ

■ ಗೌರಿ ಲಂಕೇಶ್
editorlankesh@gmail.com

ನಮ್ಮ ಆಧುನಿಕ ಜೀವನ ಕ್ರಮ ಎಂತಹ ...ರೋಧಾಭಾಸಗಳಿಂದ ತುಂಬಿರುತ್ತದೆ ಎಂಬುದೇ ವಿಚಿತ್ರ.

ನಾನು ಪ್ರತಿದಿನ ಆಫೀಸಿನಿಂದ ಮನೆಗೆ ಹೋಗುವ ...ದಾರಿಯಲ್ಲಿ ಇತ್ತೀಚೆಗಿನ ತನಕ ಒಂದು ದೊಡ್ಡ ...ಕಾಂಪೌಂಡಿನಲ್ಲಿ ಒಂದು ಚಿಕ್ಕ ಹೆಂಚಿನ ಮನೆ ಇತ್ತು, ...ಈಗ ಆ ಜಾಗದಲ್ಲಿ ಮೂರಂತಸ್ತಿನ ಕಟ್ಟಡವೊಂದು ...ಬೆಳೆಯುತ್ತಿದೆ. ಎಲ್ಲಿಂದಲೂ ಒಂದು ಗುಬ್ಬಚ್ಚಿ ಕೂಡಾ ...ನುಸುಳದಂತೆ, ಗೂಡೊಂದನ್ನು ಕಟ್ಟದಂತೆ, ತತ್ತಿಗಳನ್ನಿಟ್ಟು ...ಮರಿ ಮಾಡದಂತೆ ನಿರ್ಮಿಸಲಾಗಿರುವ ಆ ಆರ್‌ಸಿಸಿ ...ಕಟ್ಟಡದ ಮಾಲೀಕರು ಅದಕ್ಕೆ ಇಟ್ಟಿರುವ ಹೆಸರು ಮಾತ್ರ ...'ಗುಬ್ಬಚ್ಚಿ ಗೂಡು'!

ನಮ್ಮ ಬಹಳಷ್ಟು ನಗರಗಳಿಂದ ಇವತ್ತು ಗುಬ್ಬಚ್ಚಿಗಳು ...ಮಾಯವಾಗುತ್ತಿವೆ. ಇದಕ್ಕೆ ವಾಯು, ಶಬ್ದ ಮತ್ತು ಪರಿಸರ ...ಮಾಲಿನ್ಯ ಒಂದು ಕಾರಣವಾದರೆ ನಮ್ಮ ಜೀವನಶೈಲಿಯಲ್ಲಿ ...ಆಗಿರುವ ಅಪಾರ ಬದಲಾವಣೆಗಳು ಪ್ರಮುಖ ...ಕಾರಣಗಳಾಗಿವೆ.

ಎಂದೂ, ಯಾರಿಗೂ ತೊಂದರೆ ಕೊಡದ, ಬದಲಾಗಿ ...ಮಕ್ಕಳಿಗೆ ಬಹಳಷ್ಟು ಆನಂದ ನೀಡುವ ಈ ಪುಟಾಣಿ ...ಪಕ್ಷಿಗಳು ಇತರೆ ಪಕ್ಷಿಗಳಂತಲ್ಲ, ಗುಬ್ಬಚ್ಚಿಗಳು ಎಂದೂ ...ಕಾಡುಗಳಲ್ಲಾಗಲಿ, ಬಯಲುಸೀಮೆಗಳಲ್ಲಾಗಲಿ, ಮರದಲ್ಲಿ ...ಗೂಡು ಕಟ್ಟಿಕೊಂಡು ವಾಸಿಸುವುದಿಲ್ಲ, ಬದಲಾಗಿ ಅವು ...ಬದುಕುವುದೇ ಮನುಷ್ಯರ ನಡುವೆ, ಮನುಷ್ಯರನ್ನು ...ಅವಲಂಬಿಸಿ. ಜನರ ಮನೆಗಳ ಸಂದಿಗೊಂದುಗಳಲ್ಲಿ ತಮ್ಮ ...ಗೂಡು ಕಟ್ಟಿಕೊಂಡು; ಅಕ್ಕಿ, ಗೋಧಿಗಳಿಂದ ಆಯ್ದು ...ಬಿಸಾಡಿದ ಕಾಳುಗಳನ್ನೇ ತಿಂದು ಬದುಕುವ ಪಕ್ಷಿಗಳು ...ಗುಬ್ಬಚ್ಚಿಗಳು. ಆದರೆ ಈಗ ನಮ್ಮ ಆರ್‌ಸಿಸಿ ಮನೆಗಳಲ್ಲಿ ...ಸಂದಿಗೊಂದುಗಳಿರುವುದಿಲ್ಲ; ಅಕ್ಕಿ, ಗೋಧಿ ಇತ್ಯಾದಿಗಳು ...ಮೊದಲೇ ಶುಭ್ರಗೊಂಡು ಪ್ಯಾಕೆಟ್‌ಗಳಲ್ಲಿ ಬರುತ್ತವೆ. ...ಒಂದೆಡೆ ಫ್ರಿಜ್‌ಗಳು ಇರುವುದರಿಂದ, ಇನ್ನೊಂದೆಡೆ ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲೇ ಮನೆಯ ಕಸ ಕೂಡ ವಿಲೇವಾರಿ ಆಗುವುದರಿಂದ ಅನ್ನದ ಕಾಳುಗಳೂ, ತರಕಾರಿ ಚೂರುಗಳೂ ಗುಬ್ಬಚ್ಚಿಗಳಿಗೆ ಸಿಗದಂತಾಗಿದೆ. ವೇಗವಾದ ಆಧುನಿಕ ಬದುಕಿನ ನಾಗಾಲೋಟದಲ್ಲಿ ಸಾಗಿದ ಮನುಷ್ಯನ ಅರಿವಿಗೆ ಬರದಂತೆ ಗುಬ್ಬಚ್ಚಿಗಳು ನಮಗೆಲ್ಲ ಬಹಿಷ್ಕಾರ ಹಾಕಿ ನಾಪತ್ತೆ ಆಗಿವೆ. ನಗರದಲ್ಲಿ ವಾಸಿಸುತ್ತಿರುವ ನೀವು ನೆನಪಿಸಿಕೊಳ್ಳಿ; ನಿಮ್ಮ ಮನೆ ಅಥವಾ ಆಫೀಸಿನ ಸುತ್ತ ಗುಬ್ಬಚ್ಚಿಯೊಂದನ್ನು ನೀವು ನೋಡಿ ಎಷ್ಟು ಕಾಲವಾಗಿದೆ?

ನನಗಿನ್ನೂ ನೆನಪಿದೆ. ನಮ್ಮ ಬಸವನಗುಡಿ ಮನೆಯಲ್ಲಿ ಪ್ರತಿವರ್ಷ ಕನಿಷ್ಠ ಎರಡು ಗುಬ್ಬಚ್ಚಿ ದಂಪತಿಗಳು ಮನೆಯ ಶೀಟುಗಳ ಸಂದಿಗಳಲ್ಲಿ ಗೂಡು ಕಟ್ಟುತ್ತಿದ್ದವು. ಅಪ್ಪ-ಅಮ್ಮ ಗುಬ್ಬಚ್ಚಿಗಳು ಎಲ್ಲಿಂದಲೋ ಕಡ್ಡಿ, ದಾರ, ಹುಲ್ಲು ಹಿಡಿದು ಗೂಡುಕಟ್ಟಲಾರಂಭಿಸುತ್ತಿದ್ದಂತೆ ಆಗಿನ್ನೂ ಚಿಕ್ಕವರಾಗಿದ್ದ ನಮಗೆಲ್ಲ ಒಂದು ರೀತಿಯಲ್ಲಿ ಸಂಭ್ರಮ. ಅವು ಯಾವಾಗ ಗೂಡನ್ನು ಕಟ್ಟಿ ಮುಗಿಸುತ್ತವೆ, ಯಾವಾಗ ಮೊಟ್ಟೆಗಳನ್ನು ಇಡುತ್ತವೆ, ಯಾವಾಗ ಗುಬ್ಬಚ್ಚಿ ಮರಿಗಳು ಜನ್ಮವೆತ್ತಿ ತಮ್ಮ 'ಚೀಂವ್ ಚೀಂವ್' ಎಂಬ ಅರಚಾಟವನ್ನು ಪ್ರಾರಂಭಿಸುತ್ತವೆ ಎಂದು ನಾವೆಲ್ಲ ಕಾದಿರುತ್ತಿದ್ದೆವು. ಹಲವೊಮ್ಮೆ ಗುಬ್ಬಚ್ಚಿ ಮರಿಗಳು ತಮ್ಮ ಗೂಡಿನಿಂದ ಜಾರಿ ನೆಲಕ್ಕೆ ಬೀಳುತ್ತಿದ್ದವು. ಆಗೆಲ್ಲ ಪ್ರಾಣಿಪ್ರಿಯಳಾದ ನಮ್ಮ ಬೇಬಿ ಕಣ್ಣೀರಿಟ್ಟಿದ್ದು ಈಗ ಗತಕಾಲದ ನೆನಪಿನಂತೆ ಭಾಸವಾಗುತ್ತಿದೆ.

ಈ ಗುಬ್ಬಚ್ಚಿಗಳ ಬಗ್ಗೆ ಇಷ್ಟೆಲ್ಲ ನೆನಪು ಮಾಡಿದ್ದು ಮೊಹಮದ್ ದಿಲಾವರ್ ಎಂಬುವವರು. ಅದೊಂದು ಶನಿವಾರ ಬೆಳಗ್ಗೆ ನನ್ನ ಪುಟಾಣಿ ಇಶಾಳಿಗೆ ತಿಂಡಿ ತಿನ್ನಿಸುತ್ತಾ ಅಂದಿನ ಪತ್ರಿಕೆಯಲ್ಲಿ ಆಕೆಯಲ್ಲಿ ಆಸಕ್ತಿ ಹುಟ್ಟಿಸುವಂತಹ ವರದಿಗಳನ್ನು ಓದುತ್ತಿದ್ದಾಗ 'ದಿ ಹಿಂದೂ' ಪತ್ರಿಕೆಯಲ್ಲಿ ಈ ದಿಲಾವರ್ ಬಗೆಗಿನ ಒಂದು ಲೇಖನ ನನ್ನ ಕಣ್ಣಿಗೆ ಬಿತ್ತು.

ಆ ಲೇಖನದಲ್ಲಿ ಗುಬ್ಬಚ್ಚಿಗಳಿಗೆ ಮತ್ತು ಇತರೆ ಚಿಕ್ಕಪಕ್ಷಿಗಳಿಗೆ ಹೇಗೆ ನಮ್ಮ ಪ್ರಸ್ತುತ ಬದುಕಿನಲ್ಲೂ ಜಾಗ ಒದಗಿಸಬಹುದು ಎಂದು ದಿಲಾವಾರ್ ವಿವರಿಸಿದ್ದರಲ್ಲದೆ, ಗುಬ್ಬಚ್ಚಿಗಳು ತಮ್ಮ ಗೂಡುಗಳನ್ನು ನಿರ್ಮಿಸಿಕೊಳ್ಳುವಂತೆ ನೆರವಾಗುವ ಬಾಕ್ಸ್‌ಗಳನ್ನು ತಯಾರಿಸಿರುವುದಾಗಿ ಹೇಳಿದ್ದರು. ಅದನ್ನು ಕೇಳುತ್ತಿದ್ದಂತೆ ನನ್ನ ಇಶಾ "ಆ ಮರದ ಬಾಕ್ಸ್ ಬೇಕು" ಎಂದು ಒತ್ತಾಯಿಸಿದಳು. ಅವಳ ಆ ಆಸೆಯನ್ನು ತಿರಸ್ಕರಿಸಲು ನನ್ನಿಂದ ಸಾಧ್ಯವೇ?! ಆಫೀಸಿಗೆ ಹೋಗುತ್ತಿದ್ದಂತೆ ದಿಲಾವರ್ ಅವರ ವೆಬ್‌ಸೈಟನ್ನು ತೆರೆದು ಗುಬ್ಬಚ್ಚಿಗಳಿಗಾಗಿ ಅವರು ಪಟ್ಟಿರುವ ಪರಿಶ್ರಮಗಳನ್ನೆಲ್ಲ ಓದಿದೆ. ಹಾಗೆಯೇ ಗುಬ್ಬಚ್ಚಿಗಳಿಗೆಂದೇ ಅವರು ನಿರ್ಮಿಸಿರುವ ಎರಡು ಮರದ ಬಾಕ್ಸ್‌ಗಳಿಗೂ, ಪಕ್ಷಿಗಳಿಗೆ ಆಹಾರ ಇಡಬಹುದಾದ ಎರಡು ಸಲಕರಣೆಗಳಿಗೂ ಮನವಿ ಕಳುಹಿಸಿದೆ.

ದಿಲಾವರ್ ಅವರ 'ನೇಚರ್ ಇಂಡಿಯಾ' ಸಂಸ್ಥೆ ಇರುವುದು ಮಹಾರಾಷ್ಟ್ರದ ನಾಸಿಕ್‌ನಲ್ಲಿ. ನನ್ನ ಮತ್ತು ಇಶಾಳ ಉತ್ಸಾಹ ಅವರಲ್ಲಿ ಎಷ್ಟು ಮೆಚ್ಚುಗೆ ಹುಟ್ಟಿಸಿತ್ತೆಂದರೆ ಆ ಸಲಕರಣೆಗಳಿಗೆ ನಾನು ಕಳುಹಿಸಬೇಕಿದ್ದ 900/- ರೂಪಾಯಿಗಳು ತಲುಪುವ ಮುನ್ನವೇ ಅವುಗಳನ್ನು ನನಗೆ ಕೊರಿಯರ್ ಮಾಡಿದರು. ಈಗ ಇಶಾ ಮತ್ತು ನಾನು ಆ ಬಾಕ್ಸ್‌ಗಳನ್ನು ಎಲ್ಲಿ ತೂಗಿ ಹಾಕಿದರೆ ಗುಬ್ಬಚ್ಚಿಗಳು ಅಥವಾ ಇತರೆ ಚಿಕ್ಕ ಪಕ್ಷಿಗಳು ಬಂದು ಗೂಡು ಕಟ್ಟುವ ಸಾಧ್ಯತೆಗಳು ಹೆಚ್ಚುತ್ತವೆ ಎಂದೂ, ಪಕ್ಷಿಗಳಿಗೆ ಆಹಾರವನ್ನು ಎಲ್ಲಿ ಇಟ್ಟರೆ ಸುಲಭವಾಗಿ ಸಿಗುತ್ತದೆ ಎಂದೂ ಚರ್ಚಿಸುತ್ತಿದ್ದೇವೆ. ನಾವು ಇರುವ ಮನೆಗಳು ಬೆಂಗಳೂರಿನ ಹೊರವಲಯದಲ್ಲಿರುವುದರಿಂದ ಗುಬ್ಬಚ್ಚಿಗಳು ಬರುತ್ತವೆ, ಗೂಡು ಕಟ್ಟುತ್ತವೆ, ಮರಿಗಳನ್ನು ಮಾಡುತ್ತವೆ ಎಂಬ ಮಹತ್ವಾಕಾಂಕ್ಷೆ ನಮ್ಮದು. ಆಕಸ್ಮಾತ್ ಅದು ಈಡೇರಿದರೆ ನಮ್ಮ ಮನೆ ನಿಜವಾಗಲೂ 'ಗುಬ್ಬಚ್ಚಿ ಗೂಡು'ಗಳಾಗಿರುತ್ತವೆ!

ಇಶಾಳಂತೆ ಗುಬ್ಬಚ್ಚಿಗಳ ಬಗ್ಗೆ ಆಸಕ್ತಿ ಹೊಂದಿರುವವರು www.natureforever.orgಗೆ ಭೇಟಿ ನೀಡಬಹುದು.

****

ಹಿಂದೂತ್ವವಾದಿಗಳ ಆರಾಧ್ಯದೈವರಲ್ಲಿ ಒಬ್ಬರಾದ ವಿ.ಡಿ. ಸಾವರ್ಕರ್ ಕೂಡ ಗೋಹತ್ಯೆ ನಿಷೇಧವನ್ನು ವಿರೋಧಿಸಿದ್ದರು ಎಂಬುದನ್ನು ಕುರಿತು ಇತ್ತೀಚೆಗೆ ಪ್ರಜಾವಾಣಿಯಲ್ಲಿ ಮೈಸೂರಿನ ಡಾ. ಪಂಡಿತಾರಾಧ್ಯ ಅವರು ಬರೆದಿದ್ದ ಲೇಖನವನ್ನು ಓದಿದ ನಮ್ಮ ತಂಡ "ಪರವಾಗಿಲ್ಲವಲ್ಲ, ಸಾವರ್ಕರ್‌ನಲ್ಲೂ ನಾವು ಮೆಚ್ಚಬಹುದಾದ ಒಂದಂಶ ಇತ್ತಲ್ಲ" ಎಂದು ಅಚ್ಚರಿಪಟ್ಟೆವು.



ಹಾಗೆಯೇ ಸಾವರ್ಕರ್ ಕುರಿತಂತೆ ಇತರೆ ಹಲವು ಲೇಖನಗಳನ್ನು ಓದಿದಾಗ, ಆತನ ಬಗ್ಗೆ ಇನ್ನೊಂದೆರಡು ಕುತೂಹಲಕಾರಿ ಅಂಶಗಳು ಕಂಡುಬಂದವು. ಅವುಗಳಲ್ಲಿ ಒಂದು: ಆತ ಯಜ್ಞ ಮತ್ತು ಪೂಜಾ ಪದ್ಧತಿಗಳನ್ನು ಮುಠ್ಠಾಳರು ಅನುಸರಿಸುವ ಕ್ರಮಗಳು ಎಂದು ಕಿಡಿಕಾರುತ್ತಿದ್ದರು. ಅಂತಹ ಸಾವರ್ಕರ್ ಇವತ್ತು ಕೂತು ನಿಂತರೂ ಹೋಮ, ಹವನ, ಯಜ್ಞ, ಪೂಜೆ ಇತ್ಯಾದಿಗಳನ್ನು ಮಾಡುವ ಮುಖ್ಯಮಂತ್ರಿ ಯಡಿಯೂರಪ್ಪನನ್ನು ನೋಡಿ ಹೇಗೆ ಕ್ಯಾಕರಿಸಿ ಉಗಿಯುತ್ತಿದ್ದರು ಎಂದು ಊಹಿಸಿಕೊಂಡು ಜೋರಾಗಿ ನಕ್ಕೆ.

ಅಂದಹಾಗೆ, ಧರ್ಮದ ಹೆಸರಿನಲ್ಲಿ ಅಮಾಯಕ ಜನರನ್ನು ವಂಚಿಸುವ ಸ್ವಯಂಘೋಷಿತ ಪಂಡಿತರನ್ನು ಕಂಡರೂ ಸಾವರ್ಕರ್‌ಗೆ ಆಗುತ್ತಿರಲಿಲ್ಲ. ಅಂತಹವರನ್ನೆಲ್ಲ ನಿರ್ದಾಕ್ಷಿಣ್ಯವಾಗಿ ಲೇವಡಿ ಮಾಡುತ್ತಿದ್ದರು.

ಶಾಲಾಮಕ್ಕಳಿಗೆ ಬಿಸಿಯೂಟದ ಭಾಗವಾಗಿ ಮೊಟ್ಟೆಯನ್ನು ಕೊಡಕೂಡದೆಂದು ವಾದಿಸಿದ ಚೆಡ್ಡಿಗಳ ಗಮನಕ್ಕೆ ಈ ಕುರಿತಂತೆಯೂ ಸಾವರ್ಕರ್ ಏನು ಹೇಳಿದ್ದರು ಎಂಬುದನ್ನು ತರುವುದು ಅಗತ್ಯ ಎನಿಸುತ್ತಿದೆ. ಹಿಂದೂಗಳೆಲ್ಲ ಸಸ್ಯಾಹಾರವನ್ನು ತ್ಯಜಿಸಿ ಮೊಟ್ಟೆ ಮತ್ತು ಮತ್ಸ್ಯಾಹಾರವನ್ನು ತಮ್ಮ ಆಹಾರ ಪದ್ಧತಿಯನ್ನಾಗಿ ಸ್ವೀಕರಿಸಬೇಕು ಎಂದೇ ಸಾವರ್ಕರ್ ಹೇಳಿದ್ದರು.

ಆದರೆ ಇದ್ಯಾವುದೂ ಹಿಂದೂತ್ವವಾದಿಗಳ ತಲೆಗಳನ್ನು ಹೊಕ್ಕಂತೆ ಕಾಣಿಸುವುದಿಲ್ಲ, ಆದ್ದರಿಂದಲೇ ಅವರ ಮಂಗಚೇಷ್ಟೆಗಳೊಂದಿಗೆ ಅವರ ಬಾಲಗಳೂ ಬೆಳೆಯುತ್ತಿವೆಯೇ ಹೊರತು ಬುದ್ಧಿಯಲ್ಲ. ●

ಕಾಮ್ರೇಡರೊಂದಿಗೆ ನಡೆದಾಡುತ್ತಾ

ಅರುಂಧತಿ ರಾಯ್ ಲೇಖನ ▶▶ ಭಾಗ-2

ಇಂಟರ್‌ನೆಟ್‌ನಲ್ಲಿನ ಒಂದು ಲೇಖನದ ಪ್ರಕಾರ ...ಸ್ರೇಲಿನ ಮೊಸ್ಸಾದ್ ನೆರವಿನೊಂದಿಗೆ ಗುರಿ ಇಟ್ಟು ...ಕ್ಕೆ ಮಾಡುವ ತಂತ್ರದಲ್ಲಿ 30 ಉನ್ನತ ಪೊಲೀಸ್ ...ಧಿಕಾರಿಗಳಿಗೆ ತರಬೇತಿ ನೀಡಲಾಗುತ್ತಿದ್ದು ಅದರ ಉದ್ದೇಶ ...ಮಾವೋವಾದಿಗಳನ್ನು 'ರುಂಡವಿಲ್ಲ'ದಂತೆ ಮಾಡುವುದೇ ...ಗಿದೆ. ಹಲವು ಪತ್ರಿಕಾ ವರದಿಗಳ ಪ್ರಕಾರ ಅಮೆರಿಕದ ...ಸೈನ್ಯದಲ್ಲಿ ಬಹಳ ಜನಪ್ರಿಯವಾಗಿರುವ ಆಧುನಿಕ ...ಶಸ್ತ್ರಗಳನ್ನು ಇಸ್ರೇಲ್‌ನಿಂದ ಖರೀದಿಸಲಾಗಿದೆ. ...ಇವರ ಮೇಲೆ ಪ್ರಯೋಗಿಸಲು ಸೂಕ್ತವಾದ ...ಸ್ತ್ರಗಳಿವು.

ರಾಯಪೂರ್‌ನಿಂದ ದಾಂತೆವಾಡಕ್ಕೆ ಪ್ರಯಾಣಿಸು ...ವುದಕ್ಕೆ ಸುಮಾರು ಹತ್ತು ಗಂಟೆ ತೆಗೆದುಕೊಳ್ಳು ...ವುದಲ್ಲದೆ ಅದು 'ಮಾವೋವಾದಿ ಪೀಡಿತ' ...ಪ್ರದೇಶವನ್ನು ಆವರಿಸಿದೆ. ಇದು ಉಪೇಕ್ಷೆಯಿಂದ ...ಬಳಸಿರುವ ಪದಗಳಲ್ಲ, 'ಪೀಡಿತ' ಎಂಬುದರ ...ಅರ್ಥವೇ ರೋಗ/ಪೀಡೆ. ರೋಗಕ್ಕೆ ಚಿಕಿತ್ಸೆ ...ನೀಡಬೇಕು. ಪೀಡೆಗಳನ್ನು ನಿರ್ನಾಮ ಮಾಡಬೇಕು. ...ಮಾವೋವಾದಿಗಳನ್ನು ನಾಶ ಮಾಡಬೇಕು. ಹೀಗೆ ...ಕ್ರಮೇಣವಾಗಿ, ನೀರಸವಾಗಿ ಸಾಮೂಹಿಕ ಹತ್ಯೆಗೆ ಬಳಸುವ ...ಪದಗಳು ನಮ್ಮ ಅರಿವಿಲ್ಲದಂತೆ ನಮ್ಮ ಶಬ್ದಕೋಶದಲ್ಲಿ ...ಸೇರಿಕೊಂಡಿವೆ.

...ಹೆದ್ದಾರಿಗೆ ರಕ್ಷಣೆ ನೀಡಲು ಭದ್ರತಾ ಪಾಲಕರು ರಸ್ತೆ ...ಯಲ್ಲಿರುವ ಒಂದಿಷ್ಟು ಕಾಡಿನ ಪ್ರದೇಶಗಳನ್ನು ತಮ್ಮ ...ವಶಕ್ಕೆ ತೆಗೆದುಕೊಂಡಿದ್ದಾರೆ. ಅದಾದನಂತರ ಇರುವುದು ...ದಾ'ಗಳ, 'ಸಹೋದರರ', ಕಾಮ್ರೇಡ್‌ಗಳ 'ರಾಜ್ಯ.' ...ರಾಯಪೂರ್‌ನ ಹೊರ ಅಂಚಿನಲ್ಲಿ ವೇದಾಂತ (ಗೃಹ ...ಮಂತ್ರಿಯವರು ಒಮ್ಮೆ ಈ ಕಂಪನಿಗೆ ಕೆಲಸ ಮಾಡಿದ್ದರು) ...ಕ್ಯಾನ್ಸರ್ ಆಸ್ಪತ್ರೆಯ ದೊಡ್ಡ ಜಾಹೀರಾತು ಫಲಕವಿದೆ. ...ಒರಿಸ್ಸಾದಲ್ಲಿ ವೇದಾಂತ ಅಲ್ಯೂಮಿನಿಯಂ ಅದಿರು ಗಣಿಗಾರಿಕೆ ನಡೆಸುತ್ತಿದೆಯಲ್ಲದೆ ಅಲ್ಲಿ ಒಂದು ವಿಶ್ವವಿದ್ಯಾಲಯಕ್ಕೆ ಆರ್ಥಿಕ ನೆರವೂ ನೀಡುತ್ತಿದೆ. ಹೀಗೆ ನೀರಸವಾಗಿ, ಕ್ರಮೇಣವಾಗಿ ಈ ಗಣಿಗಾರಿಕಾ ಕಂಪನಿಗಳು "ನಿಜವಾದ ಕಾಳಜಿಯನ್ನು ಹೊಂದಿರುವ ಸಾಧು ದೈತ್ಯರು" ಎಂಬಂತೆ ನಮ್ಮ ಕಲ್ಪನೆಯನ್ನು ಪ್ರವೇಶಿಸುತ್ತಿವೆ. ಅದನ್ನು ಸಿಎಸ್‌ಆರ್-ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ



ಕಾಡಿನಲ್ಲಿ ಮಾವೋವಾದಿ ಆದಿವಾಸಿಗಳು

(ಕಾರ್ಪೊರೇಟ್‌ಗಳ ಸಾಮಾಜಿಕ ಜವಾಬ್ದಾರಿ) ಎಂದು ಕರೆಯುತ್ತಾರೆ. ಗಣಿಗಾರಿಕಾ ಕಾರ್ಪೊರೇಟ್ ಕಂಪನಿಗಳು ಒಂದು ರೀತಿಯಲ್ಲಿ ಖ್ಯಾತ ನಟ ಮತ್ತು ಮಾಜಿ ಮುಖ್ಯಮಂತ್ರಿ ಎನ್‌ಟಿಆರ್‌ನಂತೆ ಈ ಸಿಎಸ್‌ಆರ್‌ಗಳು ವರ್ತಿಸುವಂತೆ ಮಾಡುತ್ತವೆ. ಹೇಗೆ ಎನ್‌ಟಿಆರ್ ಪೌರಾಣಿಕ ಚಿತ್ರಗಳಲ್ಲಿ ಎಲ್ಲಾ ಪಾತ್ರಗಳನ್ನೂ-ನಾಯಕ ಮತ್ತು ಖಳನಾಯಕ-ನಿರ್ವಹಿಸುತ್ತಿದ್ದರೋ ಹಾಗೆಯೇ ಈ ಕಂಪನಿಗಳು ಕೂಡಾ ಒಮ್ಮೆಗೆ 'ನಾಯಕ' ಮತ್ತು 'ಖಳನಾಯಕ' ಎರಡೂ ಹೌದು. ಭಾರತದ ಗಣಿಗಾರಿಕಾ ವಲಯದ ತಳಹದಿಯಾದ ಘಾತಕತನದ ಆರ್ಥಿಕ ಲೂಟಿಗೆ ಈ ಸಿಎಸ್‌ಆರ್ ಮುಸುಕಾಗಿ ಕೆಲಸ ಮಾಡುತ್ತದೆ.

ಉದಾಹರಣೆಗೆ, ಕರ್ನಾಟಕದ ಲೋಕಾಯುಕ್ತರು ಇತ್ತೀಚೆಗೆ ಸಲ್ಲಿಸಿರುವ ವರದಿಯ ಪ್ರಕಾರ ಒಂದು ಖಾಸಗಿ ಕಂಪನಿ ಎತ್ತುವ ಪ್ರತಿ ಟನ್ ಕಬ್ಬಿಣ ಅದಿರಿಗೆ ಸರ್ಕಾರ ಪಡೆಯುವ ರಾಯಧನ ಕೇವಲ 27 ರೂಪಾಯಿಗಳಾದರೆ, ಕಂಪನಿ ಪಡೆಯುವ ಹಣ 5000 ರೂಪಾಯಿಗಳು. ಬಾಕ್ಸೈಟ್ ಮತ್ತು ಅಲ್ಯೂಮಿನಿಯಂ ವಲಯದಲ್ಲಿ ಈ ಲಾಭ ಇನ್ನೂ ಹೆಚ್ಚಿನ ಪ್ರಮಾಣದ್ದು. ಅಂದರೆ ಇದು ಬಿಲಿಯನ್‌ಗಟ್ಟಲೇ ಡಾಲರ್‌ಗಳ ಪ್ರಮಾಣದಲ್ಲಿ ನಡೆಯುತ್ತಿರುವ ಹಗಲು ದರೋಡೆ. ಹೀಗೆ ದರೋಡೆ ಮಾಡಿದ ಹಣದಿಂದ ಚುನಾವಣೆಗಳನ್ನು, ಸರ್ಕಾರಗಳನ್ನು, ನ್ಯಾಯಾಧೀಶರನ್ನು, ಪತ್ರಿಕೆಗಳನ್ನು, ಟಿವಿ ಚಾನೆಲ್‌ಗಳನ್ನು, ಸರ್ಕಾರೇತರ ಸಂಘಟನೆಗಳನ್ನು, ಜನರಿಗೆ ನೆರವು ನೀಡುವ ಸಂಸ್ಥೆಗಳನ್ನು ಕೊಂಡುಕೊಳ್ಳಬಹುದು. ಹಾಗಿರುವಾಗ ಅಲ್ಲೊಂದು ಇಲ್ಲೊಂದು ಕ್ಯಾನ್ಸರ್ ಆಸ್ಪತ್ರೆ ಯಾವ ಲೆಕ್ಕಕ್ಕೆ?

ಗಣಿಗಾರಿಕಾ ಕಂಪನಿಗಳೊಂದಿಗೆ ಛತ್ತೀಸಗಢದ ಸರ್ಕಾರ ಮಾಡಿಕೊಂಡ ಒಪ್ಪಂದದ ಪಟ್ಟಿಯಲ್ಲಿ ವೇದಾಂತ ಹೆಸರು ಇತ್ತೋ ಇಲ್ಲವೋ ನನಗೆ ನೆನಪಿಲ್ಲ. ಆದರೆ ಇಲ್ಲೊಂದು ಕ್ಯಾನ್ಸರ್ ಆಸ್ಪತ್ರೆ ಇರುವುದರಿಂದ ಹತ್ತಿರದಲ್ಲೆಲ್ಲೋ ಒಂದು ಬಾಕ್ಸೈಟ್ ಗುಡ್ಡ ಇರಲೇಬೇಕೆಂದು ತರ್ಕಿಸುವಷ್ಟು 'ವಕ್ರ' ಬುದ್ಧಿ ನನ್ನದು.

'ಕೌಂಟರ್ ಟೆರರಿಸಂ ಅಂಡ್ ಜಂಗಲ್ ವಾರ್‌ಫೇರ್ ಕಾಲೇಜ್'ಗೆ ಖ್ಯಾತಿ ಪಡೆದಿರುವ ಕಾಂಕೆರ್ ಅನ್ನು ದಾಟಿದೆವು. ಈ ಕಾಲೇಜನ್ನು ನಡೆಸುತ್ತಿರುವ ಬ್ರಿಗೇಡಿಯರ್ ಬಿ.ಕೆ. ಪೊನ್ವಾರ್ ಒಂದು ರೀತಿಯಲ್ಲಿ ಈ ಯುದ್ಧದ ರಂಪೆಲ್‌ಸ್ಟಿಲ್‌ಸ್ಕಿನ್ (ಜರ್ಮನ್ ಭಾಷೆಯಲ್ಲಿನ ಮಕ್ಕಳ ಕತೆಯೊಂದರಲ್ಲಿ ರಂಪೆಲ್ ಸ್ಟಿಲ್‌ಸ್ಕಿನ್ ಹುಲ್ಲನ್ನು ಚಿನ್ನವಾಗಿ ಪರಿವರ್ತಿಸುತ್ತಾನೆ). ಪೊನ್ವಾರ್ ಅವರಿಗೆ ನೀಡಿರುವ ಜವಾಬ್ದಾರಿ ಭ್ರಷ್ಟ ಮತ್ತು ಪುಡಪೋಸಿ ಪೊಲೀಸರನ್ನು (ಹುಲ್ಲು) ಅರಣ್ಯದಲ್ಲಿ ಯುದ್ಧ ಮಾಡಬಲ್ಲ ಕಮಾಂಡೊ (ಚಿನ್ನ)ಗಳನ್ನಾಗಿ ಪರಿವರ್ತಿಸುವುದು. ಈ ಯುದ್ಧ ತರಬೇತಿ ಸಂಸ್ಥೆಯ ವೇದ ವಾಕ್ಯ 'ಗೆರಿಲ್ಲಾಗಳೊಂದಿಗೆ ಗೆರಿಲ್ಲಾ ರೀತಿಯೇ ಯುದ್ಧ ಮಾಡು' ಎಂಬುದಾಗಿದ್ದು ಅದನ್ನು ಕಾಲೇಜಿನ ಹೊರಗಡೆಯ ಕಲ್ಲುಗಳ ಮೇಲೆ ಕೆತ್ತಲಾಗಿದೆ. ಇಲ್ಲಿ ಓದಲು, ಹರಿದಾಡಲು, ಹಾರುತ್ತಿರುವ ಹೆಲಿಕಾಪ್ಟರ್‌ಗಳ ಮೇಲೆ ಅಥವಾ ಅವುಗಳಿಂದ ಹಾರಲು, ಕುದುರೆ ಸವಾರಿ (ಕಾರಣ ಏನಿರಬಹುದು), ಹಾವುಗಳನ್ನು ತಿಂದು ಕಾಡಿನಲ್ಲಿ ವಾಸಿಸಲು ಪುರುಷರಿಗೆ ತರಬೇತಿ ನೀಡಲಾಗುತ್ತದೆ. ಆರು ವಾರಗಳಿಗೊಮ್ಮೆ 800 ಪೊಲೀಸರು ಇಲ್ಲಿ ತರಬೇತಿ ಪಡೆದು ಹೊರಬರುತ್ತಾರೆ. ಇಂತಹದ್ದೇ ಇಪ್ಪತ್ತು ಕಾಲೇಜುಗಳನ್ನು ಭಾರತದ ವಿವಿಧೆಡೆ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆ. ನಿಧಾನವಾಗಿ ಪೊಲೀಸ್ ಪಡೆಯನ್ನು ಸೈನ್ಯವಾಗಿ ಪರಿವರ್ತಿಸಲಾಗುತ್ತಿದೆ. (ಆದರೆ ಕಾಶ್ಮೀರದಲ್ಲಿ ಇದಕ್ಕೆ ವಿರುದ್ಧವಾದ ಪ್ರಕ್ರಿಯೆ ನಡೆಯುತ್ತಿದೆ. ಅಲ್ಲಿ ಸೈನ್ಯವನ್ನೇ ಒಂದು ದೊಡ್ಡದಾದ, ಆಡಳಿತ ನಡೆಸುವ ಪೊಲೀಸ್ ಪಡೆಯಾಗಿ ಮಾಡಲಾಗುತ್ತಿದೆ). ಉಲ್ಟಾಪಲ್ಟಾ, ತಿರುಗಮುರುಗ. ಅದೇನೇ ಇದ್ದರೂ ಶತ್ರು ಮಾತ್ರ ಜನ.

ಕತ್ತಲೆ ಆಗಿದೆ. ಜಗದಲ್ಪೂರ್ ನಿದ್ರಿಸುತ್ತಿದ್ದರೆ, ಯುವ ಕಾಂಗ್ರೆಸ್ ಸೇರುವಂತೆ ಕರೆ ನೀಡಿರುವ ರಾಹುಲ್ ಗಾಂಧಿ ಇರುವ ಜಾಹೀರಾತು ಫಲಕಗಳು ಮಾತ್ರ ರಾರಾಜಿಸುತ್ತಿವೆ. ಆತ ಇತ್ತೀಚಿನ ತಿಂಗಳಲ್ಲಿ ಎರಡು ಬಾರಿ ಬಸ್ತರ್‌ಗೆ ಭೇಟಿ ನೀಡಿದ್ದರೂ ಈ ಯುದ್ಧದ ಬಗ್ಗೆ ಏನನ್ನೂ ಹೇಳಿಲ್ಲ. 'ಜನರ ರಾಜಕುಮಾರ'ನಿಗೆ ಇದೆಲ್ಲ ತುಂಬಾ ಕೊಳಕು ಕೊಳಕಾಗಿ ಕಂಡಿರಬಹುದು. ಆತನ ಮಾಧ್ಯಮ ಮ್ಯಾನೇಜರ್‌ಗಳು ಆತ ಏನನ್ನೂ ಹೇಳದಂತೆ ಒತ್ತಾಯಿಸಿರಬಹುದು. ಆದರೆ ವಾಸ್ತವವಾಗಿ ಇವತ್ತು ಹಲವಾರು ಅತ್ಯಾಚಾರ, ಕೊಲೆ, ಹಳ್ಳಿಗಳ ದಹನ, ಸಾವಿರಾರು ಜನ ತಮ್ಮ

▶▶ 4



ಒಂದು ಪ್ರೀತಿಯ ಕತೆ


ಬಹು ಚರ್ಚೆಗೆ ಒಳಗಾಗಬೇಕಿದ್ದ ಗಂಭೀರ ವಿಚಾರವೊಂದು ಮುಖ್ಯವಾಹಿನಿಯ ಮಾಧ್ಯಮಗಳ ಕಣ್ತಪ್ಪಿಸಿ ಸದ್ದುಗದ್ದಲವಿಲ್ಲದೇ ನುಸುಳಿಕೊಂಡು ಹೋಗುತ್ತಿದೆ. ಅದು ಸುಷ್ಮಾ ತಿವಾರಿ ಮತ್ತು ಪ್ರಭು ನೋಚಿಲ್ ಎಂಬ ಪ್ರೇಮಿಗಳ ನೈಜ ಪ್ರೇಮ ಕತೆ ಬರ್ಬರ ಅಂತ್ಯ ಕಂಡ ದಾರುಣ ಕತೆ.

ಆರು ವರ್ಷ ಹಿಂದಿನ ಮಾತು. ಸುಷ್ಮಾ ತಿವಾರಿ ಮೂಲತಃ ಉತ್ತರ ಪ್ರದೇಶ ಮೂಲದ ಬ್ರಾಹ್ಮಣ ಹುಡುಗಿ. ಪ್ರಭು ಕೇರಳ ಮೂಲದ ಕೆಳಜಾತಿಯ ಹುಡುಗ. ಅವರಿಬ್ಬರ ಕುಟುಂಬ ಮುಂಬೈನಲ್ಲಿ ವಾಸವಾಗಿದ್ದವು. ಸುಷ್ಮಾಳ ಮನೆಯಿಂದ ಮೂರು ಮನೆಯಾಚೆಗೆ ಪ್ರಭುನ ಮನೆ. ಅವರಿಬ್ಬರ ಪರಿಚಯವಾಗಿ, ಪ್ರೇಮಾಂಕುರವಾಗಿ ಸುಷ್ಮಾಳ ಮನೆಯವರ ವಿರೋಧದ ನಡುವೆಯೂ ರಹಸ್ಯವಾಗಿ ಮದುವೆಯೂ ನಡೆದುಹೋಯಿತು. ಇದಾದ ಏಳುತಿಂಗಳ ತರುವಾಯ, ಸುಷ್ಮಾ ತುಂಬು ಗರ್ಭಿಣಿಯಾಗಿದ್ದಾಗ ಆಕೆಯ ಅಣ್ಣ ದಿಲೀಪ್ ಇವರಿಬ್ಬರೂ ರಹಸ್ಯವಾಗಿ ವಾಸಿಸುತ್ತಿದ್ದ ಮನೆಯನ್ನು ಪತ್ತೆ ಹಚ್ಚಿ ತನ್ನ ಸಂಗಡಿಗರೊಂದಿಗೆ ಬಂದು ಸುಷ್ಮಾಳ ಪ್ರೀತಿಯ ಗಂಡ ಪ್ರಭುವನ್ನೂ ಆತನ ತಂದೆಯನ್ನೂ, ಒಬ್ಬ ಹದಿಹರೆಯದ ಸಹೋದರ ಸಂಬಂಧಿಯನ್ನೂ ಹಾಗೂ ಪಕ್ಕದ ಮನೆಯ ಹದಿಹರೆಯದ ಹುಡುಗನನ್ನೂ ಬರ್ಬರವಾಗಿ ಕೊಚ್ಚಿಕೊಂದ. ಗಂಭೀರವಾಗಿ ಗಾಯಗೊಂಡಿದ್ದ ಪ್ರಭುನ ತಾಯಿ ಮತ್ತು ತಂಗಿ ಸುದೀರ್ಘ ಚಿಕಿತ್ಸೆಯ ನಂತರ ಹೇಗೋ ಪ್ರಾಣಾಪಾಯದಿಂದ ಬದುಕುಳಿದರಾದರೂ ಶಾಶ್ವತವಾಗಿ ಅಂಗವಿಕಲರಾದರು. ಆಸಮಯದಲ್ಲಿ ಗರ್ಭಿಣಿ ಸುಷ್ಮಾ ಬೇರೆ ಸಂಬಂಧಿಕರ ಮನೆಗೆ ಹೋಗಿದ್ದರಿಂದ ಹೇಗೋ ಬಚಾವಾಗಿಬಿಟ್ಟಳು.

ಈ ಅಮಾನವೀಯ ಕೃತ್ಯ ನಡೆಸಿದ ದಿಲೀಪ್ ಮತ್ತಾತನ ಸಂಗಡಿಗರನ್ನು ಬಂಧಿಸಲಾಯಿತು. ಪ್ರಕರಣದ ವಿಚಾರಣೆ ನಡೆಸಿದ ಸ್ಥಳೀಯ ನ್ಯಾಯಾಲಯ ಅವರಿಗೆ ಮರಣದಂಡನೆ ಶಿಕ್ಷೆ ವಿಧಿಸಿತು. ದಿಲೀಪ್ ಹೈಕೋರ್ಟಿಗೆ ಅಪೀಲು ಹೋದ. ಸ್ಥಳೀಯ ನ್ಯಾಯಾಲಯ ನೀಡಿದ್ದ ಮರಣದಂಡನೆ ಶಿಕ್ಷೆಯನ್ನು ಬಾಂಬೆ ಹೈಕೋರ್ಟು ಎತ್ತಿಹಿಡಿಯಿತು. ಮತ್ತೆ ಆತ ಸುಪ್ರೀಂ ಕೋರ್ಟಿಗೆ ಅಪೀಲು ಹೋದ. ಪ್ರಕರಣವನ್ನು ಮತ್ತೊಮ್ಮೆ ವಿಚಾರಣೆ ನಡೆಸಿದ ಸರ್ವೋಚ್ಛ ನ್ಯಾಯಾಲಯ ಆರೋಪಿಗಳು ತಪ್ಪು ಮಾಡಿದ್ದು ನಿಜ ಎಂದು ಒಪ್ಪಿಕೊಂಡಿತಾದರೂ ಅದಕ್ಕಾಗಿ ನೀಡಿರುವ ಶಿಕ್ಷೆ ಜಾಸ್ತಿಯಾಯಿತು ಎಂದು ಅಭಿಪ್ರಾಯಪಟ್ಟು ಮರಣದಂಡನೆ ಶಿಕ್ಷೆಯನ್ನು ರದ್ದುಗೊಳಿಸಿ ಅದನ್ನು ಜೀವಾವಧಿ ಶಿಕ್ಷೆಗೆ ಇಳಿಸಿದೆ.

ಮರಣದಂಡನೆ ಶಿಕ್ಷೆಯನ್ನು ನಾನು ವೈಯಕ್ತಿಕವಾಗಿ ಒಪ್ಪುವುದಿಲ್ಲವಾದರೂ ಈ ಪ್ರಸ್ತುತ ಪ್ರಕರಣದಲ್ಲಿ ಸುಪ್ರೀಂಕೋರ್ಟು ಮರಣದಂಡನೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸುವುದಕ್ಕಾಗಿ ಮುಂದಿಟ್ಟ ವಾದವನ್ನು, ವಿವರಣೆಯನ್ನು ಒಪ್ಪುವುದಕ್ಕೆ ಸಾಧ್ಯವೇ ಇಲ್ಲ. ತೀರ್ಪಿನಲ್ಲಿ ಅದು ಮುಂದಿಟ್ಟಿರುವ ವಾದವನ್ನು ನೀವೇ ಖುದ್ದಾಗಿ ಓದಿ:

"ಸುಷ್ಮಾ ಆರೋಪಿಯ ಕಿರಿಯ ತಂಗಿ. ತಂಗಿಯೊಬ್ಬಳು ಅಸಹಜವಾದದ್ದನ್ನು ಮಾಡಿದಾಗ, ಅದರಲ್ಲೂ ಈ ಪ್ರಸ್ತುತ ಪ್ರಕರಣದಲ್ಲಿ ಗೌಪ್ಯ ಪ್ರೇಮದ ಕಾರಣದಿಂದಾಗಿ ಅಂತರ್ಜಾತಿಯ ಮತ್ತು ಅಂತರ್‌ಸಮುದಾಯದ ಹುಡುಗನೊಂದಿಗೆ ಮದುವೆ ಮಾಡಿಕೊಂಡಾಗ ಅಂತಹ ಪ್ರೇಮವನ್ನು ನಿಲ್ಲಿಸುವುದಕ್ಕೆ ವಿಫಲನಾದ ಎಂದು ಸಮರ್ಥನೀಯವಾಗಿಯೋ ಅಥವ ಬೇರೆ ಕಾರಣಕ್ಕೋ ಆತನ ಸಹೋದರನನ್ನೇ ಸಮಾಜ ತಪ್ಪಿತಸ್ಥನನ್ನಾಗಿ ನೋಡುತ್ತದೆ. ಅದನ್ನು ಕುಟುಂಬದ ಸೋಲು ಎಂದೇ ಪರಿಗಣಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಇಂತಹ ವೈಯುಕ್ತಿಕ ಕೌಟುಂಬಿಕ ವಿಚಾರದಲ್ಲಿ ಮೂಗುತೂರಿಸುವ ಅವಶ್ಯಕತೆಯಿಲ್ಲದ ಜನರಿಂದಲೂ ಮೂದಲಿಸುವಿಕೆ, ಕೊಂಕುನುಡಿಗಳನ್ನೂ ಕೇಳಬೇಕಾಗುತ್ತದೆ. ತನ್ನ ತಂಗಿ ಕುಟುಂಬದ ಮೇಲೆ ಹೇರಿದ ಈ ತಥಾಕಥಿತ ಅವಮಾನಕ್ಕೊಳಗಾಗಿರಬೇಕು ಹಾಗೂ ಸುದೀರ್ಘ ಏಳು ತಿಂಗಳುಗಳ ಕಾಲ ಇದು ಆತನ ಮನಸ್ಸಿನಲ್ಲಿದ್ದಿರಬೇಕು. ಪ್ರಭುನೊಂದಿಗೆ ಮದುವೆ ನಡೆದಿದ್ದರೂ ಸುಷ್ಮಾಳನ್ನು ವಾಪಾಸ್ಸು ಕರೆದುಕೊಂಡು ಬರಬೇಕೆಂದು ದಿಲೀಪ್ ಮನೆಯವರು ಪ್ರಯತ್ನಿಸುತ್ತಲೇ ಇದ್ದರು ಎಂಬುದು ಸಾಕ್ಷ್ಯಾಧಾರಗಳಿಂದ ಸಾಬೀತಾಗಿದೆ. ಸುಷ್ಮಾಳ ತಾಯಿ ಹಾಗೂ ಸುಷ್ಮಾಳ ಇನ್ನೊಬ್ಬ ವಿವಾಹಿತ ಸಹೋದರಿಗುರೂ ಇದೇ ಉದ್ದೇಶಕ್ಕಾಗಿ ಕಾಲೇಜಿಗೆ ಹೋಗಿ ಸುಷ್ಮಾಳನ್ನು ಭೇಟಿಯಾಗುತ್ತಿದ್ದರು ಎಂಬುದೂ ಸಾಬೀತಾಗಿದೆ. ಸುಷ್ಮಾ ಮಾತ್ರ ತನ ಮನಸನು ಬದಲಿಸದೇ ಕಾಲೇಜಿಗೆ ಹೋಗುವುದನ್ನು, ಸಹಪಾಠಿಗಳೊಂದಿಗೆ ಬೆರೆಯುವುದನ್ನು ಮುಂದುವರೆಸಿದಳು. ಪ್ರಾಯಶಃ ಇದು ಸುಷ್ಮಾಳ ಮನೆಯವರಿಗೆ, ಅದರಲ್ಲೂ ವಿಶೇಷವಾಗಿ ಅಣ್ಣ ದಿಲೀಪ್‌ಗೆ ಗಾಯದ ಮೇಲೆ ಬರೆ ಎಳೆದಂತಾಗಿರಬೇಕು. ಆದರೆ, ಆತ ಏಳು ತಿಂಗಳು ಏಕೆ ಕಾದಿದ್ದ? ಇದಕ್ಕೆ ಉತ್ತರ ಏನೆಂದರೆ ಆಕೆ ಗರ್ಭಿಣಿಯಾಗುವ ಮೂಲಕ ವಾಪಾಸ್ಸು ಬರಲು ಸಾಧ್ಯವಿಲ್ಲದಷ್ಟು ಮುಂದೆ ಹೋದಳು. ಗರ್ಭಿಣಿಯಾಗುವ ತನಕ ಆಕೆಯನ್ನು ವಾಪಾಸ್ಸು ಕರೆತರಬಹುದೆಂಬ ಭರವಸೆಯೂ ಆಕೆಯ ಕುಟುಂಬಕ್ಕಿದ್ದಿರಬೇಕು. ಆದರೆ, ಆಕೆ ಗರ್ಭಿಣಿಯಾದ ಮೇಲೆ ಆ ದೂರದ ಭರವಸೆ ಕೂಡ ಮಾಸಿಹೋಯಿತು; ನಮ್ಮ ದೃಷ್ಟಿಯಲ್ಲಿ ಈ ಘೋರ ಕೃತ್ಯಕ್ಕೆ ಅದೇ ಕಾರಣವಾಯಿತು. ಇದೆಲ್ಲಾ ಅಲ್ಲದೇ ದಿಲೀಪ್‌ಗೆ ಕೂಡ ವಂಚನೆಗೊಳಗಾದ ಮನೋಭಾವ ಬೆಳೆದಿದ್ದಿರಬೇಕು. ತಮ್ಮ ಮನೆಯಿಂದ ಕೇವಲ ಮೂರು ಮನೆಗಳಾಚೆ ವಾಸಿಸುತ್ತಿದ್ದ ಪ್ರಭು ದಿಲೀಪ್‌ಗೆ ಗೊತ್ತಿರಲಿಲ್ಲ ಎಂದೇನೂ ಅಲ್ಲ. ಅಭಯರಾಜ್ ಎಂಬುವವನ ಸಹಾಯದಿಂದ ಪ್ರಭು ಮತ್ತು ಸುಷ್ಮಾ ನಡುವೆ ಪ್ರಾರಂಭವಾಗಿ ಮುಂದುವರೆದ ರಹಸ್ಯ ಪ್ರೇಮ ದಿಲೀಪ್‌ನಲ್ಲಿ ವಂಚನೆಗೊಳಗಾದ ಭಾವನೆಯನ್ನು ಹುಟ್ಟುಹಾಕಿದ್ದಿರಬೇಕು. ನಿಸ್ಸಂದೇಹವಾಗಿ ದಿಲೀಪ್ ಇನ್ನೂ ಇಪ್ಪತ್ತೈದು ವರ್ಷ ದಾಟಿರದ ಯುವಕನಾಗಿದ್ದು ಯಾವುದೇ ಕ್ರಿಮಿನಲ್ ಚರಿತ್ರೆ ಹೊಂದಿಲ್ಲ. ತಪ್ಪಾದ, ಆದರೆ ನೈಜವಾದ ಜಾತಿ ಪರಿಗಣನೆಗಳ ಕಾರಣದಿಂದಾಗ ಆತ ಬಲಿಪಶುವಾಗಿದ್ದಾನಾದರೂ ಆತನಿಗೆ ಮರಣದಂಡನೆ ನೀಡುವುದು ಸಮರ್ಥನೀಯವಲ್ಲ. ಈ ಕೊಲೆಗಳು ತಥಾಕಥಿತ ಕೆಳಜಾತಿಯೊಂದಿಗೆ ಮದುವೆಯಾಗುವಂತಹ ಸಾಮಾಜಿಕ ವಿಚಾರಕ್ಕೆ ಸಂಬಂಧಪಟ್ಟವೆ. ಆದರೂ ಮರಣದಂಡನೆ ಯಂತಹ ಶಿಕ್ಷೆಗಳನ್ನು ನೀಡುವಾಗ ಇಂತಹ ಪರಿಸ್ಥಿತಿ ಗಳನ್ನೂ ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಈಗ ಕಾಲಕೂಡಿ ಬಂದಿದೆ. ಜಾತಿ ಎಂಬುದು ಒಬ್ಬ ವ್ಯಕ್ತಿ ಹುಟ್ಟುವ ಮೊದಲೇ ಆತನನ್ನು ಹಿಡಿದುಕೊಂಡು ಆತ ಸತ್ತಮೇಲೂ ಅವನನ್ನು ಅದು ಬಿಡುವುದಿಲ್ಲ. ಜಾತಿ, ಸಮುದಾಯ, ಧರ್ಮಗಳ ವಿಷಹಿಡಿತ ಎಷ್ಟೇ ಅಸಮರ್ಥನೀಯವಾಗಿ ದ್ದರೂ ಅದೊಂದು ಸ್ಪಷ್ಟ ವಾಸ್ತವವಾಗಿದೆ. ಅಂತರ್‌ಜಾತಿ, ಅಂತರ್ ಸಮುದಾಯಗಳ ಮದುವೆಯಂತಹ ಸಾಮಾಜಿಕ ವಿಚಾರದ ಹಿನ್ನೆಲೆಯಲ್ಲಿ ಅಪರಾಧಿಯ ಮನೋಸ್ಥಿತಿಯು ಅಸಮರ್ಥನೀಯವಾಗಿದ್ದರೂ ಈ ನಿರ್ದಿಷ್ಟ ಪ್ರಕರಣದ ಸಂದರ್ಭಗಳಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ."



kumarburadikatti@gmail.com

ಸುತ್ತ-ಮುತ್ತ


ಕುಮಾರ್ ಬುರಡಿಕಟ್ಟಿ

ಹೀಗೆ ಉದ್ದಕ್ಕೂ ಈ ತೀರ್ಪು ಯಾವುದೋ ರೀತಿಯಲ್ಲಿ ತಪ್ಪನ್ನು ಸಮಾಜದ ಮೇಲೆ ಎತ್ತಿಹಾಕುವ ಮೂಲಕ ಅಪರಾಧಿಯನ್ನು ಬಚಾವು ಮಾಡುವುದಕ್ಕೆ ಪ್ರಯತ್ನಿಸುತ್ತದೆ. ಹಾಗಾಗಿಯೇ ಇಬ್ಬರು ಹದಿಹರೆಯದ ಹುಡುಗರನ್ನೂ ಒಳಗೊಂಡಂತೆ ನಾಲ್ಕು ಜನರನ್ನು ಬರ್ಬರವಾಗಿ ಕೊಚ್ಚಿಕೊಂದ ಘೋರ ಅಪರಾಧವು ಮರಣದಂಡನೆ ವಿಧಿಸುವಷ್ಟು ಘೋರವಾಗಿಲ್ಲ ಎಂದು ಸಮರ್ಥನೆ ಮಾಡುವುದಕ್ಕೆ ಪ್ರಯತ್ನಿಸುತ್ತದೆ. ಅಸಲಿಗೆ ಸುಪ್ರೀಂ ಕೋರ್ಟಿನಂತಹ ದೇಶದ ಅತ್ಯುನ್ನತ ನ್ಯಾಯಾಲಯವೂ ಕೂಡ ಹೇಗೆ ಪೂರ್ವಗ್ರಹಪೀಡಿತವಾಗಿದೆ ಎಂಬುದನ್ನು ಈ ವಿವರಣೆ ಚೆನ್ನಾಗಿ ತೋರಿಸುತ್ತದೆ.

ಇಂತಹ ಒಂದು ತೀರ್ಪಿನಿಂದ ತೀವ್ರ ಆಘಾತಕ್ಕೊಳಗಾಗಿರುವ ಸುಷ್ಮಾ ಎದೆಗುಂದದೇ ತೀರ್ಪನ್ನು ಪ್ರಶ್ನಿಸುವುದಕ್ಕೆ ತೀರ್ಮಾನಿಸಿದ್ದಾಳೆ. ಆ ಮೂಲಕ ನ್ಯಾಯಕ್ಕಾಗಿ ತನ್ನ ಆರು ವರ್ಷಗಳ ಸುದೀರ್ಘ ಹೋರಾಟವನ್ನು ಮುಂದುವರೆಸುತ್ತಿದ್ದಾಳೆ. ●

ಕಾಮ್ರೇಡರೊಂದಿಗೆ ನಡೆದಾಡುತ್ತಾ

3



ದಂಡಕಾರಣ್ಯದ ಕಾಡಿನಲ್ಲಿ ಒಂದು ಮನೆ..

ಮನೆಗಳನ್ನು ಬಿಟ್ಟು ಓಡಿಹೋಗುವಂತೆ ಮಾಡಿರುವ, ಭಯ ಹುಟ್ಟಿಸುವ, ಸರ್ಕಾರದಿಂದ ಪ್ರಾಯೋಜಿತವಾದ ಸಲ್ವಾ ಜುಡುಂ ಎಂಬ ಪಡೆಯ ನೇತೃತ್ವ ವಹಿಸಿರುವುದು ಕಾಂಗ್ರೆಸ್ ಶಾಸಕ ಮಹೇಂದ್ರ ಕರ್ಮ ಎಂಬುದನ್ನು ಮಾತ್ರ ರಾಹುಲ್ ಗಾಂಧಿಯ ಪ್ರಚಾರ ತಂಡ ಎಂದೂ ಹೇಳುವು ದಿಲ್ಲ.

ಮಾ ದಾಂತೇಶ್ವರಿ ಮಂದಿರದ ಮುಂದೆ ನನ್ನ ಭೇಟಿಯ ಹೊತ್ತಿಗೆ ಸರಿಯಾಗಿ ಹಾಜರಾದೆ. (ಮೊದಲನೆ ದಿನ, ಮೊದಲ ಶೋ) ನನ್ನೊಂದಿಗೆ ಒಂದು ಕ್ಯಾಮೆರಾ, ಹಣೆಯ ಮೇಲೆ ಕುಂಕುಮದ ಪುಡಿ ಮತ್ತು ಕೈಯಲ್ಲಿ ಒಂದು ಚಿಕ್ಕ ತೆಂಗಿನಕಾಯಿ ಇತ್ತು. ಯಾರಾದರೂ ನನ್ನನ್ನು ನೋಡಿ ನಗುತ್ತಿರಬಹುದೇ ಎಂದು ಒಂದುಕ್ಷಣ ಯೋಚಿಸಿದೆ. ಕೆಲವೇ ನಿಮಿಷಗಳಲ್ಲಿ ನನ್ನಲ್ಲಿಗೆ ಒಬ್ಬ ಪುಟ್ಟ ಹುಡುಗ ಬಂದ. ಆತನ ತಲೆ ಮೇಲೊಂದು ಕ್ಯಾಪ್ ಮತ್ತು ಹೆಗಲ ಮೇಲೊಂದು ಶಾಲಾಬ್ಯಾಗ್ ಇತ್ತು. ಆತನ ಉಗುರುಗಳ ಮೇಲೆ ಕಿತ್ತು ಹೋಗುತ್ತಿದ್ದ ಕೆಂಪು ನೈಲ್ ಪಾಲಿಷ್ ಕಂಡಿತು. ಆದರೆ ಹಿಂದಿ 'ಔಟ್‌ಲುಕ್' ಪತ್ರಿಕೆಯ ಪ್ರತಿಯಾಗಲಿ, ಬಾಳೆಹಣ್ಣುಗಳಾಗಲಿ ಅವನ ಕೈಯಲ್ಲಿರಲಿಲ್ಲ. "ನೀವೇನಾ ಒಳಗೆ ಹೋಗಬೇಕು ಅಂತಿರುವವರು?" ಎಂದು ಆತ ನನ್ನನ್ನು ಕೇಳಿದ. ಪಾಸ್‌ವರ್ಡ್ ಆದ 'ನಮಸ್ಕಾರ ಗುರುಜಿ' ಎಂದೂ ಆತ ಹೇಳಲಿಲ್ಲ. ಏನು ಹೇಳಬೇಕೆಂದೇ ನನಗೆ ಗೊತ್ತಾಗಲಿಲ್ಲ. ಅವನು ತನ್ನ ಜೇಬಿನಿಂದ ಒದ್ದೆಯಾಗಿದ್ದ ಹಾಳೆಯನ್ನು ತೆಗೆದು ನನಗೆ ಕೊಟ್ಟ. ಅದರಲ್ಲಿ "ಹಿಂದಿ ಔಟ್‌ಲುಕ್ ಪತ್ರಿಕೆಯ ಪ್ರತಿ ಸಿಗಲಿಲ್ಲ" ಎಂದಿತ್ತು.

"ಬಾಳೆಹಣ್ಣು?"

"ನಾನು ತಿಂದೆ" ಎಂದ "ಹೊಟ್ಟೆ ಹಸಿದಿತ್ತು."

ದೇಶದ ಭದ್ರತೆಗೆ ಈ ಬಾಲಕ ದೊಡ್ಡ ಅಪಾಯದಂತಿದ್ದ ಆತನ ಶಾಲಾ ಬ್ಯಾಗ್ ಮೇಲೆ 'ಚಾರ್ಲಿ ಬ್ರೌನ್-ನಿಮ್ಮ ಸಾಧಾರಣ ಪೆದ್ದನಲ್ಲ' ಎಂದು ಬರೆದಿತ್ತು. ತನ್ನ ಹೆಸರು ಮಂಗ್ಟು ಎಂದ. ನಾನು ಪ್ರವೇಶಿಸಲಿದ್ದ ದಂಡಕಾರಣ್ಯ ಎಂಬ ಕಾಡಿನಲ್ಲಿರುವ ಜನರ ಹೆಸರುಗಳು ಮತ್ತು ಚಹರೆಗಳು ದ್ರವದಂತೆ ಬದಲಾಗುತ್ತಿರುತ್ತವೆ ಎಂದು ಆಮೇಲೆ ಗೊತ್ತಾಯಿತು.

ಮಂದಿರದ ಹತ್ತಿರದಲ್ಲೇ ಇದ್ದ ಬಸ್‌ಸ್ಟಾಂಡಿಗೆ ನಡೆದೆವು. ಅದು ಜನರಿಂದ ಕಿಕ್ಕಿರಿದಿತ್ತು. ಎಲ್ಲವೂ ಚಕಚಕನೆ ನಡೆಯಿತು. ಎರಡು ಮೋಟರ್ ಸೈಕಲ್‌ಗಳ ಮೇಲೆ ಇಬ್ಬರು ಪುರುಷರು ಬಂದರು. ಯಾವುದೇ ಮಾತುಕತೆ ಇಲ್ಲ-ಗುರುತಿನ ಒಂದು ನೋಟ, ಮೋಟರ್ ಬೈಕ್ ಏರಿದ್ದು ಮತ್ತು ಅವು ಹೊರಟದ್ದು ಅಷ್ಟೇ. ನಾವು ಎಲ್ಲಿಗೆ ಹೋಗುತ್ತಿದ್ದೆವು ಎಂಬುದೂ ನನಗೆ ಗೊತ್ತಿರಲಿಲ್ಲ. ಕಳೆದ ಬಾರಿ ಇಲ್ಲಿಗೆ ಭೇಟಿ ನೀಡಿದ್ದಾಗ ನೋಡಿದ್ದ ಎಸ್‌ಪಿ ಮನೆಯನ್ನು ದಾಟಿದೆವು. ಆ ಎಸ್‌ಪಿ ಬಹಳ ಸೀದಾ ಸಾದಾ ವ್ಯಕ್ತಿಯಾಗಿದ್ದ. "ನೋಡಿ ಮೇಡಂ, ಮುಚ್ಚುಮರೆ ಇಲ್ಲದೆ ಹೇಳುವುದಾದರೆ ಈ ಸಮಸ್ಯೆಯನ್ನು ಪೊಲೀಸರಿಂದಾಗಲಿ, ಸೈನ್ಯದಿಂದಾಗಲಿ ಬಗೆಹರಿಸಲು ಸಾಧ್ಯವಿಲ್ಲ. ಈ ಆದಿವಾಸಿಗಳ ಸಮಸ್ಯೆ ಏನೆಂದರೆ ಅವರಿಗೆ ದುರಾಶೆ ಎಂಬುದೇ ಗೊತ್ತಿಲ್ಲ. ಅವರು ಲೋಭಿಗಳಾಗುವ ತನಕ ನಮಗೆ ಯಾವ ಭರವಸೆಯೂ ಇಲ್ಲ. ನಾನು ನಮ್ಮ ಬಾಸ್‌ಗೆ ಈಗಾಗಲೇ ಹೇಳಿದ್ದೇನೆ: ಇಲ್ಲಿರುವ ಪಡೆಯನ್ನು ಹಿಂದೆ ಪಡೆದು ಎಲ್ಲರ ಮನೆಗಳಲ್ಲಿ ಒಂದು ಟಿವಿ ಸೆಟ್ ಹಾಕಿ ಎಂದು. ಹಾಗೆ ಮಾಡಿದರೆ ನೋಡಿ ಎಲ್ಲವೂ ಅಪ್ರಜ್ಞಾಪೂರ್ವಕವಾಗಿ ಬಗೆಹರಿದು ಬಿಡುತ್ತದೆ" ಎಂದು ಆತ ಹೇಳಿದ್ದರು.

ಕೆಲವೇ ನಿಮಿಷಗಳಲ್ಲಿ ನಾವು ಊರಿನ ಹೊರಗೆ ಇದ್ದೆವು. ಯಾರೂ ನಮ್ಮನ್ನು ಹಿಂಬಾಲಿಸುತ್ತಿರಲಿಲ್ಲ. ನನ್ನ ವಾಚಿನ ಪ್ರಕಾರ ನಾವು ಮೂರು ಗಂಟೆಗಳ ಸುದೀರ್ಘ ಪಯಣ ಮಾಡಿದೆವು. ಆದರೆ ಇದ್ದಕ್ಕಿದ್ದಂತೆ, ಅಕ್ಕಪಕ್ಕ ಅರಣ್ಯವಿದ್ದ ಖಾಲಿ ರಸ್ತೆಯಲ್ಲಿ ಆ ಪಯಣ ಅಂತ್ಯಗೊಂಡಿತು. ಮಂಗ್ಟು ಇಳಿದ. ನಾನೂ ಕೂಡ. ಬೈಕುಗಳು ಹೊರಟು ಹೋದನಂತರ ದೇಶದ ಭದ್ರತೆಗೆ ಅಪಾಯವಾಗಿದ್ದ ಆ ಪುಟ್ಟ ಹುಡುಗನನ್ನು ಕಾಡಿನೊಳಗೆ ಹಿಂಬಾಲಿಸಿದೆ. ಅದೊಂದು ಸುಂದರ ದಿನವಾಗಿತ್ತು. ಕಾಡಿನ ನೆಲವೆಲ್ಲ ಚಿನ್ನದ ಜಮಖಾನೆ ಹೊದ್ದಿರುವಂತೆ ಕಾಣಿಸುತ್ತಿತ್ತು.

ಸ್ವಲ್ಪ ಸಮಯದ ನಂತರ ಅಷ್ಟು ಆಳವಿಲ್ಲದ ಆದರೆ ಅಗಲವಾಗಿ ಹರಡಿಕೊಂಡಿದ್ದ ನದಿಯೊಂದರ ಬಿಳಿ ಮರಳಿದ್ದ ದಡಕ್ಕೆ ಬಂದೆವು. ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತಿದ್ದ ಆ ನದಿಯಲ್ಲಿ ಈಗ ಹೆಚ್ಚುಕಡಿಮೆ ಮರಳೇ ತುಂಬಿತ್ತು. ಮಧ್ಯದಲ್ಲಿ ಒಂದು ಚಿಕ್ಕ ತೊರೆ ಹರಿಯುತ್ತಿದ್ದ ಮೊಣಕಾಲುವರೆಗೆ ಮಾತ್ರ ಇದ್ದ ನೀರನ್ನು ಸುಲಭವಾಗಿ ದಾಟಿ ಹೋಗಬಹುದಿತ್ತು. ಈ ನದಿಯ ಆ ಕಡೆ ಇದ್ದದ್ದೇ 'ಪಾಕಿಸ್ತಾನ'. ಆ ಸಾದಾಸೀದಾ ಎಸ್‌ಪಿ "ಮೇಡಂ, ಅಲ್ಲಿ ನನ್ನ ಹುಡುಗರು ಸಾಯಿಸಲೆಂದೇ ಗುಂಡು ಹಾರಿಸುತ್ತಾರೆ" ಎಂದು ಹೇಳಿದ್ದು ನೆನಪಾಯಿತು. ಪೊಲೀಸ್ ಒಬ್ಬನ ಬಂದೂಕಿನ ನಳಿಕೆಯ ಮೂಲಕ ನಮ್ಮನ್ನು ಕಲ್ಪಿಸಿಕೊಂಡು ಆತ ನಮ್ಮನ್ನು ಸುಲಭವಾಗಿ ಮುಗಿಸಬಹುದು ಎಂದುಕೊಂಡೆ. ಆದರೆ ಮಂಗ್ಟು ನಿಶ್ಚಿಂತನಾಗಿದ್ದ. ನಾನು ಅವನನ್ನು ಅನುಸರಿಸಿದೆ.


ನದಿಯ ಆ ಕಡೆಯ ದಡದಲ್ಲಿ 'ಹಾರ್ಲಿಕ್ಸ್' ಎಂದು ಬರೆದಿದ್ದ ಹಳದಿ-ಹಸಿರು ಬಣ್ಣದ ಶರ್ಟ್ ತೊಟ್ಟಿದ್ದ ಚಂದು ನಮಗಾಗಿ ಕಾದಿದ್ದ. ಈತ ದೇಶದ ಭದ್ರತೆಗೆ ಅಪಾಯವಾಗಿದ್ದ ಕೊಂಚ ಹಿರಿಯವನು. ಪ್ರಾಯಶಃ ಇಪ್ಪತ್ತು ವರ್ಷ ವಯಸ್ಸಿನವನು. ಅವನೊಂದಿಗೆ ಒಂದು ಸುಂದರ ನಗೆ, ಒಂದು ಸೈಕಲ್, ಕಾದಾರಿಸಿದ್ದ ನೀರಿನ ಜೆರಿಡಬ್ಬ 'ಪಾರ್ಟಿ' ಕಳುಹಿಸಿದ್ದ ಗ್ಲುಕೋಸ್ ಬಿಸ್ಕಟ್ ಪ್ಯಾಕೆಟ್ಟುಗಳಿದ್ದವು. ಸ್ವಲ್ಪ ಸುಧಾರಿಸಿಕೊಂಡ ನಂತರ ಮತ್ತೆ ನಡೆಯಲಾರಂಭಿಸಿದೆವು. ಯಾರಾದರೂ ನಮ್ಮನ್ನು ನೋಡಿದ್ದರೆ ಅವರ ದಾರಿ ತಪ್ಪಿಸಲೆಂದೇ ಆ ಸೈಕಲ್‌ಅನ್ನು ತರಲಾಗಿತ್ತು. ಯಾಕೆಂದರೆ ನಾವು ಪಯಣಿಸುತ್ತಿದ್ದ ಮಾರ್ಗದಲ್ಲಿ ಸೈಕಲ್ ಅನ್ನು ಚಲಿಸುವುದು ಅಸಾಧ್ಯವಾಗಿತ್ತು. ನಾವು ಹಲವಾರು ಕಡಿದಾದ ಗುಡ್ಡಗಳನ್ನು ಹತ್ತಿದೆವು. ಕಲ್ಲುಬಂಡೆಗಳಿದ್ದ ಇಳಿಜಾರುಗಳನ್ನು, ಅಪಾಯಕಾರಿಯಾಗಿದ್ದ ಬಂಡೆಚಾಚುಗಳನ್ನು ದಾಟಿದೆವು. ಸೈಕಲನ್ನು ದೂಡಲಾಗದಂತಹ ಸ್ಥಳಗಳಲ್ಲಿ ಚಂದು ಅದು ಏನೇನೂ ತೂಕವಿಲ್ಲವೆಂಬಂತೆ ತನ್ನ ತಲೆ ಮೇಲೆ ಹೊತ್ತು ನಡೆಯುತ್ತಿದ್ದ. ಕಕ್ಕಾಬಿಕ್ಕಿಯಾದ ಹಳ್ಳಿ ಹುಡುಗನಂತಿದ್ದ ಆತನ ಬಗ್ಗೆ ಯೋಚಿಸಿದೆ. ಆದರೆ (ಬಹಳ ಕಾಲದ ನಂತರ) ನನಗೆ ಗೊತ್ತಾಯಿತು, ಆತ ಎಲ್ಲ ತರಹದ ಅಸ್ತ್ರಗಳನ್ನು ಸುಲಭವಾಗಿ ಬಳಸಬಲ್ಲವನಾಗಿದ್ದ ಎಂದು. "ಎಲ್‌ಎಂಜಿ ಮಾತ್ರ ಗೊತ್ತಿಲ್ಲ" ಎಂದು ಆತ ನಗುನಗುತ್ತಲೇ ನನಗೆ ಹೇಳಿದ. ಸುಂದರವಾಗಿದ್ದ ತಮ್ಮ ಪೇಟಗಳಲ್ಲಿ ಹೂವುಗಳನ್ನು ಸಿಕ್ಕಿಸಿಕೊಂಡಿದ್ದ ಆದರೆ ಕುಡಿದು ಚಿತ್ತಾಗಿದ್ದ ಮೂರು ಪುರುಷರು ಒಂದು ಅರ್ಧ ಗಂಟೆ ಕಾಲ ನಮ್ಮೊಂದಿಗೆ ನಡೆದು ಆಮೇಲೆ ಬೇರೆ ದಾರಿ ಹಿಡಿದರು. ಸಂಜೆ ಆಗುತ್ತಿದ್ದಂತೆ ಅವರು ಹೆಗಲಿಗೇರಿಸಿಕೊಂಡಿದ್ದ ಬ್ಯಾಗುಗಳು 'ಕೊಕೊಕೊ' ಎನ್ನಲಾರಂಭಿಸಿದ್ದವು. ಅವರೆಲ್ಲ ಮಾರ್ಕೆಟ್ಟಿನಲ್ಲಿ ಮಾರಲು ತಮ್ಮ ಹುಂಜಗಳನ್ನು ತೆಗೆದುಕೊಂಡುಹೋಗಿದ್ದು ಅವು ಮಾರಾಟವಾಗದಿದ್ದರಿಂದ ಅವುಗಳೊಂದಿಗೆ ವಾಪಸ್ಸಾಗುತ್ತಿದ್ದರು. ಚಂದುಗೆ ಕತ್ತಲಲ್ಲೂ ಕಣ್ಣು ಕಾಣಿಸುತ್ತಿತ್ತು. ಆದರೆ ನಾನು ನನ್ನ ಟಾರ್ಚ್ ಅನ್ನು ಬಳಸಿದೆ. ಆ ಚಿಮ್ಮಂಡೆಗಳು ತಮ್ಮ 'ಕ್ರಿರ್‌ಕಿರ್' ಶುರು ಮಾಡಿ ಸ್ವ ಹೊತ್ತಿನಲ್ಲಿ ಅವುಗಳ ಸದ್ದು ನಮ್ಮ ಸುತ್ತಲೂ ಆವರಿಸಿತು. ರಾತ್ರಿಯ ಆಕಾಶದತ್ತ ತಲೆ ಎತ್ತಿ ನೋಡುವ ಬಯಕೆ ನನ್ನದು. ಆದರೆ ಹಾಗೆ ನೋಡುವಂತಿಲ್ಲ. ನಾನು ನೆಲವನ್ನೆ ನೋಡಿಕೊಂಡು ಒಂದೊಂದೇ ಹೆಜ್ಜೆ ಇಡಬೇಕಿತ್ತು.

ನಾಯಿಗಳ ಬೊಗಳುವಿಕೆ ಕೇಳಿಸಿತು. ಆದರೆ ಅವು ಎಷ್ಟು ದೂರ ಇವೆ ಎಂಬುದನ್ನು ನನ್ನಿಂದ ಗ್ರಹಿಸಲಾಗಲಿಲ್ಲ. ಈಗ ಸಮತಟ್ಟಾದ ನೆಲದ ಮೇಲೆ ನಡೆಯುತ್ತಿದ್ದೆವು. ಕದ್ದು ಒಂದು ಕ್ಷಣ ಆಕಾಶವನ್ನು ನೋಡಿ ಭಾವಪರವಶಳಾದೆ. ಸದ್ಯದಲ್ಲೇ ನಮ್ಮ ಪಯಣ ಅಂತ್ಯಗೊಳ್ಳಲಿ ಎಂದು ಆಶಿಸಿದೆ. "ಇಲ್ಲೇ ಹತ್ತಿರದಲ್ಲೇ" ಎಂದ ಚಂದು. ಆದರೆ ಇನ್ನೂ ಒಂದು ಗಂಟೆಗಿಂತಲೂ ಹೆಚ್ಚು ಕಾಲ ನಡೆದೆವು. ಕೊನೆಗೆ ದೊಡ್ಡ ಮರಗಳ ನೆರಳುಗೆರೆ ಚಿತ್ರಗಳು ಕಾಣಿಸಿದವು. ನಾವು ಆಗಮಿಸಿದ್ದೆವು. ಒಂದರಿಂದ ಇನ್ನೊಂದು ಮ ದೂರ ಇದ್ದುದರಿಂದ ಆ ಹಳ್ಳಿ ದೊಡ್ಡ ಹಳ್ಳಿಯಾ ಭಾಸವಾಯಿತು. ನಾವು ಪ್ರವೇಶಿಸಿದ ಮನೆ ಸುಂದರವಾಗಿತ್ತು. ಒಳಗೆ ಬೆಂಕಿ ಉರಿಯುತ್ತಿತ್ತು. ಅದರ ಸುತ್ತ ಜನ ಕೂತಿದ್ದರು. ಮನೆಯ ಹೊರಗೂ ಹಲವು ಜನರಿದ್ದರು. ಆದರೆ ಎಷ್ಟು ಜನ ಇದ್ದಾರೆ ಎಂದು ನನಗೆ ಗೊತ್ತಾಗಲಿಲ್ಲ. ಅವರು ಅನಿರ್ದಿಷ್ಟ ವಾಗಿ ಮಾತ್ರ ನನಗೆ ಕಾಣಿಸುತ್ತಿದ್ದರು. ತಗ್ಗುದನಿಯಲ್ಲಿ ಹಲವರು "ಲಾಲ್ ಸಲಾಮ್, ಕಾಮ್‌ರೇಡ್" ಅಂದರು. ನಾನೂ "ಲಾಲ್ ಸಲಾಮ್" ಅಂದೆ. ನನಗೆ ತುಂಬಾ ಸುಸ್ತಾಗಿತ್ತು. ಮನೆಯ ಯಜಮಾನಿ ನನ್ನನ್ನು ಒಳಗೆ ಕರೆದು ಹೆಸರು ಬೇಳೆಯೊಂದಿಗೆ ಮಾಡಿದ್ದ ಕೋ ಸಾರು ಮತ್ತು ಒಂದಿಷ್ಟು ಕೆಂಪು ಅನ್ನ ಕೊಟ್ಟರು. ರುಚಿಕರವಾಗಿತ್ತು. ಆಕೆಯ ಮಗು ನನ್ನ ಹತ್ತಿರದಲ್ಲಿ ನಿದ್ರಿಸುತ್ತಿತ್ತು. ಅದರ ಕಾಲಿನಲ್ಲಿದ್ದ ಗೆಜ್ಜೆ ಬೆಂಕಿಯ ಬೆಳಕಿನಲ್ಲಿ ಮಿನುಗುತ್ತಿತ್ತು.

ಊಟದ ನಂತರ ನನ್ನ ಮಲಗುವ ಬ್ಯಾಗ್ ಅ ತೆಗೆದೆ. ಯಾರೋ ರೇಡಿಯೋ ಅನ್ನು ಆನ್ ಮಾಡಿದರು. ಹಿಂದಿ ಬಿಬಿಸಿ ಚಾನೆಲ್. ವೇದಾಂತ ಕಂಪನಿಯ ನ್ಯಾಮ್ಗಿ ಪ್ರಾಜೆಕ್ಟಿನಿಂದ ಇಂಗ್ಲೆಂಡಿನ ಚರ್ಚ್ ತನ್ನ ಬಂಡವಾಳವ ಹಿಂದೆಪಡೆದಿತ್ತು. ಅದಕ್ಕೆ ಕಾರಣ ಆ ಪ್ರಾಜೆಕ್ಟಿನಿಂದ ಪರಿಸ ಹಾನಿ ಮತ್ತು ದೊಂಗ್ರಿಯ ಕೊಂದ್ ಆದಿವಾಸಿಗಳ ಹಕ್ಕು ಉಲ್ಲಂಘನೆ. ಗೋವುಗಳ ಗಂಟೆನಾದ, ಅವುಗಳ ಕೊರಗು ಕಾಲಿನ ಸದ್ದು, ಹೂಸು... ಎಲ್ಲ ಕೇಳಿಸುತ್ತಿತ್ತು. ಜಗತ್ತಿ ಎಲ್ಲವೂ ಸರಿಯಾಗಿದೆ ಅನ್ನಿಸಿತು. ಕಣ್ಣುಮುಚ್ಚಿದೆ.

(ಮುಂದುವರೆಯುವುದು)

ಅನುವಾದ: ಗೌರಿ ಲಂಕೇ
editorlankesh@gmail.c



ಮಿಮ್ಸ್ ನಕಲಿ ವೈದ್ಯರ ಸಹಾಯಕ್ಕೆ ನಿಂತ ಆದಿಚುಂಚನಗಿರಿ ಸ್ವಾಮಿ

ಲಂಕೇಶ್ ಸ್ಕೂಪ್

ಮಂಡ್ಯ ಜಿಲ್ಲೆಯ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿಗೆ ಬಂದಿದ್ದ ಕೇವಲ ಒಂದು ಮಾಹಿತಿ ಹಕ್ಕಿನ ಅರ್ಜಿಯನ್ನು ವಿಲೇವಾರಿ ಮಾಡಲು ಖುದ್ದು ಆದಿಚುಂಚನಗಿರಿ ಸ್ವಾಮೀಜಿ ಬಾಲಗಂಗಾಧರನಾಥರೇ ಮುಂದಾಗಿದ್ದಾರೆ. ಅದಕ್ಕಾಗಿ ಮಂಡ್ಯ ಮೆಡಿಕಲ್ ಕಾಲೇಜಿನ (ಮಿಮ್ಸ್)ನಲ್ಲಿನ ಕೆಲವು ನಕಲಿ ಸರ್ಟಿಫಿಕೇಟ್ ವೈದ್ಯರನ್ನು ಲೋಕಾಯುಕ್ತರ ತೂಗುಗತ್ತಿಯಿಂದ ರಕ್ಷಿಸಲು ಸ್ವಾಮೀಜಿ ವಾಮಮಾರ್ಗವನ್ನು ಬಳಸಿದ್ದಾರೆ. ವಿಪರ್ಯಾಸವೆಂದರೆ ಮಾಹಿತಿ ಹಕ್ಕು ಆಯುಕ್ತ (ಮಾಜಿ ಕೆಪಿಎಸ್‌ಸಿ ಅಧ್ಯಕ್ಷ) ಡಾ.ಕೃಷ್ಣರೇ ಕಾಯ್ದೆಯನ್ನು ರಕ್ಷಿಸದೇ ಬಾಲಗಂಗಾಧರನಾಥರ ಪರ ವಕ್ತಾರನಂತೆ ಕೆಲಸ ಮಾಡಿದ್ದಾರೆ. ಈ ಒಂದು ಪ್ರಕರಣದ ಹಿಂದೆ ಬದುಕಿರುವಾಗಲೇ ಪ್ರತಿಮೆ ಮಾಡಿಸಿಕೊಂಡ ಖ್ಯಾತಿಯ ಎಚ್.ಡಿ.ಚೌಡಯ್ಯನವರಿಂದ ಹಿಡಿದು, ಮಂಡ್ಯದ ಗಂಡು ಮಾದೇಗೌಡರಂತಹ ಘಟಾನುಘಟಿಗಳ ತನಕ ಹಲವು ಖ್ಯಾತನಾಮರು ಯಥಾಶಕ್ತಿ ಕೆಲಸ ಮಾಡಿರುವುದು ಮತ್ತೂ ರೋಮಾಂಚನಕಾರಿಯಾಗಿದೆ.


ಮಿಮ್ಸ್ ಎಂಬ ಮೆಡಿಕಲ್ ಕಾಲೇಜು ಮಂಡ್ಯದಲ್ಲಿ ಹುಟ್ಟಿದಾರಭ್ಯ ರೋಗವನ್ನು ತಗುಲಿಸಿಕೊಂಡು ಕೂತಿದೆ. ಇದನ್ನು ಮೆಡಿಕಲ್ ಭಾಷೆಯಲ್ಲಿ ಇನ್‌ಫ್ಯಾಂಟೈಲ್ ಡಿಸಾರ್ಡರ್ ಎನ್ನುತ್ತಾರಂತೆ. ಈ ರೋಗವು ಈಗಾಗಲೇ ಜೈಲನ್ನೂ ಕಂಡಿರುವ ಡಾ.ಚಿದಾನಂದನೆಂಬ ಕಡುಭ್ರಷ್ಟ ಪೆಥಾಲಜಿಸ್ಟ್‌ನಿಂದ ಶುರುವಾಯಿತು ಎಂದು ಬಹಳಷ್ಟು ಜನರು ತಪ್ಪು ತಿಳಿದಿದ್ದಾರೆ. ಆದರೆ ಸ್ವಲ್ಪ ಒಳಹೊಕ್ಕು ನೋಡಿದರೆ, ಚಿದಾನಂದನನ್ನೂ ಬಳಸಿಕೊಂಡು ಮೆಡಿಕಲ್ ಕಾಲೇಜನ್ನು ತಮ್ಮ ತೆಕ್ಕೆಗೆ ಎಳೆದುಕೊಳ್ಳಲು ಹೊರಟ ಪ್ರಭಾವೀ ಲಾಬಿಯಿಂದ ಈ ಬಾಲಗ್ರಹ ಅಂಟಿಕೊಂಡಿದೆ ಯೆಂಬುದು ತಿಳಿಯುತ್ತದೆ. ಇದೇ ಲಾಬಿಯ ರಕ್ಷಣೆಗಾಗಿಯೇ ಈಗ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಮೋಹನ್ (ಮಾಜಿ ಶಾಸಕ ಎಚ್.ಡಿ.ಚೌಡಯ್ಯನವರ ಅಳಿಯ) ಬಾಲಗಂಗಾಧರನಾಥರ ಪ್ರಭಾವವನ್ನು ಬಳಸಿದ್ದಾರೆ.

ಈಗಿನ ಮೆಡಿಕಲ್ ಕಾಲೇಜ್ ಪ್ರೊಫೆಸರ್‌ಗಳೆಂದರೆ ಈ ಹಿಂದಿನಂತೆ ಯುಜಿಸಿ ಸ್ಕೇಲ್ ಸಂಬಳಕ್ಕಿಂತ ಕಡಿಮೆ ಸಂಬಳವಿರುವ ಹಳೆಯದ ಕಾಲದಂತಲ್ಲ. ಈಗಿನ ಕಾಲಕ್ಕೆ ತಕ್ಕಂತೆ 50ರಿಂದ 80 ಸಾವಿರದವರೆಗೆ ಇಲ್ಲಿನ ಪ್ರೊಫೆಸರ್‌ಗಳಿಗೆ ಸಂಬಳವಿದೆ. ಡೈರೆಕ್ಟರೋ ಮತ್ತೊಂದೋ ಆದರೆ ಇನ್ನೂ ಒಂದಷ್ಟನ್ನು ಗೆಬರಿಕೊಳ್ಳಬಹುದು. ಹಾಗಾಗಿ ಮಿಮ್ಸ್ ಕಾಲೇಜಿಗೆ ನೇಮಕಗೊಂಡ ಅಸೋಸಿಯೇಟ್ ಪ್ರೊಫೆಸರ್ ಮತ್ತು ಪ್ರೊಫೆಸರ್‌ಗಳೆಲ್ಲಾ ತಮಗೆ ಇಷ್ಟೆಷ್ಟೋ ಬೋಧಕ ಅನುಭವವಿದೆಯೆಂಬ ಸುಳ್ಳು ಸರ್ಟಿಫಿಕೇಟುಗಳನ್ನು ರಾಜ್ಯದ ನಾನಾ ಕಾಲೇಜುಗಳಿಂದ ತಂದು ಇಲ್ಲಿಗೆ ಅರ್ಜಿ ಗುಜರಾಯಿಸಿದರು. ಈ ಸರ್ಟಿಫಿಕೇಟುಗಳ ಮರ್ಮ ಗೊತ್ತಿದ್ದರೂ, ಅವತ್ತಿನ ನಿರ್ದೇಶಕ ಡಾ. ಚಿದಾನಂದ ಪಡೆಯಬೇಕಾದಷ್ಟು ಕಾಣಿಕೆ ಪಡೆದು ಅಥವಾ ಲಾಬಿಯ ಒತ್ತಡಕ್ಕೆ ಮಣಿದು ಅವರನ್ನೆಲ್ಲ ನೇಮಕ ಮಾಡಿಕೊಂಡ. ಈ ಲಾಬಿಯಲ್ಲಿದ್ದ ಪ್ರಭಾವೀ ವೈದ್ಯರುಗಳು ತಾವೂ ಸ್ವತಃ ಸುಳ್ಳು ಸರ್ಟಿಫಿಕೇಟ್ ತಂದವರೇ.

ಹೆಚ್ಚಿನ ಸುಳ್ಳು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದು ಸುಳ್ಯ ಮೆಡಿಕಲ್ ಕಾಲೇಜಿನವರು ಮತ್ತು ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನವರು. ಮಂಡ್ಯದ ಹೊಸ ಸರ್ಕಾರೀ ಮೆಡಿಕಲ್ ಕಾಲೇಜಿನಲ್ಲಿ ಈ ರೀತಿಯ ಹಲವು ಅವ್ಯವಹಾರಗಳು ನಡೆಯುತ್ತಿರುವ ಸುದ್ದಿ ಗೊತ್ತಾದ್ದರಿಂದ ಪ್ರೊ.ಎಚ್.ಎಲ್.ಕೇಶವಮೂರ್ತಿ, ಕೆ.ಬೋರಯ್ಯ, ಸುನಂದಾ ಜಯರಾಂ, ಎಂ.ಬಿ.ನಾಗಣ್ಣ, ಎಂ.ಬಿ.ಶ್ರೀನಿವಾಸ್ ಸೇರಿದಂತೆ ಹಲವರು ಲೋಕಾಯುಕ್ತರಿಗೆ ದೂರು ಸಲ್ಲಿಸಿದರು. ಆ ದೂರಿನನ್ವಯ ಲೋಕಾಯುಕ್ತರು ಎಚ್.ಡಿ.ಕೋಟೆಯ ವಿವೇಕಾನಂದ ಆಸ್ಪತ್ರೆಯ ಡಾ.ಬಾಲಸುಬ್ರಹ್ಮಣ್ಯಂ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಿದರು.

ಸತ್ಯವೇ ನಮ್ಮ ತಾಯಿ ತಂದೆ, ಭ್ರಷ್ಟರಿಗೆ ನಾನು ಸಿಂಹಸ್ವಪ್ನ ಎಂದೆಲ್ಲಾ ಹೇಳುತ್ತಿದ್ದ, ಅದೇ ರೀತಿಯಲ್ಲಿ ಕೆಲಸ ಮಾಡುತ್ತಿದ್ದ ಬಾಲಸುಬ್ರಹ್ಮಣ್ಯಂ ಅವರು ನೇರ ಸುಳ್ಯ ಮೆಡಿಕಲ್ ಕಾಲೇಜಿಗೆ ನುಗ್ಗಿದವರೇ, ಅಲ್ಲಿನ ಎಲ್ಲಾ ದಾಖಲಾತಿಗಳನ್ನು ಗುಡ್ಡೆ ಹಾಕಿಕೊಂಡರು. ಮಂಡ್ಯ ಮೆಡಿಕಲ್ ಕಾಲೇಜಿಗೆ ಸರ್ಟಿಫಿಕೇಟ್ ಕೊಟ್ಟಿದ್ದವರ ಹೆಸರುಗಳು ಅಟೆಂಡೆನ್ಸ್ ರಿಜಿಸ್ಟರ್‌ಗಳಲ್ಲಿ ಇದೆಯೇ ಇಲ್ಲವೇ? ಅವರಿಗೆ ಈ ಕಾಲೇಜಿನಿಂದ ವರ್ಷಪೂರ್ತಿ ಸಂಬಳ ಪಾವತಿಯಾಗಿದೆಯೇ? ಅವರುಗಳು ಈ ರೀತಿ ಪಡೆದ ಸಂಬಳಕ್ಕೆ ಆದಾಯ ತೆರಿಗೆ ಕಟ್ಟಿದ್ದಾರೆಯೇ? ಎಲ್ಲವನ್ನೂ ಪರಿಶೀಲಿಸಿದಾಗ ಸುಳ್ಳು ಸರ್ಟಿಫಿಕೇಟ್ ಧೀರರು ಸಿಕ್ಕಿಬಿದ್ದರು. ಈ ಸುಳ್ಯ ಕಾಲೇಜು ಎಂತಹದೆಂದರೆ, ಆ ಕಾಲೇಜು ಯಾವ ವರ್ಷದಿಂದ ಶುರುವಾಯಿತು ಎಂಬುದನ್ನೂ ಮರೆತು, ಅದಕ್ಕಿಂತಲೂ ಹೆಚ್ಚು ವರ್ಷಗಳ ಬೋಧನಾ ಅನುಭವ ಇದೆಯೆಂಬ ಸರ್ಟಿಫಿಕೇಟ್‌ಗಳನ್ನು ನೀಡಿಬಿಟ್ಟಿತ್ತು. ಇವೆಲ್ಲದರ ಆಧಾರದ ಮೇಲೆ ಸದರಿ ವೈದ್ಯರ ತಪ್ಪುಗಳನ್ನು ಬಾಲಸುಬ್ರಹ್ಮಣ್ಯಂ ಎತ್ತಿ ತೋರಿಸಿದರು.


ಆದರೆ ಈ ಅರಿಭಯಂಕರರು ಆದಿಚುಂಚನಗಿರಿ ಕಾಲೇಜಿನಿಂದ ಮಾತ್ರ ಮೇಲೆ ಹೇಳಿದ ಯಾವ ದಾಖಲಾತಿಗಳನ್ನೂ ಪಡೆದುಕೊಳ್ಳಲಿಲ್ಲ. ಬದಲಿಗೆ ತಮ್ಮ ಸಹಪಾಠಿಯೇ ಆಗಿದ್ದ ಆದಿಚುಂಚನಗಿರಿ ಕಾಲೇಜಿನ ಪ್ರಿನ್ಸಿಪಾಲ್ ಮೋಹನ್‌ರಿಗೆ "ನಿಮ್ಮ ಕಾಲೇಜಿನಿಂದ ಕೊಟ್ಟ ಸರ್ಟಿಫಿಕೇಟ್‌ಗಳೆಲ್ಲಾ ಸಾಚಾನಾ?" ಎಂಬ ಪ್ರಶ್ನೆಯನ್ನು ಕೇಳಿದರು. "ಹೌದು, ನಾವು ಸತ್ಯಸಂಧರು. ಯಾವ ಕಾರಣಕ್ಕೂ ಸುಳ್ಳು ಸರ್ಟಿಫಿಕೇಟ್ ಕೊಡುವುದಿಲ್ಲ, ಆದಿಚುಂಚನಗಿರಿ ಸ್ವಾಮೀಜಿ ಮೇಲಾಣೆ" ಎಂದು ಮೋಹನ್ ಉತ್ತರ ಕೊಟ್ಟರು. ಕೊಡದೇ ಏನು ಮಾಡುತ್ತಾರೆ? ಅಲ್ಲಿಂದ ನಕಲಿ ಸರ್ಟಿಫಿಕೇಟ್ ತಂದವರಲ್ಲಿ ಸ್ವತಃ ಅವರ ಧರ್ಮಪತ್ನಿಯೂ, ಪ್ರಭಾವೀ ರಾಜಕಾರಣಿ ಎಚ್.ಡಿ.ಚೌಡಯ್ಯನವರ ಪುತ್ರಿಯೂ ಆದ ಡಾ.ಸವಿತಾ ಕೂಡಾ ಇದ್ದರು. ಅವರ ಜೊತೆಗೇ ಮಂಡ್ಯದ ಪ್ರಭಾವೀ ವೈದ್ಯ ಲಾಬಿಗೆ ಸೇರಿದ ಡಾ.ನಂದೀಶ್, ಡಾ.ಶಿವಕುಮಾರ್, ಜಿ.ಮಾದೇಗೌಡರ ಕುಲಪುತ್ರ ಜಿ.ಎಂ.ಪ್ರಕಾಶ್ ಸಹಾ ಇದ್ದರು. ಈ ಮೂರೂ ಜನರಿಗೆ ಪ್ರೊಫೆಸರ್ ಹುದ್ದೆಗೆ ಬೇಕಾದಷ್ಟು ಬೋಧಕ ಅನುಭವ ನಿಜವಾಗಿಯೂ ಇತ್ತು, ಆದರೆ ದೊಡ್ಡ ದೊಡ್ಡ ಹುದ್ದೆಗಳ ಮೇಲೆ ಕಣ್ಣಿಟ್ಟಿದ್ದ ಈ ಪ್ರಖ್ಯಾತ ವೈದ್ಯ ಮಹಾಶಯರು ಅದಕ್ಕಿಂತಲೂ ಹೆಚ್ಚು ವರ್ಷಗಳನ್ನು ಬರೆಸಿಕೊಂಡಿದ್ದರು. ಸುಳ್ಯ ಮೆಡಿಕಲ್ ಕಾಲೇಜಿನ ಮೇಲೆ ದಾಳಿ ನಡೆಸಿದ್ದ ತನಿಖಾಧಿಕಾರಿ ಇಲ್ಲಿ ಮಾತ್ರ ಪ್ರಿನ್ಸಿಪಾಲರ ಒಂದೇ ಒಂದೇ ಪತ್ರಕ್ಕೇ ಹೂಗುಟ್ಟಿದ್ದರು.



ಮಂಡ್ಯದಿಂದ ಆದಿಚುಂಚನಗಿರಿ ಮೆಡಿಕಲ್ ಕಾಲೇಜು ಸಂಪೂರ್ಣ ಎತ್ತಂಗಡಿ ಆಗಿ ಬೆಳ್ಳೂರು ಸೇರಿದ ಮೇಲೆ ಈ ಯಾವ ದೊಡ್ಡ ಡಾಕ್ಟರುಗಳೂ ಅಲ್ಲಿಗೆ ಹೋಗಿರಲಿಲ್ಲ. ಅವರುಗಳು ಯಥಾಪ್ರಕಾರ ಮಂಡ್ಯ ನಗರದಲ್ಲೇ ತಮ್ಮ ಖಾಸಗಿ ಪ್ರಾಕ್ಟೀಸ್‌ಅನ್ನು ಮಾತ್ರ ಮಾಡುತ್ತಿದ್ದರು. ಆದರೆ ಅದೇ ಹೊತ್ತಿನಲ್ಲಿ ಬೆಳ್ಳೂರಿನ ಕಾಲೇಜಿನಲ್ಲೂ ತಾವುಗಳು ಪೂರ್ಣಾವಧಿ ಮೇಷ್ಟರುಗಳಾಗಿ ಕೆಲಸ ಮಾಡುತ್ತಿದ್ದೆವು ಎಂಬ ಸರ್ಟಿಫಿಕೇಟ್ ಸುಳ್ಳು ಎಂದಾಯಿತು. ಇದು ಮಂಡ್ಯದ ಸಮಸ್ತ ಜನತೆಗೂ ಗೊತ್ತಿದ್ದ ವಿಷಯ. ಹಾಗಾಗಿ ಲೋಕಾಯುಕ್ತರಿಗೆ ದೂರು ಕೊಟ್ಟವರು ಡಾ.ಬಾಲಸುಬ್ರಹ್ಮಣ್ಯಂ ಹೇಳಿದರು ಎಂದ ಮಾತ್ರಕ್ಕೆ ಸುಮ್ಮನಾಗಲಿಲ್ಲ. ಮಂಡ್ಯದ ಸಮಸ್ತ ಜನತೆಗೂ ಗೊತ್ತಿದ್ದ ವಿಷಯವೆಂದರೆ, ಡಾ.ಬಾಲಸುಬ್ರಹ್ಮಣ್ಯಂ ಅವರ ವರದಿಯಲ್ಲಿ ತಪ್ಪಿದೆ, ನೀವು ಈ ವೈದ್ಯರುಗಳ ಹಾಜರಾತಿ ಪುಸ್ತಕ, ಸಂಬಳ ಬಟವಾಡೆ ಪುಸ್ತಕಗಳನ್ನು ತರಿಸಿಕೊಳ್ಳಿ ಎಂದು ಲೋಕಾಯುಕ್ತರಿಗೇ ಮನವಿ ಮಾಡಿದರು. ಆದರೆ ಲೋಕಾಯುಕ್ತ ಸಂಸ್ಥೆಗೆ ಆದಿಚುಂಚನಗಿರಿ ಕಾಲೇಜಿನಿಂದ ಈ ಮಾಹಿತಿಗಳನ್ನು ಇದುವರೆಗೂ ತರಿಸಿಕೊಳ್ಳಲಾಗಿಲ್ಲ, ಹಾಗಾಗಿ ಮಂಡ್ಯದ ಪತ್ರಕರ್ತ ಎಂ.ಬಿ.ನಾಗಣ್ಣ ಸದರಿ ವೈದ್ಯರ ಕುರಿತು ತಾವೇ ಮಾಹಿತಿ ಸಂಗ್ರಹಿಸಲು ಅರ್ಜಿ ಗುಜರಾಯಿಸಿದರು.

ಆದಿಚುಂಚನಗಿರಿ ಮೆಡಿಕಲ್ ಕಾಲೇಜು ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಕೆಳಗೆ ಬರುತ್ತದೆ. ಮಾಹಿತಿ ಹಕ್ಕಿನ ಕಾನೂನಿನ ಪ್ರಕಾರ ಯಾವುದಾದರೂ ಸಂಸ್ಥೆ ಸರ್ಕಾರದಿಂದ ಅನುದಾನ ಪಡೆಯುತ್ತಿದ್ದರೆ, ಅಥವಾ ಅದರ ನಿಯಂತ್ರಣಕ್ಕೆ ಒಳಪಟ್ಟಿದ್ದರೆ ಅದರಿಂದ ಮಾಹಿತಿ ಪಡೆಯುವುದು ಸಾರ್ವಜನಿಕರ ಹಕ್ಕು. ಆದ್ದರಿಂದಲೇ ನಾಗಣ್ಣ ವಿಶ್ವವಿದ್ಯಾಲಯಕ್ಕೇ ಅರ್ಜಿ ಹಾಕಿದರು. ಆದರೆ ತಮ್ಮ ಸಂಸ್ಥೆಯು ಖಾಸಗೀ ಸಂಸ್ಥೆಯಾದ್ದರಿಂದ ಈ ಮಾಹಿತಿಯನ್ನು ನೀಡಬೇಕಾಗಿಲ್ಲ ಎಂದು ಪ್ರಾಂಶುಪಾಲ ಮೋಹನ್ ಉತ್ತರ ನೀಡಿದರು. ಆದರೆ ತಮ್ಮ ವಿಶ್ವವಿದ್ಯಾಲಯಕ್ಕೆ ಇದು ಅಫಿಲಿಯೇಟ್ ಆದ್ದರಿಂದ ಮಾಹಿತಿ ನೀಡಲೇಬೇಕು ಎಂದು ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವು ಒಂದಲ್ಲ ಎರಡು ಬಾರಿ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿಗೆ ಸೂಚಿಸಿತು.

"ನೀವು ಕೇಳಿದ ಮಾಹಿತಿಯನ್ನೆಲ್ಲಾ ಲೋಕಾಯುಕ್ತರಿಗೇ ಕೊಟ್ಟುಬಿಟ್ಟಿದ್ದೇವೆ ನಮ್ಮಲ್ಲಿ ಲಭ್ಯವಿಲ್ಲ" ಎಂತಲೂ ಮೋಹನ್ ತಿಪ್ಪೆ ಸಾರಿಸಿದರು. ಈತ ಎಂತಹ ಫ್ರಾಡ್ ಎಂದರೆ, ಲೋಕಾ ಯುಕ್ತರ ಕಚೇರಿಯಿಂದ ಈ ಹಿಂದೆ ಇದೇ ಮಾಹಿತಿಗಳನ್ನು ಕೇಳಿದಾಗ ಅವು ನಮ್ಮಲ್ಲಿ ಲಭ್ಯವಿಲ್ಲ ಎಂದು ಲಿಖಿತವಾಗಿ ಈತನೇ ಬರೆದು ಕೊಟ್ಟಿದ್ದ. ಈಗ ನೋಡಿದರೆ ಅವೇ ಮಾಹಿತಿಗಳಿಗೆ ಸಂಬಂಧಿಸಿದ ಪತ್ರಗಳೆಲ್ಲವೂ ಲೋಕಾಯುಕ್ತರ ಹತ್ತಿರವಿದೆ ಎಂಬ ಬುರುಡೆಯನ್ನು ಯಾವ ನಾಚಿಕೆಯೂ ಇಲ್ಲದೇ ಹೇಳಿದ್ದಾರೆ. ಇಂತಹ ಸುಳ್ಳು ಹೇಳಿದ್ದು ಯಾರೋ ಸಾಧಾರಣ ಗುಮಾಸ್ತರಲ್ಲಾ, ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನಲ್ಲಿ ಪ್ರತೀವರ್ಷವೂ ನೂರಾರು ವೈದ್ಯರನ್ನು ತಯಾರು ಮಾಡುವ ಪ್ರಾಂಶುಪಾಲರು. ಇದೆಲ್ಲಾ ಶುರುವಾಗಿದ್ದು ಜುಲೈ 2009ರಲ್ಲಿ. ಆದರೆ ಫೆಬ್ರವರಿ 2010ರವರೆಗೂ ಏನೇ ಪ್ರಯತ್ನ ಪಟ್ಟರೂ ಈ ಮಾಹಿತಿಗಳನ್ನು ಕೊಡಲಿಲ್ಲ, ಕೊಟ್ಟರೆ ಸಂಬಂಧಪಟ್ಟವರ ಗೋಲ್‌ಮಾಲ್‌ಗಳೆಲ್ಲಾ ಬಯಲಿಗೆ ಬರುತ್ತವಲ್ಲಾ? ಹಾಗಾಗಿ ನಾಗಣ್ಣ ಮಾಹಿತಿ ಆಯೋಗಕ್ಕೆ ಮೇಲ್ಮನವಿ ದೂರು ಸಲ್ಲಿಸಿದರು.



ಇದರ ವಿಚಾರಣೆಯು ಮಾರ್ಚ್ 29ಕ್ಕೆ ಡಾ.ಕೃಷ್ಣರ ಮುಂದೆ ಬಂದಿತು. ಮಾಹಿತಿ ಆಯೋಗದ ಆಯುಕ್ತ ಡಾ.ಕೃಷ್ಣ ಈ ಹಿಂದೆ ಕೆಪಿಎಸ್‌ಸಿಗೆ ಅಧ್ಯಕ್ಷರಾಗಿದ್ದವರು. ಎಚ್.ಡಿ.ದೇವೇಗೌಡರ ಕೃಪಾಕಟಾಕ್ಷದಿಂದ ಕೆಲವು ಹುದ್ದೆಗಳನ್ನು ಅನುಭವಿಸಿದ ಕೃಷ್ಣರಿಗೆ ಒಳ್ಳೆಯ ಮತ್ತು ಕೆಟ್ಟ ಹೆಸರು ಎರಡೂ ಇವೆ. ಜಾತಿ ಮತ್ತು ಹಣಕ್ಕೆ ಮೆತ್ತಗಾಗುತ್ತಾರೆಂಬ ಆರೋಪವೂ ಇವರ ಮೇಲಿದೆ. ಆದರೆ ಮಾಹಿತಿ ಹಕ್ಕೆಂಬ ಅಸ್ತ್ರವನ್ನು ಚಲಾಯಿಸಿ, ಅದು ಪ್ರಜಾಪ್ರಭುತ್ವದ ಬಹುದೊಡ್ಡ ಶಕ್ತಿ ಎಂದೆಲ್ಲಾ ಭಾಷಣ ಬಿಗಿಯುತ್ತಿದ್ದ ಇದೇ ಕೃಷ್ಣರ ಮುಂದೆ ಸದರೀ ಕೇಸು ಬಂದಾಗ ನ್ಯಾಯ ಸಿಗಬಹುದೆಂಬ ನಿರೀಕ್ಷೆಯಿಂದ ನಾಗಣ್ಣ ಅಲ್ಲಿಗೆ ಹೋಗಿದ್ದಾರೆ.

ಆದರೆ ಅಲ್ಲಿ ಕೃಷ್ಣರ ರೌದ್ರಾವತಾರದ ಪ್ರದರ್ಶನವಾಗಿದೆ. ಮಾಹಿತಿ ಆಯೋಗದ ಸಿಬ್ಬಂದಿಯೇ ಹೊರಗೆ ಬಂದು ನಾಗಣ್ಣನವರನ್ನು ಸಮಾಧಾನ ಮಾಡಿದರು ಎಂದರೆ ಊಹಿಸಿಕೊಳ್ಳಿ. "ನೀವ್ಯಾರ್ರೀ, ನಿಮಗ್ಯಾಕೆ ಬೇಕ್ರೀ ಈ ಮಾಹಿತಿ? ಇದರಲ್ಲಿ ನಿಮ್ಮ ಪರ್ಸನಲ್ ಇಂಟರೆಸ್ಟ್ ಇದೆ". ಎಂದು ಮೊದಲಿಗೇ ಹರಿಹಾಯ್ದಿದ್ದಾರೆ ಕೃಷ್ಣ ಸಾಹೇಬರು. ಸಾರ್ವಜನಿಕ ಸಂಸ್ಥೆಯೊಂದರಲ್ಲಿ ಫ್ರಾಡ್ ಮಾಡಿ ಕೆಲಸ ತೆಗೆದುಕೊಂಡಿರುವ ಗಣ್ಯ ವೈದ್ಯರುಗಳನ್ನು ಪ್ರಶ್ನೆ ಮಾಡುವುದು ಹಲವು ರಿಸ್ಕ್‌ಗಳನ್ನು ಆಹ್ವಾನಿಸುತ್ತದೆಂಬುದು ನಾಗಣ್ಣರಿಗಾಗಲೀ ಅಥವಾ ಇದರ ಸುತ್ತ ಕೆಲಸ ಮಾಡುತ್ತಿರುವ ಮಂಡ್ಯದ ಪ್ರಗತಿಪರ ಹಿರಿಯರಿಗಾಗಲೀ ಗೊತ್ತಿರದ ಸಂಗತಿಯೇನಾಗಿರಲಿಲ್ಲ. ಆದರೆ ಒಬ್ಬ ಮಾಹಿತಿ ಹಕ್ಕು ಆಯುಕ್ತ ನಡೆದುಕೊಂಡ ರೀತಿ, ಮಾಹಿತಿ ಹಕ್ಕಿನಂತಹ ಬಹುಮಹತ್ವದ ಸಂಗತಿಯೂ ನಮ್ಮಲ್ಲಿ ಯಾವ ರೀತಿ ದಕ್ಕದೇ ಹೋಗಬಹುದೆಂಬುದಕ್ಕೆ ಸಾಕ್ಷಿಯಾಗಿದೆ.


"ಪತ್ರಕರ್ತರೆಲ್ಲಾ ಭ್ರಷ್ಟರಾಗಿ ಹೋಗಿದ್ದಾರೆ, ನೀವು ಯಾರನ್ನೋ ಫಿಕ್ಸ್ ಮಾಡಲು ಈ ಮಾಹಿತಿ ಕೇಳಿದ್ದೀರಿ" ಇತ್ಯಾದಿ ಬಡಬಡಿಸಿದ್ದಾರೆ ಕೃಷ್ಣ. ಅಲ್ಲೇ ಮುಸಿಮುಸಿ ನಗುತ್ತಾ ಕೂತಿದ್ದ ಮಾಹಿತಿಯನ್ನೂ ನೀಡದೇ ವಿಚಾರಣೆಗೆ ಬಂದಿದ್ದ ಮೋಹನ್‌ರನ್ನಲ್ಲ ಅವರು ವಿಚಾರಣೆ ಮಾಡಿದ್ದು. ಬದಲಿಗೆ ಯಾರು ಏಳು ತಿಂಗಳಿಂದ ಒಂದು ಮಾಹಿತಿಗಾಗಿ ಹಲವು ಸುತ್ತು ಸುತ್ತಬೇಕಾಗಿತ್ತೋ ಆ ಅರ್ಜಿದಾರರನ್ನು. ಈ ಪ್ರಮಾಣದ ಆಕ್ರೋಶ ಈವಯ್ಯನಿಗ್ಯಾಕೆ ಎಂದುಕೊಳ್ಳುವಾಗ ಕೃಷ್ಣ ಮುಂದುವರೆಸಿದ್ದಾರೆ: "ಸ್ವಾಮೀಜಿ ಕಷ್ಟಪಟ್ಟು ಈ ಮೆಡಿಕಲ್ ಕಾಲೇಜು ಕಟ್ಟಿದ್ದಾರೆ. ಅದಕ್ಕೆ ಯಾಕ್ರೀ ತೊಂದರೆ ಕೊಡ್ತೀರಾ?" ಈ ಮಾಹಿತಿಯನ್ನು ಕೊಡಬೇಕಿತ್ತಾ ಇಲ್ಲವಾ ಎಂಬುದನ್ನು ಪರಿಶೀಲಿಸಿ ಯಾಕೆ ಕೊಟ್ಟಿಲ್ಲಾ? ಎಂಬುದನ್ನು ಕೇಳುವುದಷ್ಟೇ ಇವರ ಕೆಲಸವಾಗಿರಬೇಕಿತ್ತು. ಆದರೆ ಇವರು ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನ ಅಕ್ರಮಗಳ ರಕ್ಷಣೆಗೆ ನಿಂತ ವಕೀಲನ ರೀತಿ ಮಾತನಾಡಿದ್ದು ಸೋಜಿಗವಾಗಿತ್ತು. ನೇರವಾಗಿ ಸ್ವಾಮೀಜಿಯಿಂದ ಫೋನ್ ಬರದೇ ಇದ್ದರೆ ಕೃಷ್ಣ ಈ ರೀತಿ ವರ್ತಿಸುತ್ತಿರಲಿಲ್ಲ ಎಂದು ಮಾಹಿತಿ ಆಯೋಗದ ಮೂಲಗಳೇ ಹೇಳುತ್ತವೆ. "ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವೇ ಈ ಮಾಹಿತಿಯನ್ನು ಕೊಡಬೇಕೆಂದು ಸೂಚಿಸಿದೆ" ಎಂತಲೂ ನಾಗಣ್ಣ ತಿಳಿಸಿದ್ದಾರೆ. ಆದರೆ "ವಿಶ್ವವಿದ್ಯಾಲಯ ಹೇಳಿಬಿಟ್ಟರೆ ನಾವ್ಯಾಕ್ರೀ ಕೇಳಬೇಕು? ನೀವು ಹೆಚ್ಚಿಗೆ ಮಾತನಾಡಿದರೆ ಹೊರಗೆ ಕಳಿಸ್ತೀನಿ ನೋಡಿ" ಎಂದಿದ್ದಾರೆ ಕೃಷ್ಣ ಸಾಹೇಬರು. ಆದರೆ ಅದೇ ಮಾಹಿತಿ ಹಕ್ಕಿನ ಅರ್ಜಿಯಲ್ಲಿ ಕೇಳಿದ್ದ ಮೊದಲ ಪ್ರಶ್ನೆಗೆ ಉತ್ತರವಾಗಿ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಅಫಿಲಿಯೇಷನ್ ಸರ್ಟಿಫಿಕೇಟನ್ನು ಕೊಡಿ ಎಂದು ಕೃಷ್ಣ ಹೇಳಿದ್ದಾರೆ. ಒಂದು ವೇಳೆ ಮಾಹಿತಿ ಕೊಡಬೇಕಾದ್ದೇ ಇಲ್ಲಾ ಎನ್ನುವುದಾದರೆ ಅದನ್ನಾದರೂ ಏಕೆ ಕೊಡಬೇಕಾಗಿತ್ತು?

ಇದುವರೆಗೆ ಬೆಳ್ಳೂರಿನ ಮೆಡಿಕಲ್ ಕಾಲೇಜು ಅವ್ಯವಹಾರಗಳು, ಸುಳ್ಳು ಸರ್ಟಿಫಿಕೇಟ್‌ನ ಭಾನಗಡಿಗಳು ಸ್ವಾಮೀಜಿಯವರಿಗೆ ಗೊತ್ತಿದ್ದಂತಿರಲಿಲ್ಲ, ಆದರೆ ಈಗ ಮಾತ್ರ ಅವರೇ ನೇರವಾಗಿ ಫೋನ್ ಮಾಡಿ ನಕಲಿಗಳ ಸಪೋರ್ಟ್‌ಗೆ ನಿಂತಿದ್ದಾರೆ ಎಂಬ ಆರೋಪವು ಬಹಳ ಗಂಭೀರವಾದದ್ದು. ತಮ್ಮದೇ ಸಂಸ್ಥೆಯಲ್ಲಿ ನಡೆಯುತ್ತಿರುವ ಇಂತಹ ನಕಲಿ ವ್ಯವಹಾರಕ್ಕೆ ಕಡಿವಾಣ ಹಾಕದಷ್ಟು ಸ್ವಾಮೀಜಿ ದುರ್ಬಲರೇ ಎಂಬುದು ಮಂಡ್ಯದ ಪ್ರಜ್ಞಾವಂತರು ಕೇಳುವ ಪ್ರಶ್ನೆ. ಕೆಪಿಎಸ್‌ಸಿಯಂತಹ ದೊಡ್ಡ ಹುದ್ದೆಗಳಲ್ಲಿದ್ದ ಕೃಷ್ಣರೂ ಖೋಟಾ ಸರ್ಟಿಫಿಕೇಟ್ ಜಾಲದಲ್ಲಿ ಪಾತ್ರಧಾರಿಯಾದದ್ದು ಹೇಗೆ ಎಂಬುದು ಮತ್ತೊಂದು ಪ್ರಶ್ನೆ.

ಈಗ ದೂರು ನೀಡಿದವರು ರಾಜ್ಯಪಾಲರಿಗೆ ಮೇಲ್ಮನವಿ ಕೊಡಲು ತೀರ್ಮಾನಿಸಿದ್ದಾರೆ. ಅಷ್ಟರೊಳಗೆ ಸ್ವಾಮೀಜಿ ಸಂಬಂಧಪಟ್ಟವರನ್ನು ಕರೆಸಿ ಛೀಮಾರಿ ಹಾಕುವ ಧೈರ್ಯ ಮಾಡುತ್ತಾರಾ? ಇದಕ್ಕೆ ಉತ್ತರವನ್ನು ಚುಂಚನಗಿರಿ ಕಾಲಭೈರವನೇ ಹೇಳಬೇಕು.

• ವರದಿಗಾರ

ಗೋರಿಪಾಳ್ಯದ ಗಲಭೆ ತೆನಾಲಿಯನ್ನು ಕೊಂದಿದ್ದು ಯಾರು?


ತೆನಾಲಿ

ಮಾರ್ಚ್ 29 ರ ಸೋಮವಾರ ನಡೆದ ಗೋರಿಪಾಳ್ಯದ ಗಲಾಟೆಯನ್ನು ಮುಸ್ಲಿಂ ಸಂಘಟನೆಯಾದ ಕೆಎಫ್‌ಡಿಯ ತಲೆಗೆ ಕಟ್ಟಿ ಕೈತೊಳೆದುಕೊಳ್ಳುವ ರೌಡಿ ಆರಿಫ್‌ನ ಹುನ್ನಾರಕ್ಕೆ ಪೊಲೀಸರು ಈಪಾಟಿ ತಾಳೆ ಹಾಕಿದ್ದು ಮಾತ್ರ ದುರಂತವಲ್ಲದೇ ಮತ್ತೇನಲ್ಲ. ನಿಜಕ್ಕೂ ಕೆಎಫ್‌ಡಿ ಕಾರ್ಯಕರ್ತರೇ ತೆನಾಲಿಯನ್ನು ಹೊತ್ತೊಯ್ದು ಕೊಂದಿದ್ದರೆ ಆತನ ಜೊತೆಗಿದ್ದ ಸುಲ್ತಾನ್‌ನನ್ನು ಏಕೆ ಬಿಡುತ್ತಿದ್ದರು? ಹಾಗೆ ಕೊಂದಿದ್ದೇ ಆಗಿದ್ದರೆ ತಮಗೆ ರಕ್ಷಣೆ ಕೋರಿ ಕೆಎಫ್‌ಡಿ ಕಾರ್ಯಕರ್ತರೇಕೆ ಠಾಣೆಯೆದುರು ಪ್ರತಿಭಟಿಸಬೇಕಿತ್ತು?

ಯಾರೋ ಮಾಡಿದ ಕೊಲೆಯನ್ನು ಕೆಎಫ್‌ಡಿ ಎಂಬ ಮುಸ್ಲಿಂ ಸಂಘಟನೆಯ ತಲೆಗೆ ಕಟ್ಟುವ ಷಡ್ಯಂತ್ರವಾ ಇದು?


ಅಲ್ತಾಫ್

ಕೊಲೆಯಾದವನು ಗಾಯತ್ರಿನಗರದ ಪುಡಿ ರೌಡಿ ತೆನಾಲಿ ಉರ್ಫ್ ನವೀನ. ಅದನ್ನೇ ನೆಪ ಮಾಡಿಕೊಂಡು ಗೋರಿಪಾಳ್ಯವನ್ನು ಚಿಂದಿಯೆಬ್ಬಿಸಿದ್ದು ಆರಿಫ್ ಪಾಷಾನ ರೌಡಿ ಪಡೆ. ನಡೆದದ್ದು ಕೆಎಫ್‌ಡಿ ಕಾರ್ಯಕರ್ತರ ಬೇಟೆ ಮತ್ತು ಪೊಲೀಸರ ಕಣ್ಣಾಮುಚ್ಚಾಲೆಯಷ್ಟೇ.

ಮಾರ್ಚ್ 29 ರ ಸೋಮವಾರ ನಡೆದ ಗೋರಿಪಾಳ್ಯದ ಗಲಾಟೆಯನ್ನು ಮುಸ್ಲಿಂ ಸಂಘಟನೆಯಾದ ಕೆಎಫ್‌ಡಿಯ ತಲೆಗೆ ಕಟ್ಟಿ ಕೈತೊಳೆದುಕೊಳ್ಳುವ ರೌಡಿ ಆರಿಫ್‌ನ ಹುನ್ನಾರಕ್ಕೆ ಪೊಲೀಸರು ಈಪಾಟಿ ತಾಳೆ ಹಾಕಿದ್ದು ಮಾತ್ರ ದುರಂತ ವಲ್ಲದೇ ಮತ್ತೇನಲ್ಲ.

ಸೋಮವಾರ (ಮಾರ್ಚ್ 29) ರಾತ್ರಿ ಹೊತ್ತಿಗೆ ಬಿಡದಿ ಸಮೀಪದ ರಸ್ತೆಯಲ್ಲಿ ಪತ್ತೆಯಾದದ್ದು ರೌಡಿ ತೆನಾಲಿಯ ಹೆಣ. ಆತ ತನ್ನ ಕಾರಿನ ಡ್ರೈವರ್ ಎಂದೂ ಆತನನ್ನು ಕೆಎಫ್‌ಡಿಯ ಕಾರ್ಯಕರ್ತರು ಅಪಹರಿಸಿದ್ದಾರೆಂದೂ ಜೆಜೆನಗರ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟಿದ್ದ ಆರಿಫ್‌ಗೆ ಇಷ್ಟೊಂದು ಕ್ಷಿಪ್ರವಾಗಿ ಬಿಡದಿ ಬಳಿ ಆತನ ಹೆಣ ಬಿದ್ದಿದೆಯೆಂದೂ ಆತನನ್ನು ಕೆಎಫ್‌ಡಿ ಯವರೇ ಕೊಂದು ಹಾಕಿದ್ದಾರೆಂದೂ ಗೊತ್ತಾಗಿದ್ದು ಹೇಗೆ?

ಆರಿಫ್ ಮಗ ಇಮ್ರಾನ್‌ನ ತಲೆಗಾರಿಕೆ?

ಕೆಎಫ್‌ಡಿ ಜೊತೆಗಿನ ಘರ್ಷಣೆಯನ್ನೇ ಬಳಸಿಕೊಂಡು ತಮಗೆ ತಲೆನೋವಾಗಿದ್ದ ರೌಡಿ ತೆನಾಲಿಯನ್ನು ಆರಿಫ್ ಗ್ಯಾಂಗೇ ಕೊಂದು ಹಾಕಿತೆ? ಅದನ್ನು ಕೆಎಫ್‌ಡಿ ತಲೆಗೆ ಕಟ್ಟಿ ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆಯುವ ತಂತ್ರವಾ ಇದು?


ಇಮ್ರಾನ್


ಆರಿಫ್‌ನ ಪಾತಕಿ ಪುತ್ರ ಇಮ್ರಾನ್ ಮತ್ತು ಸೈಲೆಂಟ್ ಸುನೀಲನ ಶಿಷ್ಯ ತೆನಾಲಿಯ ಸಂಬಂಧ ಬಲ್ಲ ಕೆಲವರ ಪ್ರಕಾರ ತೆನಾಲಿ ಹತ್ಯೆಗಿರುವ ಕಾರಣವೇ ಬೇರೆ. ಇಲ್ಲಿಗೆ ನಾಲ್ಕು ತಿಂಗಳ ಹಿಂದಷ್ಟೇ ಇಮ್ರಾನ್ ಮತ್ತು ತೆನಾಲಿ ಮಧ್ಯೆ ಹೊಡೆದಾಟವಾಗಿತ್ತು. ಯಾವುದೋ ಮುಸ್ಲಿಂ ಹೆಂಗುಸಿನ ಜೊತೆ ತೆನಾಲಿ ಕೆಟ್ಟದಾಗಿ ನಡಕೊಂಡಿದ್ದಕ್ಕೆ ಸಿಟ್ಟಿಗೆದ್ದ ಇಮ್ರಾನ್ ತೆನಾಲಿಯನ್ನು ಹೊಡೆದೋಡಿಸಿದ್ದನಂತೆ. ಹಾಗೇ ಓಡಿಸಿದ್ದ ತೆನಾಲಿಯನ್ನು ಪಾಲಿಕೆ ಚುನಾವಣೆ ಘೋಷಣೆಯಾಗಿದ್ದನ್ನೇ ಕಾದು ಉಪಾಯವಾಗಿ ಕರೆಸಿಕೊಂಡ ಇಮ್ರಾನ್ ಉದ್ದೇಶಪೂರ್ವಕವಾಗಿಯೇ ತನ್ನ ತಮ್ಮ ಸುಲ್ತಾನ್‌ನನ್ನು ಆತ ಜೊತೆ ಹಾಕಿದ್ದನೆ?

ಕೆಎಫ್‌ಡಿ ಕಾರ್ಯಕರ್ತರ ಜೊತೆ ಘರ್ಷಣೆಯಾಗಿದ್ದನ್ನೇ ಕಾದು ತೆನಾಲಿಯನ್ನು ಮುಗಿಸಲಾಯ್ತೆ? ಅತ್ತ ಕೆಎಫ್‌ಡಿಯನ್ನೂ ಹಣಿದಂತಾಯ್ತು ಇತ್ತ ತಲೆನೋವೂ ನಿವಾರಣೆಯಾದಂತಾಯ್ತು, ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದ ಗೋರಿಪಾಳ್ಯದ ಕಿರಾತಕರಿಗೆ ಶಿಕ್ಷೆ ಇಲ್ಲವೇ?

ಇದು ಗೋರಿಪಾಳ್ಯಕ್ಕೆ ಗೋರಿಪಾಳ್ಯವೇ ಕೇಳುತ್ತಿರುವ ಪ್ರಶ್ನೆ. ಕೊಲೆಯಾದ ತೆನಾಲಿ ತನ್ನ ಕಾರಿನ ಡ್ರೈವರ್ ಎನ್ನುವುದು ಆರಿಫ್‌ನ ಕಟ್ಟುಕತೆಯಷ್ಟೆ. ಅಸಲಿಗೆ ಆತ ರೌಡಿ ಸೈಲೆಂಟ್ ಸುನೀಲನ ಶಿಷ್ಯ. ರೌಡಿ ಆರಿಫ್ ಮತ್ತು ಆತನ ಮಗ ಇಮ್ರಾನ್ ಪಾಲಿಗೆ ಸೈಲೆಂಟ್ ಸುನೀಲನ ಪರವಾಗಿ ಭಟ್ಟಂಗಿಯಂತಿದ್ದವನು ತೆನಾಲಿ. ವಿಚಿತ್ರವೆಂದರೆ ಈತನಕ ಅಲ್ತಾಫ್ ಮತ್ತು ಆರಿಫ್ ತಂಡಗಳ ನಡುವಿನ ಘರ್ಷಣೆಗೆ ಹೆಸರುವಾಸಿಯಾಗಿದ್ದ ಗೋರಿಪಾಳ್ಯ ಈಗ ಕೆಎಫ್‌ಡಿ ಎಂಬ ಮುಸ್ಲಿಂ ಸಂಘಟನೆಯಿಂದಾಗಿ ಮತ್ತೊಮ್ಮೆ ಉದ್ವಿಗ್ನಗೊಂಡಂತಾಗಿರುವುದು.

ಗೋರಿಪಾಳ್ಯ ಬದಲಾಗಿದೆ. ಅಲ್ಲೀಗ ಕೆಎಫ್‌ಡಿ ಎಂಬ ಸಂಘಟನೆಯದೇ ಅಬ್ಬರ. ಅತ್ತ ಅಲ್ತಾಫ್ ಮತ್ತು ಇತ್ತ ಆರಿಫ್ ಗ್ಯಾಂಗುಗಳ ಮಧ್ಯೆ ಪದೇಪದೇ ಘರ್ಷಣೆ, ರಕ್ತಪಾತ ನಡೆದು ಹೆಣಬಿದ್ದದ್ದು ಹಳೇ ಕತೆ. ಈಗ ಅಲ್ತಾಫ್ ಮತ್ತು ಆರಿಫ್ ಇಬ್ಬರೂ ಕೆಎಫ್‌ಡಿ ವಿರುದ್ಧ ತಿರುಗಿಬಿದ್ದಿದ್ದಾರೆ. ಕೆಎಫ್‌ಡಿ ಅಂದರೆ ಕರ್ನಾಟಕ ಫೋರಮ್ ಫಾರ್ ಡಿಗ್ನಿಟಿ ಎಂಬ ಸಂಘಟನೆ ಗೋರಿಪಾಳ್ಯಕ್ಕೆ ಕಾಲಿಟ್ಟಿದ್ದು ಇಲ್ಲಿಗೆ ಎರಡು ವರ್ಷದ ಹಿಂದೆ. ಸ್ಥಳೀಯವಾಗಿ ಇದರ ನೇತೃತ್ವ ವಹಿಸಿದ್ದು ಮೌಲ್ವಿ ಇರ್ಫಾನ್ ಎಂಬ ಧರ್ಮನಿಷ್ಠ ಯುವಕ.


ಸೀಮಾಖಾನಂ


ಆರೀಫ್

ಆ ಹೊತ್ತಿಗೆ ಅರ್ಧ ಗೋರಿಪಾಳ್ಯಕ್ಕೆ ಅಲ್ತಾಫ್ ನಾಯಕನಂತಿದ್ದರೆ ಇನ್ನರ್ಧವನ್ನು ಮಾಜಿ ಕೌನ್ಸಿಲರ್ ಆರಿಫ್ ನಿಯಂತ್ರಿಸುತ್ತಿದ್ದ. ಇಬ್ಬರಿಗೂ ಕೌನ್ಸಿಲರ್‌ಗಳಾಗುವ ಆಸೆ. ಜಿದ್ದಾಜಿದ್ದಿಯೇನು ಕಮ್ಮಿಯದೆ? ಇವತ್ತಲ್ಲ ನಾಳೆ ಅಲ್ತಾಫ್ ತನ್ನನ್ನು ರಾಜಕೀಯವಾಗಿ ನಿರ್ನಾಮ ಮಾಡುತ್ತಾನೆಂದೇ ಲೆಕ್ಕ ಹಾಕಿದ ಆರಿಫ್ ತನ್ನ ಮಗ ಇಮ್ರಾನ್‌ನನ್ನೇ ಅಲ್ತಾಫ್ ವಿರುದ್ಧ ರೌಡಿಯಾಗಿ ಬೆಳೆಸಿದ. ಇಮ್ರಾನ್ ಬರುಬರುತ್ತ ಎಂಥಾ ಅನಾಹುತಕಾರಿಯಾದನೆಂದರೆ ಮೊಬೈಲ್ ಕಳ್ಳರು, ಮಜೂರ್‌ಗಳು ಮತ್ತು ಲೈವ್‌ಬ್ಯಾಂಡ್ ಹುಡುಗೀರ ದಂಧೆಯ ಸಾಮ್ರಾಜ್ಯವನ್ನೇ ಕಟ್ಟಿ ಅದರ ರಕ್ಷಣೆಗೆಂದು ಸೈಲೆಂಟ್ ಸುನೀಲನ ದೋಸ್ತಿ ಬೆಳೆಸಿದ. ಈ ಮಧ್ಯೆ ಗೋರಿಪಾಳ್ಯದ ಅಷ್ಟೂ ಮಸೀದಿಗಳ ಮುಖ್ಯಸ್ಥರೆಲ್ಲ ಸೇರಿ ಆರಿಫ್ ಮತ್ತು ಅಲ್ತಾಫ್ ಮಧ್ಯೆ ರಾಜಿ ಮಾಡಿಸಿದ್ದಾರೆ. ನಂಬದ ಅಲ್ತಾಫ್ ಚುನಾವಣಾ ಪ್ರಚಾರಕ್ಕೆಂದು ಲೇಔಟ್ ಕೃಷ್ಣಪ್ಪನವರ ಜೊತೆ ಆರಿಫ್ ಮನೆಯಿದ್ದ ರಸ್ತೆಗೆ ಕಾಲಿಟ್ಟು ಇನ್ನಿಲ್ಲದಂತೆ ಮೋಸಹೋಗಿದ್ದ.

ಆವತ್ತು ಅಲ್ತಾಫ್ ಹತ್ಯೆಗೆ ಯತ್ನಿಸಿದ ಆರಿಫ್ ಗ್ಯಾಂಗ್ ಅನ್ಯಾಯವಾಗಿ ಆತನ ಇಬ್ಬರು ತಮ್ಮಂದಿರನ್ನು ಕೊಚ್ಚಿ ಹಾಕಿತು. ಹೇಗೋ ಬಚಾವಾದ ಅಲ್ತಾಫ್ ಜಿದ್ದು ಬಿಡಲಿಲ್ಲ. ತನ್ನಿಬ್ಬರು ತಮ್ಮಂದಿರ ಹತ್ಯೆಗೆ ಪ್ರತೀಕಾರವಾಗಿ ಕಾನೂನು ರೀತ್ಯ ಸೆಣಸಾಡಿಕೊಂಡೇ ಬಂದ. ಈ ಮಧ್ಯೆ ಚಾಮರಾಜಪೇಟೆ ಶಾಸಕ ಜಮೀರ್ ಜೊತೆ ಆರೀಫ್ ಕೈಜೋಡಿಸಿದ. ಅಲ್ತಾಫ್ ಕಾಂಗ್ರೆಸ್ಸಿನಲ್ಲೇ ಮುಂದುವರೆದ. ಹೀಗೇ ಕಾಲ ತಳ್ಳುತ್ತಿದ್ದಂತೆಯೇ ಪಾಲಿಕೆ ಚುನಾವಣೆ ಬೇರೆ ಬಂತು. ಈ ಬಾರಿ ಪಾದರಾಯನಪುರಕ್ಕೆ ಆರಿಫ್ ತನ್ನ ಪತ್ನಿ ಜರೀನಾರನ್ನು ಜೆಡಿಎಸ್ ಅಭ್ಯರ್ಥಿಯಾಗಿ ನಿಲ್ಲಿಸಿದರೆ ಪಕ್ಕದ ಜೇಜೆನಗರ ವಾರ್ಡಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಅಲ್ತಾಫ್ ತನ್ನ ಪತ್ನಿ ಸೀಮಾ ಖಾನಮ್‌ರನ್ನು ಕಣಕ್ಕಿಳಿಸಿದ್ದ. ಇಬ್ಬರೂ ಗೆಲ್ಲುವ ಅಭ್ಯರ್ಥಿಗಳೇ.

ಅಲ್ತಾಫ್ ಪತ್ನಿ ವಿರುದ್ಧ ಜೆಡಿಎಸ್ ನಿಲ್ಲಿಸಿದ ಬೀಬಿಜಾನ್ ಆಗಲಿ ಆರಿಫ್ ಪತ್ನಿ ಜರೀನಾ ಎದಿರು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ತಾಹಿರಾ ಬೇಗಮ್ ಆಗಲಿ ಬಲಾಢ್ಯರೇನಲ್ಲ. ಆದರೆ ಆತಂಕ ಶುರುವಾದದ್ದು ಕೆಎಫ್‌ಡಿಯ ರಾಜಕೀಯ ವೇದಿಕೆಯಾದ ಎಸ್‌ಡಿಪಿ ಅರ್ಥಾತ್ ಸೋಷಿಯಲಿಸ್ಟ್ ಡೆಮಾಕ್ರಾಟಿಕ್ ಪಾರ್ಟಿಯಿಂದ. ಎಸ್‌ಡಿಪಿ ಆರಿಫ್ ವಿರುದ್ಧ ನಾಜುನ್ನೀಸಾ ಎಂಬ ನಿವೃತ್ತ ಅಧ್ಯಾಪಕಿಯನ್ನೂ ಅಲ್ತಾಫ್ ಪತ್ನಿಯ ವಿರುದ್ಧ ಆಯಿಷಾ ಬೇಗಮ್ ಎಂಬ ಪದವೀಧರೆಯನ್ನೂ ಕಣಕ್ಕಿಳಿಸಿತ್ತು. ಅಲ್ತಾಫ್ ರಾಜಕೀಯವಾಗಿ ಕೆಎಫ್‌ಡಿಯನ್ನು ಟೀಕಿಸಿದನಾದರೂ ತನ್ನ ವಾರ್ಡಿನಲ್ಲಿ ಅದಕ್ಕೆ ಆ ಮಟ್ಟದ ಪ್ರಾಬಲ್ಯವಿಲ್ಲದ್ದರಿಂದ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಆದರೆ ಆರಿಫ್ ಸೋಲಿನ ಭೀತಿಯಲ್ಲಿ ಕಂಗಾಲಾಗಿಬಿಟ್ಟ.

ದೊಡ್ಡ ಪಾರ್ಟಿಯಲ್ಲದ, ದುಡ್ಡಿಲ್ಲದ, ರೌಡಿ ಪಡೆ ಬೆನ್ನಿಗಿಲ್ಲದ ಕೆಎಫ್‌ಡಿ ಮತ್ತು ಎಸ್‌ಡಿಪಿಯ ನಾಜುನ್ನೀಸಾ ಪರವಾಗಿ ಇಡೀ ಪಾದರಾಯನಪುರ ವಾರ್ಡೇ ನಿಂತುಬಿಟ್ಟಿತ್ತು. ಆರಿಫ್‌ನ ರೌಡಿ ಹಾವಳಿಗೆ ಬೇಸತ್ತಿದ್ದ ಗೋರಿಪಾಳ್ಯದ ಜನ ಕೆಎಫ್‌ಡಿಯ ಅಭ್ಯರ್ಥಿಯನ್ನು ಸಾರಾಸಗಟಾಗಿ ಬೆಂಬಲಿಸಿದ್ದರು. ಶುರುವಾದ ಒಂದೇ ವರ್ಷದಲ್ಲಿ ಕೆಎಫ್‌ಡಿಗೆ ಎಂಥಾ ಜನಪ್ರಿಯತೆ ಸಿಕ್ಕಿತೆಂದರೆ ಪಾದರಾಯನಪುರ ವಾರ್ಡ್ ಒಂದರಲ್ಲೇ ಅದಕ್ಕೆ ಮೂರು ಸಾವಿರಕ್ಕೂ ಅಧಿಕ ಕಾರ್ಯಕರ್ತರ ಪಡೆಯಿತ್ತು. ಗಲ್ಲಿಗಲ್ಲಿಗಳಲ್ಲೂ ಬಹಿರಂಗಸಭೆಗಳಾದವು. ಯಾವುದೇ ಮುಲಾಜಿಲ್ಲದೇ ಶಾಸಕ ಜಮೀರ್, ಮಾಜಿ ಕೌನ್ಸಿಲರ್ ಆರಿಫ್, ಕಾಂಗ್ರೆಸ್ ನಾಯಕರು ಇತ್ಯಾದಿ ಎಲ್ಲಾ ಪಕ್ಷಗಳ ಮುಸ್ಲಿಂ ನಾಯಕರನ್ನೂ ಬಿಡದೇ ಕೆಎಫ್‌ಡಿ ಕಾರ್ಯಕರ್ತರು ಟೀಕಿಸುತ್ತಿದ್ದದ್ದು ಮುಸ್ಲಿಮರನ್ನು ಆಕರ್ಷಿಸಿತ್ತು.

ಮಾರ್ಚ್ 28 ರಂದು ಮತದಾನದ ದಿನವಂತೂ ಆರಿಫ್ ಅಕ್ಷರಶಃ ಕುಸಿದುಹೋದ. ಕೆಎಫ್‌ಡಿ ಅಭ್ಯರ್ಥಿ ನಾಜುನ್ನೀಸಾ ಪರವಾಗಿ ಜನ ಮುಗಿಬಿದ್ದು ಓಟು ಹಾಕಿದು ನೋಡುತ್ತಿದ್ದಂತೆಯೇ ಸಿಟ್ಟಿಗೆದ್ದ ಆರಿಫ್ ಮತ ಯಾಚಿಸುತ್ತಿದ್ದ ಕೆಎಫ್‌ಡಿ ಕಾರ್ಯಕರ್ತರನ್ನೇ ಹಿಡಿದು ಬಾರಿಸಿಬಿಟ್ಟ. ಈ ಬಗ್ಗೆ ಕೆಎಫ್‌ಡಿ ಕಾರ್ಯಕರ್ತರು ಜಗಜೀವನರಾಮ್‌ನಗರ ಪೊಲೀಸ್ ಠಾಣೆಗೆ ದೂರು ಕೊಟ್ಟರೆ ಮೊದಲೇ ಆರಿಫ್ ಭಟ್ಟಂಗಿಯಂತಿದ್ದ ಇನ್ಸ್‌ಪೆಕ್ಟರ್ ಕೋದಂಡರಾಮ್ ಅವರ ತಲೆ. ಸವರಿ ಸಾಗಹಾಕಿದ. ಮರುದಿನ ಅಂದರೆ ಸೋಮವಾರ ಇದು ಇನ್ನೂ ಅತಿರೇಕಕ್ಕೆ ಹೋಯಿತು. ಸುಜಾತಾ ಟೆಂಟ್ ಹಿಂಭಾಗದ ಮದೀನಾ


ಬಿಬಿಎಂಪಿ ಚುನಾವಣೆ ಗೆಲ್ಲಲು ಹೀನಮಾರ್ಗ ಹಿಡಿದವರು


ಮಾರ್ಚ್ 28ರಂದು ನಡೆದ ಬಿಬಿಎಂಪಿ ಎಲೆಕ್ಷನ್ ಅನ್ನು ಗೆದ್ದೇ ಗೆಲ್ಲಬೇಕೆಂದು ಬಯಸಿ ಕೆಲವು ಅಭ್ಯರ್ಥಿಗಳು ಅದಕ್ಕಾಗಿ ಹೀನ ಮಾರ್ಗ ಹಿಡಿದ ಘಟನೆಗಳು ನಡೆದಿವೆ. ಇವು ಕೇವಲ ಹಣ ಹಂಚಿಕೆ, ಜಾತಿ ಲಾಬಿ ಅಥವಾ ಡ್ರಿಂಕ್ಸ್ ಸರಬರಾಜು ಮಾಡಿರುವ ಮಾಮೂಲಿ ಪ್ರಕರಣಗಳಲ್ಲ ಚುನಾವಣಾ ನೀತಿಸಂಹಿತೆ ಉಲ್ಲಂಘನೆ ಎಂದಷ್ಟೆ ಭಾವಿಸಬೇಕಾದ ಘಟನೆಗಳೂ ಅಲ್ಲ. ಹನುಮಂತನಗರ, ಪದ್ಮನಾಭನಗರ ವಾರ್ಡ್‌ಗಳಲ್ಲಿ ನಡೆದಿರುವ ಈ ಘಟನೆಗಳ ವಿವರ ಏನೆಂದು ನೋಡಿದರೆ ಅಸಹ್ಯವಾಗುವಂತಿವೆ.

ಹನುಮಂತನಗರ-ಚಂದ್ರಶೇಖರ್ ವಿರುದ್ಧ ಅಪಪ್ರಚಾರ

ನಾಳಿನ ಎಲೆಕ್ಷನ್ ಫಲಿತಾಂಶದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್‌ಗಳಿಗೆ ಬಿಜೆಪಿಗಿಂತ ಹೆಚ್ಚಿನ ಸೀಟುಗಳು ಸಿಕ್ಕರೆ, ಅವರ ನಡುವೆ ಮೈತ್ರಿಯಾದರೆ ಬೆಂಗಳೂರಿನ ಮೇಯರ್ ಆಗಬಹುದಾದ ಕೆ.ಚಂದ್ರಶೇಖರ್ ಹನುಮಂತನಗರ ವಾರ್ಡ್‌ನಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದಾರೆ. ಒಮ್ಮೆ ಮೇಯರ್ ಆಗಿ ನಂತರ ಶಾಸಕರೂ ಆಗಿದ್ದ ಚಂದ್ರಶೇಖರ್ ಖಡಕ್ ಕೆಲಸಗಾರ. ತಮ್ಮ ಕ್ಷೇತ್ರವನ್ನು ಅಚ್ಚುಕಟ್ಟಾಗಿ ಅಭಿವೃದ್ಧಿಪಡಿಸಿರುವ ರಾಜಕಾರಣಿ ಈ ಏರಿಯಾದಲ್ಲಿ ಬ್ರಾಹ್ಮಣರೇ ಜಾಸ್ತಿಯಾಗಿರುವ ಕಾರಣದಿಂದಲೋ ಏನೋ ಚಂದ್ರಶೇಖರ್ ಸೆಕ್ಯುಲರ್ ರಾಜಕಾರಣಿ ರೀತಿ ವರ್ತಿಸದೆ ಸ್ವಲ್ಪ ಧರ್ಮಬೀರುವಿನಂತೆ ಇರುತ್ತಾರೆ. ಆದರೆ ಬ್ರಾಹ್ಮಣ, ಒಕ್ಕಲಿಗ ಅಥವಾ ಲಿಂಗಾಯತ ಎಂದು ಯಾವತ್ತೂ ತಾರತಮ್ಯ ಮಾಡದೆ, ಮತದಾರರಿಗೆ ವಂಚಿಸದೆ ಕೆಲಸ ಮಾಡಲು ಈತ ಸಿದ್ಧ. ಹೀಗಿರುವ ಚಂದ್ರಶೇಖರ್ ವಿರುದ್ಧ ಕೆಸರೆರಚಾಟ ನಡೆದಿದೆ. ನೇರವಾಗಿ ಎದುರಾಬದುರು ನಿಂತು ಎಲೆಕ್ಷನ್ ಹೋರಾಟ ನಡೆಸಲಾಗದ ಕೆಲವು ಮುಖೇಡಿಗಳು ಚಂದ್ರಶೇಖರ್ ವಿರುದ್ಧ ಅನಾಮಧೇಯ ಕರಪತ್ರ ಯುದ್ಧ ನಡೆಸಿದರು. ಚಂದ್ರಶೇಖರ್ ಆಸ್ತಿ ವಿಚಾರ ಕುಟುಂಬದ ಅರ್ಥಾತ್ ಖಾಸಗಿ ಬದುಕಿನ ಕುರಿತು ಅನೇಕ ಸುಳ್ಳಿನಕಂತೆಗಳನ್ನು ಪ್ರಿಂಟ್ ಮಾಡಿಸಿ ಹಂಚಿದ್ದಾರೆ. ಆಶ್ಚರ್ಯ ಏನೆಂದರೆ ಪೊಲೀಸರಾಗಲಿ ಅಥವಾ ಚುನಾವಣಾ ಅಧಿಕಾರಿಗಳಾಗಲಿ ಇದನ್ನು ತಡೆಯುವ ಪ್ರಯತ್ನ ಮಾಡಲೇ ಇಲ್ಲ. ಕೊನೆಗೆ ಒಮ್ಮೆ ಇಬ್ಬರು ಹುಡುಗರು ಚಂದ್ರಶೇಖರ್ ಮನೆ ಬಾಗಿಲಲ್ಲೇ ಸಿಕ್ಕಿಬಿದ್ದರು.

ಈ ಚಂದ್ರಶೇಖರ್ ಕೆಳಜಾತಿಯವರೆಂತಲೂ, ಅವರು ಒಂದು ದಿನ ಬ್ರಾಹ್ಮಣರನ್ನು ಬೈದರೆಂತಲೂ, ಇನ್ನೊಂದು ದಿನ ಒಕ್ಕಲಿಗರಿಗೆ ಅವಮಾನ ಮಾಡಿದರೆಂತಲೂ ಬರೀ ಸುಳ್ಳನ್ನು ಪ್ರಿಂಟಿಸಿ[illegible]ಪತ್ರವನ್ನು


ಚಂದ್ರಶೇಖರ್


ಅಂಜನಪ್ಪ

ಊರೆಲ್ಲಾ ಹಂಚಿದ ಮೇಲೆ ಈ ಹುಡುಗರು ಚಂದ್ರಶೇಖರ್ ಮನೆ ಕಾಂಪೌಂಡಿನೊಳಗೆಯೇ ಕರಪತ್ರ ಎಸೆಯಲು ನಡುರಾತ್ರಿ ಬಂದಾಗ ಕಾಂಗ್ರೆಸ್ ವರ್ಕರ್‌ಗಳ ಕೈಗೆ ಸಿಕ್ಕಿಬಿದ್ದರು.

ಈಗ ಅವರು ಪೊಲೀಸರ ವಶದಲ್ಲಿದ್ದಾರೆ, ಕೇಸೂ ದಾಖಲಾಗಿದೆ.

ಅಂದಹಾಗೆ ಅವರಿಬ್ಬರೂ ಬಿಜೆಪಿ ಕಾರ್ಯಕರ್ತರು!

ಬಿಜೆಪಿಗಳ ಅಯೋಗ್ಯತೆ ಹೀಗೇ ಇರುತ್ತವೆ ತಾನೇ?


ರಾಜಕಟ್ಟೆ ಮಂಜು ಕಿತಾಪತಿ

ಪದ್ಮನಾಭನಗರ ಮುಖ್ಯರಸ್ತೆಯ ಹಾಯ್‌ಬೆಂಗಳೂರು ಪತ್ರಿಕಾ ಕಚೇರಿಯ ಸಮೀಪದಲ್ಲಿ ಡಾ|| ರಾಜ್‌ಕಟ್ಟೆ ಎಂಬುದಿದೆ. ನಗರಪಾಲಿಕೆಗೆ ಸೇರಿರುವ ಒಂದು ತುಂಡು ಜಾಗ ಇಲ್ಲಿ ಖಾಲಿ ಬಿದ್ದಿತ್ತು. ಈಗ್ಗೆ ಮೂರು ವರ್ಷಗಳ ಹಿಂದೆ ಏರಿಯಾದ ಒಂದಷ್ಟು ಉತ್ಸಾಹಿ ತರುಣರು ಅದೇ ಖಾಲಿ ಜಾಗದಲ್ಲಿ ಒಂದಿಷ್ಟು ಗಿಡ ನೆಟ್ಟು ಪುಟ್ಟದೊಂದು ಲೈಬ್ರರಿ ಮಾಡಿದರು. ಅದಕ್ಕೆ ಕುವೆಂಪು ಲೈಬ್ರರಿ ಎಂದು ಹೆಸರಿಟ್ಟಿದ್ದರು. ಚಿಕ್ಕಲಸಂದ್ರದ ಮಂಜುನಾಥ, ಸಾಯಿಕುಮಾರ್ ಮುಂತಾದ ಯುವಕರು ಸಾಮಾಜಿಕ ಹಾಗೂ ಕೆಲ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುತ್ತಾ ಹೆಸರೂ ಮಾಡಿದರು.

ಆದರೀಗ ಈ ರಾಜ್‌ಕಟ್ಟೆ ಮಂಜುನಾಥನ ಅವಿವೇಕ ಹಾಗೂ ಸ್ವಾರ್ಥದಿಂದ ಕುವೆಂಪು ಲೈಬ್ರರಿಗೆ ಬೆಂಕಿ ಬಿದ

ಹೋಟೆಲಿಗೆ ಊಟಕ್ಕೆಂದು ಬಂದಿದ್ದ ಕೆಎಫ್‌ಡಿ ಕಾರ್ಯಕರ್ತರನ್ನು ಅಲ್ಲೇ ಅಡ್ಡ ಹಾಕಿದ್ದ ತೆನಾಲಿ ಮತ್ತು ಆರಿಫ್‌ನ ಮತ್ತೊಬ್ಬ ಮಗ ಸುಲ್ತಾನ್ ಅಟಕಾಯಿಸಿಕೊಂಡಿದ್ದಾರೆ.

ಆರಿಫ್ ಮಗ ಸುಲ್ತಾನ್ ಮತ್ತು ತೆನಾಲಿ ಸೇರಿಕೊಂಡು ಕೆಎಫ್‌ಡಿ ಕಾರ್ಯಕರ್ತರ ಮೇಲೆ ಹಲ್ಲೆಗೆ ಯತ್ನಿಸಿದ್ದೇ ತಡ, ರೊಚ್ಚಿಗೆದ್ದ ಕೆಎಫ್‌ಡಿ ಕಟ್ಟಾಳುಗಳು ಕೈಗೆ ಸಿಕ್ಕ ದೊಣ್ಣೆ ಕಲ್ಲುಗಳನ್ನೆತ್ತಿದ್ದೇ ಅವರಿಬ್ಬರನ್ನೂ ಅಟ್ಟಾಡಿಸಿ ಬಡಿದಿದ್ದಾರೆ. ಎಲ್ಲಿ ಆರಿಫ್ ಗ್ಯಾಂಗ್ ಧಾವಿ ಸುತ್ತೋ ಎಂದು ಹೆದರಿದ


ಜಮೀರ್

ಕೆಎಫ್‌ಡಿ ಕಾರ್ಯಕರ್ತರು ಅಲ್ಲಿಂದ ಕ್ಷಣಮಾತ್ರದಲ್ಲೇ ಓಟಕಿತ್ತಿದ್ದಾರೆ. ಹಾಗೇ ಓಡಿಬಂದವರೆಲ್ಲ ನೇರವಾಗಿ ಬಂದದ್ದು ಜಗಜೀವನರಾಮ್ ನಗರ ಪೊಲೀಸ್ ಠಾಣೆಗೆ. ಅಲ್ಲಿ ಆರಿಫ್ ವಿರುದ್ಧ ದೂರು ಕೊಟ್ಟು ಇನ್ನೇನು ಠಾಣೆಯೆದುರು ಪ್ರತಿಭಟಿಸಬೇಕೆನ್ನುವಷ್ಟರಲ್ಲಿ ಅಲ್ಲಿಗೆ ಆರಿಫ್ ಕೂಡ ಬಂದಿದ್ದಾನೆ. ತನ್ನ ಕಾರಿನ ಡ್ರೈವರ್ ತೆನಾಲಿಯನ್ನು ಕೆಎಫ್‌ಡಿಯವರೇ ಕಿಡ್ನಾಪ್ ಮಾಡಿದ್ದಾರೆಂದು ಪ್ರತಿ ದೂರು ಕೊಟ್ಟಿದ್ದಾನೆ.

ಇಬ್ಬರೂ ಕೊಟ್ಟ ದೂರನ್ನು ಪೊಲೀಸರು ದಾಖಲಿಸಿದರಾದರೂ ರಾತ್ರಿ 8 ಗಂಟೆಯಾಗುತ್ತಿದ್ದಂತೆ ಭಯಾನಕ ಸುದ್ದಿಯೊಂದು ಬಂದಿತ್ತು. ತೆನಾಲಿಯ ಹೆಣ ಬಿಡದಿ ಸಮೀಪದ ರಸ್ತೆಯಲ್ಲಿ ಬಿದ್ದಿತ್ತು. ಅದನ್ನು ಕೆಎಫ್‌ಡಿಯವರೇ ಮಾಡಿದ್ದಾರೆಂದು ಆರಿಫ್ ಬೊಬ್ಬೆಯಿಡುತ್ತಿದ್ದ. ಇದಾಗಿ ಕೆಲ ಹೊತ್ತಲ್ಲೇ ಗೋರಿಪಾಳ್ಯದ ಗಲ್ಲಿಗಲ್ಲಿಯಲ್ಲಿ ಆರಿಫ್ ಪಡೆ ದಾಂಧಲೆಗಿಳಿಯಿತು. ಮಚ್ಚು ದೊಣ್ಣೆಗಳನ್ನು ಹಿಡಿದ ಆರಿಫ್ ಬಂಟರು ಸಿಕ್ಕಸಿಕ್ಕ ಆಟೋ, ಕಾರುಗಳನ್ನು ಧ್ವಂಸ ಮಾಡುತ್ತಿದ್ದರು. ಕೆಎಫ್‌ಡಿ ನಾಯಕ ಇರ್ಫಾನ್‌ನ ಕಚೇರಿ, ದಿನಸಿ ಅಂಗಡಿ, ಮೆಡಿಕಲ್ ಸ್ಟೋರ್ ಎಲ್ಲಕ್ಕೂ ಬೆಂಕಿಯಿಟ್ಟರು. ಕೆಎಫ್‌ಡಿಯ ಬೆಂಬಲಿಗ ದರ್ಜಿ ಇಸ್ಮಾಯಿಲ್‌ನ ಕೈಯನ್ನೇ ಕತ್ತರಿಸಿತ್ತು ಆರಿಫ್ ಪಡೆ.

ಪ್ರಾಣಭೀತಿಗೆ ಬಿದ್ದ ಬಹುತೇಕ ಕೆಎಫ್‌ಡಿ ಕಾರ್ಯಕರ್ತರೆಲ್ಲ ಈ ಹೊತ್ತಾಗಲೇ ಗೋರಿಪಾಳ್ಯದಿಂದ ಪರಾರಿಯಾಗಿದ್ದರೆ ಆರಿಫ್ ಗ್ಯಾಂಗ್ ತೆನಾಲಿಯ ಹೆಣ ಹೊತ್ತು ಬೊಬ್ಬೆ ಹಾಕುತ್ತಿತ್ತು. ಪೊಲೀಸರಿಗೆ ದಿಕ್ಕೇ ತೋಚದಂತಾಗಿತ್ತು. ಏಕೆಂದರೆ ತೆನಾಲಿ ತನ್ನ ಕಾರಿನ ಡ್ರೈವರ್ ಎಂದು ಆರಿಫ್ ಎಷ್ಟೇ ಆಣೆ ಪ್ರಮಾಣಗೈದರೂ ಆತ ಸೈಲೆಂಟ್ ಸುನೀಲನ ಶಿಷ್ಯ ಎಂಬುದು ಇಡೀ ಗೋರಿಪಾಳ್ಯಕ್ಕೇ ಗೊತ್ತಾಗಿತ್ತು. ಮದೀನಾ ಹೋಟೆಲಿನಲ್ಲಿ ನಡೆದ ಘರ್ಷಣೆ ವೇಳೆಗೆ ತೆನಾಲಿ ಮತ್ತು ಸುಲ್ತಾನ್‌ರನ್ನು ಅಟ್ಟಾಡಿಸಿದ ಕೆಎಫ್‌ಡಿ ಸದಸ್ಯರು ಅಲ್ಲಿಂದ ಓಡಿದ್ದೇ ಪೊಲೀಸ್ ಠಾಣೆಗೆ ಬಂದಿದ್ದರು. ಹಾಗೆ ತೆನಾಲಿಯನ್ನು ಹೊತ್ತೊಯ್ದವರಿಗೆ ಆತನ ಜೊತೆಗಿದ್ದ ಆರಿಫ್ ಮಗ ಸುಲ್ತಾನ್‌ನನ್ನು ಎಳೆದೊಯ್ಯುವುದು ಕಷ್ಟವಿರಲಿಲ್ಲ.

ತಮ್ಮ ವೈರಿಯಂತಿದ್ದ ಆರಿಫ್‌ನ ಮಗ ಸುಲ್ತಾನ್‌ನನ್ನು ಕೈಬಿಟ್ಟು ಆತನ ಜೊತೆಗಿದ್ದ ತೆನಾಲಿಯನ್ನಷ್ಟೇ ಕೆಎಫ್‌ಡಿ ಕಾರ್ಯಕರ್ತರು ಏಕೆ ಮತ್ತು ಹೇಗೆ ಅಪಹರಿಸಲು ಸಾಧ್ಯ?

ಇದು ಪೊಲೀಸರನ್ನು ಕಾಡಿದ ಪ್ರಶ್ನೆ. ಕೆಎಫ್‌ಡಿಯವರೇ ತೆನಾಲಿಯನ್ನು ಹೊತ್ತೊಯ್ದು ಕೊಂದು ಹಾಕಿದ್ದರೆ ಅದು ಬಿಡದಿ ಪೊಲೀಸರಿಗೂ ಮೊದಲೇ ಹೇಗೆ ಆರಿಫ್‌ಗೆ ಗೊತ್ತಾಗಲು ಸಾಧ್ಯ? ಅಲ್ಲಿಗೆ ತೆನಾಲಿಯ ಕೊಲೆ ಹಿಂದೆ ಆರಿಫ್ ಗ್ಯಾಂಗಿನದೇ ಕೈವಾಡವಿದೆಯೆಂಬ ಅನುಮಾನವೊಂದು ಪೊಲೀಸರನ್ನು ಕಾಡಲಾರಂಭಿಸಿತ್ತು. ಹಾಗಂತ ತೋರಿಸಿಕೊಳ್ಳುವಂತಿಲ್ಲವಲ್ಲ. ಯಾರೋ ಅನಾಮಧೇಯರ ಹೆಸರನ್ನು ಎಫ್‌ಐಆರ್‌ಗೆ ತಗುಲಿಸಿದ್ದೇ ತಿಪ್ಪೆ ಸಾರಿಸಿಬಿಟ್ಟರು.

ನಿಜಕ್ಕೂ ಕೆಎಫ್‌ಡಿ ಕಾರ್ಯಕರ್ತರೇ ತೆನಾಲಿಯನ್ನು ಹೊತ್ತೊಯ್ದು ಕೊಂದಿದ್ದರೆ ಆತನ ಜೊತೆಗಿದ್ದ ಸುಲ್ತಾನ್‌ನನ್ನು ಏಕೆ ಬಿಡುತ್ತಿದ್ದರು? ಹಾಗೆ ಕೊಂದಿದ್ದೇ ಆಗಿದ್ದರೆ ತಮಗೆ ರಕ್ಷಣೆ ಕೋರಿ ಕೆಎಫ್‌ಡಿ ಕಾರ್ಯಕರ್ತರೇಕೆ ಠಾಣೆಯೆದುರು ಪ್ರತಿಭಟಿಸಬೇಕಿತ್ತು? ಆರಿಫ್ ಹೇಳಿಕೇಳಿ ಪಾತಕಿ. ಆತ ಹೇಳಿದ ಮಾತ್ರಕ್ಕೇ ಪೊಲೀಸರು ಕೆಎಫ್‌ಡಿಯ ಮೇಲೆ ಕೇಸು ಹಾಕುವುದು ಯಾವ ನ್ಯಾಯ?

ತೆನಾಲಿ ಹತ್ಯೆಯ ಹಿಂದೆ ಬೇರೆ ಯಾವುದೋ ಕೈ ಮತ್ತು ಕಾರಣವಿದೆಯೆ? ತನಿಖೆ ಮಾಡುವವರ್‍ಯಾರು?

• ರಾ. ಸೋಮನಾಥ್

ರಸ್ಯವಾಗಿದೆ.

ಮೊನ್ನೆಯ ಎಲೆಕ್ಷನ್‌ನಲ್ಲಿ ಈ ರಾಜ್‌ಕಟ್ಟೆ ಮಂಜು ಸಡನ್ನಾಗಿ ಬಿಜೆಪಿ ಟೆಂಟಿನಲ್ಲಿ ಕಾಣಿಸಿಕೊಂಡುಬಿಟ್ಟ. ಅಲ್ಲಿಯತನಕ ರಾಜ್‌ಕಟ್ಟೆ ಬಗ್ಗೆ ಪದ್ಮನಾಭನಗರ


[illegible] ಕಟ್ಟೆ ಮಂಜು

ವಾಸಿಗಳಿಗೆ ಸದಭಿಪ್ರಾಯವೇ ಇತ್ತು. ಆದರೆ ಯಾವಾಗ ಮಂಜುನಾಥ್ ರಾಜ್‌ಕಟ್ಟೆ ಹೆಸರನ್ನು ದುರುಪಯೋಗ ಮಾಡಿ ಕೊಂಡು ಬಿಜೆಪಿ ಕಾಲಿಗೆ ಬೀಳಿಸಿದನೋ ಅದೇ ರಾಜ್‌ಕಟ್ಟೆಯ ಇನ್ನಿತರ ಪದಾಧಿಕಾರಿ ಗಳು ವಿರೋಧಿಸಿದರು. ಹೀಗಿರುವಾಗ ಎಲೆಕ್ಷನ್‌ಗೆ ಎರಡು ದಿವ ಹಿಂದೆ ಗೌಡನಪಾಳ್ಯ ದಲ್ಲಿ ಪ್ರಚಾರ ನಡೆಸುತ್ತಿದ್ದ ಜೆಡಿಎಸ್‌ನ ಆಂಜನಪ್ಪ ಮೇಲೆ ಮಂಜುನಾಥ ಕಾಲುಕೆರೆದು ಜಗಳಕ್ಕಿಳಿದಿದ್ದಾನೆ. ಹಲ್ಲೆ ಬೆದರಿಕೆಗಳೂ ಆಗಿಹೋಗಿವೆ. ಆಶ್ಚರ್ಯ ಅಂದರೆ ಅದೇ ದಿನ ರಾತ್ರಿ ರಾಜ್‌ಕಟ್ಟೆಯ ಕುವೆಂಪು ಲೈಬ್ರರಿಗೆ ಬೆಂಕಿ ಬಿತ್ತು. ಈ ಮಂಜುನಾಥ ತಕ್ಷಣ ಮೀಡಿಯಾಗಳನ್ನು ಕರೆಸಿ ಬೆಂಕಿ ಹಚ್ಚಿದ ಆರೋಪವನ್ನು ಜೆಡಿಎಸ್ ಆಂಜನಪ್ಪ ಮೇಲೆ ಹೊರಿಸಿಬಿಟ್ಟ. ಇದು ನಿಜನಾ ಅಥವಾ ಸುಳ್ಳು ಅಂತಲೂ ವಿಚಾರಿಸದೆ ಮೀಡಿಯಾಗಳೂ ಸುದ್ದಿ ಪ್ರಸಟಿಸಿಬಿಟ್ಟವು.

ಈಗ ನೋಡಿದರೆ ಬಿಜೆಪಿಯವರೇ ಲೈಬ್ರರಿಗೆ ಬೆಂಕಿ ಹಾಕಿ ಅದನ್ನು ಜೆಡಿಎಸ್‌ನವರ ತಲೆಗೆ ಕಟ್ಟಿದ್ದಾರೆಂಬ ಸುದ್ದಿ ಕೇಳಿ ಬರುತ್ತಿವೆ. ಮಂಜುನಾಥನ ಅವಿವೇಕತನದಿಂದಾಗಿ ಉತ್ತಮ ಹೆಸರು ಪಡೆದಿದ್ದ ರಾಜ್ ಕಟ್ಟೆಗೆ ಮಸಿ ಬಳಿದಂತಾಗಿದೆ. ●

ಬೋಧಿ ವೃಕ್ಷದ ಕೆಳಗೆ ಬುದ್ಧನಿಗೆ ಜ್ಞಾನೋದಯವಾದಂತೆ ನಮ್ಮಲ್ಲಿ ಕೊಲೆ, ಸುಲಿಗೆ, ರಕ್ತಪಾತ ಮಾಡಿದ ಅಂಡರ್‌ವರ್ಲ್ಡ್ ಡಾನ್‌ಗಳಿಗೂ ಆಗಾಗ ಆಗುತ್ತಿರುತ್ತದೆ. ಈ ರೌಡಿಗಳು ತಮ್ಮ ದಾದಾಗಿರಿಯ ದಿನಗಳಲ್ಲಿ ಜೀವನ ಪರ್ಯಂತ ಕಂಡವರ ಹಣೆಗೆ ಮಚ್ಚನ್ನೋ, ಪಿಸ್ತೂಲನ್ನೋ ಇಟ್ಟು ಕೋಟಿ ಕೋಟಿ ನುಂಗಿ ಕೊಬ್ಬಿದ ಮೇಲೆ ದಿಢೀರನೇ 'ಜ್ಞಾನೋದಯ'ವಾದಂತೆ ಪೈಜಾಮ ತೊಟ್ಟು 'ಜೈ ಕರ್ನಾಟಕ' ಎನ್ನುತ್ತಲೋ, ಕನ್ನಡನಾಡುನುಡಿಯ ರಕ್ಷಣೆಗಾಗಿ ಸಮಾಜಸೇವಕರಾಗಿ ಅವತಾರವೆತ್ತಿಬಿಡು ತ್ತಾರೆ. ಇನ್ನು ಕೆಲವು ರೌಡಿಗಳು ಈ 'ಸಮಾಜಸೇವೆ'ಗಾಗಿ ಸೇನೆಗೀನೆ ಕಟ್ಟದೇ ತಮ್ಮ ರೌಡಿಗಿರಿಯ ದಿನಗಳಲ್ಲಿ ಕಮಾಯಿಸಿದ ದುಡ್ಡನ್ನೆಲ್ಲಾ ಸುರಿದು ಪ್ರಮುಖ ರಾಜಕೀಯ ಪಕ್ಷಗಳ ಟಿಕೆಟ್ ಪಡೆದು ನೇರವಾಗಿ ವಿಧಾನಸೌಧಕ್ಕೆ ಪ್ರವೇಶಿಸಿಬಿಡುತ್ತಾರೆ. ಈ ಎರಡೂ ರೀತಿಯವರು ಅತ್ತ ಹಳೆಯ ರೌಡಿಸಂ ಅನ್ನೂ ಬಿಟ್ಟಿರುವುದಿಲ್ಲ, ಇತ್ತ ಪ್ರಾಮಾಣಿಕವಾಗಿ ಸಮಾಜಸೇವೆ ಮತ್ತು ರಾಜಕಾರಣದಲ್ಲೂ ತೊಡಗಿಕೊಂಡಿರುವುದಿಲ್ಲ. ಎರಡೂ ಪ್ರವೃತ್ತಿಗಳನ್ನು ಕಸಿ ಮಾಡಿಕೊಂಡು ಒಂದು ಹೊಸ ತಳಿಯ ಜನರಾಗಿ ಪರಿವರ್ತನೆಗೊಂಡು ಸಮಾಜಕ್ಕೆ ಕಾಟ ಕೊಡುತ್ತಿರುತ್ತಾರೆ. ಈ ಗುಂಪಿಗೆ ಜೇಡರಹಳ್ಳಿ ಕೃಷ್ಣಪ್ಪ ಕೂಡ ಸೇರಿದ್ದಾನೆ.

ಹಳೆಯ ಹಿಡಿ, ಪುಡಿ ರೌಡಿಗಳೆಲ್ಲಾ ಬಿಳಿ ಪೈಜಾಮ ತೊಟ್ಟು ಯಶಸ್ವಿಯಾಗಿ ವಿಧಾನಸೌಧ ಪ್ರವೇಶಿಸಿದ್ದನ್ನು ಕಣ್ಣಾರೆ ಕಂಡ ಜೇಡರಹಳ್ಳಿ ತಾನೂ ಏಕೆ ಒಂದು ಕೈನೋಡಬಾರದು ಅಂತ ಈಗ್ಗೆ ಆರೆಂಟು ವರ್ಷಗಳ ಹಿಂದೆ ಈ ರೀತಿಯ ಕಸಿ ಮಾಡಿಕೊಂಡ. ಅವನ ದುರಂತ ನೋಡಿ. ಆಗ ಎಲ್ಲಿದ್ದನೋ ಈಗಲೂ ಒಂದು ಹೆಜ್ಜೆ ಕೂಡ ಮುಂದೆ ಹೋಗದೇ ಅಲ್ಲೇ ನಿಂತಿದ್ದಾನೆ. ಅತ್ತ ರೋಡ್ ರೌಡಿಯೂ ಆಗದೆ, ಇತ್ತ ರಾಜಕಾರಣಿ-ಸಮಾಜ ಸೇವಕನೂ ಆಗದೇ ಅಂತರಪಿಶಾಚಿಯಾಗಿ ಮೈಪರಚಿಕೊಳ್ಳುತ್ತಿದ್ದಾನೆ.

ಜೆಕೆ: ಕೆಂಪೇಗೌಡನ ಅವತಾರ

ಈ ಜೇಡರಹಳ್ಳಿಯನ್ನು ನೋಡಿದರೆ ಒಂದೊಂದು ಸಾರಿ ಅಯ್ಯೋ ಪಾಪ ಅನ್ನಿಸುತ್ತೆ. ಬೆಂಗಳೂರಿನಲ್ಲಿ ಬೀದಿರೌಡಿಯಾಗಿ ಕಂಡಕಂಡಲ್ಲಿ ಡೀಲ್ ಕುದುರಿಸಿಕೊಂಡು ಹತ್ತಾರು ಕೋಟಿ ರೂಪಾಯಿಗಳನ್ನು ಕಮಾಯಿಸಿದ ಈತ ತಾನು ಎಮ್ಮೆಲ್ಲೆಯಾಗುವುದು ಗ್ಯಾರಂಟಿ ಅಂದುಕೊಂಡೇ ಪೈಜಾಮ ತೊಟ್ಟು ಹೊರಟಿದ್ದ. ತನ್ನ ಅಂಡರ್‌ವರ್ಲ್ಡ್ ಚಟುವಟಿಕೆಯ ಕೇಂದ್ರ ಬೆಂಗಳೂರಾದರೂ ತನ್ನ ಸ್ವಂತ ಮಾಗಡಿಯಲ್ಲಿ ತನಗೆ ಜಾಸ್ತಿ ಗೌರವವಿದೆ ಎಂದುಕೊಂಡು ಅತ್ತ ಹೊರಟ. ಯಾರ್‍ಯಾರದ್ದೋ ತಲೆಯ ಮೇಲೆ ಮಚ್ಚಿಟ್ಟು ಕಿತ್ತುಕೊಂಡಿದ್ದ ಕೋಟಿ ಕೋಟಿ ದುಡ್ಡನ್ನೆಲ್ಲಾ ಸುರಿದರೆ ಜನ ತನ್ನನ್ನು ಚುನಾವಣೆಯಲ್ಲಿ ಗೆಲ್ಲಿಸಿಯೇ ತೀರುತ್ತಾರೆಂಬ ಹುಚ್ಚು ಭ್ರಮೆಯಿಟ್ಟುಕೊಂಡಿದ್ದ ರೌಡಿಯೊಬ್ಬ ರಾಜಕಾರಣಿ ಯಾಗಿ ವೇಷತೊಟ್ಟುಕೊಳ್ಳುವ ಆ ಪರಿವರ್ತನಾ ಅವಧಿಯಲ್ಲಿ ಎಲ್ಲರೂ ಮಾಡುವ ಕೆಲಸಗಳನ್ನೇ ಈತನೂ ಮಾಡಲಾರಂಭಿಸಿದ. ಬಡವರಿಗೆ ಅಂತ ಸರಳ ವಿವಾಹ ಮಾಡಿಸೋದು, ಅಲ್ಲಲ್ಲಿ ಒಂದೆರಡು ಬೋರ್‌ವೆಲ್ ಹಾಕಿಸಿ ನೀರು ಕೊಡೋದು, ಯಾರೋ ಕಷ್ಟವಿದೆ ಅಂತ ಬಂದಾಗ ಅವರ ಕೈಗೆ ನೂರಿನ್ನೂರು ಕೊಟ್ಟು ಆಪದ್ಬಾಂಧವನಾಗುವುದು, ಸಾಮಾನ್ಯ ಜನರ ಮದುವೆ, ಮುಂಜಿಗಳಿಗೆ ಹೋಗೋದು, ಹಾದಿಬೀದಿಗಳಲ್ಲಿ ಬಿಳಿಬಟ್ಟೆಯಲ್ಲಿ ಕೈಯೆತ್ತಿ ನಿಂತ ಫೋಟೋಗಳ ವಿನೈಲ್‌ಗಳನ್ನು, ಫ್ಲೆಕ್ಸ್‌ಗಳನ್ನು, ಕಟೌಟ್‌ಗಳನ್ನು ಹಾಕಿಸೋದು, ತನ್ನ ಹುಟ್ಟು ಹಬ್ಬಕ್ಕೆ ದುಡ್ಡು ಕೊಟ್ಟು ಲೋಕಲ್ ಸಂಘಸಂಸ್ಥೆಗಳಿಂದ, 'ಅಭಿಮಾನಿ'ಗಳಿಂದ ಶುಭಾಷಯ ಹೇಳಿಸಿಕೊಳ್ಳುವುದು - ಹೀಗೆ ತರಹೇವಾರಿ ಕೆಲಸಗಳನ್ನು ಜೇಡರಹಳ್ಳಿ ಕೂಡ ಮಾಡಿದ. ಕೊನೆಗೆ ಒಂದಿಷ್ಟು ಹವಾ ಕ್ರಿಯೇಟ್ ಮಾಡಿಕೊಂಡು ಮಾಗಡಿಯಿಂದ ಎಮ್ಮೆಲ್ಲೆ ಎಲೆಕ್ಷನ್‌ಗೂ ನಿಂತ. ವಿಶೇಷ ಏನೆಂದರೆ, ಮೊದಲ ಚುನಾವಣೆಯಲ್ಲೇ ಈತನ ಭ್ರಮೆ ಹರಿದುಬಿತ್ತು. ತಮ್ಮೂರಿನವನು ಅಂತ, ದೊಡ್ಡ ಅಂಡರ್‌ವರ್ಲ್ಡ್ ಡಾನ್ ಅಂತ, ಜನರಿಗೆ ಸಹಾಯ ಮಾಡ್ತಾನೆ ಅಂತ ತನ್ನನ್ನು ಜನ ಗೆಲ್ಲಿಸುತ್ತಾರೆ ಅಂದುಕೊಂಡಿದ್ದ. ಆದರೆ, ಬಹಳ ಹೀನಾಯವಾಗಿ ಸೋತ.



ಜೇಡರಹಳ್ಳಿಗೆ ಒಂದಿಷ್ಟು ಬುದ್ಧಿ ಅಂತ ಇದ್ದಿದ್ದರೆ ಆವತ್ತೇ ಚುನಾವಣೆಯ ಉಸಾಬರಿಗೆ ಹೋಗದಂತೆ ನಿರ್ಧರಿಸುತ್ತಿದ್ದ. ಆದರೆ, ಎಮ್ಮೆಲ್ಲೆಯಾಗಿ ವಿಧಾನಸೌಧ ಪ್ರವೇಶಿಸಬೇಕೆಂಬ ಗೀಳು ಮಾತ್ರ ಅದಕ್ಕೆ ಅವಕಾಶ ಕೊಡಲಿಲ್ಲ. ಮುಂದಿನ ಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಿ ಇನ್ನಷ್ಟು ಹೆಚ್ಚಿನ ದುಡ್ಡು ಸುರಿದು ಗೆಲ್ಲುತ್ತೇನೆಂದು ಹಠತೊಟ್ಟ. ದುಡ್ಡು ಹಂಚಬೇಕೆಂದರೆ ಮೊದಲು ದುಡ್ಡನ್ನು ಕಮಾಯಿಸಬೇಕಲ್ಲವೆ? ಅದಕ್ಕಾಗಿ ಮತ್ತೆ ಒಳಗೊಳಗೇ ರೌಡಿಸಂಗೆ ಇಳಿದ. ಅಂದರೆ, ಏಕಕಾಲಕ್ಕೆ ಈತ ಇತ್ತ ಬೆಂಗಳೂರಿನಲ್ಲಿ ರೌಡಿಯಾಗಿಯೂ ಅತ್ತ ಮಾಗಡಿಯಲ್ಲಿ ಸಮಾಜಸೇವಕನಾಗಿಯೂ ದ್ವಿಪಾತ್ರದಲ್ಲಿ ಅಭಿನಯಿಸುತ್ತಿದ್ದ. ಮತ್ತೆ ಚುನಾವಣೆ ಬಂತು. ಪಕ್ಷೇತರನಾಗಿ ಸ್ಪರ್ಧಿಸಿದ. ಯಾರೊಂದಿಗೆ ಎಷ್ಟು ಡೀಲ್ ಕುದುರಿಸಿಕೊಂಡನೋ ಗೊತ್ತಿಲ್ಲ, ಅಂತೂ ಚುನಾವಣೆಗೆ ಮುಂಚೆಯೇ ನಾಮಪತ್ರ ವಾಪಸ್ಸು ತೆಗೆದುಕೊಂಡು ಮಾಗಡಿಯಿಂದ ದಿಢೀರನೇ ಪರಾರಿಯಾದ. ಈತನನ್ನು ನಂಬಿಕೊಂಡು ಈತನ ಹಿಂದೆ ಜೈಕಾರ ಹಾಕುತ್ತಾ ಓಡಾಡಿದ ಕಾರ್ಯಕರ್ತರಿಗೂ ಸಿಗದೇ ಮಾಯವಾಗಿದ್ದ. ಕೊನೆಗೆ ಅವರೆಲ್ಲಾ ಬೇರೆ ಬೇರೆ ನಾಯಕರ ಹಿಂದೆ ಹೋಗಿದ್ದರಿಂದ ಈತನ ಬೆಂಬಲಕ್ಕೆ ಒಂದು ನರಪಿಳ್ಳೆಯೂ ಇಲ್ಲದಂತಾಗಿತ್ತು.

ಹೀಗೆ ಕಳೆದ ಚುನಾವಣೆಯ ಸಂದರ್ಭದಲ್ಲಿ ಮಾಗಡಿಯಿಂದ ಮಾಯವಾದ ಜೇಡರಹಳ್ಳಿ ಈಗ ಮತ್ತೆ ಪ್ರತ್ಯಕ್ಷವಾಗಿದ್ದಾನೆ. ಅದೂ ಥೇಟ್ ಬೆಂಗಳೂರಿನ ನಿರ್ಮಾತೃ ಕೆಂಗೇರಿಯ ಕೆಂಪೇಗೌಡನ ಅವತಾರದಲ್ಲಿ!

ಗಣಿ ರೆಡ್ಡಿಗಳು ಕೋಟಿ ಕೋಟಿ ಖರ್ಚು ಮಾಡಿ ಕೃಷ್ಣದೇವರಾಯನ ಐನೂರನೇ ಪಟ್ಟಾಭಿಷೇಕ ಮಹೋತ್ಸವ ಮಾಡಿದ್ದನ್ನು ನೋಡಿದ ಜೇಡರಹಳ್ಳಿ ತಾನೂ ಅಂತಹ ಏನಾದರೊಂದು ಅದ್ದೂರಿ ಸಮಾರಂಭದ ಮೂಲಕವೇ ಮತ್ತೆ 'ಮಾಗಡಿಯ ಪುರಪ್ರವೇಶ' ಮಾಡಬೇಕೆಂದು ನಿರ್ಧರಿಸಿದ. ಆಗ ಈತನಿಗೆ ಸಿಕ್ಕಿದ್ದು ಕೆಂಪೇಗೌಡ. ಐನೂರು ವರ್ಷಗಳ ಹಿಂದೆ ಕೆಂಗೇರಿ ಸಂಸ್ಥಾನವನ್ನಾಳಿದ ಹಾಗೂ ಒಕ್ಕಲಿಗರ ಐಕಾನ್ ಆಗಿರುವ ಕೆಂಪೇಗೌಡನ ಐದುನೂರನೇ ಜಯಂತಿ ಮಾಡುವುದಕ್ಕೆ ತೀರ್ಮಾನಿಸಿದ. ಬಹಳಷ್ಟು ಸ್ಥಳೀಯ ಪೇಪರ್‌ಗಳಿಗೆ ದೊಡ್ಡ ದೊಡ್ಡ ಜಾಹಿರಾತುಗಳನ್ನು ಕೊಟ್ಟ. ಈ ಜಾಹಿರಾತುಗಳಲ್ಲಿ ಒಂದೆಡೆ ಪಾಳೆಯಗಾರ ಕೆಂಪೇಗೌಡನ ಭಾವಚಿತ್ರ, ಇನ್ನೊಂದೆಡೆ ಥೇಟ್ ಕೆಂಪೇಗೌಡನ ಡ್ರೆಸ್‌ನಲ್ಲಿರುವ ಜೇಡರಹಳ್ಳಿ! ಕೆಂಪೇಗೌಡನ ಕೈಯಲ್ಲಿ ರಾಜಖಡ್ಗವಿದೆ. ಜೇಡರಹಳ್ಳಿಯ ಕೈ ಖಾಲಿಯಿದೆ. ಕೈಗೊಂದು ಮಚ್ಚು ಕೊಟ್ಟಿದ್ದರೆ ಮಜಾ ಅನ್ನಿಸುತ್ತಿತ್ತು! ಕೊನೆಗೂ ಸಮಾರಂಭವನ್ನು ಅದ್ದೂರಿಯಾಗಿ ಮಾಡಿದ್ದಾಯಿತು.

ಇದಕ್ಕೆ ಖರ್ಚಾದ ದುಡ್ಡೆಷ್ಟು ಗೊತ್ತೆ? ಬರೋಬ್ಬರಿ ಒಂದು ಕೋಟಿ! ಅಷ್ಟೂ ದುಡ್ಡನ್ನು ತಾನೊಬ್ಬನೇ ತನ್ನ ಜೇಬಿನಿಂದ ಸುರಿದಿದ್ದಾನೆ!

ಜೇಡರಹಳ್ಳಿ ಎಷ್ಟೇ ತಿಪ್ಪರಲಾಗ ಹಾಕಿದರೂ ಮಾಗಡಿಯಿಂದ ಎಮ್ಮೆಲ್ಲೆಯಾಗುವುದು ಕನಸಿನ ಮಾತು. ಅದಕ್ಕೆ ಹಲವಾರು ಕಾರಣಗಳಿವೆ. ಮೊದಲನೆಯದೆಂದರೆ ಈತ ಎಂಥವನು ಎಂಬುದು ಮಾಗಡಿಯ ಜನಕ್ಕೆ ಚೆನ್ನಾಗಿ ಗೊತ್ತಿದೆ. ಒಂದು ಸಮಾರಂಭಕ್ಕೆ ಒಬ್ಬನೇ ಇಷ್ಟೊಂದು ದುಡ್ಡು ಸುರಿದಿದ್ದಾನೆಂದರೆ ಮಾಗಡಿ ಜನ ನಿಬ್ಬೆರಗಾಗಿದ್ದು ನಿಜ. ಆದರೆ, ಅದೇ ಆತನಿಗೆ ಮುಳುವಾಗುವ ಸಾಧ್ಯತೆಯೂ ಇದೆ. ಏಕೆಂದರೆ, ಜೇಡರಹಳ್ಳಿ ಮೇಲ್ನೋಟಕ್ಕೆ ತಾನು ರೌಡಿಸಂ ಬಿಟ್ಟಿದ್ದೇನೆಂದು ಪೋಜು ಕೊಡುತ್ತಾನೆ. ಹಾಗಿದ್ದ ಮೇಲೆ ಅವನಿಗೆ ಇಷ್ಟೊಂದು ದುಡ್ಡು ಎಲ್ಲಿಂದ ಬಂತು ಎಂಬುದನ್ನು ಅರ್ಥಮಾಡಿಕೊಳ್ಳಲಾರದಷ್ಟು ಮೂರ್ಖರಲ್ಲ ಜನ. ಬೆಂಗಳೂರಿನಲ್ಲಿ ಅವರಿವರ ತಲೆಗೆ ಮಚ್ಚು ಇಡುವ ತನ್ನ ಹಳೆಯ ಕಾಯಕವನ್ನು ಆತ ಮುಂದುವರಿಸಿರುವುದರಿಂದಲೇ ಈ ಮಟ್ಟದ ಹಡಬೆ ದುಡ್ಡು ಆತನ ಜೇಬು ಸೇರಿದೆ ಎಂಬುದು ಎಲ್ಲರಿಗೂ ಗೊತ್ತಿರುವ ರಹಸ್ಯ.

ಎರಡನೆಯದಾಗಿ, ಈತನ ಮೇಲೆ ಈತನ ಹಿಂಬಾಲಕರಿಗೇ ವಿಶ್ವಾಸವಿಲ್ಲ. ಇವನನ್ನು ನಂಬಿಕೊಂಡರೆ ಯಾವಾಗ ಕೈಕೊಟ್ಟು ಮಾಯವಾಗುತ್ತಾನೋ ಎಂಬ ಅನುಮಾನ. ಕಳೆದ ಚುನಾವಣೆಯಲ್ಲಿ ಕೆಲವರು ಈತನನ್ನು ಗೆಲ್ಲಿಸುವುದಕ್ಕೆ ಕಷ್ಟಪಟ್ಟಿದ್ದರು. ಹಗಲುರಾತ್ರಿಯೆನ್ನದೇ ಮನೆ ಮನೆ ತಿರುಗಿ ಇವನ ಗುಣಗಾನ ಮಾಡುತ್ತಾ ಜನರ ಮನವೊಲಿಸುವ ಪ್ರಯತ್ನ ನಡೆಸಿದ್ದರು. ಆದರೆ, ಕನಿಷ್ಠ ಕಾರ್ಯಕರ್ತರಿಗೂ ಹೇಳದೇ ಈತ ದಿಢೀರನೇ ನಾಮಪತ್ರ ವಾಪಸ್ಸು ಪಡೆದುಕೊಂಡು ಮಾಗಡಿಯಿಂದ ಕಾಲ್ಕಿತ್ತಿದ್ದ. ಆವತ್ತಿನಿಂದಲೇ ಕಾರ್ಯಕರ್ತರಿಗೆ ಈತನ ಮೇಲೆ ವಿಶ್ವಾಸ ಹೊರಟುಹೋಗಿದೆ. ಈಗ ಅದೆಷ್ಟೇ ಪುಸಲಾಯಿಸಿದರೂ ಅವರ್‍ಯಾರೂ ಈತನ ಬೆಂಬಲಕ್ಕೆ ಬರುವ ಸಾಧ್ಯತೆಯಿಲ್ಲ. ಅದೂಅಲ್ಲದೇ, ಈತ ಮಾಗಡಿ ತಾಲ್ಲೂಕು ಬಿಜೆಪಿಯಲ್ಲಿ ನಾಮಕಾವಸ್ತೆಗೆ ಇದ್ದಾನೆ. ಯಾವುದೇ ಕಾರ್ಯಕ್ರಮ ಮಾಡಲಿ, ಸಮಾಜಸೇವೆ ಅಂತ ಹೋಗಲಿ ಎಲ್ಲೂ ಬಿಜೆಪಿಯನ್ನು ಹತ್ತಿರ ಸುಳಿಯಗೊಡುವುದಿಲ್ಲ. ಅದೇನಿದ್ದರೂ ತನ್ನ ಸ್ವಂತ ಕಾರ್ಯಕ್ರಮದಂತೆ ಮಾಡಿಮುಗಿಸುತ್ತಾನೆ. ಹಾಗಾಗಿ, ಸ್ಥಳೀಯ ಬಿಜೆಪಿಗೂ ಹಾಗೂ ಜೇಡರಹಳ್ಳಿಗೂ ಅಷ್ಟಕ್ಕಷ್ಟೇ ಸಂಬಂಧ. ಮುಂಬರುವ ಚುನಾವಣೆಯಲ್ಲಿ ಪಕ್ಷದ ಟಿಕೆಟ್ ಅನ್ನು ಯಾವ ಕಾರಣಕ್ಕೂ ಜೇಡರಹಳ್ಳಿಗೆ ಕೊಡಬಾರದು, ಪಕ್ಷದಲ್ಲೇ ದುಡಿಯುತ್ತಿರುವ ಪ್ರಾಮಾಣಿಕರಿಗೆ ಕೊಡಬೇಕೆಂದು ಈಗಿನಿಂದಲೇ ಲಾಬಿ ಶುರುವಾಗಿದೆ. ಆತನಿಗೆ ಸೆಡ್ಡುಹೊಡೆಯುವುದಕ್ಕೆ ಒಂದಿಬ್ಬರು ಸ್ಥಳೀಯ ಬಿಜೆಪಿ ನಾಯಕರೂ ತಯಾರಾಗಿದ್ದಾರೆ.

ಇನ್ನು ಮೂರನೆಯದಾಗಿ, ಹಾಲಿ ಎಮ್ಮೆಲ್ಲೆ ಜೆಡಿಎಸ್‌ನ ಹೆಚ್.ಸಿ.ಬಾಲಕೃಷ್ಣ ಹಾಕುತ್ತಿರುವ ಅಡ್ಡಗಾಲು. ಜೇಡರಹಳ್ಳಿಯನ್ನು ಬೆಳೆಯಲು ಬಿಟ್ಟರೆ ಮುಂದೊಂದು ದಿನ ಎಂದಿದ್ದರೂ ತನಗೆ ಮುಳುವಾಗುತ್ತಾನೆಂಬುದು ಬಾಲಕೃಷ್ಣರ ಎಚ್ಚರಿಕೆ. ಹಾಗಾಗಿಯೇ ಜೇಡರಹಳ್ಳಿಗೆ ಏನೆಲ್ಲ ಕಿರುಕುಳ ಕೊಡುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಆತ ಮಾಡುತ್ತಿದ್ದಾರೆ. ತನಗಿರುವ ಇನ್‌ಫ್ಲೂಯನ್ಸ್ ಬಳಸಿಕೊಂಡು ಆತನ ಮೇಲಿರುವ ರೌಡಿಸಂ ಕುರಿತ ಕೇಸುಗಳಿಗೆ ಮತ್ತೆ ಜೀವ ಕೊಡುವುದು, ಹೊಸ ಹೊಸ ಕೇಸುಗಳನ್ನು ಜಡಿಯುವುದು - ಹೀಗೆ ಬಾಲಕೃಷ್ಣರ ನಿರಂತರ ಕಿರುಕುಳ ಇದ್ದೇ ಇದೆ. ಈ ಕಾರಣಕ್ಕಾಗಿಯೇ ಆತ ಬೆಂಗಳೂರಿನಲ್ಲಿ ಜೇಡರಹಳ್ಳಿ ಮಾಡುತ್ತಿರುವ ರೌಡಿಸಂನ ಮೇಲೆ ಒಂದು ಕಣ್ಣಿಟ್ಟಿದ್ದಾರೆ. ಒಟ್ಟಿನಲ್ಲಿ ಜೇಡರಹಳ್ಳಿಯನ್ನು ಮಾಗಡಿಯಿಂದ ಓಡಿಸುವುದು ಆತನ ಉದ್ದೇಶ. ಅದರಲ್ಲಿ ಈಗಾಗಲೇ ಒಮ್ಮೆ ಯಶಸ್ವಿಯೂ ಆಗಿದ್ದಾರೆ. ಮುಂದೆ ಯಶಸ್ವಿಯೂ ಆಗಲಿದ್ದಾರೆ.

ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿ ಜೇಡರಹಳ್ಳಿಯ ವಿಧಾನಸೌಧ ಪ್ರವೇಶದ ಕನಸು ಈಡೇರುತ್ತಾ? ಕೆಂಪೇಗೌಡನ ಡ್ರೆಸ್ ಹಾಕಿಕೊಂಡಾಕ್ಷಣ ಒಕ್ಕಲಿಗರೆಲ್ಲಾ ಈತನನ್ನು ಕೆಂಪೇಗೌಡನ ಆಧುನಿಕ ಅವತಾರ ಎಂದು ನಂಬಬಿಡುತ್ತಾರಾ? ಹಾಗೇನಾದರೂ ಆತ ಅಂದುಕೊಂಡಿದ್ದರೆ ಅವನಂಥ ಮೂರ್ಖ ಇನ್ನೊಬ್ಬನಿಲ್ಲ. ●



ಪ್ರೀತಮ್

ಮಂಗಳೂರು ಪ್ರೀತಮ್ ಮಿಸ್ಸಿಂಗ್ ಮತ್ತು ಮಂತ್ರಿ ಪಾಲೇಮಾರ್ ಮಸಲತ್ತು!

ಈ ಮಿಸ್ಸಿಂಗ್ ಮಿಸ್ಟರಿಯಲ್ಲಿ ಯಾರ ಮಸಲತ್ತು ಅಡಗಿದೆಯೆಂಬುದು ಮಂಗಳೂರು ಮಂದಿಗೆಲ್ಲ ಗೊತ್ತಿದೆ! ಮಂಗಳೂರಿನ ಪೊಲೀಸರು ಮಾತ್ರ ಪಾಪದ ಪೋರ ಪ್ರೀತಮ್ ಎಲ್ಲಿ ಹೋದ, ಏನಾದನೆಂದು ತಲೆಯೇ ಕೆಡಿಸಿಕೊಂಡಿಲ್ಲ. ಜಿಲ್ಲಾ ಮಂತ್ರಿ ಕೃಷ್ಣ ಪಾಲೇಮಾರ್‌ರ ರಹಸ್ಯ ಕಟ್ಟಾಜ್ಞೆ ಪೊಲೀಸರ ಕೈ-ಕಾಲು ಕಟ್ಟಿ ಹಾಕಿದೆ. ಮಂಗಳೂರಲ್ಲೇ ಕುಂತು ಯಡ್ಡಿ ಸರ್ಕಾರವನ್ನು ಅಡ್ಡಡ್ಡ ಕುಣಿಸಬಲ್ಲ ಆರೆಸೆಸ್ ಡಾನ್ ಡಾ. ಕಲ್ಲಡ್ಕ ಪ್ರಭಾಕರ ಭಟ್ಟರ ನಿಷ್ಠಾವಂತ ಗುಲಾಮ ಪಾಲೇಮಾರ್‌ರ ಮಾತು ಮೀರುವ ಕರ್ತವ್ಯಪ್ರಜ್ಞೆ ಸ್ಥಳೀಯ ಎಸ್ಪಿ, ಡಿಐಜಿಗಳ್ಯಾರಿಗೂ ಇಲ್ಲ ಬಿಡಿ, ಪಾಪ!!

ಪ್ರೀತಮ್ ಮಂಗಳೂರಿನ ದೇರೇಬೈಲ್ ಕೊಂಚಾಡಿಯ ನಿವಾಸಿ ಉಮೇಶ್ ಎಂಬುವರ ಇಬ್ಬರು ಗಂಡು ಮಕ್ಕಳಲ್ಲಿ ಹಿರಿಯವನು. ಉಮೇಶ್ ಮಂಗಳೂರು ಮಹಾನಗರ ಪಾಲಿಕೆಯ ನೌಕರ. ಪ್ರೀತಮ್ 2007ರಲ್ಲಿ ಪ್ರತಿಷ್ಠಿತ ಎಸ್‌ಡಿಎಂ ಲಾ ಕಾಲೇಜಿನಲ್ಲಿ ಎಲ್‌ಎಲ್‌ಬಿ ಮುಗಿಸಿ ವಕೀಲಿಕೆ ಶುರು ಹಚ್ಚಿಕೊಂಡಿದ್ದ. ಸುಸಂಸ್ಕೃತ ಕುಟುಂಬದ ತಣ್ಣನೆಯ ಗುಣಧರ್ಮದ ಪ್ರೀತಮ್ ನಖರಾಗಳಿಗೆಲ್ಲ ಹೋಗುವವನಲ್ಲ, ಆದರೆ ಆತ ಅರಣ್ಯ ಇಲಾಖೆಯ ಸ್ಕ್ವಾಡ್‌ನ ಎಸಿಎಫ್ ರವಿರಾಜ್ ಎಂಬವರ ಮಗಳನ್ನು ಪ್ರೀತಿಸುತ್ತಿದ್ದ. ಆಕೆಯೂ ಪ್ರೀತಮ್‌ನನ್ನು ಮೆಚ್ಚಿಕೊಂಡಿದ್ದಳು.

ಈ 'ಲವ್' ರವಿರಾಜ್ ಮತ್ತವನ ಗೂಂಡಾ ಮಗ ನೀರಜ್‌ನನ್ನು ಕೆರಳಿಸಿತ್ತು, ಪ್ರೀತಮ್ ಆ ಅಪ್ಪ-ಮಗನ ಕೆಂಗಣ್ಣಿಗೆ ತುತ್ತಾಗಿದ್ದ. ಈ ಪ್ರಣಯ ಪ್ರಕರಣವೇ ಪ್ರೀತಮ್‌ಗೆ ಗಂಡಾಂತರಕಾರಿ ಆಯ್ತೇ? ರವಿರಾಜ್ ಕಡೆಯವರು ಪ್ರೀತಮ್‌ನನ್ನು ಕಿಡ್‌ನ್ಯಾಪ್ ಮಾಡಿ ಕೊಂದುಹಾಕಿದರಾ? ಎಸಿಎಫ್ ರವಿರಾಜ್ ಮಡದಿ ಮಂತ್ರಿ ಪಾಲೇಮಾರ್‌ರ ಹತ್ತಿರದ ಸಂಬಂಧಿಯಾದ್ದರಿಂದ ಈ ಕಣ್ಮರೆ ಕೇಸ್ ಹಳ್ಳ ಹಿಡೀತಾ? ಇಂಥ ಅನುಮಾನದ ಪ್ರಶ್ನೆಗಳೇ ಈಗ ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾರ್ದನಿಸುತ್ತಿವೆ...

ನಾಪತ್ತೆ ಸುತ್ತಮುತ್ತ

ಪ್ರೀತಮ್ ಇಪ್ಪತ್ತೇಳು ವರ್ಷದ ಹುಡುಗ. ಎಸಿಎಫ್ ರವಿರಾಜ್‌ರ ಮಗಳು ನಿಯತಿ ಲಾ ಕಾಲೇಜಿನಲ್ಲಿ ಪ್ರೀತಮ್‌ನ ಸಹಪಾಠಿಯಾಗಿದ್ದಳು. ನಿಯತಿ-ಪ್ರೀತಮ್‌ರ ಸ್ನೇಹ-ಸಂಬಂಧ ಇಡೀ ಕಾಲೇಜಿಗೆ ಗೊತ್ತಿತ್ತು. ಈ ಕಾರಣಕ್ಕೇ ಅದೇ ಕಾಲೇಜಿನಲ್ಲಿ ಕಲಿಯುತ್ತಿದ್ದ ನಿಯತಿ ಅಣ್ಣ ನೀರಜ್ ಪ್ರೀತಮ್‌ನ ಜತೆ ಜಗಳವೂ ಆಡಿದ್ದ. ಆದರೂ ಲವ್ ನಿಂತಿರಲಿಲ್ಲ. ರವಿರಾಜ್ ಫ್ಯಾಮಿಲಿ ಮಗಳನ್ನು ಪ್ರೀತಮ್‌ನಿಂದ ದೂರ ಮಾಡಲು ಪ್ರಯತ್ನಿಸಿದಂತೆಲ್ಲ ಅವರು ಹತ್ತಿರತ್ತಿರ ಆಗುತ್ತಲೇ ಹೋದರು.

ಪ್ರೀತಮ್ ಲಾ ಮುಗಿಸಿ ಪ್ರಾಕ್ಟೀಸ್ ಆರಂಭಿಸಿದರೆ, ನಿಯತಿ ಫ್ಯಾಷನ್ ಡಿಸೈನಿಂಗ್ ಕೋರ್ಸ್ ಸೇರಿಕೊಂಡಳು. ನೀರಜ್ ಡ್ರಾಪ್ ಔಟ್ ಆಗಿ ಉಂಡಾಡಿ ಪುಂಡನಂತಾಗಿ ಹೋದ. ಪ್ರೀತಮ್-ನಿಯತಿ ಪ್ರಣಯ ಹಾಗೇ ಮುಂದುವರಿದಿತ್ತು, ಬದುಕಿನಲ್ಲಿ ಸೆಟಲ್ ಆದನಂತರ ಮದುವೆಯಾಗುವ ನಿರ್ಧಾರವೂ ಮಾಡಿದ್ದರು. ಇದಕ್ಕೆ ಸಮಾನಾಂತರವಾಗಿ ಆಕೆಯ ಅಣ್ಣ ನೀರಜ್ ಸಮಯ ಸಿಕ್ಕಾಗೆಲ್ಲಾ ಪ್ರೀತಮ್‌ನನ್ನು ಗೋಳು ಹೋಯ್ದುಕೊಳ್ಳುತ್ತಲೇ ಇದ್ದ.

ಇಂಥ ಪ್ರೀತಮ್ ಜನವರಿ 24 ರ ರಾತ್ರಿ 8.30 ರ ಹೊತ್ತಿಗೆ ಇದ್ದಕ್ಕಿದ್ದಂತೆ ನಾಪತ್ತೆಯಾದ! ಇದಕ್ಕೂ ಮೊದಲು ಒಂದೆರಡು ದಿನದಿಂದ ಆತ ಒಂಥರಾ ಕಂಗಾಲಾಗಿದ್ದ. ಮನೆ ಬಳಿಯ ಅಂಗಡಿಯವನನ್ನು ಭೇಟಿಯಾಗಿ "ನನ್ನ ಹುಡುಕಿಕೊಂಡು ಯಾರಾದರೂ ಬಂದಿದ್ದರಾ" ಎಂದು ಆಗಾಗ ಕೇಳುತ್ತಿದ್ದ. ನಂಗ್ಯಾಕೋ ಭಯವಾಗುತ್ತಿದೆ ಎನ್ನುತ್ತಿದ್ದ. ಅಂದು ಮಂಗಳೂರಲ್ಲಿ ಚೆಡ್ಡಿಗಳು ಹಿಂದೂ ಸಮಾಜೋತ್ಸವ ಏರ್ಪಡಿಸಿದ್ದರು. ಅರ್ಥಾತ್ ಮಂಗಳೂರಲ್ಲಂದು ಸ್ವಯಂ ಘೋಷಿತ ಬಂದ್. ಆಟೋ-ಬಸ್‌ಗಳ್ಯಾವುದೂ ಇರಲಿಲ್ಲ, ಇಂಥ ನೀರವ ಸಂದರ್ಭದಲ್ಲಿ ಪ್ರೀತಮ್ ಎಲ್ಲಿ ಹೋದ? ಯಾರದೋ ಫೋನು ಬಂತೆಂದು ರಸ್ತೆಗೆ ಬಂದವನನ್ನು ಯಾರು ಅಪಹರಿಸಿದರು? ಎಲ್ಲಿಗೆ ಕರೆದೊಯ್ದರು?

ಪೊಲೀಸರ ನಖರಾ

ಮಗ ಕಣ್ಮರೆಯಾಗುತ್ತಲೇ ಪ್ರೀತಮ್‌ನ ಹೆತ್ತವರು ಕಂಗಾಲಾದರು. ಇಡೀ ರಾತ್ರಿ ಹುಡುಕಾಡಿದರು. ಅವರು ಏನೇ ಯೋಚಿಸಿದರೂ ಎಸಿಎಫ್ ರವಿರಾಜ್ ಫ್ಯಾಮಿಲಿ ಮೇಲೇ ಗುಮಾನಿಗಳು ಏಳುತ್ತಿದ್ದವು. ಕಿಡ್‌ನ್ಯಾಪ್ ಕೇಸ್ ಕೊಡಲು ಮುಂದಾದರು. ಕಾವೂರು ಪೊಲೀಸ್ ಠಾಣೆಗೆ ಹೋಗಿ ಅಪಹರಣ ಪ್ರಕರಣ ದಾಖಲಿಸಿಕೊಳ್ಳುವಂತೆ ಕೇಳಿಕೊಂಡರು. ಎಸ್‌ಐ ಅನಂತಪದ್ಮನಾಭ ಕಿಡ್‌ನ್ಯಾಪ್ ಕೇಸು ದಾಖಲಿಸಿಕೊಳ್ಳಲು ಸುತಾರಾಮ್ ಒಪ್ಪಲಿಲ್ಲ!



ಸುಬ್ರಹ್ಮ... ರಾವ್

ಇದಕ್ಕೆ ಕಾರಣವೂ ಇತ್ತು. ಎಸಿಎಫ್ ರವಿರಾಜ್-ಎಸ್‌ಐ ಅನಂತಪದ್ಮನಾಭ ಜಾತಿ ಬಂಧುಗಳು. ಮಂತ್ರಿ ಪಾಲೇಮಾರ್‌ನ ಸಂಬಂಧಿಗಳು. ಹೀಗಿರುವಾಗ ರವಿರಾಜ್ ಫ್ಯಾಮಿಲಿ ಮೇಲೆ ಕಿಡ್‌ನ್ಯಾಪ್ ಪ್ರಕರಣ ಅದ್ಹೇಗೆ ಎಸ್‌ಐ ಸಾಹೇಬರು ರಿಜಿಸ್ಟರ್ ಮಾಡಿಕೊಂಡಾರು? ಪ್ರೀತಮ್‌ನ ಕಡೆಯವರ ಒತ್ತಾಯ ಜೋರಾದಾಗ ಅವರ ಸಾಗಹಾಕಲು ಎಸ್‌ಐ ಮಿಸ್ಸಿಂಗ್ ಕೇಸ್ ಪಡೆದುಕೊಂಡರು. ಆದರ ತನಿಖೆ ಮಾತ್ರ ಒಂದಿಂಚೂ ಮುಂದೆ ಹೋಗಲಿಲ್ಲ.

ಇದರಿಂದ ಬೇಸತ್ತ ಪ್ರೀತಮ್‌ನ ಬಂಧು-ಬಾಂಧವರು ಎಸ್ಪಿ-ಡಿಐಜಿಗಳನ್ನೆಲ್ಲ ಸಂಧಿಸಿದರು. ಆಗ ಅನಿವಾರ್ಯವಾಗಿ 30.1.2010 ರಂದು ಅಪಹರಣ ಪ್ರಕರಣವನ್ನು ಪೊಲೀಸು ದಾಖಲಿಸಿಕೊಂಡರು. ಈ ಮಿಸ್ಸಿಂಗ್ ಕೇಸೂ ತನಿಖೆಗೊಳಪಡಲೇ ಇಲ್ಲ. ಪೊಲೀಸು ಪ್ರಜ್ಞಾಪೂರ್ವಕವಾಗೇ ನಿರ್ಲಕ್ಷ್ಯ ತಾಳಿದರು. ಮಂತ್ರಿಗಳ ಮನದಿಂಗಿತಕ್ಕೆ ವಿರುದ್ಧವಾಗಿ ರವಿರಾಜ್ ಪರಿವಾರವನ್ನು ತನಿಖೆಗೊಳಪಡಿಸುವ ಇಚ್ಛೆ ಪೊಲೀಸ್ ಅಧಿಕಾರಿಗಳಿಗಿರಲಿಲ್ಲ.

ಹೇಬಿಯಸ್ ಕಾರ್ಪಸ್

ಮಂಗಳೂರಿನ ಪೊಲೀಸರು ಬೇಕಂತಲೇ ಪ್ರೀತಮ್‌ನನ್ನು ಹುಡುಕುವ ಪ್ರಯತ್ನ ಮಾಡುತ್ತಿಲ್ಲ ಎಂಬುದು ಅಲ್ಲಿಗೆ ಎಲ್ಲರಿಗೂ ಖಾತ್ರಿಯಾಯಿತು. ಆಗ ಪ್ರೀತಮ್ ಕಡೆಯವರು ಹೈಕೋರ್ಟ್ ಮೊರೆ ಹೋದರು. ಪ್ರೀತಮ್‌ನ ಹುಡುಕಿಕೊಡಿಯೆಂದು ಹೇಬಿಯಸ್ ಕಾರ್ಪಸ್ ದಾಖಲಿಸಿದರು. ಅತ್ತ ಹೇಬಿಯಸ್ ಕಾರ್ಪಸ್ ಕೋರ್ಟಿನಲ್ಲಿ ಹಾಕುತ್ತಿದ್ದಂತೆಯೇ ಇತ್ತ ಮಂಗಳೂರಿನ ಪೊಲೀಸರಿಗೆ ಪೀಕಲಾಟ ಶುರುವಾಯಿತು.

ಒಂದು ವಾರದಲ್ಲಿ ಪ್ರೀತಮ್‌ನನ್ನು ಹುಡುಕುವಂತೆ ಕೋರ್ಟ್ ಆದೇಶ ಮಾಡಿ ಕಾಲಾವಕಾಶ ಕೊಟ್ಟಿತು. ಆದರೂ ಪೊಲೀಸರು ಪ್ರಾಮಾಣಿಕ ಹುಡುಕಾಟ ಮಾಡಲೇ ಇಲ್ಲ. ದಕ್ಷಿಣ ಕನ್ನಡ ಜಿಲ್ಲಾ ವಕೀಲರ ಸಂಘದವರೂ ತಮ್ಮ ಸಹೋದ್ಯೋಗಿಯನ್ನು ಹುಡುಕಿ ಕೊಡಿ ಎಂದು ಬೀದಿಗಿಳಿದು ಒತ್ತಾಯಿಸಿದರು. ಆದರೂ ಮಂತ್ರಿ ಪಾಲೇಮಾರರ ಪೊಲೀಸರು ಕ್ಯಾರೇ ಮಾಡಲಿಲ್ಲ, ಬದಲಾಗಿ ಹಾಗಂತ ಪ್ರೀತಮ್ ಕಡೆಯವರ ಬಾಯಿ ಮುಚ್ಚಿಸಲು ಪೊಲೀಸರು ತರತರದ ತಂತ್ರ ಪ್ರಯೋಗಿಸುತ್ತಲೇ ಇದ್ದರು. ಕೋರ್ಟ್‌ನಿಂದ ಬಚಾವಾಗಲು ಇಂಥ ಅಡ್ಡದಾರಿಯನ್ನು ಪೊಲೀಸರು ಹಿಡಿದಿದ್ದರು.

ಕಾವೂರು ಸ್ಟೇಷನ್‌ನಲ್ಲಿ 'ಪಂಚಾಯ್ತಿ' ಒಂದನ್ನು ಪೊಲೀಸರು ಏರ್ಪಡಿಸಿದರು. ಹುಡುಗ ಪ್ರೀತಮ್ ಮತ್ತು ಹುಡುಗಿ ನಿಯತಿ ಇಬ್ಬರ ಕಡೆಯವರನ್ನೂ ಕರೆಸಿದರು. ನಿಯತಿ ಅಪ್ಪ ಎಸಿಎಫ್ ರವಿರಾಜ್ ತಲೆತಪ್ಪಿಸಿಕೊಂಡು ಹುಂಬ ಮಗ ನೀರಜ್‌ನನ್ನು ಕಳಿಸಿದನು. ಆತನ ಜತೆ ಮಂತ್ರಿ ಪಾಲೇಮಾರ್‌ರ ಪಿಎ ಕೊರಗಪ್ಪರ ಪುತ್ರರತ್ನ, ಇನ್ನೊಬ್ಬ ಆಪ್ತ ರಾಮಚಂದ್ರ, ಜತೆಗೊಂದಿಷ್ಟು ಗೂಂಡಾಗಳು ಬಂದರು. ಪ್ರೀತಿಮ್ ಕತೆ ತಮಗೇನೂ ತಿಳಿಯದೆಂದು ನೀರಜ್ ಪಟಾಲಮ್ ವಾದಿಸಿದರೆ, ನೀರಜ್ ಕಡೆಯವರನ್ನು ಬಿಟ್ಟರೆ ಇನ್ಯಾವ ದುಷ್ಮನ್ ಪ್ರೀತಮ್‌ಗೆ ಇರಲಿಲ್ಲ ಎಂದು ಪ್ರೀತಮ್ ಬಂಧು-ಮಿತ್ರರು ಪೊಲೀಸರಿಗೆ ಹೇಳಿದರು. ಈ ಪ್ರೀತಿ ಫಜೀತಿ ಬಿಟ್ಟರೆ ಇನ್ಯಾವ ಲಫಡಾ ಪ್ರೀತಮ್ ಮಾಡಿರಲಿಲ. ಈ "ಅನರ್ಥಕಾರಿ ಮಾತುಕತೆ"ಯಲ್ಲಿ ಪೊಲೀಸರಂತೂ ಮಂತ್ರಿಯ ಪಿಎ ಪರಿವಾರದ ಪರವಾಗಿಯೇ ಮಾತಾಡಿದರೇ ಹೊರತು ನೊಂದ ಹೆತ್ತೊಡಲಿಗೆ ಸಾಂತ್ವನ ಹೇಳಲೇ ಇಲ್ಲ!!

ಈ ಅಧಿಕಪ್ರಸಂಗದ ಬೆನ್ನಿಗೇ ಪೊಲೀಸರು ಇನ್ನೊಂದು ಕುಚೇಷ್ಟೆ ಮಾಡಿದರು. ಕುಂದಾಪುರದಲ್ಲಿ ಸಿಕ್ಕಿದ್ದ ಒಂದು ಅನಾಥ ಹೆಣವನ್ನೇ ಪ್ರೀತಮನದೆಂದು ಬಿಂಬಿಸಲು ಪೊಲೀಸರು ಶತಾಯಗತಾಯ ಹಾರಾಡಿದರು. "ಆ ಶವಕ್ಕೆ ಟಿಶರ್ಟ್-ಜೀನ್ಸ್ ಇದೆ. ಇದು ಪ್ರೀತಮ್‌ನದೇ. ಆತನೂ ಟಿಶರ್ಟ್-ಜೀನ್ಸ್ ತೊಟ್ಟಿದ್ದ ಅಲ್ಲವೇ? ಸುಮ್ಮನೇ ಒಪ್ಪಿಕೊಳ್ಳಿ" ಎಂದು ಪೊಲೀಸರು ಪ್ರೀತಮ್ ಬಂಧುಗಳನ್ನು ಪೀಡಿಸಿದ್ದು ಘೋರವಾಗಿತ್ತು. ಪ್ರೀತಮ್ ಕಡೆಯವರು "ಇದು ವಯಸ್ಸಾದವನ ಹೆಣದಂತಿದೆ. ಇದು ಪ್ರೀತಮ್‌ದಲ್ಲ" ಎಂದು ಪರಿಪರಿಯಾಗಿ ಬೇಡಿಕೊಂಡರೂ ಪೊಲೀಸರ ಪ್ರವರ ಜೋರಾಗುತ್ತಲೇ ಇತ್ತು. ಕೊನೆಗದು ಐವತ್ತು ವರ್ಷದವನ ಹೆಣವೆಂಬುದು ಸಾಬೀತಾದಾಗ ಪೊಲೀಸರು ಪೋಂಕಿಯಾದರು!!

ಪಾಲೇಮಾರ್ ಪವಾಡ



ಪಾಲೇಮ...

ಜಿಲ್ಲಾ ಉಸ್ತುವಾರಿ ಮಂತ್ರಿ ಕೃಷ್ಣ ಪಾಲೇಮಾರ್‌ರ ನಡವಳಿಕೆ ಮತ್ತಾತನ ಪಿಎ-ಪಟಾಲಂನ ಬಹಿರಂಗ ಭಂಡಾಟಗಳು ಪ್ರೀತಮ್ ಮಿಸ್ಸಿಂಗ್‌ನ ಹಿನ್ನೆಲೆ ಮುನ್ನಲೆಗಳೆಲ್ಲ ಪಾಲೇಮಾರ್‌ಗೆ ಗೊತ್ತಿದೆಯೆಂಬುದನ್ನು ಸಾಬೀತುಪಡಿಸುವಂತಿದೆ. ಪ್ರೀತಮ್‌ನ ಪ್ರಿಯತಮೆಯ ತಾಯಿ ಪಾಲೇಮಾರ್‌ನ ಹತ್ತಿರದ ಸಂಬಂಧಿಯಂತೂ ಹೌದು. ಪೊಲೀಸರ ನಿಸ್ಸೀಮ ನಿರ್ಲಕ್ಷ್ಯವಂತೂ ಈ ಪ್ರಕರಣದಲ್ಲಿ ಮಂತ್ರಿ ಪಾಲೇಮಾರ್ ಕೈ-ಚಳಕ ನಡೆಸಿರುವ ಗುಮಾನಿಗೆ ಕಾರಣವಾಗಿದೆ. ಹೇಬಿಯಸ್ ಕಾರ್ಪಸ್ ಅರ್ಜಿಯಲ್ಲೂ ಪ್ರೀತಮ್ ಗೆಳತಿಯ ತಂದೆ ಮಂತ್ರಿಗೆ ಹತ್ತಿರದ ಸಹಚರನೆಂದೇ ಹೇಳಲಾಗಿತ್ತು, ಹಾಗಾಗಿ ಪೊಲೀಸರು ತನಿಖೆ ಮಾಡದೇ ಉದಾಸೀನದಿಂದಿದ್ದಾರೆಂದು ಹೇಳಲಾಗಿತ್ತು.

ಈ ಅರ್ಜಿಯಲ್ಲಿ ರಾಜಕೀಯ ಪ್ರಭಾವ ಪ್ರೀತಮ್ ಕೇಸಲ್ಲಿರುವುದರಿಂದ ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಕೇಳಲಾಗಿತ್ತು. ಇದೇ ವೇಳೆ ಫಾರೆಸ್ಟ್ ಅಧಿಕಾರಿ ರವಿರಾಜ್ ಮತ್ತು ಮಂತ್ರಿ ಪಾಲೇಮಾರರನ್ನು ಆರೋಪಿಗಳೆಂದು ಪರಿಗಣಿಸುವಂತೆ ಕೋರ್ಟ್ ಅಭಿಪ್ರಾಯಪಟ್ಟಿದೆ. ಅಲ್ಲಿಗೆ ಮಂತ್ರಿ ಪಾಲೇಮಾರ್‌ನ ಮುಖವಾಡ ಕಳಚಿ ಬಿದ್ದಿದೆ! ಎದೆಯೆತ್ತರಕ್ಕೆ ಬೆಳೆದ ಮಗನನ್ನು ಕಳೆದುಕೊಂಡಿರುವ ಪ್ರೀತಮ್‌ನ ಹೆತ್ತವರ ಒಡಲ ಸಂಕಟ ಹಣ, ಅಧಿಕಾರದ ಬೆನ್ನು ಬಿದ್ದು ಮಾಡಬಾರದ್ದು ಮಾಡುತ್ತಿರುವ ಪಾಲೇಮಾರ್‌ಗೆ ಅರ್ಥವಾಗುವುದು ಕಷ್ಟ!

ಮಂತ್ರಿ ಪಾಲೇಮಾರ್‌ನ ಪೂರ್ವಾಶ್ರಮದ ಚರಿತ್ರೆ ಕೆದಕಿದರೆ ಆತ ಕ್ರಿಮಿನಲ್ ಸ್ಕೆಚ್‌ಗಳಲ್ಲಿ ನಿಸ್ಸೀಮನೆಂಬುದು ಎಂಥವರಿಗೂ ಕಾಣಿಸುತ್ತದೆ. ಇವತ್ತಿಗೂ ಮಂಗಳೂರಿನ ಲ್ಯಾಂಡ್ ಮಾಫಿಯಾದ ಕಿಂಗ್‌ಪಿನ್‌ನಂತಿರುವ ಪಾಲೇಮಾರ್ ಯಾರ್ಯಾರದೋ ಜಾಗ ಕಬಳಿಸಲು ಮಾಡಿದ ಪಾತಕ ಒಂದೆರಡಲ್ಲ. ಮಂಗಳೂರಲ್ಲಿ ಪಾಲೇಮಾರರ ಕ್ರಿಮಿನಲ್ ಕಿತಾಪತಿಯಷ್ಟೇ ಫೇಮಸ್ ಆತನ ಕೃಷ್ಣ ಲೀಲೆಗಳು. ಆತನ ಲ್ಯಾಂಡ್ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಮಹಿಳೆಯರು ಅನುಮಾನಾಸ್ಪದ ಕಾರ್ ಅಪಘಾತದಲ್ಲಿ ಅಸುನೀಗಿದ್ದರು; ಹಾಗೆಯೇ ಪಾಲೇಮಾರ್ ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದ ಬ್ರಾಹ್ಮಣ ಬಾಲೆಯೊಬ್ಬಳು ಇದ್ದಕ್ಕಿದ್ದಂತೆ ನೇಣು ಹಾಕಿಕೊಂಡಿದ್ದು ಬಿಡಿಸಲಾಗದ ಒಗಟಾಗಿದೆ. ಇವರಿಗೇನಾದರೂ ಪಾಲೇಮಾರನ ಗುಟ್ಟುಗಳು ಗೊತ್ತಿತ್ತೇ? ಹಾಗಂತ ಇವತ್ತಿಗೂ ಮಂಗಳೂರಲ್ಲಿ ಚರ್ಚೆಗಳಿವೆ.

ಪಾಲೇಮಾರ್ ಮಂಗಳೂರು ಬಳಿಯ ಕೃಷ್ಣಾಪುರದಲ್ಲಿ ಕಟ್ಟಿಸಿರುವ ಫಾರ್ಮ್ ಹೌಸ್ ಪಲ್ಲಂಗ ಪುರಾಣಕ್ಕೆ ಪ್ರಖ್ಯಾತ! ಇಲ್ಲಿ ಆತನ ಬಿಜೆಪಿಯವರಷ್ಟೇ ಅಲ್ಲ, ಆರೆಸ್ಸೆಸ್ ಮತ್ತಿತರ ಪಕ್ಷದ ಪುಢಾರಿಗಳು ಮಲಗೆದ್ದುಹೋಗುತ್ತಾರೆ. ಕೇಂದ್ರದ ಮಾಜಿ ಬಿಜೆಪಿ ಮಂತ್ರಿಯೊಬ್ಬ ಇಲ್ಲಿ ಪಲ್ಲಂಗ ಏರಿಹೋದದ್ದು ದೊಡ್ಡ ಸುದ್ದಿಯಾಗಿತ್ತು. ಈ ಚೆಡ್ಡಿ ಚತುರನ ಕೃಷ್ಣಾಪುರ ವಿಸಿಟ್ ಬಳಿಕ ಆತನ ಅಧೀನದಲ್ಲಿದ್ದ ಸಂಸ್ಥೆಯಿಂದ 40 ಕೋಟಿ ದೋಖಾ ಸಾಲ ಸ್ಯಾಂಕ್ಷನ್ ಆಗಿತ್ತು ಲ್ಯಾಂಡ್ ಲಿಂಕ್ಸ್ ದೊರೆ ಪಾಲೇಮಾರ್‌ಗೆ!

ಇದೇ ರೀತಿ ಸುಹಾಸ್ ಎಂಬ ಕಾಸರಗೋಡಿನ ವಕೀಲ ಕೋಮುಗಲಭೆಯಲ್ಲಿ ಅಸುನೀಗಿದಾಗ ಪಾಲೇಮಾರ್ ಸುತ್ತ ಸಂಶಯಗಳ ಹುತ್ತವೆದ್ದಿತ್ತು. ಈ ಸುಹಾಸ್ ಪಾಲೇಮಾರ್‌ನ ಶಿಕ್ಷಣ ಸಂಸ್ಥೆಯಲ್ಲಾದ ಅನ್ಯಾಯದಿಂದ ಕಂಗೆಟ್ಟಿದ್ದ ನತದೃಷ್ಟೆಯ ವಕೀಲನಾಗಿದ್ದ. ಇಂಥ ಪಾತಕ ಟ್ರ್ಯಾಕ್ ಹಿಸ್ಟರಿಯ ಪಾಲೇಮಾರ್ ಪ್ರೀತಮ್ ಕಣ್ಮರೆ ಕೇಸಲ್ಲಿ ಕೈಯಾಡಿಸಿಲ್ಲವೆಂದು ಹೇಳುವುದು ಹೇಗೆ? ಹಾಗಂತ ಮಂಗಳೂರಿನ ಮಂದಿ ಮಾತಾಡಿಕೊಳ್ಳುತ್ತಿದ್ದಾರೆ. ಇನ್ನಾದರೂ ಸಿಎಂ ಯಡ್ಡಿ ಪಾಲೇಮಾರ್‌ನನ್ನು ಮನೆಗೆ ಕಳುಹಿಸಿ ಪ್ರೀತಮ್ ಪ್ರಕರಣವನ್ನು ನಿಷ್ಪಕ್ಷಪಾತವಾಗಿ ತನಿಖೆಗೊಳಪಡಿಸಬೇಕಿದೆ.

ಪಾಲೇಮಾರ್ ಮಂತ್ರಿಯಾಗಿರುವತನಕ ಮಗನನ್ನು ಕಳೆದುಕೊಂಡಿರುವ ಪ್ರೀತಮ್‌ನ ತಾಯ್ತಂದೆ-ಬಂಧು-ಮಿತ್ರರಿಗೆ ನ್ಯಾಯ ಸಿಗಲಾರದು. ಜನ ಬೀದಿಗಿಳಿವ ಮೊದಲೇ ಸಿಎಂ ಯಡ್ಡಿ ಎಚ್ಚೆತ್ತುಕೊಳ್ಳುವರೇ?

• ವರದಿಗಾರ

ಹೋಟೆಲ್ ಯಾಕೆ ಬುಕ್ ಮಾಡಿದ್ದು?

ಮಂತ್ರಿ ಪಾಲೇಮಾರ್‌ರ ಕೃಪಾಕಟಾಕ್ಷದ ಗೂಂಡಾಗಳು ಪ್ರೀತಮ್‌ನನ್ನು ಅಪಹರಿಸಿದ್ದೇ ಹೌದಾದರೆ ಆತ ಬದುಕಿರುವ ಸಾಧ್ಯತೆ ಕಮ್ಮಿ ಎಂದು ಕ್ರಿಮಿನಲ್ ಲಾ ಪಂಡಿತರು ಹೇಳುತ್ತಾರೆ. ಪ್ರೀತಮ್‌ನ ಪ್ರಿಯತಮೆಗೆ ಬೇರೆ ಮದುವೆ ಮಾಡಲು ಆಕೆಯ ಪಾಲಕರು ಪ್ರಯತ್ನ ನಡೆಸಿದ್ದಾರೆ. ಆ ಮದುವೆ ಮುಗಿವತನಕ ಪ್ರೀತಮ್‌ನನ್ನು ಅಡಗಿಸಿಡಬಹುದೆಂಬುದು ಆತನ ಆಪ್ತ ಗೆಳೆಯರ ಅಂದಾಜು. ಪ್ರೀತಮ್ ಕಾಣೆಯಾದ ಕೆಲವು ದಿನಗಳ ನಂತರ ಆತನ ಮೊಬೈಲ್ ಸೆಟ್ ಸಿಕ್ಕಿದೆ. ಅದರಲ್ಲಿ ಎಸಿಎಫ್ ಮಗಳು ನಿಯತಿಯ ಫೋನ್‌ನಂಬರ್‌ಗಳು ರಿಜಿಸ್ಟರ್ ಆಗಿವೆ.

ನಿಯತಿಯ ಅಣ್ಣ ನೀರಜ್‌ನೇ ಗೂಂಡಾಗಳೊಂದಿಗೆ ಪ್ರೀತಮ್‌ನನ್ನು ಕಿಡ್‌ನ್ಯಾಪ್ ಮಾಡಿರುವ ಅನುಮಾನ ಎಲ್ಲರಲ್ಲೂ ಇದೆ. ಈ ನೀರಜ್ ಪ್ರೀತಮ್ ಕಣ್ಮರೆಯಾದ ದಿನ (24-1-10)ರಿಂದ ಐದು ದಿನ (28ರ ತನಕ) ಮಂಗಳೂರಿನ ಹೋಟೆಲೊಂದನ್ನು ಬುಕ್ ಮಾಡಿ ಉಳಿದುಕೊಂಡಿದ್ದ. ಕೆ.ಎಸ್.ರಾವ್ ರಸ್ತೆಯಲ್ಲಿರುವ 'ಮಂಗಳೂರು ಇಂಟರ್‌ನ್ಯಾಷನಲ್' ಹೋಟೆಲ್‌ನ ರೂಮ್ ಮಿಸೆಸ್ ಅಂಡ್ ಮಿಸ್ಟರ್ ನೀರಜ್ ಹೆಸರಲ್ಲಿ ಬುಕ್ ಆಗಿತ್ತು. ಈ ಅವಿವಾಹಿತ ಅಲ್ಲಿ ಮುಂಬೈನ ಡ್ಯಾನ್ಸರ್ ಬೆಡಗಿ ಜತೆಗಿದ್ದ ಸುದ್ದಿಗಳು ಮಂಗಳೂರಲ್ಲಿದೆ.

ಜತೆಗೆ ನಾಲ್ಕು ಟೋಣಪರಿದ್ದರಂತೆ. ನೀರಜ್ ಮುಂಬೈನಿಂದ ಕಿಡ್‌ನ್ಯಾಪರ್-ಕಿಲ್ಲರ್ಸ್ ಕರೆಸಿದ್ದನಾ? ಆ ಡ್ಯಾನ್ಸರ್ ಮೂಲಕ ಅಪಹರಣದ ಸ್ಕೆಚ್ ಹಾಕಿದ್ದನಾ? ಮಂಗಳೂರಲ್ಲಿ ಮನೆ ಇರುವ ನೀರಜ್ ಹೋಟೆಲ್ ರೂಮಲ್ಲಿ ಉಳಿದಿದ್ದೇಕೆ? ಮಿಸೆಸ್ ನೀರಜ್ ಯಾರು? ಖಾಕಿ ಖದರು ಕಳೆದುಕೊಂಡು ಮಂತ್ರಿ ಪಾಲೇಮಾರ್ ಸೇವಕರಾಗಿರುವ ಮಂಗಳೂರು ಪೊಲೀಸರಿಗೆ ಈ ಪ್ರಶ್ನೆ ಕೇಳುವುದು ವ್ಯರ್ಥ. ಖಡಕ್ ಎಂದು ಪೋಜು ಕೊಡುವ ಎಸ್ಪಿ ಡಾ.ಸುಬ್ರಹ್ಮಣ್ಯೇಶ್ವರ ರಾವ್‌ಗೆ ಇದು ಭೂಷಣವಲ್ಲ!!

ಕುಂದಾಪುರದಲ್ಲಿ ಸಿಕ್ಕಿದ ಅನಾಥ ಶವವನ್ನೇ ಪ್ರೀತಮ್‌ದೆಂದು ಬಿಂಬಿಸುವ ಹಠಕ್ಕೆ ಎಸ್ಪಿ ಸುಬ್ರಹ್ಮಣ್ಯೇಶ್ವರ ರಾವ್ ಬಿದ್ದಿರುವುದು ಮಂತ್ರಿ ಮಹಿಮೆಯೇ ಸರಿ.


ಮಂಗಳೂರು ಆಕಾಶವಾಣಿ

ದಲಿತ ಸಿಬ್ಬಂದಿ ಮೇಲೆ ಪಟ್ಟಭದ್ರರ ಅಟ್ಟಹಾಸ

ಮಂಗಳೂರು ಆಕಾಶವಾಣಿಗೆ ಈಗ ಮೂವತ್ತರ ಹರೆಯ. ರಾಜ್ಯದ ಉತ್ತಮ ಆಕಾಶವಾಣಿ ಕೇಂದ್ರಗಳಲ್ಲೊಂದು ಎಂಬ ಹೆಗ್ಗಳಿಕೆ ಪಡೆದಿದ್ದ ಕೇಂದ್ರಕ್ಕೆ ಇತ್ತೀಚಿನ ವರ್ಷಗಳಲ್ಲಿ ಜಾತಿವಾದ, ಪ್ರಾದೇಶಿಕವಾದದ ಸೋಂಕು ತಗುಲಿಕೊಂಡಿದೆ. ಈ ವಿಚಿತ್ರ ಕಾಯಿಲೆಗೆ ಬೀದರ್ ಮೂಲದ ದಲಿತ ಉದ್ಯೋಗಿ ಸುಧಾಕರ್ ಎಂಬುವವರು ಬಲಿಪಶುವಾಗಿದ್ದಾರೆ.

ಆಕಾಶವಾಣಿ ಕೃಷಿರಂಗ ವಿಭಾಗದಲ್ಲಿ ಪ್ರಸಾರ ನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿರುವ ಬೀದರ್ ಜಿಲ್ಲೆಯ ಸುಧಾಕರ್ ಎಂಬುವರು ತನಗೆ ನೀಡಲಾಗುತ್ತಿರುವ ನಿರಂತರ ಕಿರುಕುಳದ ವಿರುದ್ಧ ಬಂಡೆದ್ದು ಮೇಲಧಿಕಾರಿಗಳಿಗೆ, ಪೊಲೀಸರಿಗೆ ದೂರು ನೀಡಿದುದರ ಪರಿಣಾಮವಾಗಿ ಆಕಾಶವಾಣಿಯೊಳಗಿನ ಹುಳುಕುಗಳು ಬಹಿರಂಗಗೊಂಡಿವೆ.

ಮಂಗಳೂರು ಆಕಾಶವಾಣಿಯಲ್ಲಿ ಕೃಷಿರಂಗದ ಕಾರ್ಯಕ್ರಮಗಳು ಚೆನ್ನಾಗಿ ಮಾಹಿತಿಯುಕ್ತವಾಗಿ ಪ್ರಸಾರವಾಗುತ್ತಿವೆ ಎಂಬ ಶ್ರೋತೃಗಳ ಪ್ರಶಂಸಾಪತ್ರಗಳು ನಿಲಯ ಮುಖ್ಯಸ್ಥೆ ಶಾರದಾ, ವಿವಿಧ ವಿಭಾಗಗಳ ಉದ್ಯೋಗಿಗಳಾದ ಸೂರ್ಯನಾರಾಯಣ ಭಟ್ಟ, ನಾರಾಯಣಿ ದಾಮೋದರ್, ದೇವೃಹನೇಹಳ್ಳಿ, ಫ್ಲೋರಿನ್ ರೋಚ್ ಮುಂತಾದವರಿಗೆ ಕಿರಿಕಿರಿಕೆ ಉಂಟುಮಾಡುತ್ತಿತ್ತು. ಈ ಕೃಷಿರಂಗದ ಕಾರ್ಯಕ್ರಮಗಳ ಕ್ರೆಡಿಟ್ ದಲಿತ ಸುಧಾಕರ್‌ಗೆ ಹೋಗುವುದನ್ನು ಆಕಾಶವಾಣಿಯ ಬ್ರಾಹ್ಮಣಶಾಹಿ ಲಾಬಿ ಮತ್ತು ಪಟ್ಟಭದ್ರರು ಸಹಿಸದಾದರು. ಕೃಷಿರಂಗ ವಿಭಾಗದ ಯಾವುದೇ ಕಾರ್ಯಕ್ರಮಗಳಿದ್ದರೂ ಅದನ್ನು ಏನಾದರೂ ಮಾಡಿ ಹಾಳುಗೆಡವಬೇಕೆಂಬ ಸಂಚು ರೂಪಿಸಿ ವಿಧವಿಧ ಕಿರುಕುಳ ನೀಡಲಾರಂಭಿಸಿದರು.



ಸುಧಾಕರ್

ಕೃಷಿಕರನ್ನು ಭೇಟಿಯಾಗಲು ಹೋಗುವ ಸಲುವಾಗಿ ಸುಧಾಕರ್ ಇಲಾಖೆಯ ವಾಹನವನ್ನು ಕೇಳಿದರೆ ವಾಹನ ನೀಡದೆ ಸತಾಯಿಸುವುದು, ಕೃಷಿ ಸಂಬಂಧಿಯಾಗಿ ಮಾತನಾಡಲು ಅತಿಥಿಗಳನ್ನು ಆಹ್ವಾನಿಸಿದರೆ ಅದಕ್ಕೆ ನಿಲಯ ಮುಖ್ಯಸ್ಥೆಯ ಅಂಗೀಕಾರ ಬೇಕಾಗುತ್ತದೆ. ಅಂಗೀಕಾರ ಪತ್ರಕ್ಕೆ ಸಹಿ ಹಾಕಲು ಅನಗತ್ಯವಾಗಿ ವಿಳಂಬ ಮಾಡಿ ಎಂಟು-ಹತ್ತು ದಿನಗಳ ಕಾಲ ಸತಾಯಿಸುವುದು, ನಿಲಯ ಮುಖ್ಯಸ್ಥೆ ಸಹಿ ಮಾಡಿದ ಬಳಿಕ ಅದನ್ನು ಟೈಪ್ ಮಾಡಲು ಕ್ಲೆರಿಕಲ್ ಸ್ಟಾಫ್‌ಗೆ ಕೊಟ್ಟರೆ ಅರ್ಧಪುಟ ಟೈಪ್ ಮಾಡಲು 2-3 ದಿನ ವಿಳಂಬ ಮಾಡುವುದು ಇಷ್ಟೆಲ್ಲಾ ವಿಳಂಬದ ಬಳಿಕ ಅತಿಥಿಗಳಾಗಿ ಭಾಗವಹಿಸಲಿರುವವರಿಗೆ ಪತ್ರ ತಲುಪುವಾಗ ಕಾರ್ಯಕ್ರಮ ನೀಡಲು ಅವರಿಗೆ ನಿಗದಿಗೊಳಿಸಿದ (ಪತ್ರದಲ್ಲಿ ಉಲ್ಲೇಖಿಸಲಾದ) ದಿನಾಂಕ ಮುಗಿದುಹೋಗಿರುತ್ತದೆ.

ಈ ಅತಿಥಿಗಳಿಗೆ ದೂರವಾಣಿ ಮೂಲಕ ಮಾಹಿತಿ ತಿಳಿಸಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ಕಾರ್ಯಕ್ರಮ ಪ್ರಸಾರ ಮಾಡುವಾಗ ಉದ್ಘೋಷಕರು, ತಾಂತ್ರಿಕ ವಿಭಾಗದವರು ಉದ್ದೇಶಪೂರ್ವಕ ಅಡಚಣೆ ಉಂಟುಮಾಡುತ್ತಾರೆ. ಉದಾ: ಅತಿಥಿಗಳ ಪರಿಚಯ ಮಾಡದಿರುವುದು ಪ್ರಸಾರವಾಗದಂತೆ ಅಡಚಣೆ ಉಂಟುಮಾಡಿ ಕಾರ್ಯಕ್ರಮ ಮಧ್ಯದಿಂದ ಪ್ರಸಾರವಾಗುವಂತೆ ಮಾಡುವುದು... ಇತ್ಯಾದಿ. ಇಂತಹ ಚಿತ್ರ-ವಿಚಿತ್ರ ರೀತಿಯ ಕಿರುಕುಳಗಳನ್ನು ಸಹಿಸಿ ತಾಳ್ಮೆ ಕಳಕೊಂಡ ಸುಧಾಕರ್ ಆಕಾಶವಾಣಿಯ ರಾಜ್ಯ ನಿರ್ದೇಶಕರಿಗೆ ದೂರು ನೀಡಿದ್ದರು. ಇದರಿಂದ ಕನಲಿಹೋದ ಮಂಗಳೂರು ಆಕಾಶವಣಿಯ ಬ್ರಹ್ಮಣಶಾಹಿಗಳು ಮತ್ತು ಸ್ಥಳೀಯರೆಂಬ ಅಹಂ ಬೆಳೆಸಿಕೊಂಡ ಪಟ್ಟಭದ್ರರು ಸುಧಾಕರರನ್ನು ಹೇಗಾದರೂ ಮಾಡಿ ಮಂಗಳೂರಿನಿಂದ ಓಡಿಸಲು ಹೆಣೆದ ಕುತಂತ್ರವೇ 5,000/- ವಂಚನೆ ಪ್ರಕರಣ.

ಕಳೆದ ಜನವರಿ 2ರಂದು ಉಡುಪಿ ಸಿಂಡಿಕೇಟ್ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಯ ಪ್ರಾಯೋಜಕತ್ವದಲ್ಲಿ ಉಡುಪಿಯಲ್ಲಿ ಕೃಷಿ ಮೇಳವೊಂದು ನಡೆದಿತ್ತು, ಸದರಿ ಕೃಷಿ ಮೇಳದ ಬಾನುಲಿ ಪ್ರಸಾರ ನಡೆಸುವ ಸಲುವಾಗಿ ಮಂಗಳೂರು ಆಕಾಶವಾಣಿಗೆ ಆಹ್ವಾನ ನೀಡಿದ್ದರು. ಕೃಷಿರಂಗ ವಿಭಾಗದ ಪ್ರಸಾರ ನಿರ್ವಾಹಕ ಸುಧಾಕರ್ ಉಡುಪಿಗೆ ತೆರಳಿ ಕಾರ್ಯಕ್ರಮದ ಕವರೇಜ್ ಮಾಡಿದ್ದರು. ಸದರಿ ಕವರೇಜ್‌ಗೆ 5,000/- ರೂಪಾಯಿಯನ್ನು ಬ್ಯಾಂಕಿನ ಚೀಫ್ ಮ್ಯಾನೇಜರ್ ಹೇಮಂತ್ ಭಿಡೆ ಸುಧಾಕರ್ ಕೈಯಲ್ಲಿ ನಗದು ರೂಪದಲ್ಲೇ ನೀಡಿದ್ದರು. ಸುಧಾಕರ್ ಹಿಂದೆಮುಂದೆ ಯೋಚಿಸದೆ ನಗದನ್ನು ಪಡೆದಿದ್ದರು. ಆ ಸಂಬಂಧ ಭಿಡೆ ಸುಧಾಕರರಿಂದ ರಶೀದಿ ಕೇಳಿಯೂ ಇಲ್ಲ, ರಶೀದಿಗಾಗಿ ನೆನಪಿಸಿಯೂ ಇಲ್ಲ, ಜನವರಿ ಹದಿನೇಳರಂದು ಬೆಳಗ್ಗೆ ಸುಧಾಕರ್ ಆಕಾಶವಾಣಿ ಕಚೇರಿಗೆ ಹೋದಾಗ ಮಹಿಳಾ ಪೊಲೀಸ್ ಠಾಣೆಗೆ ಬರಬೇಕೆಂದು ಕೋರಿದರು. ನಿಮ್ಮ ಮೇಲೆ ಬಿಡೆ ಎಂಬುವವರು ಒಂದು ಮೌಖಿಕ ದೂರು ನೀಡಿರುತ್ತಾರೆ ಅದನ್ನು ಸೆಟ್ಲ್ ಮಾಡಿ ಬಿಡೋಣ ಎಂದು ಠಾಣೆಗೆ ಕರೆದಾಗಲೇ ಸುಧಾಕರ್‌ರಿಗೆ ತನ್ನ ಮೇಲೆ ಹೆಣೆದಿರುವ ತಂತ್ರದ ಬಲೆಯ ಕುರಿತು ಅರಿವಾದದ್ದು. ಠಾಣೆಗೆ ಹೋದ ಸುಧಾಕರರನ್ನು ಕುಖ್ಯಾತ ಚೆಡ್ಡಿ ಪೊಲೀಸ್ ರಾಘವ ಪಡೀಲ್ ಮತ್ತು ಇನ್ನೊಬ್ಬ ಅಧಿಕಾರಿ ಚಿಕ್ಕಸ್ವಾಮಿಗೌಡ ಸೇರಿ ಜಾತಿನಿಂದನೆ ಮಾಡಿ ಅವರನ್ನು ಒಳಉಡುಪಿನಲ್ಲಿ ನಿಲ್ಲಿಸಿ ಲಾಕಪ್‌ಗೆ ತಳ್ಳಿ ಅವಮಾನ ಮಾಡಿದರು. ಸುಧಾಕರರನ್ನು ಬೆಳಗ್ಗೆ ಸುಮಾರು ಹತ್ತೂವರೆ ಗಂಟೆಯ ಹೊತ್ತಿಗೆ ಲಾಕಪ್‌ಗೆ ತಳ್ಳಲಾಗಿತ್ತು. ಸಿಂಡಿಕೇಟ್ ಬ್ಯಾಂಕ್‌ನ ಬಿಡೆ ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ಕದ್ರಿ ಠಾಣೆಗೆ ಬಂದು ಸುಧಾಕರರ ಮೇಲೆ ವಂಚನೆಯ ಆರೋಪ ಹೊರಿಸಿ ದೂರು ನೀಡಿದರು. ಸುಧಾಕರ್ 5,000/- ರೂಪಾಯಿಗೆ ರಶೀದಿ ನೀಡದೆ ವಂಚಿಸಿದ್ದಾರೆ ಎಂದು ಬಿಡೆ ದೂರು ನೀಡಿದಾಗ ಸುಧಾಕರ್ ತನ್ನ ಮೇಲಿನ ಆರೋಪವನ್ನು ನಿರಾಕರಿಸಬಹುದಿತ್ತು. ಯಾಕೆಂದರೆ ಸುಧಾಕರ್‌ಗೆ ಓರ್ವ ಚೀಫ್ ಮ್ಯಾನೇಜರ್‌ನಂತಹ ಉನ್ನತ ಹುದ್ದೆಯಲ್ಲಿದ್ದ ಬಿಡೆ ನಗದು ರೂಪದಲ್ಲಿ ದುಡ್ಡು ನೀಡಿದ್ದು ಆತ ಮಾಡಿದ ಮೊದಲ ತಪ್ಪು. ಒಂದು ವೇಳೆ ನಗದು ರೂಪದಲ್ಲೇ ನೀಡುವುದಾದರೂ ಆ ಸಂಬಂಧ ಸುಧಾಕರ್‌ರಿಂದ ಒಂದು ಸಹಿಯಾದರೂ ತೆಗೆದುಕೊಳ್ಳಬಹುದಿತ್ತು. ಯಾವುದೇ ಸಹಿಯನ್ನು ಬಿಡೆ ಪಡೆದಿರಲಿಲ್ಲ. ಇದಿಷ್ಟರ ಮೇಲೂ ಸುಧಾಕರ್ ಬಿಡೆ ದುಡ್ಡು ನೀಡಿರುವುದನ್ನು ಅಲ್ಲಗಳೆದಿಲ್ಲ. ಇಂತಹ ಸ್ಥಿತಿಯಲ್ಲಿ ಸುಧಾಕರ್‌ರಿಂದ ಈಗಲಾದರೂ ರಶೀದಿ ಪಡೆದು ಪ್ರಕರಣವನ್ನು ಅಲ್ಲಿಗೆ ಮುಗಿಸಬಹುದಿತ್ತು. ಆದರೆ ಬಿಡೆ ಆಕಾಶವಾಣಿಯ ಬ್ರಾಹ್ಮಣಶಾಹಿಗಳು ಮತ್ತು ಸ್ಥಳೀಯ ಪಟ್ಟಭದ್ರರೊಂದಿಗೆ ಕೈಜೋಡಿಸಿ ದಲಿತ ಸುಧಾಕರರನ್ನು ಹಳ್ಳಕ್ಕೆ ನೂಕುವ ಪೂರ್ವಯೋಜನೆ ಹಾಕಿದ್ದ.

ಬ್ಯಾಂಕಿಗೆ ಸಂಬಂಧಿಸಿದಂತಹ ಎಲ್ಲಾ ವ್ಯವಹಾರಗಳು ಡಿಡಿ ಅಥವಾ ಚೆಕ್ ಮುಖಾಂತರವೇ ನಡೆಸಬೇಕೆಂಬ ಬ್ಯಾಂಕ್‌ಗಳ ನಿಯಮವನ್ನು ಬಿಡೆ ಗಾಳಿಗೆ ತೂರಿ ಬ್ಯಾಂಕಿಗೆ ವಂಚಿಸಿದ್ದಾರೆ. ಒಂದು ವೇಳೆ ಸುಧಾಕರ್ 5,000/- ರೂಪಾಯಿಗಳಿಗೆ ರಶೀದಿ ನೀಡದೆ ವಂಚಿಸಿದ್ದಾರೆಂದು ಆರೋಪಿಸುವುದಾದರೆ ಹೇಮಂತ ಭಿಡೆ ನಗದು ರೂಪದಲ್ಲಿ ದುಡ್ಡು ನೀಡಿ ಬ್ಯಾಂಕಿಗೆ ವಂಚಿಸಿದ್ದು ಸುಧಾಕರ್‌ರಷ್ಟೇ ಗುರುತರ ಅಪರಾಧವಾಗುತ್ತದೆ.

ಸುಧಾಕರನ ಮೇಲೆ ಕಾನೂನುಬದ್ಧವಾಗಿ ತನಿಖೆಯಾಗಲಿ, ಹಾಗೆಯೇ ಬಿಡೆಯ ಮೇಲೆಯೂ...

ಮಂಗಳೂರಿನ ಉನ್ನತ ಪೊಲೀಸ್ ಅಧಿಕಾರಿಗಳು ಈ ಕುರಿತು ಕೂಲಂಕಷ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

• ಇಸ್ಮತ್ ಪಜೀರ್

ದಯಾಮಯಿ ಪ್ರವಾದಿಯವರು ಇದನ್ನು ಒಪ್ಪುತ್ತಾರಾ!



ಗೋಹತ್ಯೆ ನಿಷೇಧ ಜಾರಿಗೆ ಬಂದೇಬಿಟ್ಟಿತೆಂದು ಮಾಂಸ ಭಕ್ಷಕರುಗಳಾದ ಭಜರಂಗಿಗಳು ಕುಣಿದಾಡುತ್ತಿರುವಾಗಲೇ, ಚಿಕ್ಕಮಗಳೂರ ನಗರ ಸಭೆ ತಿಕ್ಕಲರು ಶ್ರೀರಾಮನವಮಿ ದಿವಸ ಪ್ರಾಣಿವಧೆ ಮಾಡಿ ಮಾಂಸ ಮಾರಬಾರದೆಂದು ಸಂಬಂಧಪಟ್ಟವರಿಗೆ ಸೂಚನೆ ಕೊಟ್ಟಿದ್ದರಂತಲ್ಲಾ, ಈ ಬಗ್ಗೆ ಕೆರಳಿರುವ ನಿಜವಾದ ರಾಮಭಕ್ತರು, "ಅಯ್ಯೋ ಮಂಗಮುಂಡೇವಾ. ಶ್ರೀರಾಮ ಹದಿನಾಲ್ಕು ವರ್ಷ ವನವಾಸದಲ್ಲಿ ಏನೇನು ತಿಂದುಬದುಕಿದ ಎಂಬುದೇನಾದರೂ ಗೊತ್ತೆ? ಕಾಡಿನಲ್ಲಿ ಹೆಜ್ಜೆಹೆಜ್ಜೆಗೂ ಸಿಗುತ್ತಿದ್ದ ಮೊಲ, ವಾರಕ್ಕೊಂದು ಜಿಂಕೆ, ತಿಂಗಳಿಗೊಂದು ಕಡವೆ, ಕಾಡುಂದಿ ಇವೆಲ್ಲವನ್ನು ಭಕ್ಷಣೆ ಮಾಡಿ ತೋಳನ್ನು ಹುರಿ ಮಾಡಿಕೊಂಡ ಕಾರಣಕ್ಕೆ, ಲಂಕಾ ರಕ್ಕಸರ ಎದೆ ಸೀಳುವಂತೆ ಬಾಣ ಬಿಡಲು ಸಾಧ್ಯವಾಯ್ತು, ನಿಮ್ಮಂತೆ ಕೋಸಂಬರಿ, ಪಾಯಸ, ಪುಳಿಚಾರು ಕುಡಿದುಕೊಂಡಿದ್ದರೆ ಸೀತೆಯನ್ನು ರಾವಣನ ಸುಪರ್ದಿಗೇ ಬಿಟ್ಟು ವಾಪಸು ಬಂದು ಎರಡನೇ ಮದುವೆಯಾಗುತ್ತಿದ್ದ, ಅಷ್ಟಕ್ಕೂ ರಾಮನ ಬಳಿಯಿದ್ದ ಬಿಲ್ಲುಬಾಣಗಳಿಂದ ಅವನೇನೇನು ಮಾಡುತ್ತಿದ್ದ ಎಂಬುದನ್ನು ಮೊದಲು ತಿಳಿದುಕೊಳ್ಳಿ ಮಂಗಮುಂಡೇವಾ" ಎಂದು ಉಗಿದರಂತಲ್ಲಾ, ಥೂತ್ತೇರಿ!

* * * * * * * * **

ಈಚೆಗೆ ಭಜರಂಗಿಗಳ ವೀರಾವೇಶಕ್ಕೆ ಆಂಜನೇಯ ಸುಲಭವಾಗಿ ಸಿಕ್ಕಿದ್ದಾನಂತಲ್ಲಾ, ಮುಖ್ಯವಾಗಿ ಆತ ಲಂಕಾ ನಗರವನ್ನು ಪ್ರವೇಶಿಸಿ ರಾವಣನಿಂದ ಬಾಲಕ್ಕೆ ಬೆಂಕಿ ಹಚ್ಚಿಸಿಕೊಂಡು, ಲಂಕೆಯನ್ನು ದಹನ ಮಾಡಿದ ವೀರಾವೇಶವನ್ನು ಫ್ಲೆಕ್ಸ್‌ಗಳಲ್ಲಿ ಬಳಸಿ ತಾವೂ ಆಂಜನೇಯನ ಅನುಯಾಯಿಗಳೆಂಬುದನ್ನು ಸಾಬೀತು ಮಾಡುತ್ತಿವೆಯಂತಲ್ಲಾ, ನಿಜಕ್ಕೂ ಭಜರಂಗಿಗಳು ಆಂಜನೇಯನನ್ನು ಆರಾಧಿಸುವುದರಲ್ಲಿ ಅರ್ಥವಿದೆ. ಸೀತಾದೇವಿಗೆ ಮುದ್ರೆಯುಂಗುರ ಕೊಟ್ಟು ಬಾ ಎಂದರೆ ಲಂಕೆಗೆ ಬೆಂಕಿಯಿಟ್ಟು ಬಂದ ಆ ವಾನರ ತಪ್ಪು ಮಾಡಿರುವವನು ರಾವಣನೇ ಹೊರತು ಲಂಕೆಯ ಮಕ್ಕಳು, ಮುದುಕರು, ಮಹಿಳೆಯರು ಮತ್ತು ಗರ್ಭಿಣಿಯರಲ್ಲ ಎಂದು ಯೋಚಿಸಿ ಬಾಲ ನಂದಿಸಿಕೊಂಡು ಬರಬೇಕಿತ್ತು, ಆದರೆ ಇದಾವುದನ್ನು ಯೋಚಿಸದೆ ತನ್ನ ಕಪಿಚೇಷ್ಟೆ ಮೆರೆದ ಮಾರುತಿ, ಸದ್ಯದ ಭಜರಂಗಿ ಮೂರ್ಖರಿಗೆ ಆದರ್ಶವಾಗುವುದರಲ್ಲಿ ತುಂಬಾ ಅರ್ಥವಿದೆಯೆಂಬುದು ಪೋಲಂಕಿ ರಾಮಮೂರ್ತಿ ಅಭಿಮಾನಿಗಳ ತರ್ಕವಾಗಿದೆಯಂತಲ್ಲಾ, ಥೂತ್ತೇರಿ!!

* * * * * * * * **

ಥೂತ್ತೇರಿ

▸ ಯಾಹೂ

ಭಜರಂಗಿಗಳದ್ದು ಈ ಕತೆಯಾದರೆ ಇನ್ನು ಮುಸ್ಲಿಂ ಮೂರ್ಖರದ್ದು ಇನ್ನೊಂದು ಕತೆಯಾಗಿದೆಯಂತಲ್ಲಾ, ಮುಸ್ಲಿಮರನ್ನು ಬೇಕಾದರೆ ಟೀಕೆ ಮಾಡಿ ಆದರೆ ಪ್ರವಾದಿ ಮಹಮ್ಮದರನ್ನು ಟೀಕಿಸಿದರೆ ಸುಮ್ಮನಿರಲು ಸಾಧ್ಯವೇ ಇಲ್ಲ ಎಂದು ಸಾಬರ ಹೆಂಗಸರೇ ಗುಟುರು ಹಾಕಿದ್ದಾರಂತಲ್ಲಾ, "ಆಯ್ತು ಪ್ರವಾದಿಯವರು ಟೀಕಾತೀತರೆಂದೇ ಒಪ್ಪಿಕೊಳ್ಳೋಣ. ಅಕಸ್ಮಾತ್ ಯಾರೋ ಹಿಂದೂ ಸೈತಾನ ಬಾಯಿತಪ್ಪಿ ಒಂದು ಮಾತನಾಡಿದರೆ ಪ್ರವಾದಿಯವರು ಕ್ಷಮಿಸುತ್ತಾರಲ್ಲವೇ? ಏಕೆಂದರೆ ಮುಸ್ಲಿಮರೇ ಹೇಳುವಂತೆ ಪ್ರವಾದಿಯವರು ಕರುಣಾಮಯಿ. ದಯಾಮಯಿ. ಮೃದುಸ್ವಭಾವದವರು. ಅತ್ಯುನ್ನತ ಚಾರಿತ್ರ್ಯ ಹೊಂದಿದವರು. ಇಂತಹ ಮೇರು ಪುರುಷರ ಸಣ್ಣನಿಂದನೆಗೆ ಯಾರೋ ಹೊಟ್ಟೆಪಾಡಿಗಾಗಿ ಊರಿಂದ ಊರಿಗೆ ಬಂದ ಅಮಾಯಕರನ್ನು ಇರಿದು ಕೊಂದು ಬಿಡುವುದು, ತಮ್ಮಂತಹವೇ ಗರೀಬರ ಅಂಗಡಿ ಮುಂಗಟ್ಟುಗಳನ್ನ ಧ್ವಂಸ ಮಾಡಿಬಿಡುವುದು, ಪೈಗಂಬರರಿಗೆ ಪ್ರಿಯವಾದ ಕೆಲಸವೆ?" ಎಂದು ಮಂಗಳೂರು ಕಡೆಯ ಸನ್ಮಾರ್ಗಿ ಮುಸ್ಲಿಮರಿಗೆ ಕೇಳಿದರೆ, ಅವರು ಸೈಲೆಂಟಾಗಿ ನಮಾಜಿಗೆ ಕೂತರಂತಲ್ಲಾ, ಥೂತ್ತೇರಿ!

* * * * * * * * **

ಮುಸ್ಲಿಮರ ಇಂತಹ ಘನಕಾರ್ಯದ ಫಲವಾಗಿ ಮುಂದೆ ಚುನಾವಣೆ ನಡೆದರೆ ಮನೆ ಸೇರಲಿದ್ದ ಶಿವಮೊಗ್ಗದ ಈಶ್ವರಪ್ಪ ತನ್ನ ಸ್ಥಾನವನ್ನು ಮತ್ತೂ ಭದ್ರಪಡಿಸಿಕೊಂಡನಂತಲ್ಲಾ, ಹಠಾತ್ತನೆ ಮೇಲೆರಗಿದ ಸಾಬರಿಗೆ ತಮ್ಮ ಶಕ್ತಿ ತೋರಲೆಂದು ಭಜರಂಗಿ ಸಮಾವೇಶ ಮಾಡಿದ ಈಶ್ವರಪ್ಪನ ಹಿಂಬಾಲಕರಿಗೆ ಉತ್ತರ ಕೊಡಲು ಹೊರಟ ಮುಸ್ಲಿಮರು, ತಮ್ಮ ನಮಾಜಿನ ಗಳಿಗೆಯನ್ನು ಜಾಸ್ತಿ ಮಾಡಿಕೊಂಡಿದ್ದೂ ಅಲ್ಲವೆ, ಹೈಪವರ್ ಮೈಕ್ ಅಳವಡಿಸಿಕೊಂಡು ಮೈಲುಗಟ್ಟಲೆ ನಮಾಜು ಕೇಳುವಂತೆ ಮಾಡಿ, ಮತಾಂಧರಿಗೆ ಮತೀಯವಾಗಿಯೇ ಉತ್ತರ ಕೊಡುತ್ತಿದ್ದಾರಂತಲ್ಲಾ, ಅಂತೂ ಬರೀ ಲಾಠಿ ಹಿಡಿದಿದ್ದ ಚೆಡ್ಡಿಗಳ ಕೈಗೆ ಈಗ ಗೃಹ ಖಾತೆಯ ಬಂದೂಕು ಸಿಕ್ಕಿದೆ. ಅದರಂತೆ ಗೋಹತ್ಯೆ ಮಚ್ಚುಗಳು ಮುಸ್ಲಿಮರ ಕೈಲಿವೆಯಾದ್ದರಿಂದ ಮುಂದಿನದು ಸೈತಾನರ ಯುಗವಂತಲ್ಲಾ, ಥೂತ್ತೇರಿ!!

* * * * * * * * **

ಬಗೆಹರಿಯದ ಈ ಜಾತಿಜಗಳ ಅಂತಿರಲಿ, ಈ ಎಡೂರಪ್ಪನೆಂಬ ಮುಖ್ಯಮಂತ್ರಿಯನ್ನು ವಿರೋಧಿಗಳು ಯಾವುದೇ ಪ್ರಶ್ನೆ ಕೇಳಿದರೂ "ಅದಕ್ಕಾಗಿ ಸದನದಲ್ಲಿ ಸವಿಸ್ತಾರವಾಗಿ ಉತ್ತರ ಕೊಡುತ್ತೇನೆ" ಎನ್ನುತ್ತಿದ್ದವರು ಸದನದಲ್ಲೂ ಕೈಗೆ ಸಿಗುತ್ತಿಲ್ಲವಂತಲ್ಲಾ, ಇವರ ಇಂತಹ ನಡವಳಿಕೆಯನ್ನು ಅಂತಹ ಕುಮಾರಸ್ವಾಮಿಯೇ ಒಪ್ಪುತ್ತಿಲ್ಲವಂತಲ್ಲಾ, ಸ್ವತಃ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ, ಒಂದು ವಾಕ್ಯವನ್ನೂ ಪೂರ್ಣ ಮಾಡಲು ಗೊತ್ತಾಗದೆ, ಸದನದ ಕಲಾಪದಲ್ಲಿ ಮುಖ್ಯಮಂತ್ರಿ ಕೊಡಬಹುದಾದ ಉತ್ತರಕ್ಕೆ ಎಂ.ಪಿ. ಪ್ರಕಾಶರನ್ನು ನೇಮಿಸಿಕೊಂಡಿದ್ದನ್ನು ಇಷ್ಟು ಬೇಗ ಮರೆತಿದ್ದೂ ಅಲ್ಲದೆ, ಅಪ್ಪನ ಬಲವಂತಕ್ಕೆ ರಾಜಕಾರಣವನ್ನು ಮುಂದುವರಿಸಿದ್ದಾರಂತಲ್ಲಾ, ಏಕೆಂದರೆ ಕುಮಾರಣ್ಣನನ್ನು ತಪಾಸಣೆ ಮಾಡಿದ ವೈದ್ಯರು "ದೇವೇಗೌಡರಷ್ಟು ಶ್ರಮವನ್ನು ನಿಮ್ಮ ದೇಹದ ಮೇಲೆ ಹಾಕಬೇಡಿ. ನೀವಿನ್ನೂ ಮಡದಿಯರು, ಮಕ್ಕಳೊಂದಿಗೆ ಬಾಳಬೇಕಾದವರು" ಎಂಬ ಸಲಹೆಯನ್ನು ಕೊಡಲಿಲ್ಲವಂತಲ್ಲಾ, ಥೂತ್ತೇರಿ!!

* * * * * * * * **

ನರ್ಸ್ ಜಯಲಕ್ಷ್ಮಿಯಿಂದ ಹೋದ ಮಾನವನ್ನು ಅಬಕಾರಿ ಇಲಾಖೆಯ ನಿಭಾವಣೆಯಿಂದ ತುಂಬಿಕೊಳ್ಳಲು ಹೆಣಗುತ್ತಿರುವ ರೇಣುಕಾಚಾರಿ ಎಂಬ ಆಸಾಮಿ, ಎಲ್ಲೆಲ್ಲಿ ಕಳ್ಳಬಟ್ಟಿ ಇಳಿಸುತ್ತಿದ್ದಾರೂ ಅಲ್ಲಿಗೆಲ್ಲಾ ಬಾಣಬಿಟ್ಟಂತೆ ದಾಳಿ ಮಾಡುತ್ತಿದ್ದಾನಂತಲ್ಲಾ, ಇದರಿಂದ ದಿಗ್ಭ್ರಮೆಗೊಂಡ ಅಬಕಾರಿ ಪೊಲೀಸರು "ಸಾರ್, ಈ ಕಳ್ಳಭಟ್ಟಿ ತಾಣಗಳು ನಿಮಗೆ ಹೇಗೆ ಗೊತ್ತು?" ಎನ್ನಲಾಗಿ, "ಮೊದಲು ನಾನಿಲ್ಲಿಗೆಲ್ಲಾ ಬರ್ತಿದ್ದೆ ಕಂಡ್ರೀ. ಕಳ್ಳಭಟ್ಟಿ ಇಳಿಸೊ ಜಾಗದಲ್ಲಿ ಜಯಲಕ್ಷ್ಮಿ ಮೀರಿಸೊ ಅಂತ ಹುಡುಗೀರು ಇರ್ತರೆ. ಅದರಲ್ಲೂ ಲಂಬಾಣಿ ತಾಂಡದಲ್ಲಿ ಸಿನಿಮಾ ನಟಿಯರ ತರ ಇರೋ ಹುಡುಗೀರು ಇರತರೆ. ನಾವು ಚುನಾವಣೆಗೆ ನಿಂತಾಗ ಜನಕ್ಕೆ ಒಳ್ಳೆ ಡ್ರಿಂಕ್ಸ್ ಸಪ್ಲೈ ಮಾಡಕ್ಕಾಗಲ್ಲ, ಏನಿದ್ರು ಕಳ್ಳಭಟ್ಟೀನೇ ಸರಿ. ಅದ್ಕೆ ನನಗೆ ಈ ಕಳ್ಳಭಟ್ಟಿ ಜಾಗದ ಕಳ್ಳದಾರಿಗಳು, ನರ್ಸ್ ಜಯಲಕ್ಷ್ಮಿ ಮನೆ ದಾರಿಯಷ್ಟೇ ಚೆನ್ನಾಗಿ ಗೊತ್ತು" ಎಂದು ಮೂಗರಳಿಸಿದನಂತಲ್ಲಾ, ಥೂತ್ತೇರಿ!!

ಟಪಾಲ್ ಗಣೇಶ್ ಕೊಲೆ ಯತ್ನ

ಸುಪ್ರೀಂ ಕೋರ್ಟ್ ಉರುಳು

3000 ಕೋಟಿ ರೂ. ಅದಿರು ಲೂಟಿ

ರೌಡಿ ರಿಪಬ್ಲಿಕ್



● ಪಾರ್ವತೀಶ

ಬಳ್ಳಾರಿ ರೆಡ್ಡಿಗಳು ಮತ್ತೆ ತಮ್ಮ ತಿಮಿರು ತೋರಿಸಿದ್ದಾರೆ. ಇವರ ಅಕ್ರಮ ಗಣಿಗಾರಿಕೆ ಹಾಗೂ ಕರ್ನಾಟಕ-ಆಂಧ್ರ ಗಡಿ ಒತ್ತುವರಿ ಬಗ್ಗೆ ದೂರು ನೀಡಿ ತನಿಖೆಯಾಗುವಂತೆ ನೋಡಿಕೊಂಡ ಟಪಾಲ್ ಗಣೇಶ್ ಹತ್ಯೆಗೆ ಯತ್ನಿಸಿದ್ದಾರೆ. ಈ ಹತ್ಯಾಯತ್ನ ನಡೆದ ಸಂದರ್ಭವಾದರೂ ಎಂತಹುದಿತ್ತು ನೋಡಿ.

ಸುಪ್ರೀಮ್ ಕೋರ್ಟ್ ಆದೇಶದ ಮೇರೆಗೆ ಗಡಿ ಒತ್ತುವರಿ ಹಾಗೂ ಅಕ್ರಮ ಗಣಿಗಾರಿಕೆ ಬಗ್ಗೆ ಸ್ಥಳ ತನಿಖೆ ನಡೆಸಲು ಬಂದಿದ್ದ ಉನ್ನತ ಅಧಿಕಾರಿಗಳ ವಿಶೇಷ ಟೀಮ್ (CES - Central Empowered Committee) ಬಳ್ಳಾರಿಯಲ್ಲೇ ಇದೆ. ಯು.ಎನ್.ಮಿಶ್ರಾ ಹಾಗೂ ಪಾಡ ಎಂಬ ಆಫೀಸರ್‌ಗಳು ಕರ್ನಾಟಕ - ಆಂಧ್ರದ ರೆವಿನ್ಯೂ, ಅರಣ್ಯ ಹಾಗೂ ಗಣಿ ಇಲಾಖೆಯ ಅಧಿಕಾರಿಗಳ ಸಭೆ ನಡೆಸುತ್ತಿದ್ದಾರೆ. ಕೇವಲ ಸುಪ್ರೀಂ ಕೋರ್ಟ್ ಮಾತ್ರವಲ್ಲ, ಇಡೀ ದೇಶದ ಪ್ರಮುಖ ಮೀಡಿಯಾಗಳ ಗಮನ ಬಳ್ಳಾರಿಯತ್ತ ಇದೆ. ಅಷ್ಟರಲ್ಲಾಗಲೇ ರೆಡ್ಡಿ ಸಹೋದರರ ಗಾಂಚಾಲಿ, ಹುಂಡಾಟಿಕೆ, ಅಕ್ರಮ ದಂಧೆ, ಬ್ಲಾಕ್‌ಮೇಲ್ ರಾಜಕೀಯವನ್ನು ಜನ ನೋಡಿಯೂ ಇದ್ದಾರೆ.


ಇಷ್ಟೆಲ್ಲಾ ಆದಮೇಲೂ ಈ ರೆಡ್ಡಿ ಗ್ಯಾಂಗ್ ಯಾವುದನ್ನೂ, ಯಾರನ್ನೂ ಕೇರ್ ಮಾಡದೇ ಬಳ್ಳಾರಿ ಟೌನ್‌ನಲ್ಲಿ ಹಾಡುಹಗಲಲ್ಲೇ, ಅದೂ ಪತ್ರಕರ್ತರು ಇರುವಾಗಲೇ ಟಪಾಲ್ ಗಣೇಶ್ ಕೊಲೆಗೆ ಯತ್ನಿಸಿದೆ.

ಇದು ಗೂಂಡಾಗಿರಿಗೆ ಮೀರಿದ್ದು. ಗಣಿ ರೆಡ್ಡಿಗಳ ಈ ಥರದ ಭಯಾನಕ ಅಟ್ಟಹಾಸ ನೋಡಿಯೇ ಇರಬೇಕು ನ್ಯಾಶನಲ್ ಮೀಡಿಯಾಗಳೆಲ್ಲಾ ಒಂದೇ ಸಾರಿಗೆ ರೆಡ್ಡಿಗಳ ವಿರುದ್ಧ ದಾಳಿಯಿಡುತ್ತಿವೆ. ತೆಹಲ್ಕಾ, ಇಂಡಿಯನ್ ಎಕ್ಸ್‌ಪ್ರೆಸ್, ದಿ ವೀಕ್, ಔಟ್‌ಲುಕ್ ತರಹದ ಪ್ರಖ್ಯಾತ ಪತ್ರಿಕೆಗಳು ಇವರಿಗೆ ಹೊಸ ನಾಮಕರಣವನ್ನೇ ಮಾಡಿಬಿಟ್ಟಿವೆ.

'ರೆಡ್ಡಿ ರಿಪಬ್ಲಿಕ್' ಎಂದು!

ಭಾರತದೊಳಗಿದ್ದರೂ ಕರ್ನಾಟಕ - ಆಂಧ್ರಕ್ಕೆ ಸೇರಿದ್ದಾಗಲೂ ಈ ರೆಡ್ಡಿಗಳು ತಾವೇ ಒಂದು ಸ್ವತಂತ್ರ ದೇಶದಂತೆ ವ್ಯವಹರಿಸುತ್ತಿದ್ದಾರೆ ಎಂದು ಇದರರ್ಥ. ಇವರ ಗಣಿ ದಂಧೆ, ಡೀಲ್‌ಗಳು, ಕೋರ್ಟು-ಕಾಯ್ದೆ-ಕಾನೂನಿನ ಬಗ್ಗೆ ತೋರುವ ತಾತ್ಸಾರಗಳನ್ನೆಲ್ಲಾ ಗಮನಿಸಿದರೆ ನಿಜ ಆ ಪ್ರದೇಶವೆಲ್ಲಾ ರೆಡ್ಡಿ ರಿಪಬ್ಲಿಕ್ ಹೌದು ಅನ್ನಿಸಿಬಿಡುತ್ತದೆ. ಇಲ್ಲಿ ರಾಜ್ಯದ ಮುಖ್ಯಮಂತ್ರಿಗೆ ಕಿಲುಬು ಕಾಸಿನಷ್ಟೂ ಬೆಲೆಯಿಲ್ಲ, ಜಿಲ್ಲಾಧಿಕಾರಿ ಶಿವಪ್ಪ ಚಪ್ರಾಸಿಗೆ ಸಮ. ಜಿಲ್ಲಾ ಪೊಲೀಸ್ ವರಿಷ್ಠ ಸೀಮಂತ್ ಕುಮಾರ್ ಸಿಂಗ್ ಜುಜುಬಿ ಪೊಲೀಸ್ ಪ್ಯಾದೆ ಮಾತ್ರ.

ಇದರರ್ಥ ಇವರೆಲ್ಲಾ ರೆಡ್ಡಿಗಳ ದಬ್ಬಾಳಿಕೆಯ ಬಲಿಪಶುಗಳೆಂದೇನಲ್ಲ, ಬದಲಾಗಿ ಲಂಚದ ಹಣ ತಿಂದು ಗುಲಾಮಗಿರಿ ಮಾಡುತ್ತಿರುವ ಕ್ರಿಮಿಗಳು ಮಾತ್ರ. ಇವರೊಂದಿಗೆ ಜಿಲ್ಲಾ ಅರಣ್ಯಾಧಿಕಾರಿ ಎಸ್. ಮುತ್ತಯ್ಯ ಜಿಲ್ಲಾ ಗಣಿ ಅಧಿಕಾರಿ ಎಸ್.ಪಿ. ರಾಜು ಎಂಬ ಎಂಜಲು ಗಿರಾಕಿಗಳೂ ಸೇರಿದ್ದಾರೆ.



ಟಪಾಲ್ ಗಣೇಶ್

ಹೀಗೆ, ಇಡೀ ಸರ್ಕಾರ, ಪೊಲೀಸು, ಉನ್ನತ ಅಧಿಕಾರಿಗಳೆಲ್ಲಾ ರೆಡ್ಡಿಗಳ ಕಾಲಬುಡದಲ್ಲಿ ಭಿಕ್ಷುಕರಂತೆ ಇದ್ದರೆ ಬಳ್ಳಾರಿಯಲ್ಲಿ ಹಾಡುಹಗಲೇ ಕೊಲೆ, ಕೊಲೆಬೆದರಿಕೆ, ಹಲ್ಲೆ ನಡೆಯದೇ ಏನು?

ಟಪಾಲ್ ಗಣೇಶ್ ಪ್ರತಿರೋಧ

ಈ ರೆಡ್ಡಿಗಳ ಬಕಾಸುರ ಸಂಸ್ಥೆ ಓಬಳಾಪುರಂ ಮೈನಿಂಗ್ ಕಂಪೆನಿ(ಓಎಂಸಿ)ಗೆ ಕರ್ನಾಟಕದೊಳಗೆ ಗಣಿಗಾರಿಕೆ ನಡೆಸಲು ಒಂದೂ ಲೀಸ್ ಇಲ್ಲ, ಅವರಿಗೆ ಸಿಕ್ಕಿರುವ ಲೀಸ್ ಆಂಧ್ರದ್ದು ಮಾತ್ರ. ಆದರೆ, ಅಂತರಗಂಗಕೊಂಡ ಮುಂತಾದೆಡೆ ರೆಡ್ಡಿಗಳಿಗೆ ಮಂಜೂರಾಗಿರುವ ಜಾಗದಲ್ಲಿ 36 ಗ್ರೇಡಿಗಿಂತ ಜಾಸ್ತಿ ಗುಣಮಟ್ಟದ ಅದಿರು ಸಿಗುತ್ತಿಲ್ಲ. ಇತ್ತ ಕರ್ನಾಟಕದಲ್ಲಿ ಹೊಸ ಲೀಸ್ ಪಡೆಯಬೇಕೆಂದರೆ ಮುಂದಿನ ಎಂಟರಿಂದ ಹತ್ತು ವರ್ಷ ಕಾಲ ಅವಕಾಶವೂ ಸಿಗುವಂತಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಖಾಲಿ ಕೂರಲಾಗದೇ ಈ ರೆಡ್ಡಿಗಳು ಕರ್ನಾಟಕ ಆಂಧ್ರ ನಡುವಿನ ಗಡಿ ಕಲ್ಲುಗಳನ್ನೇ ಕಿತ್ತು ಆಂಧ್ರ ಕಡೆಯಿಂದ ಕರ್ನಾಟಕದೊಳಗೆ ಮೈಲುಗಟ್ಟಲೇ ಒತ್ತುವರಿ ಮಾಡಿ ಅಕ್ರಮ ಮೈನಿಂಗ್ ಮಾಡಲು ಶುರುಮಾಡಿಬಿಟ್ಟರು. ಆದರೆ, ಅದೇ ಸ್ಥಳದಲ್ಲಿ ಈ ಟಪಾಲ್ ಗಣೇಶ್‌ಗೆ ಸೇರಿದ್ದ ತುಮಟಿ ಕಂಪೆನಿಗೆ ಲೀಸ್ ಇತ್ತು. ರೆಡ್ಡಿಗಳು ತೋಳ್ಬಲ ತೋರಿದ್ದು ಇಲ್ಲೇ. ಗಣೇಶರ ಮೈನಿಂಗ್ ಏರಿಯವನ್ನೆಲ್ಲಾ ನುಂಗುತ್ತಾ ನುಗ್ಗಿ ಬಂದ ರೆಡ್ಡಿಗಳ ವಿರುದ್ಧ ಗಣೇಶ್ ತಿರುಗಿಬಿದ್ದರು. ಅವರ ಆಮಿಷ, ಬೆದರಿಕೆ, ಕೊಲೆಯತ್ನ ಯಾವುದಕ್ಕೂ ಜಗ್ಗದೆ ಪ್ರತಿರೋಧ ತೋರಿದರು. ಅದರ ಮುಂದುವರೆದ ಭಾಗವೇ ಈಗಿನ ಸಿಇಸಿ ಟೀಮ್‌ನ ಸ್ಥಳ ತನಿಖೆ.



ಭ್ರಷ್ಟ ಡಿಸಿ ಶಿವಪ್ಪ



ಭ್ರಷ್ಟ ಎಸ್ಪಿ ಸೀಮಂತ್

ರೆಡ್ಡಿಗಳ ಅಕ್ರಮ ಗಣಿಗಾರಿಕೆಯ ವಿರುದ್ಧ ಈಗ ಮೂರು ರೀತಿಯ ತನಿಖೆ ನಡೆಯುತ್ತಿವೆ. ಒಂದು, ಕರ್ನಾಟಕ ಲೋಕಾಯುಕ್ತರು ನಡೆಸುತ್ತಿರುವ ಒಟ್ಟಾರೆ ಗಣಿ ಲೀಸ್ ಮತ್ತು ಅಕ್ರಮ ಗಣಿದಂಧೆ ಕುರಿತ ತನಿಖೆ. ಲೋಕಾಯುಕ್ತರು ಯು.ವಿ.ಸಿಂಗ್ ಎಂಬ ಅತ್ಯಂತ ಧೈರ್ಯಶಾಲಿ ಮತ್ತು ಪ್ರಾಮಾಣಿಕ ಅಧಿಕಾರಿಯನ್ನು ಈ ಕಾರ್ಯಕ್ಕೆಂದು ಕರೆಸಿಕೊಂಡಿದ್ದರು. ಆದರೆ, ಯಡಿಯೂರಪ್ಪ ಇದಕ್ಕೆ ಅಡ್ಡಗಾಲು ಹಾಕಿದ. ಇಲಾಖಾ ಕಾರ್ಯದರ್ಶಿ ವೇದಾಂತ ಮೂಲಕ ಯು.ವಿ.ಸಿಂಗರನ್ನು ಲೋಕಾಯುಕ್ತರ ಕೈಗೆ ಸಿಗದಂತೆ ಬೇರೆಕಡೆ ವರ್ಗಾಯಿಸಿ ತನಿಖೆಗೆ ತಡೆಯೊಡ್ಡಲಾಯಿತು. ಈ ಬಗ್ಗೆ ಲೋಕಾಯುಕ್ತರು ಪ್ರತಿಭಟಿಸಿದ್ದೂ ಆಯಿತು.




ಅರೆಸ್ಟಾದ ವಿಷ್ಣುರೆಡ್ಡಿ

ಮತ್ತೊಂದೆಡೆ ಆಂಧ್ರ ಸರ್ಕಾರ ರೆಡ್ಡಿಗಳ ಸೊಕ್ಕು ಮುರಿಯಲು ಸಿಬಿಐ ತನಿಖೆಗೆ ನಿರ್ದೇಶನ ನೀಡಿದೆ. ಈ ನಡುವೆ ರೆಡ್ಡಿಗಳು ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟಿಗೆ ಹೋದರು. ಅಲ್ಲೇ ಈ ರಾಕ್ಷಸರ ಕಪಾಳಕ್ಕೆ ಏಟು ಬಿತ್ತು.

ಸುಪ್ರೀಂ ಕೋರ್ಟ್ ಗಣಿ ಅಕ್ರಮ ಕುರಿತಂತೆ ತನಿಖೆ ನಡೆಸಲು ಒಂದು ವಿಶೇಷ ಅಧಿಕಾರವಿರುವ ಸಮಿತಿಯನ್ನೇ ನೇಮಿಸಿತು. ಅದೇ ಸೆಂಟ್ರಲ್ ಎಂಪಾವರ್ಡ್ ಕಮಿಟಿ ಈಗ ಬಳ್ಳಾರಿಗೆ ಬಂದಿಳಿದಿದೆ. ಮೊನ್ನೆ ಹತ್ಯಾಯತ್ನ ನಡೆದ ದಿನ ಟಪಾಲ್ ಗಣೇಶ್ ಈ ಸಿಇಸಿ ಟೀಮ್ ಜೊತೆ ಗಡಿಭಾಗಕ್ಕೆ ಹೋಗುವುದಿತ್ತು. ಓಬಳಾಪುರಂ ಕಂಪೆನಿಯು ಕರ್ನಾಟಕ-ಆಂಧ್ರ ಗಡಿಯನ್ನು ಹೇಗೆ ಅಳಿಸಿಹಾಕಿದೆ ಎಂಬುದನ್ನು ಗಣೇಶ್ ಈ ಟೀಮ್‌ಗೆ ತೋರಿಸುವವರಿದ್ದರು. ರೆಡ್ಡಿಗಳಿಗೆ ಇದನ್ನು ತಡೆಯಲೇಬೇಕಿತ್ತು. ಈ ಸರ್ವೇಯನ್ನೇ ಸಮಾಪ್ತಿ ಮಾಡಿಬಿಡುವಂತೆ ದಾಳಿಯ ಪ್ಲಾನ್ ನಡೆದಿದೆ. ಹೀಗೆ ಹಾಡುಹಗಲೇ ಕೊಲೆ ಪ್ರಯತ್ನ ಮಾಡಲು ರೆಡ್ಡಿ ಗ್ಯಾಂಗ್‌ಗೆ ಇನ್ನೊಂದು ಅನಿವಾರ್ಯ ಕಾರಣವೂ ಇತ್ತು.

ದಾಳಿ ನಡೆದ ಮಾರ್ಚ್ ಇಪ್ಪತ್ತೊಂಭತ್ತರ ಹಿಂದಿನ ದಿನ ಭಾನುವಾರ ರಾತ್ರಿಯೇ ಗಣೇಶರನ್ನು ಕಿಡ್ನಾಪ್ ಮಾಡುವ ಪ್ರಯತ್ನ ನಡೆದಿತ್ತು. ಅವತ್ತು ರಾತ್ರಿ ಕೆಲವು ಪೊಲೀಸರು ಹಾಗೂ ರೆಡ್ಡಿಯ ರೌಡಿಗಳು ಗಣೇಶ್ ಮನೆಗೆ ನುಗ್ಗಿದ್ದರು. ಎಂದಿನಂತೆ ಪೊಲೀಸರ ಹತ್ತಿರ ಯಾವ ಸರ್ಚ್ ವಾರೆಂಟೂ ಇರಲಿಲ್ಲ. ಆದರೆ, ಗಣೇಶ್ ಹುಷಾರಿ ಮನುಷ್ಯ, ರೆಡ್ಡಿಗಳ ಕ್ರಿಮಿನಲ್ ಬುದ್ಧಿ ಅವರಿಗೆ ಗೊತ್ತಿತ್ತಾದ್ದರಿಂದ ಆ ದಿನ ರಾತ್ರಿ ಮನೆಗೆ

ಆಂಜನೇಯ-ಗಿರಿಜಾ ದಂಪತಿ ಹತ್ಯೆಯ ಸಾಧ್ಯತೆ ಇದೆ!



ಆಂಜನೇಯ

ಯಡ್ಡಿ-ರೆಡ್ಡಿ ಗ್ಯಾಂಗ್‌ನ ಕ್ರಿಮಿನಲ್ ಕೆಲಸಗಳ ಲೇಟೆಸ್ಟ್ ಉದಾಹರಣೆ ಇದು.

ಕೋಲಾರದ ಕಡೆಯವರಾದ ಆಂಜನೇಯ ಅವರು ರೆಡ್ಡಿಗಳ ಓಬಳಾಪುರಂ ಮೈನಿಂಗ್ ಕಂಪೆನಿಯಲ್ಲಿ ಡೆಪ್ಯೂಟಿ ಜನರಲ್ ಮ್ಯಾನೇಜರ್ ಆಗಿ ನಾಲ್ಕು ವರ್ಷ ಕೆಲಸ ಮಾಡಿ ಈಗ ಕೊಲೆ ಯತ್ನದಿಂದ ಪಾರಾಗಿ ಬಂದಿದ್ದಾರೆ. ಕಳೆದ 2009ರ ಡಿಸೆಂಬರ್‌ನಲ್ಲಿ ಆಂಜನೇಯರ ಪತ್ನಿ ಗಿರಿಜಾರವರನ್ನೂ ಅಪಹರಿಸಿ ಕಂಪೆನಿಯ ಮುಖ್ಯಸ್ಥ ಶ್ರೀನಿವಾಸ ರೆಡ್ಡಿಯ ಬಳ್ಳಾರಿಯ ಮನೆಯಲ್ಲಿ ಒತ್ತೆ ಇರಿಸಿಕೊಳ್ಳಲಾಗಿತ್ತು.

ಈ ಕ್ರಿಮಿನಲ್ ಘಟನೆಗಳ ವಿವರ ಹೀಗಿದೆ.

ಆಂಜನೇಯರನ್ನು ರೆಡ್ಡಿಗಳ ತಮ್ಮ ಕಂಪೆನಿಯ ಅಂತರಗಂಗಮ್ಮಕೊಂಡ (AGK) ಗಣಿ ಪ್ರದೇಶದ ಒಟ್ಟಾರೆ ಉಸ್ತುವಾರಿಗೆಂದು ನೇಮಿಸಿಕೊಂಡಿದ್ದರು. ಈ ಪ್ರದೇಶದಲ್ಲಿ ಎಲ್ಲಿಯೂ 36 ಗ್ರೇಡ್‌ಗಿಂತ ಹೆಚ್ಚಿನ ಗುಣಮಟ್ಟದ ಕಬ್ಬಿಣದ ಅದಿರು ಸಿಗುತ್ತಿರಲಿಲ್ಲ. ಆದರೂ ಸಹ (AGK) ಗಣಿ ಪ್ರದೇಶಕ್ಕೆ ಹೊಂದಿಕೊಂಡಂತಿದ್ದ ಕರ್ನಾಟಕ ಗಡಿಗೆ ನುಗ್ಗಿದ ರೆಡ್ಡಿಗಳು ಕಳ್ಳತನದಿಂದ 63 ಗ್ರೇಡಿನ ಅದಿರು ದೋಚಿ ಆಂಧ್ರ ಪರ್ಮಿಟ್ ಬಳಸಿ AGK ಹೆಸರಲ್ಲಿ ರಫ್ತು ಮಾಡುತ್ತಿದ್ದರು. ಇದೆಲ್ಲಾ ಆಮೇಲೆ ಬಹಿರಂಗವಾಗಿ ಕೊನೆಗೆ ಸಿಬಿಐ ತನಿಖೆ ಆಗುವ ಸಂದರ್ಭ ಬಂದಾಗ ರೆಡ್ಡಿಗಳು ಹುಷಾರಾದರು. ಒಂದು ದಿನ ರಾತ್ರಿ (ಡಿಸೆಂಬರ್ 8, 2009) ಎಂಟತ್ತು ಗೂಂಡಾಗಳು ಅಂತರಗಂಗಮ್ಮ ಕೊಂಡ ಗುಡ್ಡದ ಕೆಳಭಾಗದಲ್ಲಿದ್ದ ಆಂಜನೇಯರ ಆಫೀಸಿಗೆ ನುಗ್ಗಿ ಅಲ್ಲಿದ್ದ ಲೋಡುಗಟ್ಟಲೆ ದಾಖಲೆಗಳನ್ನು ಹೊತ್ತೊಯ್ದು ಬಿಟ್ಟರು. ಮರುಕ್ಷಣದಲ್ಲೇ ಬುಲ್‌ಡೋಜರ್ ಒಂದು ಬಂದು ಆಂಜನೇಯರ ಇಡೀ ಆಫೀಸನ್ನೇ ನೆಲಸಮ ಮಾಡಿ ಹೋಯಿತು. ಹೀಗೆ ಒಂದೆರಡು ಗಂಟೆಗಳಲ್ಲೇ ಅಲ್ಲೊಂದು ಆಫೀಸ್ ಇತ್ತು, ರೆಕಾರ್ಡ್ಸ್‌ಗಳಿದ್ದವೆಂಬುದರ ಕುರುಹೂ ಇರದಂತೆ ಎಲ್ಲವನ್ನೂ ಧ್ವಂಸ ಮಾಡಿ ಶುಚಿಗೊಳಿಸಿಬಿಡಲಾಯಿತು. ರೆಕಾರ್ಡ್ಸ್‌ಗಳನ್ನು ಹೊತ್ತೊಯ್ದು ಗೂಂಡಾಗಳು ಹತ್ತಿರದಲ್ಲೇ ಇದ್ದ ರುಕ್ಮಿಣಿಯಮ್ಮ-ಚೆಂಗಾ ರೆಡ್ಡಿ ವೃದ್ಧಾಶ್ರಮದ (ರೆಡ್ಡಿಯ ಅಪ್ಪ-ಅಮ್ಮ)ಹಿಂಭಾಗಕ್ಕೆ ಹೋಗಿ ಪೆಟ್ರೋಲ್ ಸುರಿದು. ಎಲ್ಲವನ್ನೂ ಸುಟ್ಟುಹಾಕಿದರು.

ಸಿಬಿಐನವರು ಬಂದಾಗ ತಮ್ಮ ಅಕ್ರಮಗಳೆಲ್ಲಾ ಗೊತ್ತಾಗಬಾರದೆಂದು ರೆಡ್ಡಿಗಳು ಈ ಕೆಲಸ ಮಾಡಿದ್ದರು. ಮಾರನೇ ದಿನ ಆಂಜನೇಯ ಆಫೀಸಿಗೆ ಹೋದಾಗ ಅಲ್ಲಿ ಏನೂ ಇರಲಿಲ್ಲ. ಅವರು ಬಳ್ಳಾರಿಗೆ ವಾಪಸ್ ಬಂದು ಓಬಳಾಪುರಂ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀನಿವಾಸರೆಡ್ಡಿಯನ್ನು ಕೇಳಿದಾಗ, ಅವನು ಹಾರಿಕೆಯ ಉತ್ತರ ಕೊಟ್ಟ. ಇದರಿಂದ ಗಾಬರಿಯಾದ ಆಂಜನೇಯ ನಾಳೆ ಸಿಬಿಐನವರು ಬಂದು ಕೇಳಿದರೆ ತನಗೇ ತೊಂದರೆಯಾಗಬಹುದು ಎಂದಿದ್ದಾರೆ.



ಗಿರಿಜಾ


'ಅದೆಲ್ಲಾ ಲಕ್ಷ್ಮಿಪ್ರಸಾದ್ ನೋಡಿಕೊಳ್ತಾನೆ' ಎಂದಿದ್ದಾನೆ. ಶ್ರೀನಿವಾಸ್ ರೆಡ್ಡಿ. ಓಎಂಸಿಯ ಇನ್ನೊಬ್ಬ ಮ್ಯಾನೇಜರ್ ಲಕ್ಷ್ಮಿಪ್ರಸಾದ್ ಈ ರೆಡ್ಡಿಗಳ ಇನ್‌ಫಾರ್ಮರ್. ಇದಾದ ಮೇಲೆ ಆಂಜನೇಯ 'ತಾನು ಸಿಬಿಐಗೆ ಎಲ್ಲಾ ನೇರವಾಗಿ ಹೇಳಿಬಿಡುತ್ತೇನೆ' ಎಂದಿದ್ದನ್ನು ಚಾಚೂತಪ್ಪದೆ ಎಂ.ಡಿ.ಶ್ರೀನಿವಾಸ ರೆಡ್ಡಿಗೆ ಮುಟ್ಟಿಸಿದ್ದಾನೆ. ಈ ಹಂತದಲ್ಲಿ ರೆಡ್ಡಿಗಳಿಗೆ ಅನುಮಾನ ಬಂದಿದೆ. ಈ ಆಂಜನೇಯ ಕಂಪೆನಿಯ ಅಕ್ರಮ ಗಣಿಗಾರಿಕೆಯ ದಾಖಲೆಗಳ ಜೆರಾಕ್ಸ್ ಇಟ್ಟುಕೊಂಡಿದ್ದು ಸಿಬಿಐಗೆ ಕೊಟ್ಟರೆ ಗತಿ ಏನೆಂದು ಗಾಬರಿಯಾಗಿದ್ದಾರೆ.

ಹಾಗಾಗಿ ಆಂಜನೇಯ ಅವರ ಮನೆಗೆ ದಾಳಿ ಮಾಡುವ ಪ್ಲಾನ್ ಮಾಡಿದ್ದಾರೆ.

ಡಿಸೆಂಬರ್19ರ ರಾತ್ರಿ ಆಂಜನೇಯ ಅವರಿಗೆ ಫೋನ್ ಮಾಡಿ 'ಮೀಟಿಂಗ್ ಇದೆ. ಆಫೀಸಿಗೆ ಬಾ' ಎಂದು ಕರೆಸಿಕೊಂಡಿದ್ದಾರೆ. ಆಂಜನೇಯ ಮನೆ ಬಿಟ್ಟು ಆಫೀಸಿಗೆ ಬಂದತಕ್ಷಣ ಬಳ್ಳಾರಿಯ ನಾಗಪ್ಪ ಕಾಲನಿಯಲ್ಲಿದ್ದ ಅವರ ಮನೆಗೆ ಪೊಲೀಸರು ಹಾಗೂ ಗೂಂಡಾಗಳು ಜೊತೆಯಾಗೇ ನುಗ್ಗಿದ್ದಾರೆ. ಮುಖ್ಯವಾಗಿ ಸಬ್‌ಇನ್ಸ್‌ಪೆಕ್ಟರುಗಳಾದ ಎಸ್.ಎಸ್.ಹುಲ್ಲೂರ ಹಾಗೂ ಷಣ್ಮುಗಪ್ಪ ಯಾವುದೇ ಸರ್ಚ್ ವಾರೆಂಟ್ ಇಲ್ಲದಿದ್ದಾಗಲೂ ಆಂಜನೇಯರ ಮನೆಗೆ ನುಗ್ಗಿದ್ದಾರೆ. ಇವರ ಪೈಕಿ ಹುಲ್ಲೂರನ ಠಾಣಾ ವ್ಯಾಪ್ತಿಗೆ ಆಂಜನೇಯ ಮನೆ ಬರುತ್ತಲೇ ಇರಲಿಲ್ಲ.

ಈ ಪೊಲೀಸ್ ರೌಡಿ ಗ್ಯಾಂಗ್ ಇಡೀ ಮನೆ ಜಾಲಾಡಿ, ಕೈಗೆ ಸಿಕ್ಕ ವಸ್ತುಗಳನ್ನೆಲ್ಲಾ ಮುರಿದೆಸೆದು ದಾಖಲೆಗಳಿಗಾಗಿ ಹುಡುಕಾಡಿದ್ದಾರೆ. ಕೊನೆಗೆ ಏನೂ ಸಿಗದೆ ಹೋದಾಗ ಇನ್ನೊಂದು ಪಾತಕ ಕೃತ್ಯ ಎಸಗಿದ್ದಾರೆ.


...ವಾಕರ ಬಾಬು: ...ಳ್ಳಾರಿಗೊಬ್ಬನೇ ...ಹದ್ದೂರ್ ಗಂಡು!



...ರಿ ರೆಡ್ಡಿಗಳ ಅಟ್ಟಹಾಸ, ಗೂಂಡಾಗಿರಿಗೆ ಬಳ್ಳಾರಿಯ ಸಾಮಾನ್ಯ ಜನ ನಲುಗಿಹೋಗಿದ್ದಾರೆ. ಇಲ್ಲಿ ... ಪೊಲೀಸು, ರೌಡಿಗಳೆಲ್ಲಾ ಸಂಪೂರ್ಣವಾಗಿ ರೆಡ್ಡಿಗಳ ಆಜ್ಞಾಪಾಲಕರಾಗಿ ಹೋಗಿದ್ದಾರೆ. ಹೇಳಿದ ...ಕೇಳದಿದ್ದರೆ ಬೆದರಿಕೆ, ನಂತರ ಹಲ್ಲೆ ಕೊನೆಗೆ ಹತ್ಯೆಯೂ ಆಗಿಬಿಡಬಹುದಾದ ಭಯಾನಕ ವಾತಾವರಣ ...ಪರಿಸ್ಥಿತಿ ಇಷ್ಟು ಕೆಟ್ಟಿದ್ದರೂ ಬಳ್ಳಾರಿಯಲ್ಲಿ ರೆಡ್ಡಿಗಳಿಗೆ ಹೆದರದೆ ನಿಂತಿರುವ ವ್ಯಕ್ತಿ ಎಂದರೆ ಅದು ... ಬಾಬು ಮಾತ್ರ!

...ಮೂಲಿ ಲೂನಾ ಹತ್ತಿ ಓಡಾಡುತ್ತಾ, ಯಾವುದೋ ಗೂಡಂಗಡಿ ಬಳಿ ನಿಂತು ಸಿಗರೇಟ್ ಸೇದುತ್ತಾ ...ದಿಗೆ ಹರಟೆ ಹೋಗುವ ದಿವಾಕರ ಬಾಬು ಸೆಕೆಂಡ್ ಶೋ ಸಿನಿಮಾಗೂ ಒಬ್ಬರೇ ಹೋಗಿಬರುತ್ತಾರೆ. ...ರೆಡ್ಡಿಗಳ ವಿರೋಧಿ ಕ್ಯಾಂಪಿನ ಲೀಡರ್ ಆಗಿರುವ ದಿವಾಕರ್ ಬಾಬು ತಲೆ ಕಂಡರೆ ರೆಡ್ಡಿಗಳಿಗೆ ಆಗುವುದಿಲ್ಲವಾದರೂ ಅವರಿಗೆ ...ನ್ನು ನೇರವಾಗಿ ತಡುವುವ ತಾಕತ್ತು ಇಲ್ಲ. ರೆಡ್ಡಿಗಳ ಹತ್ತಿರ ಇರುವಷ್ಟು ಅಧಿಕಾರವಾಗಲಿ, ದುಡ್ಡಾಗಲಿ, ಗೂಂಡಾ ಗ್ಯಾಂಗ್ ...ವಾಕರ್ ಬಾಬು ಹತ್ತಿರ ಇರದಿದ್ದರೂ ಈತ ಒನ್‌ಮ್ಯಾನ್ ಆರ್ಮಿ ರೀತಿ ರೆಡ್ಡಿಗಳ ಪಾಲಿಗೆ ನುಂಗಲಾರದ ತುತ್ತಿನಂತೆ ಅಸ್ತಿತ್ವ ...ಂಡಿರುವುದು ಆಶ್ಚರ್ಯ.

... ಬೇರೆಡೆ ಇದ್ದರು. ...ಗಣೇಶ್ ಸಿಗಲಿಲ್ಲವೋ ...್ಯಂಗ್ ಸಿಇಸಿ ಟೀಂ ... ಜಾಗದ ಮೇಲೆ ...ಅಲ್ಲಿಗೆ ಹೇಳಿಕೆ ನೀಡಲು ... ಗಣೇಶ್ ...ಮುತ್ತಾರೆಂಬುದು ರೆಡ್ಡಿ ... ಖಚಿತವಾಗಿತ್ತು.





ಸ್ವಸ್ತಿಕ್ ...ಾಜ್-ಕಾರಪುಡಿ ...ಹೇಶನ ದಾಳಿ


...ರ್ಚ್ ಇಪ್ಪತ್ತೊಂಭತ್ತರ ...ರೀಕ್ಷಿಸಿದ್ದಂತೆಯೇ ...ಸಿಇಸಿ ಟೀಂ ಇದ್ದ ...ರೀಜೆನ್ಸಿ ಹೊಟೆಲ್‌ಗೆ ...ವರೊಂದಿಗೆ ಬಂದರು. ...ಗಳ ಸಭೆ ...ತ್ತಿತ್ತಾದ್ದರಿಂದ ಕೆಲವು ಪತ್ರಕರ್ತರೊಂದಿಗೆ ಅವರು ...ದ್ದ ಬೇಕರಿಗೆ ಕಾಫಿ ಕುಡಿಯಲು ಹೋಗಿದ್ದಾರೆ. ಆ ... ಕೆ.ಎ. 35, ಎಂ5877 ನಂಬರಿನ ಸ್ಕಾರ್ಪಿಯೋ ...ಂದು ಅಲ್ಲಿಗೆ ಬಂತು. ಆರೆಂಟು ಜನ ಗೂಂಡಾಗಳು ...ಬೇಸ್‌ಬಾಲ್ ಬ್ಯಾಟ್ ಹಿಡಿದು ಗಣೇಶರತ್ತ ನುಗ್ಗಿದರು. ...ವಂತೆ ಬ್ಯಾಟು ಮತ್ತು ಮಚ್ಚು ಬೀಸಿ ಗಣೇಶ್‌ಗೆ ಗಾಯ ...ಸಿ. ಆದರೆ, ಕೊಲೆ ಪ್ರಯತ್ನ ಯಶಸ್ವಿಯಾಗಲಿಲ್ಲ. ... ಕಿರುಚಾಟ ಕೇಳಿ ಜನಸೇರುತ್ತಿದ್ದಂತೆ ರೌಡಿ ಗುಂಪು ...ೋ ಹತ್ತಿ ಪರಾರಿಯಾಯಿತು. ಆದರೆ, ವಿಷ್ನು ರೆಡ್ಡಿ ...ವನೊಬ್ಬ ಸಿಕ್ಕಿಬಿದ್ದ. ಅವನು ಸ್ವಸ್ತಿಕ್ ನಾಗರಾಜನ ...ದ್ದ ಮತ್ತು ಕಾರು ಕಾರಪುಡಿ ಮಹೇಶನದಾಗಿತ್ತು. ...ಸ್ವಸ್ತಿಕ್ ನಾಗರಾಜ ಮತ್ತು ಕಾರಪುಡಿ ಮಹೇಶ ಹೊಸಪೇಟೆಯ ಕ್ರಿಮಿನಲ್‌ಗಳು. ಅದಿರನ್ನು ಬಳ್ಳಾರಿಯಿಂದ ಬಂದರಿನ ತನಕ ಸಾಗಿಸುವ ದಂಧೆ ನಡೆಸುತ್ತಾರೆ. ಇದನ್ನು ರಿಸ್ಕ್ ಟ್ರಾನ್ಸ್‌ಪೋರ್ಟ್ ಎನ್ನುತ್ತಾರೆ. ಅಂದರೆ ಗಣಿ ಏರಿಯಾದಲ್ಲಿ ಲೋಡ್ ಆಗುವ ಲಾರಿಗಳನ್ನು ಬಂದರಿನತನಕ ಏನೇ ಅಡೆತಡೆ ಬಂದರೂ ಅವರೇ ನಿವಾರಿಸಿಕೊಂಡು ಸಾಗಿಸಿಕೊಡುವ ದಂಧೆಯದು. ಈ ದಂಧೆಯಲ್ಲಿ ರೆಡ್ಡಿಗಳ ಹಾಗೂ ಇನ್ನಿತರ ಮೈನಿಂಗ್ ಕಂಪೆನಿಗಳ ಅಕ್ರಮ ದಂಧೆಗಳ ಸಾಗಾಣಿಕೆದಾರರೇ ಇವರಿಬ್ಬರು.

ಪತ್ರಕರ್ತರಿಗೂ ಏಟು

ಬಳ್ಳಾರಿಯ ಅನೇಕ ಪತ್ರಕರ್ತರು ರೆಡ್ಡಿಗಳಿಂದ ತಲಾ ಐವತ್ತು ಸಾವಿರ ಕ್ಯಾಸು ಹಾಗೂ ಒಂದು ಲಕ್ಷ ರೂಪಾಯಿ ಬೆಲೆಯ ಲ್ಯಾಪ್‌ಟಾಪ್ ಗಿಫ್ಟ್ ಗಿಟ್ಟಿಸಿದ್ದಾರೆ. ರೆಡ್ಡಿಗಳ ವಿರುದ್ಧ ಏನನ್ನೂ ಬರೆಯದಂತೆ ನೋಡಿಕೊಳ್ಳಲು ನೀಡಿರುವ ಎಂಜಲಿದು. ಹೀಗಿದ್ದಾಗಲೂ ಆವತ್ತು

▶▶ 12





...ನೇಯರ ಅಮಾಯಕ ಪತ್ನಿ ಗಿರಿಜಾರನ್ನು ಬೆದರಿಸಿ ... ರೆಡ್ಡಿಯ ಆಫೀಸಿಗೆ ಎಳೆದೊಯ್ದಿದ್ದಾರೆ. ಅಷ್ಟರಲ್ಲಿ ... ಮೀಟಿಂಗ್ ನಡೆಯಲೇ ಇಲ್ಲವಾದ್ದರಿಂದ ...ಿ ಮನೆಗೆ ಹಿಂತಿರುಗಿ ಹೋಗಿ ನೋಡಿದರೆ ...ೂ ಇರಲಿಲ್ಲ. ಮನೆ ಪೂರ್ತಿ ಅಸ್ತವ್ಯಸ್ತವಾಗಿತ್ತು. ...ಾಗಿ ಆಂಜನೇಯ ನಿದ್ದೆ ಮಾತ್ರೆ ನುಂಗಿ ... ಯತ್ನಿಸಿದರು. ಕೊನೆಗೆ ರಾತ್ರಿ ಮೂರು ... ಗಿರಿಜಾ ಗಲಾಟೆ ಮಾಡಿದಾಗ ಅವರನ್ನು ...ಸಿದ್ದಾರೆ ರೆಡ್ಡಿ ಗ್ಯಾಂಗಿನವರು.

...ಂಕರ ಘಟನೆ ಆದ ಬಳಿಕ ಆಂಜನೇಯ ಕೆಲಸ ... ಬೈಪಾಸ್ ಸರ್ಜರಿಗೆಂದು ನಾರಾಯಣ ...ಯ ಸೇರಿದರೆ ಅಲ್ಲೂ ರೆಡ್ಡಿ ಗ್ಯಾಂಗಿನ ಜನ ...ಬೆದರಿಸಿಹೋಗಿದ್ದಾರೆ.

...ದರ ಕ್ಲೈಮ್ಯಾಕ್ಸ್ ಎಂಬಂತೆ ಮೊನ್ನೆ ಫೆಬ್ರವರಿ ... ಆಂಜನೇಯರನ್ನು ರೆಡ್ಡಿ ಕಡೆಯವರು ಇಳಕಲ್‌ನ ... ಲಾಡ್ಜ್‌ನಿಂದ ಕಿಡ್‌ನ್ಯಾಪ್ ಮಾಡಿ ಕೊಲೆ ...ಯತ್ನಿಸಿದ್ದಾರೆ.

... ಕಂಪೆನಿಯ [illegible] ಮ್ಯಾನೇಜರ್ ಲಕ್ಷ್ಮಿಪ್ರಸಾದ್ ...ವರ ಹತ್ತಿರ 40 ಸಾವಿರ ಸಾಲ ಪಡೆದಿದ್ದ. ಅದನ್ನು ...ಫೋನ್ ಮಾಡಿದ ಆಂಜನೇಯ ತಾವು ಫೆಬ್ರವರಿ 25ರಂದು ...ಹೋಗುತ್ತಿರುವುದಾಗಿ ತಿಳಿಸಿ ಅಲ್ಲಿಗೆ ಹಣ ತಲುಪಿಸುವಂತೆ ... ಅಲ್ಲಿ ತಾವು ದರ್ಶನ್ ಲಾಡ್ಜ್‌ನ ರೂಂ ನಂಬರ್ 22ರಲ್ಲಿ ...ಗಿರುವೂ ಮಾಹಿತಿ ಕೊಟ್ಟಿದ್ದಾರೆ. ಆದರೆ ಲಕ್ಷ್ಮೀಪ್ರಸಾದನೂ ... ಹಣವೂ ಸಿಗಲಿಲ್ಲ, ಬದಲಾಗಿ ನಾಲ್ವರು ಗೂಂಡಾಗಳು ಬಂದು ಹಾಡುಹಗಲಲ್ಲೇ ಆಂಜನೇಯರನ್ನು ಹೋಟೆಲ್‌ನಿಂದ ಎಳೆದೊಯ್ದಿದ್ದಾರೆ. ಅಲ್ಲಿಂದ ಸ್ಕಾರ್ಪಿಯೋ ಗಾಡಿಯಲ್ಲಿ ಅವರನ್ನು ತುರುಕಿ ಆಲಮಟ್ಟಿ ಡ್ಯಾಂ ಬಳಿ ಕರೆದೊಯ್ದು ಬೆದರಿಸಿ ಅನೇಕ ಖಾಲಿ ಹಾಳೆಗಳಿಗೆ ಸಹಿ ಹಾಕಿಸಿಕೊಂಡಿದ್ದಾರೆ. ನಂತರ ಒಬ್ಬ ಯಾರೊಂದಿಗೋ ಮೊಬೈಲ್‌ನಲ್ಲಿ ಇಪ್ಪತ್ತು ನಿಮಿಷ ಮಾತಾಡಿದ್ದಾನೆ. ಆಂಜನೇಯರನ್ನು ಅಲ್ಲೇ ಕೊಂದು ಎಸೆಯಬೇಕಾ ಅಥವಾ ಮುಂದೇನು ಮಾಡಬೇಕೆಂದು ಆದೇಶ ಕೇಳುತ್ತಿದ್ದ ಅವನು. ಕೊನೆಗೆ ಬಳ್ಳಾರಿ ಡಾನ್‌ಗಳಿಂದ ಏನು ಆದೇಶ ಬಂತೋ ಕಿಡ್‌ನ್ಯಾಪರ್‌ಗಳು ಆಂಜನೇಯರನ್ನು ಬಾಗಲಕೋಟೆಗೆ ಎಳೆದೊಯ್ದರು. ಆದರೆ ಟೌನಿನ ಆಚೆ ಕೆಲಕಾಲ ಗಾಡಿ ನಿಂತಾಗ ಮೂತ್ರ ವಿಸರ್ಜನೆಗೆಂದು ಗೋಗರೆದು ಕೆಳಗಿಳಿದ ಆಂಜನೇಯ ತಪ್ಪಿಸಿಕೊಂಡು ಪ್ರಾಣ ಉಳಿಸಿಕೊಂಡರು.

ಈ ನಡುವೆ ರೆಡ್ಡಿಗಳು ಆಂಜನೇಯರ ವಿರುದ್ಧ ಬಳ್ಳಾರಿಯ ಕೌಲ್‌ಬಜಾರ್ ಠಾಣೆಗೆ 'ಕಂಪೆನಿಯ 50 ಲಕ್ಷ ರೂ.ವನ್ನು ಆಂಜನೇಯ ಕದ್ದಿದ್ದಾನೆಂದು' ದೂರು ಕೊಟ್ಟಿದ್ದಾರೆ. ಬೇಕೆಂತಲೇ ಆಂಜನೇಯರ ಪತ್ನಿ ಗಿರಿಜಾ, ಲಂಡನ್‌ನಲ್ಲಿ ಓದುತ್ತಿರುವ ಅವರ ಮಗ ಹಾಗೂ ಬೆಂಗಳೂರಿನಲ್ಲಿರುವ ಮಗಳು, ಅಳಿಯನ ಹೆಸರನ್ನು ಸೇರಿಸಿ ಕಿರುಕುಳ ನೀಡುತ್ತಿದ್ದಾರೆ.

ಈ ವಿವರ ನೋಡಿದ ಮೇಲೆ ಕರ್ನಾಟಕದಲ್ಲಿ ಪೊಲೀಸು ಕಾಯ್ದೆ ಕಾನೂನುಗಳೇನಾದರು ಇದೆ ಅನ್ನಿಸುತ್ತದಾ ಹೇಳಿ? ರೆಡ್ಡಿಗಳ ಕಳ್ಳತನವನ್ನೆಲ್ಲಾ ನೋಡಿರುವ ಆಂಜನೇಯ ಈಗ ಸಿಬಿಐ ತನಿಖೆಯಲ್ಲಿ ಅಪ್ರೂವರ್ ಆಗಲು ಒಪ್ಪಿಕೊಂಡಿದ್ದಾರೆ. ಹಾಗಾಗಿ ಆಂಜನೇಯ ಗಿರಿಜಾ ದಂಪತಿಗಳ ಜೀವ ಈಗ ಅಪಾಯದ ಸ್ಥಿತಿಯಲ್ಲಿದೆ. ●



ರೆಡ್ಡಿಗಳ ಕ್ರಿಮಿನಲ್ ಜಾತಕ



ತಾವೇನೊ ಅವತಾರ ಪುರುಷರೆಂಬಂತೆ ಪೋಸು ಕೊಡುತ್ತಿರುವ ಬಳ್ಳಾರಿ ರೆಡ್ಡಿ ಬ್ರದರ್ಸ್ ಈ ನೆಲದ ಕಾಯ್ದೆ ಕಾನೂನು ಒಂದಕ್ಕೂ ಬೆಲೆ ಕೊಡದೆ ಪಾಳೇಗಾರಿಕೆ ನಡೆಸುತ್ತಿದ್ದಾರೆ.

ಗೂಂಡಾಗಿರಿ ಇವರ ರಕ್ತಕ್ಕಂಟಿರುವ ರೋಗ. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಈ ಗೂಂಡಾಗಳು ನಡೆಸಿರುವ ಅನಾಹುತಗಳ ವಿವರಗಳನ್ನು ಒಮ್ಮೆ ನೋಡಿ.

2006 ಸೆಪ್ಟೆಂಬರ್- ಅದಿರು ದೋಚಲು ಅಡ್ಡಿಯಾಗಿದ್ದ ಪುರಾತನ ಸುಗ್ಗಲಮ್ಮ ದೇವಾಲಯಕ್ಕೆ ಬಾಂಬಿಟ್ಟು ಸ್ಫೋಟ ಹಾಗೂ ನೆಲಸಮ.

2007 ಸೆಪ್ಟೆಂಬರ್- ರೌಡಿ ಶ್ರೀರಾಮುಲು ಬಳ್ಳಾರಿ ಡಿಎಫ್‌ಓ ರಾಜಶೇಖರ್‌ರ ಕಚೇರಿಗೆ ನುಗ್ಗಿ ದಾಳಿ ಮಾಡಿ ಜೀವಬೆದರಿಕೆ ಹಾಕಿದ. ಟಿವಿಗಳಲ್ಲೂ ಇದು ನೇರ ಪ್ರಸಾರವಾಯಿತು. ರಾಮುಲು ವಿರುದ್ಧ ಪ್ರಕರಣ ದಾಖಲು.


2008 ಏಪ್ರಿಲ್ 18- ಚುನಾವಣಾ ಪ್ರಚಾರ ನಡೆಸುತ್ತಿದ್ದ ಕಾಂಗ್ರೆಸ್ ಅಭ್ಯರ್ಥಿ ಅನಿಲ್ ಲಾಡ್‌ಗೆ ಸೇರಿದ್ದ ಮೂರು ಕಾರುಗಳಿಗೆ ಬಳ್ಳಾರಿ ಟೌನ್‌ನಲ್ಲೇ ರಾಮುಲು ಬೆಂಕಿ ಹಾಕಿಸಿದ. ಲಾಡ್ ಮನೆಗೇ ನುಗ್ಗಿ ಬೆದರಿಕೆ ಹಾಕಿದ. ಕೌಲ್ ಬಜಾರ್ ಠಾಣೆಯಲ್ಲಿ ಕೇಸಾಯಿತು. (FIR0043/18.4.2008)



2008 ಅಕ್ಟೋಬರ್ 29- ತೋರಣಗಲ್ ಠಾಣಾ ಸಬ್ ಇನ್ಸ್‌ಪೆಕ್ಟರ್ ನಂದೀಶ್‌ರವರು ರೆಡ್ಡಿ ಗ್ಯಾಂಗ್ ವಿರುದ್ಧ ಕಾನೂನುಕ್ರಮ ತೆಗೆದುಕೊಂಡ ಕಾರಣ ಅವರಿಗೆ ಜೀವ ಬೆದರಿಕೆ. ಮೂರು ದಿನದಲ್ಲಿ ಮೂರು ಟ್ರಾನ್ಸ್‌ಫರ್ ಶಿಕ್ಷೆ.

2009 ಅಕ್ಟೋಬರ್ 24- ಕರುಣಾಕರರೆಡ್ಡಿ ಹಾಗೂ ಸೋಮಶೇಖರ ರೆಡ್ಡಿ ಗ್ಯಾಂಗ್‌ನಿಂದ ವಿದ್ಯುತ್ ಗುತ್ತಿಗೆದಾರ ಕಂಪನಿಯಾದ ಬೆಂಗಳೂರಿನ ಎಸ್‌ಎನ್‌ಸಿಯ ಮ್ಯಾನೇಜರ್ ಪ್ರಶಾಂತ್‌ರ ಕಿಡ್‌ನ್ಯಾಪ್ ಹಾಗೂ ಹಲ್ಲೆ; ಕರುಣಾಕರ ರೆಡ್ಡಿ ಮನೆಗೆ ಪ್ರಶಾಂತ್‌ರನ್ನು ಹೊತ್ತೊಯ್ದು ತಲೆ ಕಡಿಯುವ ಬೆದರಿಕೆ.

ಉಪ್ಪಾರಪೇಟೆ ಪೊಲೀಸ್ ಠಾಣೆ ಎಸ್‌ಐ ಲೋಕೇಶ್ವರ್‌ರಿಂದ ಸೋಮಶೇಖರ ರೆಡ್ಡಿ ವಿರುದ್ಧ ಕೇಸು ದಾಖಲು.



ಪದ್ಮಾವತಿ

2010 ಫೆಬ್ರವರಿ-ಮಾರ್ಚ್- ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವಿದ್ವಾಂಸರು ಹಾಗೂ ಸಂಶೋಧಕರಿಗೆ ರೌಡಿ ಸಚಿವ ಜನಾರ್ದನ ರೆಡ್ಡಿಯಿಂದ ಬೆದರಿಕೆ. ಕನ್ನಡ ವಿವಿಗೆ ಸೇರಿದ್ದ 80 ಎಕರೆ ಭೂಕಬಳಿಕೆ ಯತ್ನ.

2010 ಫೆಬ್ರವರಿ 24- ಬಳ್ಳಾರಿ ನಗರಪಾಲಿಕೆಯ ಸದಸ್ಯೆ ಪದ್ಮಾವತಿಯನ್ನು ಫೆಬ್ರವರಿ 4 ರಾತ್ರಿ ಕೊಚ್ಚಿ ಕೊಲ್ಲಲಾಯಿತು. ಈ ಕೊಲೆಯನ್ನು ಮಾಡಿಸಿದ್ದು ಯಾಕೆ ಮತ್ತು ಯಾರು ಎಂಬುದು ಈಗಲೂ ನಿಗೂಢವಾಗಿದೆ.


ಇಷ್ಟೇ ಅಲ್ಲದೆ ಈ ರೆಡ್ಡಿಗಳ ಶೋಕಿಗಾಗಿ ಬಳ್ಳಾರಿಯಲ್ಲಿ ಏರ್‌ಪೋರ್ಟ್ ನಿರ್ಮಿಸಲು ಶಿರ್ವ, ಜಾಗನೂರು ಹಾಗೂ ಕಪ್ಪಗಲ್ ಗ್ರಾಮಗಳ ಸಾವಿರದೆಂಟುನೂರು ಎಕರೆ ಭೂಮಿಯನ್ನು ರೈತರಿಂದ ಕಸಿಯುವ ಪ್ರಯತ್ನ ನಡೆದಿದೆ. ಭೂಸ್ವಾಧೀನ ವಿರೋಧಿಸಿ ಪ್ರತಿಭಟಿಸುತ್ತಿರುವ ರೈತರಿಗೆ ಪೊಲೀಸು ಹಾಗೂ ಗೂಂಡಾಗಳ ಮೂಲಕ ರೆಡ್ಡಿಗಳು ಕಿರುಕುಳ ನೀಡುತ್ತಿದ್ದಾರೆ.



ಕುಮಾರ ರೈತ

2009 ಡಿಸೆಂಬರ್ 18- ಓಬಳಾಪುರಂ ಮೈನಿಂಗ್ ಕಂಪನಿಯ ಡೆಪ್ಯೂಟಿ ಜನರಲ್ ಮ್ಯಾನೇಜರ್ ಆಗಿದ್ದ ಆಂಜನೇಯ ಇಳಕಲ್‌ನಲ್ಲಿ ಕಿಡ್‌ನ್ಯಾಪ್, ಜೀವಬೆದರಿಕೆ. ರೆಡ್ಡಿಗಳ ಅಕ್ರಮ ಗಣಿಗಾರಿಕೆ ವಿಚಾರ ಸಿಬಿಐಗೆ ಹೇಳದಂತೆ ತಡೆಯುವ ಯತ್ನ.


ಈಗ ಇದೇ ರೆಡ್ಡಿಗಳು ತಮ್ಮ ಅಕ್ರಮಗಳ ವಿರು... ನ್ಯಾಯಾಲಯಕ್ಕೆ ಹೋಗಿರುವ ಟಪಾಲ್ ಗಣೇಶ್ ಹತ್ಯೆಗೆ ಯತ್ನಿಸಿದ್ದಾರೆ.



ಬರದ ನಾಡು 'ರೆಡ್ಡಿ ಸ್ಟೇಟ್'ನಲ್ಲಿ 60 ರೂಮುಗಳ ಅರಮನೆ

ಬಹಳ ಹಿಂದೆ ಏನಲ್ಲ, ಕೇವಲ ಹನ್ನೆರಡು ವರ್ಷಗಳ ಹಿಂದೆ ಬಳ್ಳಾರಿ ಟೌನಿನ ಸಾಮಾನ್ಯ ಪೊಲೀಸ್ ಪೇದೆಯಾಗಿದ್ದ ಚೆಂಗಾ ರೆಡ್ಡಿ ಎಂಬುವನ ಮಕ್ಕಳು ಬದುಕಿನಲ್ಲಿ ಒಂದು ನೆಲೆ ಕಂಡುಕೊಳ್ಳಲು ಹೆಣಗುತ್ತಿದ್ದರು. ಎನೋಬಲ್ ಇಂಡಿಯಾ ಎಂಬ ಚಿಟ್ ಫಂಡ್ ಸಂಸ್ಥೆ ಮಾಡಿ ಹಣ ತಿಂದು ಹಾಕಿದ್ದರು. ಪೇಪರ್ ನಡೆಸಿದರು. ಕೊನೆಗೆ ಅಕ್ರಮ ಗಣಿ ದಂಧೆಗೆ ಕೈಹಾಕಿದರು ನೋಡಿ. ಗಾಲಿ ಮನೆತನದ ದುಡ್ಡಿನ ಗಾಲಿ ನಾಗಾಲೋಟದಲ್ಲಿ ಓಡಿತು.

ಗಾಲಿ ಗುಂಪಿನ ಪೈಕಿ ಇವತ್ತು ಮೂವರು ಕ್ಯಾಬಿನೆಟ್ ಮಂತ್ರಿಗಳು. ಇನ್ನೊಬ್ಬ ನಂದಿನಿ ಹಾಲಿನ ರಾಜ್ಯ ಆಳುತ್ತಿದ್ದಾನೆ. ಇವರ ಐಷಾರಾಮಿ ಬಂಗಲೆ, ಕಾರುಗಳು, ಹೆಲಿಕಾಪ್ಟರುಗಳು, ಗನ್‌ಮ್ಯಾನ್‌ಗಳ ಶೋಕಿಗಳ ಬಗ್ಗೆ ಜನರಿಗೆ ಗೊತ್ತಿದೆ.




ಇಷ್ಟು ಸಾಲದೆಂಬಂತೆ ಈಗತಾನೇ ಜನಾರ್ದನ ರೆಡ್ಡಿ ಬಳ್ಳಾರಿ ಟೌನಿನಲ್ಲಿ ತನಗಾಗಿ ಹೊಸ ಅರಮನೆ ಕಟ್ಟಿಸುತ್ತಿದ್ದಾನೆ. ಅನಾಮತ್ತು 60 ರೂಮುಗಳ ಅರಮನೆ ಅದು. ಈ ಮನೆಯ **built up area** ನೇ ಒಂದು ಎಕರೆಯಷ್ಟಿದೆ. ಈ ಮನೆಯತ್ತ ತಲುಪುವ ಮೊದಲೇ ಒಂದೂವರೆ ಸಾವಿರ ಅಡಿಯಷ್ಟು ಉದ್ದದ ರಸ್ತೆ ಹಾದುಬರಬೇಕು. ಅಷ್ಟೂ ಉದ್ದಕ್ಕೂ ರೆಡ್ಡಿ ಸಿಸಿಟಿವಿ ಕ್ಯಾಮರಾ ಹಾಕಿಸಿಕೊಂಡಿದ್ದಾನೆ. ಅಂದರೆ ರೆಡ್ಡಿ ಮನೆಯತ್ತ ಬರುತ್ತಿರುವ ಗಾಡಿ, ಅದರಲ್ಲಿರುವ ಜನ ಯಾರೆಂಬುದು ಸಿಸಿಟಿವಿಯತ್ತ ನಿಗಾ ಇಟ್ಟಿರುವ ಸೆಕ್ಯುರಿಟಿಯವರಿಗೆ ಗೊತ್ತಾಗುತ್ತಿರುತ್ತದೆ. ಈ ರೆಡ್ಡಿಗೆ ಅದೇನು ಜೀವಭಯವೋ ಏನೋ ಮನೆಯೊಳಗೆಯೇ ಬಾಂಬ್ ಪ್ರೂಫ್ ಶೆಲ್ಟರ್ ಮಾಡಿಸಿಕೊಂಡಿದ್ದಾನೆ.

ರೆಡ್ಡಿಯ ಈ ಹೊಸ ಅರಮನೆಗೆ ಅಂಟಿಕೊಂಡಂತೆಯೇ ಶ್ರೀರಾಮುಲುನ 60 ರೂಮುಗಳ ಇನ್ನೊಂದು ಅರಮನೆ ನಿರ್ಮಾಣವಾಗುತ್ತಿವೆ. ಈ ಎರಡೂ ಅರಮನೆಗಳಿಗೂ ಒಂದನ್ನೊಂದು ಲಿಂಕ್ ಮಾಡುವಂತಹ ನೆಲಮಾಳಿಗೆ ಅಂದರೆ ರಹಸ್ಯ ಪ್ಯಾಸೇಜೂ ಒಂದಿದೆ. ಹಗಲೆಲ್ಲ ಒಬ್ಬರಿಗೊಬ್ಬರು ಅಂಟಿಕೊಂಡೇ ತಿರುಗುವ ರೆಡ್ಡಿ ಮತ್ತು ರಾಮುಲು ತಮ್ಮಿಬ್ಬರ ಮನೆಯೊಳಗೆ ರಹಸ್ಯ ಸುರಂಗಮಾರ್ಗ ಯಾಕೆ ಮಾಡಿಸಿಕೊಂಡಿರಬಹುದು?

ಈ ರಾಮುಲು ಮನೆಬಾಗಿಲಲ್ಲಿ ಕಾರ್ ಹತ್ತಿದರೆ ಅಲ್ಲಿಂದ ನೇರವಾಗಿ ಮನೆಯ ಟಾರಸಿಗೇ ಹೋಗಿ ಹೆಲಿಕಾಪ್ಟರ್ ಹತ್ತುವಂತೆ ವ್ಯವಸ್ಥೆ ಇದೆ. ಇನ್ನು ರೆಡ್ಡಿಯಂತೂ ಮನೆಯಿಂದ ಹೊರಟರೆ ಹಿಂದೆಮುಂದೆ ಕನಿಷ್ಠ ಹತ್ತು ಸ್ಕಾರ್ಪಿಯೋ ಗಾಡಿಗಳು ಎಸ್ಕಾರ್ಟ್ ರೀತಿ ಹೊರಡುತ್ತವೆ. ರೆಡ್ಡಿ ಹೆಲಿಕಾಪ್ಟರ್ ಹತ್ತಿರಕ್ಕೆ ಸಾಗುತ್ತಿರುವಾಗ ಹೆಲಿಪ್ಯಾಡ್ ಸುತ್ತ ವೃತ್ತಾಕಾರದಲ್ಲಿ ಗನ್‌ಮ್ಯಾನ್‌ಗಳು ಕಾವಲಿರುವಂತೆ ವ್ಯವಸ್ಥೆ ಇದೆ. ಅಲ್ಲಿಂದ ಅವನು ಹೊರಟು ಬೆಂಗಳೂರಿಗೇ ಬರಲಿ ಅಥವಾ ಹೈದರಾಬಾದಿಗೇ ಹೋಗಲಿ ಅಲ್ಲೂ ಇದೇ ವ್ಯವಸ್ಥೆ ಇದೆ. ಕನಿಷ್ಠ ಹತ್ತು ಕಾರುಗಳು, ಜನ, ದಜನ್ ಗನ್‌ಮ್ಯಾನ್‌ಗಳು ಹೀಗೆ.....!

ಇವರೆಲ್ಲಾ ಆಯಾ ಊರುಗಳಲ್ಲೇ ಕಾಯಂ ಆಗಿ ಇರುವ ಕಿಂಕರ ಸೇನೆ, ಬಳ್ಳಾರಿಯೆಂಬ ಬರದ ನಾಡಲ್ಲಿ ಧನಮದದಿಂದ 'ರೆಡ್ಡಿ ಸ್ಟೇಟ್' ಎಂಬ ಪ್ರತ್ಯೇಕ ರಾಜ್ಯ ನಿರ್ಮಿಸಿಕೊಂಡು ದಬ್ಬಾಳಿಕೆ ನಡೆಸುತ್ತಿರುವ ರೆಡ್ಡಿಗಳಿಗೆ ಪಾಪ ಇರಲಿಕ್ಕೆ ಕನಿಷ್ಠ 60 ರೂಮುಗಳ ಒಂದು ಸಣ್ಣ ಮನೆ ಬೇಡವೆಂದರೆ ಹೇಗೆ ಹೇಳಿ?

ರೆಡ್ಡಿ ಹೆಂಡತಿ ಲಕ್ಷ್ಮಿ ಅರುಣಾಳ ರೋಲ್‌ಕಾಲ್ ದಂಧೆ



ಹೆಡಚಿ ದುಡ್ಡು ಸಿಗುತ್ತದೆಂದಾದರೆ ರೆಡ್ಡಿ ಸಾಮ್ರಾಜ್ಯದ ಕುನ್ನಿಗಳೂ ಬೊಗಳಲು ಶುರು ಮಾಡುತ್ತವೆ. ಗಣಿರೆಡ್ಡಿಯ ಅಕ್ರಮ ಅದಿರು ಸಾಗಾಣಿಕೆ ದಂಧೆಯ ವ್ಯಾಪ್ತಿ ಬಹಳ ದೊಡ್ಡದು. ಪ್ರತಿದಿನ ನಾಲ್ಕು ಸಾವಿರಾರು ಲಾರಿಗಳು ಕನಿಷ್ಠ ಮೂವತ್ತು ಸಾವಿರ ಟನ್‌ಗೂ ಹೆಚ್ಚು ಅದಿರನ್ನು ರೆಡ್ಡಿ ರಿಪಬ್ಲಿಕ್‌ನಿಂದ ಹೊರ ಸಾಗಿಸುತ್ತಿವೆ. ಇವರೆಲ್ಲಾ ಕೇವಲ ಸಾಗಾಣಿಕಾ ಗುತ್ತಿಗೆದಾರರು. ಇವರಿಗೆ ಟನ್‌ಗಿಷ್ಟು ಎಂದು ರೆಡ್ಡಿಗಳು ಬಾಡಿಗೆ ಕೊಟ್ಟು ಕಳಿಸುತ್ತಾರೆ.

ಆದರೆ ಇದರಲ್ಲೂ ರೆಡ್ಡಿಯ ಮನೆಯವರು ಒಂದು ಕಸ್ನ ಹಾಕಿ ಕೋಟಿಗಟ್ಟಲೇ ಹಣವನ್ನು ರೋಲ್‌ಕಾ[...] ಮಾಡುತ್ತಿದ್ದಾರೆ.

ಈ ರೋಲ್‌ಕಾಲ್ ದಂಧೆಯಲ್ಲಿ ಜನಾರ್ದನ ರೆಡ್ಡಿಯ ಹೆಂಡತಿ ಲಕ್ಷ್ಮಿಅರುಣ, ಅವಳಪ್ಪ ಪರಮೇಶ್ವರ [...] ಹಾಗೂ ಸುಬ್ಬಾರೆಡ್ಡಿ ಎಂಬ ಕಂಪೆನಿ ನೌಕರ ಶಾಮೀಲಾಗಿದ್ದಾರೆ.

ಇವರ ಹಫ್ತಾ ವಸೂಲಿ ವಿಧಾನ ಸಿಂಪಲ್ಲಾಗಿದೆ.

ಅದು ಹತ್ತು ಚಕ್ರದ ಲಾರಿಯಾಗಿರಲಿ ಅಥವಾ ಆರು ಚಕ್ರದ್ದಾಗಿರಲಿ ಅದಿರು ಲೋಡ್ ಮಾಡುವಾಗ ಒಂ[...] ಟನ್‌ಗೆ ಹತ್ತು ರೂಪಾಯಿಯಂತೆ ಹಫ್ತಾ ಕೊಡಲೇಬೇಕಾಗುತ್ತದೆ. ರೆಡ್ಡಿ ಫ್ಯಾಮಿಲಿಯ ಭಂಟ ಸುಬ್ಬಾರೆಡ್ಡಿ[...] ಮುಂದೆ ನಿಂತು ಈ ಹಣ ಕೀಳುತ್ತಾನೆ. ಟನ್‌ಗೆ ಹತ್ತು ರೂಪಾಯಿ ಅಂದರೆ ಮೇಲ್ನೋಟಕ್ಕೆ ಜುಜು[...] ಅನ್ನಿಸಬಹುದು. ಆದರೆ ವಿಷಯ ಅಷ್ಟು ಸಿಂಪಲ್ ಅಲ್ಲ.

ಹತ್ತು ಗಾಲಿಯ ಒಂದು ಲಾರಿಗೆ ಕನಿಷ್ಠ 17 ಟನ್ ಅದಿರು ಲೋಡ್ ಮಾಡುತ್ತಾರೆ. ಅಂದರೆ ಲಾರಿ ಮಾಲಿ[...] ಸ್ಥಳದಲ್ಲೇ 170 ರೂ. ಕಕ್ಕಬೇಕು. ಇಂಥ ನಾಲ್ಕು ಸಾವಿರ ಲಾರಿಗಳು ದಿನಕ್ಕೆ 170 ರೂ. ಹಫ್ತಾ ಕೊ[...] ಎಷ್ಟಾಯಿತು?

6.80 ಲಕ್ಷ ರೂಪಾಯಿ.

ದಿನಕ್ಕೆ 6.80 ಲಕ್ಷವಾದರೆ ತಿಂಗಳಿಗೆಷ್ಟು?

2 ಕೋಟಿ ರೂಪಾಯಿ!!

ಈ ರೋಲ್‌ಕಾಲ್ ದುಡ್ಡು ಪೂರಾ ಲಕ್ಷ್ಮೀ ಅರುಣ ಹಾಗೂ ಅವಳಪ್ಪ ಪರಮೇಶ್ವರರೆಡ್ಡಿ ಕೈಸೇರುತ್ತಿದೆ. ಹ[...] ಕೊಡಲು ಯಾರಾದರೂ ಲಾರಿ ಮಾಲೀಕ ಒಪ್ಪದೆಹೋದರೆ ಅವರಿಗೆ ಅದಿರು ಸಾಗಾಣಿಕೆಯ ಅವಕಾಶ[...] ಸಿಗದಂತೆ ಆಚೆಗೆ ಓಡಿಸುತ್ತಾರೆ. ಈ ಹಫ್ತಾ ವಸೂಲಿಯಲ್ಲೇ ಎಷ್ಟು ದುಡ್ಡು ಹರಿದಾಡುತ್ತಿದೆಯೆಂದರೆ ಓ[...] ನೌಕರ ಸುಬ್ಬಾರೆಡ್ಡಿ ಈಗ್ಗೆ 3 ವರ್ಷಗಳ ಹಿಂದೆ ಜುಜುಬಿ ನಾಲ್ಕು ಸಾವಿರ ಸಂಬಳಕ್ಕೆ ಕೆಲಸಕ್ಕೆ ಸೇರಿದ್ದವನು [...] ಪೂರಾ ನೂರು ಕೋಟಿ ರೂಪಾಯಿಗೆ ತೂಗುತ್ತಿದ್ದಾನೆ. ಹಫ್ತಾ ವಸೂಲಿ ಮಾಡುವಾಗ ರೆಡ್ಡಿ ಹೆಂಡತಿಗೆ ತಪ್ಪು [...] ತೋರಿಸಿಯೇ ಈ ಸುಬ್ಬಾರೆಡ್ಡಿ ನೂರು ಕೋಟಿ ರೂ. ನುಂಗಿದ್ದಾನೆಂದರೆ ಇನ್ನು ರೆಡ್ಡಿ ಹೆಂಡತಿ ಮನೆಯಲ್ಲೇ ಕು[...] ರೋಲ್‌ಕಾಲ್ ಮೂಲಕ ಗುಡ್ಡೆ ಹಾಕಿಕೊಂಡಿರುವ ಹಣ ಅದೆಷ್ಟಿರಬಹುದು?

▸▸ 11

ಗಣೇಶ್ ಜೊತೆ ಇದ್ದ ಪತ್ರಕರ್ತರ ಪೈಕಿ ಸುವರ್ಣ ಚಾನೆಲ್‌ನ ಕುಮಾರ ರೈತನನ್ನು ಟಾರ್ಗೆಟ್ ಮಾಡಿ ಹಲ್ಲೆ ನಡೆದಿದೆ. ಈತ ರೆಡ್ಡಿಗಳ ಲ್ಯಾಪ್‌ಟಾಪ್ ಮತ್ತು ಹಣ ಬೇಡ ಎಂದು ತಿರಸ್ಕರಿಸಿದ್ದರಂತೆ. ಜೊತೆಗೆ ಅಕ್ರಮ ಗಣಿಗಾರಿಕೆಗಳ ಬಗ್ಗೆ ಅನೇಕ ವರದಿಗಳನ್ನೂ ಮಾಡಿದ್ದರು ಎನ್ನಲಾಗಿದೆ. ಇದರಿಂದ ಸಿಟ್ಟಿಗೆದ್ದ ರೆಡ್ಡಿಗಳು ಏನು ಮಾಡಿದರು ಗೊತ್ತೆ?

ಬಳ್ಳಾರಿ, ರಾಯಚೂರು, ಕೊಪ್ಪಳದಿಂದ ಹುಬ್ಬಳ್ಳಿ ತನಕದ ಕೇಬಲ್ ಟೀವಿ ನೆಟ್‌ವರ್ಕ್ ಈ ರೆಡ್ಡಿಗಳ ಕಂಟ್ರೋಲ್‌ನಲ್ಲಿದೆ. ಸುವರ್ಣ ಟೀವಿಯ ಪ್ರಸಾರವನ್ನೇ ಈ ಜಿಲ್ಲೆಗಳಲ್ಲಿ ಕಟ್ ಮಾಡಿದ್ದರು ಈ ರೆಡ್ಡಿಗಳು. ಅದೇ ಸೇಡಿನ ಭಾಗವಾಗಿ ಈಗ ಸುವರ್ಣ ಟೀವಿಯ ವರದಿಗಾರ ಕುಮಾರ ರೈತನ ಮೇಲೂ ದಾಳಿ ನಡೆದಿದೆ. ರೌಡಿಗಳು ಬೇಕರಿಗೆ ದಾಳಿಯಿಟ್ಟಾಗ ರೈತನಿಗೂ ಮೊದಲೇ ಗಣೇಶ್‌ಗೆ ಹತ್ತಿರದಲ್ಲೇ ಟೀವಿ-ಒಂಭತ್ತು ಚಾನೆಲ್‌ನ ಇಮಾಮ್ ಗೋಡೇಕರ್, ಕಸ್ತೂರಿ ಟೀವಿಯ ವಿಜಯ ಹುನಗುಂದ, ಡೆಕ್ಕನ್ ಕ್ರಾನಿಕಲ್‌ನ ಶಿವಕುಮಾರ್ ಮಾಳಗಿ ಇದ್ದರು. ಆದರೆ, ದಾಳಿಕೋರರು ಮೊದಲೇ ಗುರ್ತಿಸಿಟ್ಟುಕೊಂಡಿದ್ದಂತೆ ನೇರ ಕುಮಾರ ರೈತನ ಬಳಿ ಹೋಗಿ ಬ್ಯಾಟು ಬೀಸಿದ್ದಾರೆ. ಇವರಿಂದ ತಪ್ಪಿಸಿಕೊಂಡು ಓಡುವಾಗ ರೈತ ತಲೆ ಬಗ್ಗಿಸಿದ್ದರಿಂದಾಗಿ ಬ್ಯಾಟು ಕೊಂಚ ತಾಗಿ ಹೇರ್‌ಲೈನ್ ಫ್ರ್ಯಾಕ್ಚರ್ ಆಗಿದೆ. ಇನ್ನೊಂದು ಆಶ್ಚರ್ಯದ ವಿಚಾರ ಏನೆಂದರೆ, ಬೇರೆಲ್ಲಾ ಪತ್ರಕರ್ತರು ಹಾಗೂ ಜನ ಬೆದರಿ ಓಡಿಹೋದರೂ ಸಹ ಟೀವಿ-ಒಂಭತ್ತರ ಇಮಾಮ್ ಆರಾಮಾಗಿ ಸ್ಥಳದಲ್ಲೇ ನಿಂತು ಗಣೇಶರ ಮೇಲಿನ ಹಲ್ಲೆ ನೋಡುತ್ತಿದ್ದ. ರೌಡಿಗಳು ಸ್ಕಾರ್ಪಿಯೋ ಹತ್ತಿ ಪರಾರಿಯಾಗಿದ್ದನ್ನೂ ನೋಡಿದ್ದಾನೆ. ಆದರೆ ಈ ಬಗ್ಗೆ ಪೊಲೀಸರಿಗೆ ಏನನ್ನೂ ಹೇಳುತ್ತಿಲ್ಲ, ಯಾಕೆಂಬ ಅನುಮಾನ ಪತ್ರಕರ್ತರನ್ನೂ ಕಾಡುತ್ತಿದೆ.



ರೆಡ್ಡಿಗಳ ಭಯ ಏನು ಗೊತ್ತಾ?

ಟಪಾಲ್ ಗಣೇಶರ ಮೇಲಿನ ಹಲ್ಲೆ, ಆಂಜನೇಯರ ಕಿಡ್ನಾಪ್ ಕೇಸುಗಳನ್ನು ಜೀರ್ಣಿಸಿಕೊಳ್ಳುವುದು ರೆಡ್ಡಿಗಳಿಗೆ ದೊಡ್ಡದಲ್ಲ, ಆದರೆ, ಅವರ ಭಯಕ್ಕೆ ಬೇರೆ ಮುಖ್ಯ ಕಾರಣಗಳಿವೆ.

ಅದರಲ್ಲಿ ಗಡಿಯ **Tri junction** ಬದಲಾಯಿಸಿರುವುದು ಗೊತ್ತಾಗಿ ಸಿಕ್ಕಿಬೀಳುವ ಸಾಧ್ಯತೆ ಒಂದನೆಯದು. ಅರಣ್ಯ ಪ್ರದೇಶದೊಳಗೆ ನಾಲ್ಕು ಕಿ.ಮೀ. ಅಕ್ರಮ ರಸ್ತೆ ನಿರ್ಮಿಸಿರುವುದು ಇನ್ನೊಂದು. ಇತರ ಗಣಿಗಳವರ ಲೀಸ್ ಏರಿಯಾ ಒತ್ತುವರಿ ವಿಚಾರವೂ ಅವರಿಗೆ ಸಮಸ್ಯೆಯಾಗಿದೆ. ಆದರೆ, ಇದೆಲ್ಲಕ್ಕಿಂತ ಮುಖ್ಯ ಸಂಗತಿಯೇನೆಂದರೆ ಈ ರೆಡ್ಡಿ ಗ್ಯಾಂಗ್ ಅಕ್ರಮವಾಗಿ ಅದಿರು ತೆಗೆದು ವಿದೇಶಕ್ಕೆ ರಫ್ತು ಮಾಡಿದ್ದಾರೆ.

ಇದರ ಪ್ರಮಾಣ ಎಷ್ಟು ಗೊತ್ತೆ?


29.3 ಲಕ್ಷ ಟನ್‌ಗಳು!

ಇದರ ಮಾರುಕಟ್ಟೆ ಬೆಲೆ ಏನೇ ಇರಲಿ. ರೆಡ್ಡಿಗಳು ಲಾಭ ಅಂತ ದೋಚಿಕೊಂಡಿರುವುದೇ ಮೂರು ಸಾವಿರ ಕೋಟಿ ರೂಪಾಯಿ ಆಗುತ್ತದೆ. ಈ 29.3 ಲಕ್ಷ ಟನ್ ಪೈಕಿ ರೆಡ್ಡಿಗಳು ಒಂದು ಗ್ರಾಂ ಅನ್ನೂ ಕಾನೂನುಬದ್ಧವಾದ ಮೈನಿಂಗ್ ಲೀಸ್ ಪಡೆದು ಗಣಿಗಾರಿಕೆ ನಡೆಸಿ ರಫ್ತು ಮಾಡಿಲ್ಲ, ಇದೆಲ್ಲ ಪೂರಾ ಕರ್ನಾಟಕದ ಗಡಿ ಒತ್ತರಿಸಿ ಅರಣ್ಯ ಪ್ರದೇಶದೊಳಗೆ ಅಕ್ರಮ ಗಣಿಗಾರಿಕೆ ನಡೆಸಿ ನಂತರ ಆಂಧ್ರ ರಾಜ್ಯ ಗಡಿಗೆ ಸಾಗಿಸಿರುವ ದಂಧೆ. ಅಲ್ಲೂ ಸಹ ಆಂಧ್ರದ ವ್ಯಾಪ್ತಿಯ ಕಾಡಿನೊಳಗೆ ನಾಲ್ಕು ಕಿ.ಮೀ. ಉದ್ದದ ಅಕ್ರಮ ರಸ್ತೆ ನಿರ್ಮಿಸಿ ರಕ್ಷಿತಾರಣ್ಯದೊಳಗೇ ಕರ್ನಾಟಕದಿಂದ ಕಳವು ಮಾಡಿ ಸಾಗಿಸಿದ ಅದಿರನ್ನು ಡಂಪ್ ಮಾಡಿದ್ದಾರೆ. ಇವೆಲ್ಲಾ ಘೋರ ಕ್ರಿಮಿನಲ್ ಕೆಲಸಗಳು. ರೆಡ್ಡಿಗಳಿಗೆ ಮೈನಿಂಗ್ ಲೀಸ್ ಸಿಕ್ಕಿರುವ ಯಾವ ಏರಿಯಾದಲ್ಲೂ 36 ಗ್ರೇಡ್‌ಗಿಂತ ಹೆಚ್ಚಿನ ಕ್ವಾಲಿ[...] ಅದಿರು ಇರಲಿಲ್ಲ ಎಂದು ಮೊದಲೇ ಹೇಳಿದೆಯಷ್ಟೆ[...] ಬಗ್ಗೆ ಸರ್ವೇ ಸ್ಯಾಂಪಲ್‌ಗಳು, ರಿಪೋರ್ಟ್‌ಗಳೂ [...] ಆದರೂ ರೆಡ್ಡಿಗಳು 65 ಗ್ರೇಡಿನ 29.3 ಲಕ್ಷ [...] ಅದಿರನ್ನು ಎಲ್ಲಿಂದ ತೆಗೆದರೆಂಬ ಪ್ರಶ್ನೆ ಈಗ ಮೇಲೇ[...] ಈ 29.3 ಲಕ್ಷ ಟನ್ ಅದಿರು ರಫ್ತಿನ ರಿಪೋ[...] ಓಬಳಾಪುರಂ ಮೈನಿಂಗ್ ಕಂಪೆನಿಯವರೇ ಕೇಂದ್ರ[...] ಇಲಾಖೆಗೆ ನೀಡುತ್ತಿದ್ದ ಮಾಸಿಕ ವರದಿಗಳಲ್ಲಿದೆ.

ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ, ಸೋಮಶೇ[...] ರೆಡ್ಡಿ, ಶ್ರೀರಾಮುಲು ಈ ನಾಲ್ಕು ಜನ [...] ದರೋಡೆಕೋರರು ಎಂಬುದು ಸಾಬೀತಾಗಲು [...] ಹೆಚ್ಚು ದಿನ ಬೇಕಾಗಿಲ್ಲ, ಈ ದಕಾಯಿತರ [...] ನಾಯಿಯಂತೆ ವರ್ತಿಸುತ್ತಿರುವ, 'ರೆಡ್ಡಿ ರಿಪಬ್[...] ಜವಾನನಂತೆ ಇರುವ ಮುಖ್ಯಮಂತ್ರಿ ಯಡಿಯೂ[...] ಈ ದರೋಡೆಯಲ್ಲಿ ಶಾಮೀಲಾಗಿದ್ದಾನೆ. ಟಪಾಲ್ ಗ[...] ಈ ದರೋಡೆಯನ್ನು ಬೆಳಕಿಗೆ ತರುತ್ತಿದ್ದಾರೆಂಬ [...] ಕಾರಣಕ್ಕೆ ಅವರ ಕೊಲೆಯತ್ನ ನಡೆದಿದೆ.

ಅಂದರೆ, ಯಡ್ಡಿ-ರೆಡ್ಡಿಗಳು ತಮ್ಮ ದರೋಡೆ[...] ಮುಚ್ಚಿಟ್ಟುಕೊಳ್ಳಲು, ಕೊಲೆ ಮಾಡಿಸಲು ಹೇಸು[...] ಎಂದಾಯಿತು.

▸▸ ಕಾರ್ಟೂನ್ ಕಾರ್ನರ್



ಕನ್ನಡ ಚಳವಳಿ ನಾ.ಗೌಡ ಶಾಮೀಲು



ರೆಡ್ಡಿ ಬ್ರದರ್ಸ್‌ಗಳಿಂದ ಬೆಂಗಳೂರಿನ ಯಾವ್ಯಾವ ಕನ್ನಡ ಚಳವಳಿಯ ನಾಯಕರು ಎಷ್ಟೆಷ್ಟು ಹಣ ಕಿತ್ತು ತಿಂದಿದ್ದಾರೋ ಏನೋ ಒಬ್ಬನೂ ಗಣಿ ಲೂಟಿ ಬಗ್ಗೆ ಮಾತಾಡುತ್ತಿಲ್ಲ, ಇದು ಕೇವಲ ಅದಿರು ಲೂಟಿಯ ಪ್ರಶ್ನೆ ಮಾತ್ರವಲ್ಲ, ಈ ಜನಾರ್ದನ ರೆಡ್ಡಿ ಕರ್ನಾಟಕ-ಆಂಧ್ರ ಗಡಿ ರೇಖೆಯನ್ನೇ ಬದಲಾಯಿಸಿ, ಗಡಿ ಗುರುತು[...] ಅಳಿಸಿರುವುದು ಮೇಲುನೋಟಕ್ಕೆ ಅರ್ಥವಾಗುತ್ತದೆ. ಜೊತೆಗೆ ಕರ್ನಾಟಕ ಭಾಗದಿಂದ ಲಕ್ಷಾಂತರ ಟನ್[...] ಅದಿರನ್ನು ಈ ರೆಡ್ಡಿಗಳು ಕಳ್ಳತನ ಮಾಡಿದ್ದಾರೆ. ಆದರೆ ಭುವನೇಶ್ವರಿ ತಾಯಿಯ ಸುಪುತ್ರರಾದ ನಾರಾಯಣ[...] ವಾಟಾಳ್ ನಾಗರಾಜ್ ಹೀಗೆ ಯಾರೊಬ್ಬರೂ ಈ ಬಗ್ಗೆ ದನಿ ಎತ್ತದೆ ಮೌನದಿಂದಿರುವುದು ಆಶ್ಚರ್ಯಕರ[...]

ಹೊಗೇನಕಲ್ ಗಡಿ ವಿವಾದ, ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ನಿತ್ಯ ಹೋರಾಟ ನಡೆಸು[...] ನಾಯಕಮಣಿಗಳಿಗೆ ರೆಡ್ಡಿಗಳು ಕರ್ನಾಟಕ ಗಡಿಯನ್ನೇ ನುಂಗಿ ತಮ್ಮ 'ರೆಡ್ಡಿ ರಾಜ್ಯ'ದೊಳಗೆ ಸೇರಿಸಿಕೊಂಡಿ[...] ಅನ್ಯಾಯ ಎನಿಸದಿರುವುದು ಗಮನಾರ್ಹವಲ್ಲವೆ? ಇದಕ್ಕೇನು ಕಾರಣವಿರಬಹುದು?

ಾಳಗಿಯ ರಕ್ತದೋಕುಳಿಯ ಹಿಂದೆ ದರ್ಶನಾಪುರನ ನೆರಳು



ದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕ ಮತಕ್ಷೇತ್ರದ) ಯಾಳಗಿಯ ಶರಣಗೌಡ ಡ ಹೊಸ್ಮನಿಯನ್ನು ಸಿಂದಗಿಯ ಮುಖ್ಯ ಹಾಡುಹಗಲೇ ತೀರಾ ಹೀನಾಯವಾಗಿ ಕೊಲೆ ಗಿದೆ. ಈ ಬರ್ಬರ ಕೊಲೆಯ ಹಿಂದೆ ಭೀಮಾ ಹಂತಕರಿದ್ದಾರೆ ಎಂದು ಆರಂಭದಲ್ಲಿ ಅನಿಸಿ ಕೊಲೆಯ ಹಿಂದಿರುವ ನಿಗೂಢ ಕೈಗಳನ್ನು ತ್ತ ಹೊರಟ ವರದಿಗಾರನಿಗೆ ದೊರಕಿದ್ದು ಮರ ಶರಣಬಸ್ಸಪ್ಪಗೌಡ ಎಂಬ ಫ್ಯೂಡಲ್ ಕಿಯ ಕೀಳು ರಾಜಕೀಯ.

ಾಜಕತೆಯ ರಾಜಕೀಯ

ಹಲವು ವರ್ಷಗಳಿಂದಲೂ ಶಹಾಪುರ ಮತಕ್ಷೇತ್ರದ ಪಟ್ಟಿ ಹೇಳಿಕೇಳಿ ಕಾಂಗ್ರೆಸ್‌ಗಳ ತವರುಮನೆ. ಯ ಶೇಖರಗೌಡ ಹೊಸ್ಮನಿ, ಗೌಡಪ್ಪಗೌಡ ಭೀಮಣ್ಣಗೌಡ ದೇಸಾಯಿ, ಹದ್ನೂರಿನ ಲಿಂಗಣ್ಣ ಸಾಯಿ ಮುಂತಾದವರೆಲ್ಲ ಅನುಗಾಲದಿಂದಲೂ ಪಕ್ಷವನ್ನು ಬೆಂಬಲಿಸುತ್ತ ಪೋಷಿಸುತ್ತ ಬಂದವರು. ಣೆಯ ಫಲಿತಾಂಶದಲ್ಲಿ ಕೆಂಭಾವಿ ಪಟ್ಟಿ ಯಾವ ಲುತ್ತದೋ ಆ ವ್ಯಕ್ತಿ ಗೆಲ್ಲುವುದು ಗ್ಯಾರಂಟಿ ಪ್ರತೀತಿಯೇ ಇದೆ.

ರೆ ಅದೇನು ಕಾರಣವೋ, ದೇಶಕ್ಕೆ ಸ್ವಾತಂತ್ರ್ಯ ನವತ್ತು ಮೂರು ವರ್ಷಗಳೇ ಕಳೆದುಹೋಗಿದ್ದರೂ ಗದಲ್ಲಿ ಇರುವಷ್ಟು ಅನಾರ್ಕಿ, ಅರಾಜಕತೆ, ುಲಿಗೆಗಳು ಇನ್ನಾವ ಭಾಗದಲ್ಲಿಯೂ ಇಲ್ಲ. ಪತ್ತಿನಲ್ಲಿ ಏನಿಲ್ಲವೆಂದರೂ ಒಂದೆರಡು ಹೆಣಗಳು ದೆ ಹೋದರೆ ಈ ಭಾಗದ ಜನಗಳಿಗೆ ನೆಮ್ಮದಿ ೂ ಸಿಕ್ಕುತ್ತದೊ ಇಲ್ಲವೋ?


ಜಾರಿನ ಸಂಗತಿಯೆಂದರೆ ಇಂಥ ಅನಾರ್ಕಿ ರಣವನ್ನು ಕಿತ್ತು ಹಾಕಿ ಅಲ್ಲಿ ಹೊಸ ಮನ್ವಂತರದ ಹಾಡಬೇಕಾದ ಮತಕ್ಷೇತ್ರದ ಶಾಸಕ ದರ್ಶನಾ ಮಾತ್ರ ತನ್ನ ಮತಕ್ಷೇತ್ರದ ಜನಗಳ ನಡುವಿನ ನ್ನು ತನ್ನ ರಾಜಕೀಯ ಬೆಳವಣಿಗೆಗೆ ಬಳಸಿಕೊಳ್ಳು ಇದರ ಪರಿಣಾಮವೇ ಶರಣಗೌಡನ ಕೊಲೆ.

ಗೆ ನೋಡಿದರೆ ಯಾಳಗಿ ಗ್ರಾಮದ ಶೇಖರಗೌಡ ಹಾಗೂ ಕೆಲವು ವರ್ಷಗಳ ಹಿಂದೆ ಕೊಲೆಯಾದ ರೆಡ್ಡಿ ಶರಣಪ್ಪಗೌಡ ಪಾಟೀಲರಿಗೂ ಅಂಥ ೇನೂ ಇದ್ದಿರಲಿಲ್ಲ. ಬದಲಾಗಿ ಶರಣಪ್ಪಗೌಡನಿಗೆ ಸೇರಬಹುದಾಗಿದ್ದ ಆಸ್ತಿಯನ್ನು ತನ್ನ ದಿಟ್ಟ ಳ ಮೂಲಕ ಒದಗಿಸಿಕೊಟ್ಟವರು ಶೇಖರಗೌಡರ ತಂದೆ ಸಂಗಣ್ಣಗೌಡರು. ಹೀಗಾಗಿ ಎರಡು ಮನೆತನಗಳ ನಡುವೆ ಜಗಳಗಳೇ ಇರಲಿಲ್ಲ. ಇಂಥ ಸುಮಧುರವಾದ ಸಂಬಂಧಗಳಿಗೆ ಕೊಳ್ಳಿ ಇಟ್ಟಿರುವುದೇ ಕೀಳು ರಾಜಕೀಯ.


ಹೇಳಿಕೇಳಿ ಶೇಖರಗೌಡ ಹೊಸ್ಮನಿಯವರದು ರಾಜಕೀಯವಾಗಿ ಬಲಾಢ್ಯವಾದ ಗುಂಪು. ಹಿಂದೆ ಒಂದೆರಡು ಸಲ ದಿ.ಬಾಪುಗೌಡ ದರ್ಶನಾಪುರ ಹಾಗೂ ಶರಣಬಸಪ್ಪ ಗೌಡ ದರ್ಶನಾಪುರರಿಗೂ ನೀರು ಕುಡಿಸಿದ್ದರು. ಆದ್ದರಿಂದಲೆ ದರ್ಶನಾಪುರ ಮಂತ್ರಿಯಾಗಿದ್ದಾಗ ತನಗೆ ಟಾಂಗು ಕೊಡುವ ಕೆಂಭಾವಿ ಪಟ್ಟಿಯ ಜನಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಹಣಿಯಲು ವ್ಯವಸ್ಥಿತ ಪಿತೂರಿಯನ್ನೆ ನಡೆಸಿದ್ದರು. ಆದರೆ ಶೇಖರಗೌಡ ಹಾಗೂ ಅವರ ಮಕ್ಕಳಾದ ಶರಣಗೌಡ ಹಾಗೂ ರಾಜೂಗೌಡನ ನಡವಳಿಕೆಗಳು ಜನಸಾಮಾನ್ಯರಿಗೆ ಹತ್ತಿರವಾಗಿದ್ದರಿಂದ ದರ್ಶನಾಪುರ ಏನನ್ನೂ ಮಾಡಲಾಗಿರಲಿಲ್ಲ. ಇದೆಲ್ಲ ದರ್ಶನಾಪುರಗೆ ನುಂಗಲಾಗದ ಬಿಸಿ ತುಪ್ಪವಾಗಿ ಪರಿಣಮಿಸಿತು.

ಅಬೇಧ್ಯವಾಗಿರುವ ಈ ರಾಜಕೀಯ ಕೋಟೆಯನ್ನು ಹೇಗಾದರೂ ಸೈ ಒಡೆಯಬೇಕೆಂದು ದರ್ಶನಾಪುರ ನಿಶ್ಚಯಿಸಿದ್ದರಿಂದ ಬೆಂಗಳೂರಿನಲ್ಲಿ ತನ್ನಷ್ಟಕ್ಕೆ ತಾನು ಕೆಲಸ ಮಾಡಿಕೊಂಡಿದ್ದ ಸಂಜೀವರಡ್ಡಿ ಶರಣಪ್ಪಗೌಡ ಯಾಳಗಿ ಎಂಬ ಹದಿಹರೆಯದ ಯುವಕನನ್ನು ಹೊಂಚುಹಾಕಿ ಮತ್ತೆ ಯಾಳಗಿಗೆ ಕರೆತಂದ. ಆತನಿಗೆ ಇನ್ನಿಲ್ಲದ ಸಪರ ನೀಡಿ ಆತ ಸರಕಾರಿ ಕಚೇರಿ, ಗುತ್ತೇದಾರಿಕೆಯಲ್ಲಿಯೂ ನುರಿಯುವಂತೆ ವ್ಯವಸ್ಥಿತವಾಗಿ ನೋಡಿಕೊಂಡ. ಏಕೆಂದರೆ ಸಂಜೀವರೆಡ್ಡಿ ಎಲ್ಲಿಯವರೆಗೆ ಬಲಾಢ್ಯನಾಗಿ ಹೊರಹೊಮ್ಮುತ್ತಾನೋ ಆಗ ಸಹಜವಾಗಿಯೇ ಶರಣಗೌಡ ಹಾಗೂ ಅತನ ತಂದೆ ಶೇಖರಗೌಡರ ಹುಟ್ಟು ಅಡಗಿಸಲು ಸಾಧ್ಯ ಎಂಬುದು ದರ್ಶನಾಪುರ ಲೆಕ್ಕಾಚಾರವಾಗಿತ್ತು. ಜೊತೆಗೆ ಯಾಳಗಿ ಸುತ್ತ ಮುತ್ತಲ ಗ್ರಾಮದ ರಾಜಕೀಯ ಚುಕ್ಕಾಣಿಯೂ ತನ್ನ ಕೈಗೆ ಬಂದಂತೆ ಎಂದು ತಿಳಿದದ್ದರಿಂದ ಸಂಜೀವರೆಡ್ಡಿಯನ್ನು ನೋಡ ನೋಡುತ್ತಿದ್ದಂತೆ ಆ ಭಾಗದ ಮರಿನಾಯಕನನ್ನಾಗಿ ರೂಪಿಸಿಯೆ ಬಿಟ್ಟ. ಆದರೆ ಸಂಜೀವರೆಡ್ಡಿ ದರ್ಶನಾಪುರನ ಮೂಲಕ ಬೆಳೆದದ್ದರಿಂದ ಈತನ ಬೇರುಗಳು ಹಳ್ಳಿಯ ಜನಗಳ ಹೃದಯದೊಳಗೆ ನಾಟಲಿಲ್ಲ.


ಆದರೇನಂತೆ, ಅಡಗಂಟತನ ಮಾಡಬೇಕೆಂದೆ ಹುಟ್ಟಿಕೊಂಡಿದ್ದ ಸಂಜೀವರೆಡ್ಡಿ ಸುಮ್ಮಸುಮ್ಮನೆ ಇಲ್ಲದ ಕ್ಯಾತೆ ತೆಗೆದು ತಕರಾರು ಮಾಡುತ್ತಿದ್ದ. ಇದರಿಂದಾಗಿ ಹಿಂದೊಮ್ಮೆ ಪರಸ್ಪರ ಸ್ನೇಹ, ವಿಶ್ವಾಸ, ಗೌರವಗಳಿಂದ ಬದುಕಿದ್ದ ಕುಟುಂಬಗಳು ಯಾರದೋ ತೆವಲಿಗೆ ಬಿದ್ದು ಬದ್ಧ ವೈರಿಗಳಂತೆ ವರ್ತಿಸತೊಡಗಿದವು. ನಾ ಹೆಚ್ಚು ನೀ ಹೆಚ್ಚು ಎಂಬ ರೊಚ್ಚು ಎರಡೂ ಗುಂಪುಗಳ ನಡುವೆ ನಿರ್ಮಾಣವಾಯಿತು. ಒಂದು ಸಲವಂತೂ ಇದು ಅತಿರೇಕಕ್ಕೆ ಹೋಗಿ



ಯಾಳಗಿ ಶೇಖರಗೌಡನ ಮಗ ರಾಜುಗೌಡನ ಮೇಲೆ ಸಂಜೀವರೆಡ್ಡಿಯ ಗುಂಪು ಅಟ್ಯಾಕ್ ಮಾಡಿ ಸುಮಾರು ನಲವತ್ತೆರಡು ತಲವಾರದ ಏಟುಗಳಿಂದ ತಿವಿದುಹೋಯಿತು. ಆದರೂ ಅದು ಹೇಗೋ ರಾಜುಗೌಡ ಬಚಾವಾದ. ಸಹಜವಾಗಿಯೆ ಸಂಜೀವರೆಡ್ಡಿಯ ಗುಂಪಿನ ಮೇಲೆ 307 ಕಲಂನ ಅನ್ವಯ ಕೇಸ್ ದಾಖಲಾದವು. ಆದರೆ ಮಂತ್ರಿ ದರ್ಶನಾಪುರರ ಕೃಪಾಕಟಾಕ್ಷ ಇದ್ದುದರಿಂದ ಅವೆಲ್ಲ ಕೆಲವೇ ದಿನಗಳಲ್ಲಿ ಸತ್ವಹೀನವಾದವು.



ಲಿಂಗನಗೌಡ



ಅಮೀನ ರೆಡ್ಡಿ



ರಾಜುಗೌಡ

ಇದಕ್ಕೆಲ್ಲ ಅಖಾಡವೆಂಬಂತೆ ಗ್ರಾಮ ಪಂಚಾಯತಿ ಚುನಾವಣೆಗಳು ಬಂದುಬಿಟ್ಟವು. ಗ್ರಾ.ಪಂ ಚುನಾವಣೆಗಳಲ್ಲಿ ಸಂಜೀವರೆಡ್ಡಿ ಗುಂಪು ಹೀನಾಯವಾಗಿ ನೆಲಕಚ್ಚಿತು. ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಿಲ್ಲವೆಂದು ಸಂಜೀವರೆಡ್ಡಿ ತೋಳೇರಿಸಿಕೊಂಡು ತೊಡೆತಟ್ಟತೊಡಗಿದ. ಗ್ರಾಮ ಪಂಚಾಯತಿಯ ವತಿಯಿಂದ ವಸತಿಹೀನರಿಗೆ, ದುರ್ಬಲರಿಗೆ, ಹಿಂದುಳಿದವರಿಗೆ ವಸತಿ ಒದಗಿಸುವ ಯೋಜನೆ ಬಂದದ್ದೇ ತಡ, ಸಂಜೀವ ರೆಡ್ಡಿ ತನಗೆ ಅಧಿಕಾರವಿಲ್ಲದೆ ಇದ್ದರೂ ದರ್ಶನಾಪುರರ (ಆಗ ಆತ ವಿದ್ಯುತ್ ಖಾತೆ ಸಚಿವ) ಬೆಂಬಲದಿಂದ ತಾನು ತಯಾರಿಸಿದ ಪಟ್ಟಿಯೇ ಕೊನೆಯಾಗಬೇಕೆಂದು ಹಠ ಹಿಡಿದ. ಗ್ರಾಮ ಪಂಚಾಯತಿಯ ಚೇರ್ಮನ್ ಆಗಿದ್ದ ರಾಜೂಗೌಡ ಯಾಳಗಿ ಸಹಜವಾಗಿಯೆ ತಾವು ಸಮೀಕ್ಷೆ ಮಾಡಿದ ಪಟ್ಟಿಯೆ ಅಂತಿಮವಾಗಬೇಕೆಂದು ವಾದ ಹೂಡಿದರು.

ಕೊನೆಗೆ ಒಂದು ದಿನ ಸುರಪುರ ತಾಲೂಕು ಪಂಚಾಯತಿಯ ಮುಂದೆಯೆ ಸಂಜೀವರೆಡ್ಡಿ ಬರ್ಬರವಾಗಿ ಕೊಲೆಯಾದ. ಸಹಜವಾಗಿಯೆ ರಾಜೂಗೌಡ, ಶರಣಗೌಡ, ಇವರ ತಂದೆ ಶೇಖರಗೌಡ ಹೊಸ್ಮನಿ ಹಾಗೂ ಇತರರು ಕೊಲೆಯ ಆಪಾದನೆಯ ಮೇರೆಗೆ ಜೇಲು ಸೇರಿದರು. ಹೊಸ್ಮನಿಯ ಕುಟುಂಬ ಹಾಗೂ ಇತರರು ಜೇಲು ಸೇರಿದ್ದೇ ತಡ, ಸಂಜೀವರೆಡ್ಡಿ ಕುಟುಂಬದ ಅಮೀನರೆಡ್ಡಿಯ ಆಟಾಟೋಪ ಮೇರೆ ಮೀರಿತು. ಕಂಡಕಂಡವರ ಹೊಲದ ರಾಶಿಯನ್ನು ತಾನೇ ಮಾಡಿಕೊಂಡ. ಸರಕಾರದ ಹಲವಾರು ಕಾಮಗಾರಿಗಳನ್ನು ಮಾಡಿಸಿದ್ದೇನೆಂದು ಹೇಳಿ ಖೊಟ್ಟಿ ಬಿಲ್ ಎತ್ತಿಹಾಕಿದ. ಗ್ರಾಮ ಪಂಚಾಯತಿಗೆ ಬಂದ ಕೋಟ್ಯಂತರ ಗ್ರ್ಯಾಂಟ್‌ಗಳನ್ನು ಗಟಗಟನೆ ನುಂಗಿ ನೀರು ಕುಡಿದ. ಇದಕ್ಕೆಲ್ಲ ಬಹಿರಂಗವಾಗಿಯೆ ಶರಣಬಸಪ್ಪಗೌಡ ದರ್ಶನಾಪುರರ ಕಾಕ ಬಸವರಾಜಪ್ಪಗೌಡನ ಬೆಂಬಲವಿತ್ತು.

ಸಂಧಾನದ ನಾಟಕ

ಆಶ್ಚರ್ಯಕರ ಬೆಳವಣಿಗೆಯಲ್ಲಿ ಶರಣಬಸ್ಸಪ್ಪಗೌಡ ದರ್ಶನಾಪುರ ತನ್ನ ರಾಜಕೀಯ ಸ್ವಾರ್ಥಕ್ಕಾಗಿ ಜನತಾದಳ ತೊರೆದು ಕಾಂಗ್ರೆಸ್ ಪಕ್ಷದ ಮಡಿಲಿಗೆ ಬಂದ. ಇದೆಲ್ಲ ಹಿಂದಿನ ನಿಷ್ಠಾವಂತ ಕಾಂಗ್ರೆಸ್ ಗುಂಪಿಗೆ ಇರಿಸುಮುರಿಸು ಉಂಟುಮಾಡಿತು. ಮುಂದಿನ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು ಎಂದು ಚಿಂತಿಸುತ್ತಿರುವಾಗಲೇ ಹದ್ನೂರಿನ ಲಿಂಗಣ್ಣಗೌಡ ದೇಸಾಯಿಯವರು ಚುನಾವಣೆಯಲ್ಲಿ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದರು. ದೇಸಾಯಿಯವರು ಹಿಂದೊಮ್ಮೆ 1989ರಲ್ಲಿ ಇದೆ ಮತಕ್ಷೇತ್ರದಿಂದ ಸ್ಪರ್ಧಿಸಿ 17,000 ಕ್ಕೂ ಹೆಚ್ಚು ಮತಗಳನ್ನು ಪಡೆದಿದ್ದರು. ಮೇಲಾಗಿ ತನ್ನ ಸವ್ಯ-ಸಾಚಿ ನಡವಳಿಕೆಗಳ ಮೂಲಕ ಹೆಸರಾದವರು. ತನ್ನ ಸಜ್ಜನತೆಗಳ ಮೂಲಕ ಜನಮಾನಸವನ್ನು ಗೆದ್ದುಕೊಂಡಿರುವ ದೇಸಾಯಿಯವರು ಸ್ಪರ್ಧಿಸಿದರೆ ತನ್ನ ಸೋಲು ಗ್ಯಾರಂಟಿ ಎಂದು ಅರಿತ ದರ್ಶನಾಪುರ ರಾತ್ರೋರಾತ್ರಿ ದೇಸಾಯಿಯವರ ಮನೆಗೆ ಹೋಗಿ ಅಂಗಲಾಚತೊಡಗಿದ. ಆದರೆ ದರ್ಶನಾಪುರರ ಹಿತ್ತಲ ಬಾಗಿಲ ರಾಜಕೀಯ ಕಂಡಿದ್ದ ದೇಸಾಯಿ ದರ್ಶನಾಪುರ ಮಾತಿಗೆ ಸೊಪ್ಪು ಹಾಕಲಿಲ್ಲ.

ಕೊನೆಯ ಪ್ರಯತ್ನ ಎಂಬಂತೆ ದರ್ಶನಾಪುರ ತಮ್ಮ ಅನುಗಾಲದ ವಿರೋಧಿ ಯಾಳಗಿಯ ಶೇಖರಗೌಡರನ್ನು ಭೇಟಿಯಾಗಿ "ಸಂಜೀವರೆಡ್ಡಿ ಕೊಲೆಯ ಸಂದರ್ಭದಲ್ಲಿ ಹಾಕಿದ್ದ ಎಲ್ಲಾ ಕೇಸುಗಳನ್ನು ಹಂತಹಂತವಾಗಿ ತೆಗೆಸುತ್ತೇನೆ. ನೀವು ಅವರ ಕುಟುಂಬದ ಮೇಲೆ ಹಾಕಿದ್ದ ಎಲ್ಲಾ ಕೇಸ್‌ಗಳನ್ನು ವಾಪಾಸ್ ಪಡೆಯಿರಿ. ನಿಮ್ಮ ಎರಡೂ ಕುಟುಂಬಗಳ ನಡುವಿನ ಜಗಳವನ್ನು ಬಗೆಹರಿಸುತ್ತೇನೆ. ನೀವೆಲ್ಲರೂ ನನ್ನನ್ನು ಬೆಂಬಲಿಸಿ ನನ್ನನ್ನೇ ಗೆಲ್ಲಿಸಿ" ಎಂದು ಕೇಳಿಕೊಂಡ. ದರ್ಶನಾಪುರರ ಈ ಮಾತನ್ನು ನಂಬಿದ ಹೊಸ್ಮನಿ ಕುಟುಂಬದ ಸದಸ್ಯರು ಚುನಾವಣೆಯ ಕಣದಿಂದ ದೇಸಾಯಿಯವರನ್ನು ಹಿಂದೆ ಸರಿಸಿದರು. ಹಾಗೆಯೇ ಚುನಾವಣೆಯಲ್ಲಿ ಶರಣಬಸ್ಸಪ್ಪಗೌಡ ದರ್ಶನಾಪುರ ಬಹುಮತದಿಂದ ಗೆಲ್ಲುವಂತೆ ಪ್ರಾಮಾಣಿಕ ಪ್ರಯತ್ನ ಮಾಡಿದರು.

ಈ ಮಧ್ಯೆ ಶೇಖರ ಗೌಡ ಕುಟುಂಬದ ಬಗ್ಗೆ ಸಂಜೀವರೆಡ್ಡಿ ಕುಟುಂಬದ ಹಗೆ-ದ್ವೇಷ ದಳ್ಳುರಿಯಂತೆ ಒಳಗೊಳಗೆ ಉರಿಯುತ್ತಿರುವುದು ಮಾತ್ರ ಯಾರ ಗಮನಕ್ಕೂ ಬಾರದೇ ಹೋಯಿತು. ಆದರೂ ಸಂಜೀವರೆಡ್ಡಿ ಕೊಲೆಯ ಕೇಸಿಗೆ ಸಂಬಂಧಿಸಿದಂತೆ ಸಾಕ್ಷಿ ನುಡಿಯಬೇಕಿದ್ದ ಸಂಜೀವರೆಡ್ಡಿ ಕುಟುಂಬದ ಸದಸ್ಯರು ಕಳೆದ ಫೆಬ್ರುವರಿ 5 ರಂದು ಕೋರ್ಟಿಗೆ ಹಾಜರಾಗದೆ ಸಹಕರಿಸಿದರು. ಹೀಗಾಗಿ ಜೀವದ ಭಯ ಇಲ್ಲದೆ ಶೇಖರ ಗೌಡ ಕುಟುಂಬದವರು ನಿರ್ಭೀತಿಯಿಂದ ಎಲ್ಲೆಡೆ ತಿರುಗಾಡತೊಡಗಿದರು. ಈ ಮೊದಲು ತಮ್ಮ ಜೊತೆಗೆ ತೆಗೆದುಕೊಂಡು ಹೋಗುತ್ತಿದ್ದ ಮಾರಕಾಸ್ತ್ರಗಳು, ರಿವಾಲ್ವರ್‌ಗಳು ಎಲ್ಲಾ ಮೂಲೆ ಸೇರಿದರು.

ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಸಂಜೀವರೆಡ್ಡಿ ಕುಟುಂಬದ ಸದಸ್ಯರುಗಳಾದ ಅಮೀನರೆಡ್ಡಿ, ಶಶಿಧರ, ಶರಣಪ್ಪಗೌಡ, ಶಂಕ್ರಪ್ಪಗೌಡ, ಮಲ್ಲಣ್ಣಗೌಡ, ಗೌಡಪ್ಪಗೌಡ, ಶ್ರೀನಿವಾಸರೆಡ್ಡಿ, ಪ್ರಕಾಶರೆಡ್ಡಿ ಹೀಗೆ ಒಂಭತ್ತು ಜನಗಳ ಹಂತಕ ಪಡೆ ಮೊನ್ನೆ ಶೇಖರಗೌಡನ ಮಗ ಶರಣಗೌಡನನ್ನು ನಡುರಸ್ತೆಯಲ್ಲೇ ಗುಂಡಿಟ್ಟು ಕೊಂದಿದೆ.

ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಶಾಸಕನೊಬ್ಬ ಆಡಿದ ಆಟಕ್ಕೆ ಎರಡು ಕುಟುಂಬಗಳು ಬದ್ಧ ವೈರಿಗಳಂತೆ ಕಾದಾಡುತ್ತಾ ಸಾಯುತ್ತಿವೆ. ದರ್ಶನಾಪುರರು ಈಗಲಾದರೂ ಮುಂದೆ ನಿಂತು ಈ ಕುಟುಂಬಗಳ ಮಧ್ಯೆ ರಾಜಿ ಮಾಡಿಸದೇಹೋದರೆ ಈ ವೈರತ್ವದ ಬೆಂಕಿ ಕೊನೆಗೆ ಅವರಿಗೇ ಬಿಸಿ ಮುಟ್ಟಿಸಲಿದೆ.

• ವರದಿಗಾರ

ೆಯನ್ನು ಕೊಂದವರ್‍ಯಾರು?

ತಮ್ಮ ಈ ಚಾರ್ಜ್‌ಶೀಟಿನಲ್ಲಿ ಕರ್ಕರೆಯನ್ನು ರೋಪಿಗಳಿಗೆ ಉದ್ದೇಶವಿದ್ದದ್ದನ್ನು ಅನುಮಾನಕ್ಕೆಡೆ ಸಾಬೀತುಮಾಡುವ ಮುಶ್ರಿಫ್ ಅವರು 26/ ನಡೆದ ಕಾರ್ಯಾಚರಣೆಯಲ್ಲಿ ಹೇಗೆ ಅಪರಾಧ ಎಂಬ ಕ್ಷಣಕ್ಷಣದ ವಿವರವನ್ನು ಕಟ್ಟಿಕೊಡು

ಪ್ರಕಾರ 26/11ರಂದು ನಡೆದದ್ದು ಎರಡು ರಣೆಗಳು. ಮೊದಲನೆಯದು ತಾಜ್, ಟ್ರೈಡೆಂಟ್ ರಿಮನ್ ಪಾಯಿಂಟ್‌ಗಳಲ್ಲಿ ಪಾಕಿಸ್ತಾನ ಪ್ರೇರಿತ ಗಳು ನಡೆಸಿದ ದಾಳಿ. ಎರಡನೆಯದು ಛತ್ರಪತಿ ರ್ಮಿನಸ್, ಕಾಮಾ ಆಸ್ಪತ್ರೆ ಮತ್ತು ರಂಗಭವನ್ ಈ ದೇಶದ ಬೇಹುಗಾರಿಕಾ ಪಡೆ ಅದರಲ್ಲೂ ಾಗಿ ಗುಪ್ತದಳ (ಐಬಿ)ದಲ್ಲಿರುವ ಕೆಲವು ದಿ ಅಧಿಕಾರಿಗಳ ಷಡ್ಯಂತ್ರದ ಪ್ರಕಾರ ಹೇಮಂತ್ ನ್ನು ಕೊಲ್ಲಲು ನಡೆದ ಕಾರ್ಯಾಚರಣೆ.

ಡ ದಾಳಿ ತಾಜ್ ಬಳಿ ನಡೆಯುತ್ತಿದ್ದರೂ ಸ ಸಹಾಯಕರಾದ ಸಾಲಸ್ಕರ್ ಮತ್ತು ಇನ್ನಿತರನ್ನು ಆಸ್ಪತ್ರೆ, ಬಳಿ ಕಂಟ್ರೋಲ್ ರೂಮಿನಿಂದ ರಣ ಮಾಡಲಾಯಿತು. ಅಲ್ಲಿ ಹೋದೊಡನೆ ೀಜಿ ಮರಾಠಿ ಮಾತಾಡುತ್ತಿದ್ದ "ಸ್ವದೇಶಿ ಉಗ್ರಗಾಮಿಗಳು" ದಾಳಿ ಮಾಡಿ ಕ್ರೂರವಾಗಿ ಕೊಂದು ಹಾಕಿದರು. 26/11ರ ದಾಳಿಯ ಪ್ರಧಾನ ಕಥೆಯಲ್ಲಿ ಈ ಉಪಕಥೆ ಯಾರ ಗಮನಕ್ಕೆ ಬರದಂತೆ ಮುಚ್ಚುಹಾಕುವಲ್ಲಿ "ಬ್ರಾಹ್ಮಣವಾದಿಗಳು" ಯಶಸ್ವಿಯಾದರು.

ವಾಸ್ತವವಾಗಿ ಕರ್ಕರೆ ಹತ್ಯೆಯ ನಂತರ ನಡೆದ ಬೆಳವಣಿಗೆಗಳು ಕರ್ಕರೆಯ ಹತ್ಯೆಯನ್ನು ಈ "ಸ್ವದೇಶಿ ಉಗ್ರಗಾಮಿಗಳೇ" ಮಾಡಿರಬಹುದೆಂಬ ಅನುಮಾನವನ್ನು ಇನ್ನಷ್ಟು ಪುಷ್ಟೀಕರಿಸುತ್ತವೆ. ಕರ್ಕರೆ ಹತ್ಯೆಯಾದ 6 ಗಂಟೆಯೊಳಗೆ ರಘುವಂಶಿಯೆಂಬ ಅಧಿಕಾರಿಯನ್ನು ಭಯೋತ್ಪಾದನಾ ನಿಗ್ರಹ ಪಡೆ-ಎಟಿಎಸ್‌ನ ಮುಖ್ಯಸ್ಥನನ್ನಾಗಿ ನೇಮಿಸಲಾಯಿತು. ಈ ರಘುವಂಶಿ ಕರ್ಕರೆಗೆ ಮೊದಲೇ ಆ ಸ್ಥಾನದಲ್ಲಿದ್ದವರು. 2006ರಲ್ಲಿ ನಾಂದೇಡ್‌ನ ಆರೆಸ್ಸೆಸ್ ಕಚೇರಿಯಲ್ಲಿ ಆರೆಸ್ಸೆಸ್ ಉಗ್ರಗಾಮಿಗಳು ಪೈಪ್‌ಬಾಂಬ್ ತಯಾರಿ ಮಾಡುವಾಗ ನಡೆದ ಆಕಸ್ಮಿಕ ಸ್ಫೋಟದಲ್ಲಿ ಹಲವರು ಸತ್ತರೂ ಅದರ ವಿಚಾರಣೆ ಮುಂದಕ್ಕೆ ಹೋಗದಂತೆ ತಡೆದವನು ಈ ರಘುವಂಶಿ. ಅಲ್ಲದೆ ಕರ್ಕರೆಯವರು ಸಂಜೋತ ಎಕ್ಸ್‌ಪ್ರೆಸ್ ಸ್ಫೋಟದ ರೂವಾರಿಯೆಂದು ಯಾವ ಲೆಫ್ಟಿನೆಂಟ್ ಕರ್ನಲ್ ಪುರೋಹಿತ್ ಎಂಬ ಆಸಾಮಿಯನ್ನು ಬಂಧಿಸಿದ್ದರೋ ಅವರ ಶಿಷ್ಯ ಈ ರಘುವಂಶಿ. ಇಂಥಾ ಕ್ರಿಮಿನಲ್ ಹಿನ್ನೆಲೆ ಉಳ್ಳ ಅಧಿಕಾರಿಯನ್ನು ಕರ್ಕರೆಯ ಜಾಗಕ್ಕೆ ಅಷ್ಟು ತುರ್ತಾಗಿ ನೇಮಿಸಿದ್ದು ಏಕೆ?

ಅದರ ಕಾರಣ ಅವರು 2009ರ ಜನವರಿ 20ರಂದು ಮಾಲೆಗಾಂವ್ ಪ್ರಕರಣದಲ್ಲಿ ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿದೆ. ಇದರಲ್ಲಿ ಪ್ರಗ್ಯಾ ಸಿಂಗ್, ಪುರೋಹಿತ್ ಇನ್ನಿತರರ ಮೇಲೆ ಮಾಲೆಗಾಂವ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೇಸು ದಾಖಲಾದರೂ ಇಡೀ ರಾಷ್ಟ್ರದಲ್ಲೇ ಅಸ್ಥಿರತೆ ಉಂಟುಮಾಡಲು ಹೂಡಿದ್ದ ಸಂಚಿನ ಆರೋಪವನ್ನು ಕೈಬಿಟ್ಟಿದ್ದರು. ಅಷ್ಟು ಮಾತ್ರವಲ್ಲ, ಇವರೆಲ್ಲಾ ಒಂದು ಯೋಜಿತ ಗುಂಪಿನ ಸದಸ್ಯರೆಂಬುದನ್ನು ಸಾಬೀತುಮಾಡದ ರೀತಿಯಲ್ಲಿ ಚಾರ್ಜ್‌ಶೀಟ್ ತಯಾರಾದ್ದರಿಂದ ಕೋರ್ಟು ಅವರ ಮೇಲೆ ಮೋಕಾ-ಸಂಘಟಿತ ಅಪರಾಧಗಳ ಕಾಯಿದೆಯನ್ವಯ ಹಾಕಿದ್ದ ಕೇಸುಗಳನ್ನು ವಜಾ ಮಾಡಿತು. ಈ ರಘುವಂಶಿ ಎಷ್ಟು ಬಹಿರಂಗವಾಗಿ ಆರೆಸ್ಸೆಸ್ ಪರವಾಗಿ ಚಾರ್ಜ್‌ಶೀಟ್ ತಯಾರು ಮಾಡಿದ್ದನೆಂದರೆ (ಕರ್ಕರೆಯವರು ಭಜರಂಗದಳದ ಮುಖ್ಯಸ್ಥ ತೊಗಾಡಿಯಾಗೂ ಪುರೋಹಿತ್‌ಗೂ ಇರುವ ಸಂಬಂಧವನ್ನು ಬಯಲಿಗೆಳೆದಿದ್ದರೂ) ಆದರೆ ರಘುವಂಶಿ ತನ್ನ ಚಾರ್ಜ್‌ಶೀಟಿನಲ್ಲಿ ಈ ತೊಗಾಡಿಯಾ ಯಾರೋ ತಮಗೆ ಗೊತ್ತಿಲ್ಲವಾದ್ದರಿಂದ ಬಂಧಿಸಲಾಗಿಲ್ಲವೆಂದು ವರದಿ ನೀಡಿದ್ದ.

ಹೋದವಾರ ಈ ರಘುವಂಶಿಯನ್ನೂ ಎಟಿಎಸ್ ಮುಖ್ಯಸ್ಥ ಸ್ಥಾನದಿಂದ ಕಿತ್ತುಹಾಕಿ ರಾಕೇಶ್ ಮಾರಿಯಾ ಎಂಬುವವರನ್ನು ನೇಮಿಸಲಾಗಿದೆ. ಆದರೆ ಈ ಮಹಾಶಯರು ಯಾರೆಂದರೆ 26/11ರ ದಾಳಿ ನಡೆಯುತ್ತಿದ್ದಾಗ ಕಂಟ್ರೋಲ್ ರೂಮಿನಲ್ಲಿ ಕುಳಿತುಕೊಂಡು ಕರ್ಕರೆಯವರನ್ನು ಕಾಮಾ ಆಸ್ಪತ್ರೆ ಕಡೆಗೆ ಹೋಗಲು "ಮಾರ್ಗದರ್ಶನ" ಮಾಡಿದ ಅಧಿಕಾರಿ!

ಇದು ಹೇಮಂತ್ ಕರ್ಕರೆಯ ಕೊಲೆಯ ಕರಾಳ ಕಥೆ. ಈ ದೇಶದ ಮೇಲೆ ಬ್ರಾಹ್ಮಣವಾದಿಗಳು ನಡೆಸುತ್ತಿರುವ ಘೋರ ರಾಷ್ಟ್ರದ್ರೋಹದ ಕರ್ಮಕಥೆ. ಒಬ್ಬ ಕರ್ಕರೆ, ಒಬ್ಬ ಮುಶ್ರಿಫ್‌ರಂಥ ಅಧಿಕಾರಿಗಳು ಈ ದೇಶವನ್ನು ಅವರ ದಾಳಿಯಿಂದ ರಕ್ಷಿಸಲು ನಡೆಸುತ್ತಿರುವ ವೀರೋದಾತ್ತ ಸಮರದ ಕಥೆ. ಇಂದು ಹೇಮಂತ್ ಕರ್ಕರೆಯನ್ನು ಕೊಂದವರು ಮುಶ್ರಿಫ್ ಅವರ ಹಿಂದೆಯೂ ಬಿದ್ದಿದ್ದಾರೆ. ಈ ಬಗ್ಗೆ ಕೇಳಿದಾಗ ಮುಶ್ರಿಫ್ ಅವರು ಹೇಳಿದ್ದು "ದೇಶ ಮತ್ತು ಸಂವಿಧಾನವನ್ನು ರಕ್ಷಿಸುವ ಸಲುವಾಗಿ ಬೆಕ್ಕಿನ ಕೊರಳಿಗೆ ಯಾರಾದರೂ ಗಂಟೆ ಕಟ್ಟಲೇ ಬೇಕಿತ್ತು, ಆ ಕೆಲಸ ನಾನು ಮಾಡಿದ್ದೇನೆ. ಬೆಕ್ಕಿಗೆ ಈಗ ಅಸಾಧ್ಯ ಸಿಟ್ಟು ಬಂದಿದೆ. ಅದು ಯಾವುದೇ ನೀತಿ, ಧರ್ಮಗಳಿಲ್ಲದ, ಅತ್ಯಂತ ಕ್ರೂರಿಯೆಂದೂ, ಬಲಶಾಲಿಯೆಂದೂ ನನಗೆ ಗೊತ್ತು. ಇದರ ಪರಿಣಾಮಗಳನ್ನು ಅರಿತಿರುವೆ. ದೇಶಕ್ಕಾಗಿ ಏನನ್ನೂ ಎದುರಿಸಲು ಸಿದ್ಧನೂ ಇರುವೆ. ಅದೇ ನಾನು ಕರ್ಕರೆಗೆ ನೀಡುವ ನಿಜವಾದ ಅಶ್ರುತರ್ಪಣ."

ಕರ್ಕರೆಯವರು, ಮುಶ್ರಿಫ್ ಅ[illegible] ದೇಶದ ಜನತೆಯ ಮತ್ತು ಸಂವಿಧಾನದ [illegible]ತ ಋಣ ತೀರಿಸಿದ್ದಾರೆ. ಈಗ ನಮ್ಮ ಸರದಿ. •

'ಕೆಂಡಸಂಪಿಗೆ'ಯ ರಶೀದರಿಗೆ, 'ಕೆಂಡ' ಮತ್ತು 'ಸಂಪಿಗೆ'ಯಂತಹ ಒಂದು ಪತ್ರ

ಇತ್ತೀಚೆಗೆ ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ ಆಯೋಜಿಸಿದ್ದ 'ಭಾರತೀಯ ಸಂವಿಧಾನಕ್ಕೆ 60 ವರ್ಷ-ಕರ್ನಾಟಕದಲ್ಲಿ ಸಾಮಾ ನ್ಯಾಯ ನಡೆದುಬಂದ ದಾರಿ: ನೆನ್ನೆ, ಇಂದು ಮತ್ತು ನಾಳೆ' ಎಂಬ ವಿಚಾರಸಂಕಿರಣದಲ್ಲಿ ಹಿರಿಯ ಲೇಖಕ ದೇವನೂರ ಮಹಾದೇವ ಅವರು ಭಾಗವಹಿ "ಭಾರತ ಸಂವಿಧಾನಕ್ಕೆ 'ಭೂತ' ಚೇಷ್ಟೆ" ಎಂಬ ಭಾಷಣ ಮಾಡಿದ್ದರು. ಈ ಭಾಷಣದ ಪೂರ್ಣಪಠ್ಯವನ್ನು 'ಪ್ರಜಾವಾಣಿ' ದಿನಪತ್ರಿಕೆ ಮತ್ತು ಅಬ್ದು ರಶೀದರು ನಡೆಸುತ್ತಿರುವ 'ಕೆಂಡಸಂಪಿಗೆ' ಎಂಬ ವೈಬ್‌ಸೈಟ್ ಪ್ರಕಟ ಮಾಡಿದ್ದವು.

'ಕೆಂಡಸಂಪಿಗೆ'ಯ ಓದುಗರು ಈ ಲೇಖನಕ್ಕೆ ಎಷ್ಟು ಕೆಟ್ಟದಾಗಿ ಪ್ರತಿಕ್ರಿಯಿಸಿದರೆಂದರೆ ಅವುಗಳನ್ನು ಓದಿ ರೋಸಿಹೋದ ಯುವ ಬರಹಗಾರ ಕೆ.ಎ ಚಂದ್ರಶೇಖರ್ ಐಜೂರ್ ಅವರು ರಶೀದರಿಗೆ ಒಂದು ಭಾವುಕವಾದ ಬಹಿರಂಗ ಪತ್ರವನ್ನು ಬರೆದರು. ಹಾಗೆಯೇ ಮೊನ್ನೆ ಮಹಾದೇವ ಅವ ರಶೀದರಿಗೆ ಒಂದು ಪರತ್ತಿನ ಪತ್ರವನ್ನು ಬರೆದಿದ್ದಾರೆ.

ಸುಶಿಕ್ಷಿತರೂ, ಆಧುನಿಕ ತಂತ್ರಜ್ಞಾನದ ಲಾಭ ಪಡೆದಿರುವವರೂ ಆದ ಬ್ಲಾಗ್ ಲೋಕದಲ್ಲಿನ ಬಹುತೇಕ ಮೇಲ್ಜಾತಿಯ ಜನ ಎಷ್ಟು ಸನಾತನವಾದಿಗಳೆಂದ ಅವರ ಮನಸ್ಸುಗಳು ಎಷ್ಟು ನೀಚವಾಗಿ ಚಿಂತಿಸುತ್ತವೆ ಎಂದೂ ನಮ್ಮ ಓದುಗರು ಅರ್ಥಮಾಡಿಕೊಳ್ಳಲೆಂದು 'ಕೆಂಡಸಂಪಿಗೆ'ಯಲ್ಲಿ ಮಹಾದೇವ ಅ ವಿರುದ್ಧ ವ್ಯಕ್ತವಾದ ಹಲವರ 'ಅಭಿಪ್ರಾಯ'ಗಳನ್ನು ಪ್ರಕಟಿಸಿದ್ದೇವೆ. ಜೊತೆಗೆ ಅವರುಗಳಿಗೆ ಮತ್ತು ರಶೀದರಿಗೆ ಐಜೂರ್ ನೀಡಿರುವ ಛಾಟಿ ಏಟ ಮಹದೇವರ ಪತ್ರವನ್ನೂ ಇಲ್ಲಿ ನೀಡಲಾಗಿದೆ.

ಕನ್ನಡಿಗರು ಪುರೋಹಿತಶಾಹಿಗಳ ದುಷ್ಟ ಮನಸ್ಸನ್ನೂ, ಮಹದೇವರ ನೈಜ ಕಾಳಜಿಯನ್ನೂ, ಐಜೂರ್‌ರಂತಹ ಯುವಕರ ಆತಂಕವನ್ನೂ ಅರಿ ಆರೋಗ್ಯಕರ ಮನುಷ್ಯರಾಗಲಿ ಎಂಬ ಆಶಯ ನಮ್ಮದು.

• ಗೌರಿ ಲಂಕೇ

ಪ್ರಿಯ ಅಬ್ದುಲ್ ರಶೀದರೆ,

ಬಹಳ ಹಿಂದೆಯೇ ಈ ಪತ್ರವನ್ನು ನಿಮಗೆ ನಾನು ಬರೆಯಬೇಕಾಗಿತ್ತು ಅನಿವಾರ್ಯ ಕಾರಣಗಳಿಂದಾಗಿ ಅದು ಸಾಧ್ಯವಾಗಿರಲಿಲ್ಲ, ಅದು ಈಗ ಸಾಧ್ಯವಾಗಿದ್ದಕ್ಕೆ ಕಾರಣ ಮಾತ್ರ ನೀವೇ.

ಮುಖ್ಯ ವಿಷಯಕ್ಕೆ ಬರುತ್ತೇನೆ. ಐದು ಮುಕ್ಕಾಲು ಕೋಟಿ ಕನ್ನಡಿಗರಲ್ಲಿ ಮೂರುವರೆ ಕೋಟಿ ಜನರ ಮನೆಯಲ್ಲಿ ಕಂಪ್ಯೂಟರ್ ಇದೆ, ಅದರಲ್ಲಿ ಎರಡೂ, ಎರಡೂವರೆ ಕೋಟಿ ಮಂದಿ ಇಂಟರ್ನೆಟ್ ಸೌಲಭ್ಯ ಹೊಂದಿದ್ದು ಅವರೆಲ್ಲರೂ ಪ್ರತಿನಿತ್ಯ 'ಕೆಂಡಸಂಪಿಗೆ'ಗೆ ಬಂದುಹೋಗದಿದ್ದರೆ ಅವರ ಗಂಟಲೊಳಗೆ ಅನ್ನ ನೀರು ಎರಡು ಇಳಿಯುವುದಿಲ್ಲ ಎಂಬ ಭ್ರಮೆಯಲ್ಲಿ ನೀವು 'ಕೆಂಡಸಂಪಿಗೆ'ಯ ಲಗಾಮು ಹಿಡಿದು ನಡೆಯುತ್ತಿರುವಂತೆ ಕಾಣುತ್ತಿದೆ. ಸತ್ಯ ಎಷ್ಟು ಸೂಕ್ಷ್ಮ ಮತ್ತು ಒಂಟಿ ಎಂಬುದನ್ನು ಹೇಳಲೆಂದೇ ಈ ಪತ್ರ ತಮಗೆ ಬರೆಯುತ್ತಿದ್ದೇನೆ.


'ಕೆಂಡಸಂಪಿಗೆ' ಶುರುವಾದಾಗಿನಿಂದ ಆ ದಿಕ್ಕಿನೆಡೆಗೆ ತಲೆಹಾಕಿಯೂ ಮಲಗದಿದ್ದ ನಾನು, ಈಚೆಗೆ ಕೆಂಡಸಂಪಿಗೆ ಸೇರಿರುವ ನನ್ನ ಮಿತ್ರರೊಬ್ಬರ ಕಾರಣ ಮತ್ತು ಕಾಳಜಿಗಳಿಂದಾಗಿ ನಾನು ಮತ್ತು ನನ್ನ ಕೆಲವು ಗೆಳೆಯರು 'ಕೆಂಡಸಂಪಿಗೆ'ಯ ಪುಟಗಳನ್ನು ಗಂಭೀರವಾಗಿ ಓದಲು ಶುರು ಮಾಡಿದೆವು. ಇದರ ಆಳಕ್ಕಿಳಿದಾಗಲೇ ಗೊತ್ತಾದದ್ದು ಇದು ಸೃಜನಶೀಲ ಮನಸ್ಸುಗಳ, ಮಾನವಂತರ ಆರೋಗ್ಯಕರ ಚರ್ಚೆಗಳು ಏರ್ಪಡುವ ತಾಣವಲ್ಲ. ಈ ವೆಬ್ ಮತ್ತು ಬ್ಲಾಗ್ ಜಗತ್ತುಗಳಲ್ಲಿ ಹೆಚ್ಚು ಸನಾತನಿಗಳೇ ತುಂಬಿಕೊಂಡಿರುವುದರಿಂದ, ಪಾಪ ನೀವು ಕೂಡ ನಿಮ್ಮದಲ್ಲದ ಮಾತುಗಳನ್ನು ಜಗತ್ತಿನ ಯಾವುದಕ್ಕೂ ಸಂಬಂಧವೇ ಇಲ್ಲದಂತೆ ತಮ್ಮ ಎಂದಿನ ಉಡಾಫೆ ಶೈಲಿಯಲ್ಲಿ ಹೊಸೆಯುತ್ತ ಹೆಚ್ಚುಕಮ್ಮಿ ತಮ್ಮ ಪೆನ್ನುಗಳಿಗೂ ಜುಟ್ಟು ಜನಿವಾರ ಅಂಟಿಸಿಕೊಂಡಿರುವ ವಿಪ್ರೋತ್ತಮರನ್ನು ಗುಡ್ಡೆ ಹಾಕಿಕೊಂಡು 'ಸನಾತನ ಸಂತೆ' ಮಾಡಲು ಹೊರಟಿರಿ. ಇಂಥ ವೈದಿಕರ ಶೀಘ್ರಸ್ಖಲನವನ್ನೇ 'ಪ್ರತಿಕ್ರಿಯೆ' ಎಂದು ಕರೆದು ದಂಡಿಯಾಗಿ ಪ್ರಕಟಿಸತೊಡಗಿದಿರಿ. ಲಂಕೇಶ್, ಎಮ್.ಡಿ.ಎನ್., ದೇವನೂರ ಮಹಾದೇವ ಅವರ ಹೆಸರುಗಳು ಕಿವಿಗೆ ಬಿದ್ದ ಕೂಡಲೇ ಕನಸಲ್ಲಿಯೂ ಕಂಪಿಸುವ ವೈದಿಕವಟುಗಳು ಲಂಕೇಶ್, ಎಮ್.ಡಿ.ಎನ್. ದೇವನೂರರ ಲೇಖನಗಳು 'ಕೆಂಡಸಂಪಿಗೆ'ಯಲ್ಲಿ ಪ್ರಕಟಗೊಂಡಾಗ ಹೇಗೆ ವೈದಿಕದ ವಿಷ ಕಾರುತ್ತಾರೆ ಅನ್ನುವುದನ್ನು 'ಕೆಂಡಸಂಪಿಗೆ' ಬಲ್ಲ ಎಲ್ಲರಿಗೂ ಗೊತ್ತಾಗುವಂತೆ ಮಾಡಿದಿರಿ.

ತಮ್ಮ ಅಭಿಪ್ರಾಯಗಳ ಮೇಲೆ ತಾವೇ ನಂಬಿಕೆ ಇಡದ ಅಸಡ್ಡಾಳರೂಪಿಗಳು ಮಾತ್ರ ತಮ್ಮ ಹೆಸರು ಹೇಳದೆ, ಮತ್ತೊಬ್ಬರ ಹೆಸರಲ್ಲಿ, ತಮ್ಮ ಪುಡಿ ಜಾತಿ ಧರ್ಮಗಳ ಚಿಲ್ಲರೆ ಗುರುತುಗಳನ್ನಿಟ್ಟುಕೊಂಡು 'ಕೆಂಡಸಂಪಿಗೆ'ಯಲ್ಲಿ ದಂಡಿಯಾಗಿ ಕಾಣಿಸಿಕೊಳ್ಳತೊಡಗಿದ್ದಾರೆ. ಪಾಪ ನೀವಾದರೂ ಏನು ಮಾಡುತ್ತೀರಿ? ತಮ್ಮ 'ಕೆಂಡಸಂಪಿಗೆ'ಗೆ ಓದುಗರು ಬೇಕಿಲ್ಲ; ಹಿಟ್ಸ್ ಬೇಕು, ಸನಾತನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ಬಂದು ಸ್ಖಲಿಸಬೇಕು. ಅದಕ್ಕೆ ಪೂರಕವಾಗುವಂತೆ ಬ್ರಾಹ್ಮಣ್ಯದ ಕೊಚ್ಚೆಗುಂಡಿಗಳೇ ತುಂಬಿಕೊಂಡಿರುವ ಅಗ್ರಹಾರದ ದೊಡ್ಡ ಗಟಾರವನ್ನೇ 'ಕೆಂಡಸಂಪಿಗೆ'ಯಲ್ಲಿ ಸೃಷ್ಟಿ ಮಾಡಿಬಿಟ್ಟಿದ್ದೀರಿ. ಹೀಗಾಗಿ ಇಲ್ಲಿ ಲಂಕೇಶ್, ಎಮ್.ಡಿ.ಎನ್., ದೇವನೂರರು ಕಾಣಿಸಿಕೊಂಡಾಗಲೆಲ್ಲ ವೈದಿಕರು ತಮ್ಮ ಜುಟ್ಟು ಜನಿವಾರಗಳನ್ನು ಮುಟ್ಟಿಮುಟ್ಟಿ ನೋಡಿಕೊಂಡು ಖುಷಿಪಡುತ್ತಾರೆ. ಲಂಕೇಶ್, ರಾಮದಾಸ್, ಎಮ್.ಡಿ.ಎನ್., ಲೋಹಿಯಾ, ದೇವನೂರ ಮಹಾದೇವ... ಈ ಯಾರೂ ಕೂಡ ಪ್ರಸ್ನಾತೀತರಲ್ಲ, ಆದರೆ 'ಕೆಂಡಸಂಪಿಗೆ'ಯ ವಿಪ್ರರ ತಲೆಬುಡವಿಲ್ಲದ ತೆಳು ಮತ್ತು ಕನಿಷ್ಠ ದರ್ಜೆಯ ಕಮೆಂಟುಗಳಿಗೆ ಇವರು ಮುಖ ಕೊಡಬೇಕೇ?

ಡಿಯರ್ ರಶೀದ್ ನಿಮಗೆ ಚೆನ್ನಾಗಿ ಗೊತ್ತು; ಇಂಡಿಯಾ ಸಮಾಜದೊಳಗೆ ಇನ್ನೂ ಜೀವಂತವಾಗಿರುವ ಗಾರಸಿದ್ದಾಮ, ಸಾಕವ್ವ, ಅಕ್ಕಮಾದೇವಮ್ಮ, ಅವಳ ಮಗ ಯಾಡ, ಅವನ ಮಗ ಸೋಮಪ್ಪ, ಅವನ ಮಗಳು ಕುಸುಮ... ಈ ಯಾರೂ ಯಾವತ್ತಿಗೂ 'ಕೆಂಡಸಂಪಿಗೆ'ಯ ಆವರಣದೊಳಕ್ಕೆ ಕಾಲಿಡಲಾರರು. ಅಂತಹ ಸಾಮಾಜಿಕ ನ್ಯಾಯವಿನ್ನೂ ಅವರಿಗೆ ಸಿಕ್ಕಿಲ್ಲ. ಹೀಗಾಗಿ ನಿಮ್ಮ ಗ್ರಾಹಕರೇ ಬೇರೆ, ನೀವು ಸರಬರಾಜು ಮಾಡಬೇಕಾದ ಸರಕುಗಳೇ ಬೇರೆ. ನೀವು ಅಗ್ರಹಾರದ ಅಮೇಧ್ಯವನ್ನು ಪರ್‌ಫ್ಯೂಮ್ ಬಾಟಲಿಯಲ್ಲಿಟ್ಟು ಅಗ್ರಹಾರದ ಗ್ರಾಹಕರಿಗೇ ಮಾರಬೇಕು. ಅದನ್ನು ಈ ದೊಡ್ಡ ದೇಶದ ದಲಿತನೋ, ಮುಸ್ಲಿಮನೋ ಮುಟ್ಟಿ ಮೂಸಿಯೂ ನೋಡಲಾರ. ಪರಿಸ್ಥಿತಿ ಹೀಗಿರುವುದರಿಂದಲೇ ತಾವು ತಮಗಿಷ್ಟವಿಲ್ಲದಿದ್ದರೂ ಬ್ರಾಹ್ಮಣ್ಯ ಮತ್ತು ಮಾರ್ವಾಡಿಗಳ ತಲೆ, ಮಿದುಳು, ತೊಗಲುಗಳನ್ನು ಕೊಯ್ದು ಒಟ್ಟು ಮಾಡಿ ಆ ವಿಕೃತ ತೊಗಲನ್ನೇ ತೊಟ್ಟುಕೊಳ್ಳಬೇಕಾದ ಸ್ಥಿತಿ ತಲುಪಿದ್ದೀರಿ. ನೀವು ತೊಟ್ಟಿರುವ ಈ ವಿಕೃತ ತೊಗಲು ಮನುಷ್ಯತ್ವದ ಸ್ಪರ್ಶಜ್ಞಾನವನ್ನೇ ಕಳೆದುಕೊಂಡು ಜಡವಾಗಿದೆ. ಇಂಥ ಸಂದರ್ಭದಲ್ಲಿ ತಮ್ಮ ಪಂಚೇಂದ್ರಿಯಗಳು ಅದು ಹೇಗೆ ತಾನೆ ಮಾನವೀಯವಾಗಿ ವರ್ತಿಸಿಯಾವು? ಸಾಫ್ಟ್‌ವೇರ್ ಜಗತ್ತಿನ ಬ್ರಾಹ್ಮಣರ ಟೇಬಲ್ಲುಗಳಿಗೆ ಅಕ್ಷರ ಸರಬರಾಜು ಮಾಡುವ ದಂಧೆಯಲ್ಲಿ ಯಾವುದೇ ಲಜ್ಜೆಯಿಲ್ಲದೆ ತೊಡಗಿಕೊಂಡಿರುವ ನೀವು ನಿಮ್ಮ ಆತ್ಮಸಾಕ್ಷಿ, ಅಂತಃಕರಣವನ್ನು ಎಲ್ಲಿ ನೇಣಿಗೆ ಹಾಕಿದ್ದೀರಿ?

ಈಗ ನೀವು ಮಾಡಲು ಹೊರಟಿರುವುದು ಇಷ್ಟೇ: ಅಗ್ರಹಾರದ ಅಮೇಧ್ಯದ ಜೊತೆಗೆ ಲಂಕೇಶ್, ಎಮ್.ಡಿ.ಎನ್., ಲೋಹಿಯಾ, ದೇವನೂರರಂತ ಮಣ್ಣಿನ ಸಾರ್ವಕಾಲಿಕ ಶ್ರೇಷ್ಠ ಮನಸ್ಸುಗಳನ್ನು 'ದೇಶಿಕ ಮಾಡಿ ವಿಪ್ರೋತ್ತಮರ ಗಂಟಲಿಗೆ ತುರ ಯತ್ನಿಸುತ್ತಿದ್ದೀರಿ. ಮನುಷ್ಯರನ್ನು ಮಾತ್ರ ತಿಂದು ಗೊ ಈ ದೇಶದ ಸನಾತನಿಗಳಿಗೆ ಮಾಂಸಾಹಾರ ನಿಷಿದ್ಧ ಪ್ರಾಥಮಿಕ ತಿಳಿವಳಿಕೆ ತಮಗೆ ಮಾತ್ರ ಗೊತ್ತಾಗದಿ ವಿಪರ್ಯಾಸ. ಇರಲಿ. ಬದುಕಿದ್ದಾಗಲೇ ತೀರಿಕೊಂ ಸಾಹಿತಿಗಳಿಗೆ, ತಮ್ಮ ಜೀವಿತಕಾಲದ ಮುಸ್ಸಂ ದಿನಗಳಲ್ಲಿರುವ ಅನೇಕ ಹಿರಿಯ ಲೇಖಕರಿಗೆ 'ಕೆಂಡ ಒಂದು ಚಾವಡಿಯಾಗಿದೆ ಅನ್ನುವುದನ್ನು ಒ ಇದರೊಟ್ಟಿಗೆ ಪರಂಪರೆಯ ಬಗ್ಗೆ ಹುಗುರ ನಾಲಿಗೆ ಚ ಪ್ರತಿ ಅಕ್ಷರವನ್ನೂ ವೈದಿಕ ಚರಂಡಿಯಿಂದಲೇ ಹೆಕ್ಕಿ ಲೇಖನ ರೂಪಿಸುವ ಚೆಡ್ಡಿಚತುರರಿಗೂ ಇವತ್ತು 'ಕೆಂಡ ಸಂಪಿಗೆ' ದೊಡ್ಡ ವೇದಿಕೆಯಾಗಿದೆ. ವಿಷ ತ ಮಾಡುವವರಿಗಿರುವ ಉತ್ಸಾಹ, ಹಿಂಲಡ್ಡು ತ ಮಾಡುವವರಿಗೆ ಇರುವುದಿಲ್ಲವಂತೆ. ಸಾಮಾಜಿಕ ಮತ್ತು ಆತ್ಮಾಭಿಮಾನದ ಪ್ರಶ್ನೆಗಳನ್ನಿಟ್ಟುಕೆ 'ಕೆಂಡಸಂಪಿಗೆ'ಯಲ್ಲಿ ಪ್ರಕಟಗೊಂಡ ಬೆರಳೆಣಿಕೆ ಲೇಖನಗಳು ತಮ್ಮ ಆಶಯ, ಉದ್ದೇಶಗಳನ್ನು ದಗ್ಧ ಮತ್ತು ಮೆಲುದನಿಯಲ್ಲಿ ಹೇಳಲು ಶುರುಮಾಡಿ ವೆಬ್‌ಜಗತ್ತು ಸೃಷ್ಟಿಸಿರುವ ಮೇಲ್ವರ್ಗದ 'ಸ 'ಸುಸಂಸ್ಕೃತ'ರು ಪತರಗುಟ್ಟಿ ಕತ್ತುಹಿಸುಕಲು ಮುಂದಾ ಮನುಷ್ಯ ಮೂಲಭೂತವಾಗಿ ಒಳ್ಳೆಯವನು ನಂಬಿಕೆಗಳೇ ಇಲ್ಲಿ ಸುಳ್ಳಾಗುತ್ತಿವೆ. ಇಲ್ಲಿ ಯಾಕೆ ನರೇಂದ್ರ ಮೋದಿ ಮತ್ತು ಪ್ರಮೋದ್ ಮುತ ಶನಿಸಂತಾನಗಳು ಕಾಣಿಸಿಕೊಂಡಿಲ್ಲ ಎನ್ನುವುದು ಸಮಾಧಾನ ತರಬಹುದು, ಅಷ್ಟೇ.

ಒಂದು ಹೊಸ ತಂತ್ರಜ್ಞಾನ, ಒಂದು ಹೊಸ



ದಲಿತ ವಿರೋಧಿ ವೈದಿಕಶಾಹಿ ಮನಸ್ಸುಗಳು

* ಪುರೋಹಿತಶಾಹಿ, ಮನುವಾದಿಗಳು, ಸನಾತನ ಸುಪ್ತ ಮನಸುಗಳೆಂಬ ತುಕ್ಕುಹಿಡಿದ ಶಬ್ದಗಳನ್ನೇ ಇಂದು ದಲಿತೋದ್ಧಾರಕರು ಬಳಸುತ್ತಿರುವುದು ವಿಷಾದನೀಯ. ಸೃಜನಶೀಲತೆಯನ್ನೇ ಕಳೆದುಕೊಂಡ ಮನಸುಗಳನ್ನು ಈ ಶಬ್ದಗಳು ಬಿಂಬಿಸುತ್ತವೆ. ಅಂಬೇಡ್ಕರ್, ಜಗಜೀವನರಾಂ ಅವರನ್ನು ತಮ್ಮ ಜನಾಂಗದ ಕಪಿಮುಷ್ಠಿಯಲ್ಲಿ ಬಂಧಿಸಿರುವ ದಲಿತ ಜನಾಂಗದವರಿಗೆ ಖಂಡಿತ ಇನ್ನೂ 50 ವರ್ಷಗಳವರೆಗೆ ಮೀಸಲಾತಿಯನ್ನು ಕೊಟ್ಟರೂ ಅಭಿವೃದ್ಧಿಯನ್ನು ಹೊಂದುವುದು ಸಾಧ್ಯವಿಲ್ಲ, ಇದಕ್ಕೆ ಕಾರಣ ಅವರ ಜನಾಂಗದವರ ಶೋಷಕರೇ ಕಾರಣವಾಗಿದ್ದಾರೆ.

- ಎಸ್.ಎಚ್

Devanooru Mahadeva and similar minded people are under the impression that , they are the only intellectuals lived under the Sun!-Sagar

* ತುಸು ವಾಸ್ತವಾದಿಗಳಾಗಿ ಮಹಾದೇವರೇ. ನಿಮ್ಮ ಜೀವನದುದ್ದಕ್ಕೂ, ಈ ಬ್ರಾಹ್ಮಣ ದ್ವೇಷ ಈ ವೈದಿಕ ದ್ವೇಷ ಬೇಡ. ನೀವು ಹಳ್ಳಿಹಳ್ಳಿಗೆ ಹೋಗಿ ಅಲ್ಲಿ ಯಾರು ಶೋಷಿತರು? ಬ್ರಾಹ್ಮಣರೇ..

-ಜನಸಾಮಾನ್ಯ

* ಮಹಾ ಅವರೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮೀಸಲಾತಿಯ ಜೊತೆ ಸ್ವತ ಶಿಕ್ಷಣವನ್ನೂ, ಸರಕಾರಿ ನೌಕರಿಯನ್ನೂ, ರಾಜಕೀಯ ಅಧಿಕಾರವನ್ನೂ ಪಡೆದ ದಲಿತ ಸಮುದಾಯ ಕಳೆದ ಅರವತ್ತು ವರ್ಷಗಳ ಅವಧಿಯಲ್ಲಿ ಭಾರತೀಯ ಸಮಾಜಕ್ಕೆ ವಾಪಾಸು ಕೊಟ್ಟದ್ದು ಏನನ್ನು? ೧) ತನ್ನನ್ನು ಪೊರೆಯುತ್ತಿರುವ ಜನಸಮುದಾಯಗಳನ್ನು, ಜಡ ಹಾಗೂ ಜೀವವಿರೋಧಿ ಎಂದು ಅವಮಾನಿಸಿ ಅವುಗಳಿಂದ ಮತ್ತಷ್ಟು ದೂರವಾಗಿದ್ದು. ೨) ಹಿಂದೂ ಸಂಪ್ರದಾಯಗಳನ್ನು ಖಂಡಿಸುವುದನ್ನೇ ಚಟವಾಗಿಸಿಕೊಂಡು ಆಧ್ಯಾತ್ಮವನ್ನು ಗೇಲಿ ಮಾಡಿದ್ದು, ೩) ತನ್ನ ಸಕಲ ಸಮಸ್ಯೆಗಳಿಗೂ ನ್ಯೂನತೆಗಳಿಗೂ ಬ್ರಾಹ್ಮಣ ಸಮುದಾಯವನ್ನೇ ಹೊಣೆಯಾಗಿಸಿ ವಿನಾಕಾರಣ ಬ್ರಾಹ್ಮಣದ್ವೇಷ ಸಾಧಿಸಿದ್ದು. ೪) ಬ್ರಾಹ್ಮಣ ಹುಡುಗಿಯರನ್ನು ಮದುವೆಯಾಗಿ ಸಾಮಾಜಿಕ ಪ್ರಗತಿ ಸಾಧಿಸುವ ಹುಚ್ಚು ಕನಸನ್ನು ದಲಿತ ಯುವಕರಲ್ಲಿ ತುಂಬಿದ್ದು. ೫) ಮೀಸಲಾತಿ ನೆತ್ತಿಗೇರಿ ಭ್ರಷ್ಟರಾಗಿದ್ದು, ೬) ದಲಿತ ಯುವ ಸಮುದಾಯಕ್ಕೆ ಆದರ್ಶವಾಗಬಹುದಾದ ವ್ಯಕ್ತಿತ್ವಗಳನ್ನು ರೂಪಿಸಿಕೊಳ್ಳದೆ ಅಲ್ಪಮಟ್ಟದ ರಾಜಕೀಯ ಮಾಡಿದ್ದು, ೭) ಆಧುನಿಕ ಶಿಕ್ಷಣದ ಲಾಭ ಪಡೆದುಕೊಂಡರೂ ಆರ್ಥಿಕ ಭದ್ರತೆಯಿಂದಲೇ ತೃಪ್ತರಾಗಿ ಸಮಾಜ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳದೇ ಹೋಗಿದ್ದು, ೮) ದಲಿತ ಸಮುದಾಯದ ನಿಜ ಸಮಸ್ಯೆಗಳೇನು ಎಂಬುದನ್ನು ಇದುವರೆಗೂ ಅರಿತುಕೊಳ್ಳದೆ ಅಮೂರ್ತ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಂಡಿದ್ದು, ೯) ಮೀಸಲು ಕ್ಷೇತ್ರಗಳ ನೆರವಿದ್ದರೂ ಒಂದು ಸಶಕ್ತ ರಾಜಕೀಯ ಶಕ್ತಿಯಾಗದೆ ಹೋಗಿದ್ದು, ೧೦) ಗ್ರಾಸ್ ರೂಟ್ ಮಟ್ಟದ ದಲಿತ ನಾಯಕರನ್ನು ರೂಪಿಸದೇ ಹೋಗಿದ್ದು, ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು. ದಲಿತನೆಂಬ ಕಾರಣಕ್ಕೆ ನೀವು ಇಂದು ಕನ್ನಡ ಸಾಹಿತ್ಯಲೋಕದಲ್ಲಿ ಮಹತ್ವದ ಸ ಪಡೆದಿದ್ದೀರಿ. ನಿಮ್ಮಷ್ಟೇ ಪ್ರತಿಭೆ ಇರುವ ಅನೇಕ ಸಾಹಿತಿಗಳು ಕಾರಣದಿಂದ ನಿಮ್ಮಷ್ಟು ಪ್ರಸಿದ್ಧಿಯನ್ನು ಪಡೆಯಲು ಸಾಧ್ಯ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದರೆ ನೀವು ಇಷ್ಟು ದೊಡ್ಡ ಸಾಹಿತಿಯಾಗಿ ಗುರುತಿಸಲ್ಪಡುತ್ತಿರಲಿಲ್ಲ, ನಿಮ್ಮ ಜಪ್ಪುಗಟ್ಟಿದ ಈ ಪರಿಯ ವೇದಿಕೆ ಸಿಗುತ್ತಿರಲಿಲ್ಲ.

- 2

* ಲೇಖಕರಲ್ಲಿ ಬಹಳ ಕಾಲದಿಂದ ರೂಢಿಸಿಕೊಂಡು ಚೆನ್ನಾಗಿ ಪೋಷಿ ಪೂರ್ವಾಗ್ರಹವಿದ್ದಂತೆ ಕಾಣುತ್ತದೆ.... ಉಡುಪಿ ಮಠಗಳು ದ ಶೋಷಿತರಿಗೆ ಅವಕಾಶ ನೀಡಲಿ ಎನ್ನುವ ಮುನ್ನ ಅವ ದಿಶೆಯಲಿ ಸರಿಯದ ಸಂಸ್ಕಾರ, ಅಧ್ಯಯನ ಮಾಡಿಕೊಳ್ಳಲಿ. ವ ಅರ್ಹತೆಯನ್ನು ಸಂಪಾದಿಸಲಿ. ಅರ್ಹತೆಯಿಲ್ಲದೆ ಅವಕಾ ಒತ್ತಾಯಿಸುವುದು ಅಷ್ಟು ಸಾಧುವಲ್ಲ, - ವಿಚಾರವಾದಿ

* ಭೂತದ ಬೆನ್ನಟ್ಟಿ ವರ್ತಮಾನದ ಬದಲಾವಣೆಗಳನ್ನ ಕಾಣದಂ ಬೆಸೆಯುತ್ತಿರುವ ಮನಸುಗಳನ್ನ ಮತ್ತೆ ದೂರ ಮಾಡುವುದ ಯಾಕೆ? ಕನಿಷ್ಠ ಪಕ್ಷ ನಮ್ಮ ಪೀಳಿಗೆಯ ಬಹುತೇಕ ಮಂದಿ ಆಚರಣೆಯ ಹಿಂದೆ ಬಿದ್ದಿಲ್ಲ. ಆಕಸ್ಮಾತ್ ಹೀಗೇನಾದರು ತಾ ಬೆಂಕಿಯಿದ್ದರೆ ಅದು ಮೀಸಲಾತಿಗೆ ಸಂಬಂಧಪಟ್ಟಂತೆ ಮಾತ್ರ ಅದರ ವಿಷಯ ತೆಗೆದರೆ ನಾವು ದ್ರೋಹಿಗಳಾಗಿ ಬಿಡುತ್ತೇವೆ.... ಕಟ್ಟೆ ಹೊಡೆಯಿರಿ ಅನ್ನುವವರು ಮೊದಲು ಈ ಮೀಸ ಭೂತವನ್ನ ಜಾತಿಯಿಂದ ಬಿಡಿಸಿ, ಆರ್ಥಿಕವಾಗಿ ಹಿಂದುಳಿ ಕೊಡಿ ಅಂತ ಯಾಕೆ ಕೇಳುವುದಿಲ್ಲ?

- ರಾಕೇ

ಕೆಂಡಸಂಪಿಗೆ ಕನ್ನಡದ ಬೆಡಗು ಪರಿಮಳ

ಬದ ಮೇಲೆ ಹಿಡಿತ ಸಾಧಿಸಿರುವ ವರ್ಗವೊಂದು ರ್ತಿಸಬಲ್ಲದು ಎಂಬುದಕ್ಕೆ 'ಕೆಂಡಸಂಪಿಗೆ'ಯಲ್ಲಿ ಗುವ ಕಮೆಂಟುಗಳು ದೊಡ್ಡ ರಹೆಯಾಗಬಲ್ಲವು. ದಲಿತರು ಮತ್ತು ಮುಸ್ಲಿಮರ ವೈದಿಕರಿಗಿರುವ ಅಸಹನೆ ಅವರ ನೀಚ ಲ್ಲುಗಳನ್ನು ಇನ್ನಷ್ಟು ನೀಚಗೊಳಿಸುತ್ತಿದೆ. ಮುಸ್ಲಿಮ್ ಕ್ಕಳು ಬುರ್ಖಾ ಧರಿಸಬೇಕೆ ಬೇಡವೇ ಅನ್ನುವ ., ಗೋಹತ್ಯೆ ಮತ್ತು ಮತಾಂತರ ನಿಷೇಧದ ಮಾನವೀಯ ಒಳನೋಟಗಳಿಂದ ಆಗುವುದರ ಬದಲು ಸನಾತನ ಧರ್ಮದ ಶ್ವಪಚರ ವೇರಕ್ಕೆ ಬಂದು ವಿವಾದದ ಧೂಳು ಎಬ್ಬಿಸುತ್ತದೆ. ರ್ಗದ ದೊಣ್ಣೆನಾಯಕರಿಗೆ ಪವಿತ್ರವಾಗಿ ಕಂಡದ್ದನ್ನು ಗತ್ತೇ ಪವಿತ್ರವೆಂದು ಭಾವಿಸಬೇಕು. ಸನಾತನಿಗಳ ಪ್ರದರ್ಶನದ ಜೊತೆಗೆ ಅವರ ಮೂರನೇ ದರ್ಜೆ ತೆವಲುಗಳನ್ನು ಕಾರಿಕೊಳ್ಳಲು 'ಕೆಂಡಸಂಪಿಗೆ'ಯಂತಹ ಟ್‌ಗಳು ದೊಡ್ಡಮಟ್ಟದ ವೇದಿಕೆ ಒದಗಿಸಿ ಸಾಂಸ್ಕೃತಿಕ ಲ್ಕೂ ಇಳಿದಿರುವುದು ಗಾಬರಿ ಹುಟ್ಟಿಸುತ್ತಿದೆ. ಈ ಕೃತರ ಕನಿಷ್ಠದರ್ಜೆಯ ಅಭಿಪ್ರಾಯಗಳನ್ನು ಟ್ ಮಾಡಿ, ಎಡಿಟ್ ಡೆಲಿಟ್ ಮಾಡುವ ಗಳಿದ್ದಾಗ್ಯೂ ಪಿಗೆ'ಯ ಮಂದಿ ಅವನ್ನು ಯಾಗಿಯೇ ಪ್ರಕಟ ಸುವುದರ ಹಿಂದಿರುವ ಮರ್ಮವೇನು? ಅಕ್ಷರಕ್ಕೂ ಕ್ಕೂ ವ್ಯತ್ಯಾಸ ನವರು, ತಮ್ಮ ಅಕ್ಷರದ ನನ್ನೇ ಮಹಾ ನೆಂದು ಭ್ರಮಿಸುತ್ತಿರುವ ಇಲ್ಲಿ ದಂಡಿಯಾಗಿ ಕೊಂಡಿರುವುದರಿಂದಲೇ ಮತ್ತು ಮಾನವಂತರು ಕಾಲಿಡಲು ಹಿಂದೆಮುಂದೆ ತ್ತಾರೆ.



ಲಂಕೇಶ್ 75 ಕಾರ್ಯಕ್ರಮದಲ್ಲಿ... ದೇವನೂರರ ಜೊತೆ ಗೌರಿ ಲಂಕೇಶ್

ಸ್ಪೃಶ್ಯತೆ, ಜಾತಿ, ಅಸಮಾನತೆ, ವ್ಯವಸ್ಥೆಗಳನ್ನು ಇಂಡಿಯಾದ ನೆಲದಲ್ಲಿ ಬಿತ್ತಿದ ಪುರಿ ರುವಿನ ವಾರಸುದಾರರು ಈಗ ಈ ಶತಮಾನದ ಆಧುನಿಕ ದಲ್ಲಿ ಬ್ರಾಹ್ಮಣ್ಯದ ಪಳೆಯುಳಿಕೆಗಳನ್ನು ಮುಂದುವರೆಸುವ ಗಿ ಇವತ್ತು ಕಂಪ್ಯೂಟರ್‌ಗಳ ಮುಂದೆ ಬಂದು ಕೂತಿದ್ದಾರೆ. ರನ್ನು ತೃಪ್ತಿಪಡಿಸಲಿಕ್ಕೆಂದೇ ನಿಮ್ಮಂಥವರು ಬೃಹನ್ನಳೆಯ ಟ್ಟು ಸನಾತನಿಗಳು ನಾಲಿಗೆ ಚಪ್ಪರಿಸುವಂತಹ ಲೇಖನಗಳು 'ಕೆಂಡಸಂಪಿಗೆ'ಯಲ್ಲಿ ಪ್ರಕಟಗೊಳ್ಳುವಂತೆ ಮಾಡಿ ಎಂಥ ಕ್ಕೂ ಸೈ ಎನ್ನುವಂತೆ ನಿಲ್ಲುತ್ತೀರಿ. ಈ ಇಂಥ ಬೌದ್ಧಿಕ ತನವನ್ನು ಮುಂದುವರೆಸಿಯೇ ಒಂದಿಷ್ಟು ದುಡ್ಡು ಮತ್ತು ಬಳಗವನ್ನು ವಿಸ್ತರಿಸಿಕೊಳ್ಳಬಹುದೆನ್ನುವ ನಿಮ್ಮ ಅಗ್ಗದ ಆಸೆಗಳು ಯಾವ ಮಹತ್ವಾಕಾಂಕ್ಷೆ ಮತ್ತು ಅಂದಾಜುಗಳನ್ನು ಂಡಿವೆಯೋ ಗೊತ್ತಾಗುತ್ತಿಲ್ಲ.

ೇಂದ್ರ ಮೋದಿ ಪದ್ಯ ಬರೆಯಬಹುದು, ಹಾಗಂತ ಆತನ ಷ್ನ 'ಕೆಂಡಸಂಪಿಗೆ'ಯಲ್ಲಿ ಪ್ರಕಟಿಸಿ ಅವನ ಸಾಹಿತ್ಯ ಮನ್ನು ಕೊಂಡಾಡುತ್ತೀರಾ? ಆ ನೆಪದಲ್ಲಿ ಆತನ ನರಹತ್ಯೆಯ ನ್ನು ಮರೆಮಾಚುತ್ತೀರಾ? ನರೇಂದ್ರ ಮೋದಿ ಒಳ್ಳೆಯ ನ್ನೇ ಬರೆಯಬಹುದೆಂದುಕೊಳ್ಳಿ, ಆದರೆ ಆತ ಮನುಷ್ಯರ ಪರವಾದ ಕವಿಯಾಗಿರಲಿಕ್ಕೆ ಸಾಧ್ಯವೇ? ಒಳ್ಳೆಯ ಕವಿಯಾದವನು ಒಳ್ಳೆಯ ಮನುಷ್ಯನಾಗಬೇಕಿಲ್ಲ ಎಂಬ 'ಸಾಹಿತ್ಯ ಶ್ರೇಷ್ಠತೆ'ಯನ್ನು ಮಾತ್ರ ತಾವು ಅನುಮೋದಿಸುತ್ತೀರಾ? ಈ ದಿಕ್ಕಿನಲ್ಲಿ 'ಕೆಂಡಸಂಪಿಗೆ' ಯೋಚಿಸಲಿ. ಒಳಗಣ್ಣು, ಕಿವಿ, ಮೂಗು, ನಾಲಿಗೆಗಳನ್ನು ಕಳೆದುಕೊಂಡಿರುವ ವಿಕೃತರಿಗೆ ನೀವು ಸಾಹಿತ್ಯದ ಹೆಸರಿನ ಕೆಸರು ತಿನ್ನಿಸುತ್ತಿರುವಿರಿ. ಈ ಕೆಸರಿನೊಂದಿಗೆ, ಲಂಕೇಶ್, ರಾಮದಾಸ್, ಎಮ್.ಡಿ.ಎನ್., ಲೋಹಿಯಾ, ದೇವನೂರರನ್ನು ಬೆರೆಸಿ ಬೆಲೆಕಟ್ಟಿ ಹರಾಜಿಗಿಡಬೇಡಿ.

ಮೊನ್ನೆ ದೇವನೂರ ಮಹಾದೇವ ಅವರ ಲೇಖನಕ್ಕೆ, ಲೋಹಿಯಾ ಕುರಿತು ತೇಜಸ್ವಿಯವರ ಲೇಖನಕ್ಕೆ ಮತ್ತು ಅದಕ್ಕೂ ಮುನ್ನ ಲಂಕೇಶ್, ಎಮ್.ಡಿ.ಎನ್., ಯು.ಆರ್.ಅನಂತಮೂರ್ತಿಯವರ ಕುರಿತ ಲೇಖನಗಳಿಗೆ ಕೆಂಡಸಂಪಿಗೆಯಲ್ಲಿ ಪ್ರಕಟವಾದ ವಿಕೃತರ ಕಮೆಂಟುಗಳು ಏನನ್ನು ಹೇಳಲು ಬಯಸುತ್ತಿತ್ತೆಂದರೆ: 'ನಮ್ಮ ಬ್ರಾಹ್ಮಣ್ಯದ ವಿಕಾರಗಳನ್ನೇ ಮೌಲ್ಯಮಾಡಿಕೊಂಡು ಸುಖವಾಗಿ ಬದುಕುತ್ತಿದ್ದ ನಮ್ಮನ್ನು ನಾಶಮಾಡಿದ್ದು ಈ ಸಾಮಾಜಿಕ ನ್ಯಾಯ, ಈಗ ಸನಾತನ ಧರ್ಮವನ್ನು ಮುಂದೆ ಮಾಡಿಕೊಂಡು ಹೇಗಾದರೂ ಮಾಡಿ ಈ ಸಾಮಾಜಿಕ ನ್ಯಾಯವನ್ನು ಉಸಿರುಗಟ್ಟಿಸಿ ಕೊಂದಾದರೂ ನಾವು ಶಿಲಾಯುಗಕ್ಕೆ ಹಿಂತಿರುಗಬೇಕು'. ಇಂಥ ಅಪಾಯಕಾರಿ ನಿಲುವಿಗೆ ಸನಾತನ ಮಿದುಳುಗಳು ಬಂದು ನಿಂತಿದ್ದರೆ ಅದಕ್ಕೆ ಆಶ್ಚರ್ಯಪಡಬೇಕಿಲ್ಲ, 'ಕೆಂಡಸಂಪಿಗೆ'ಯ ವೀರಾಧಿವೀರ ಕಮೆಂಟು ಶೂರರು ಓದುಬರಹ ಕಲಿತಿರುವುದೇ ಕನ್ನಡದ ಫ್ಯಾಸಿಸ್ಟ್ ಲೇಖಕರಿಂದ. ಇಂಥವರು ನಮ್ಮ ಕಣ್ಣೆದುರಿಗಿರುವಾಗ ಆರೋಗ್ಯಕರ ಸಮಾಜವಿರಲಿ, ಒಂದು ಯೋಗ್ಯರೀತಿಯ ವೆಬ್‌ಜಗತ್ತನ್ನು ಕುಲಗೆಡದಂತೆ ರಕ್ಷಿಸಿಕೊಳ್ಳಲು ಸಾಧ್ಯವೆ?

ರಶೀದರೆ, ನಿಮ್ಮ ಒಂದೆರಡು ಕತೆ, ಲೇಖನ, ಪದ್ಯಗಳನ್ನು ಆಸಕ್ತಿಯಿಂದ ಓದಿ ಇಷ್ಟಪಟ್ಟು ನಿಮ್ಮ ನಡೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ನನಗೆ, ನಿಮ್ಮಂಥವರು ಒಳಗಣ್ಣು ಕಳೆದುಕೊಂಡ ಇಂಥ ಫ್ಯಾಸಿಸ್ಟ್ ಕುರುಡರ ಎದುರು ಬೆತ್ತಲೆ ನಿಂತು ಸಾಹಿತ್ಯಿಕ ದ್ರೋಹದ ಜೊತೆಗೆ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಾದರಕ್ಕೂ ಇಳಿದಿರುವುದು ನನ್ನಲ್ಲಿ ಅಸಹ್ಯ ತರಿಸಿದೆ.

ಮರೆತುಹೋಗಿದ್ದ ಒಂದು ಮಾತು:

ಹಿಂದೊಮ್ಮೆ 'ಧರ್ಮ'ದ ಅಮಲು ಹತ್ತಿಸಿಕೊಂಡು ಈ ನಾಡನ್ನು ನಾಶ ಮಾಡಲು ಹೊರಟ ಆರ್‌ಎಸ್‌ಎಸ್‌ನವರಿಗೆ 'ಚೆಡ್ಡಿ'ಗಳೆಂದು ಹೆಸರಿಟ್ಟವರು ತಾವೇ ಎಂದು ಎಲ್ಲೋ ಓದಿದ ನೆನಪು ನನಗಿನ್ನೂ ಇದೆ. ಹಾಗೆ ಅವರ ವಿಕೃತಿಗೊಂದು ಹೆಸರು ಕೊಟ್ಟ ನೀವೇ ಇಂದು ಅದೇ ಚೆಡ್ಡಿಗಳ ಜೇಬೊಳಗೆ ಕೈಗಳನ್ನಿಟ್ಟುಕೊಂಡು 'ಸಾಹಿತ್ಯಕ ವೆಬ್ ನಗೆ' ಬೀರುತ್ತಿರುವುದನ್ನು ಕಂಡು ನಿಮ್ಮ ಗುರುಗಳಾದ ಲಂಕೇಶ್ ಏನು ಯೋಚಿಸುತ್ತಿರಬಹುದೆಂದು ಈಗ ನಾನು ಯೋಚಿಸುತ್ತಿದ್ದೇನೆ.

ಪ್ರೀತಿಯಿಂದ

● **ಕೆ.ಎಲ್.ಚಂದ್ರಶೇಖರ್ ಐಜೂರ್**, ಬೆಂಗಳೂರು

ಫೋಟೊದಲ್ಲಿ ಕಂಡ ಪುಟ್ಟ ಮುಖ ಯಾರದು?

ಮೇಡಮ್ ಹೇಗಿದ್ದೀರಿ?

ಕಳೆದ ವಾರ ನನ್ನ ಪುಟ್ಟ ವಿದ್ಯಾರ್ಥಿಗಳು ಹಾಡು-ನೃತ್ಯದ ಸ್ಪರ್ಧೆಯೊಂದರಲ್ಲಿ ಜಿಲ್ಲೆಗೇ ಮೊದಲ ಸ್ಥಾನ ಪಡೆದು ನಮ್ಮ ಸರ್ಕಾರಿ ಶಾಲೆಯ ಪತಾಕೆಯನ್ನು ಹಾರಿಸಿದರು. ನಮ್ಮ ಹಳ್ಳಿಯ ಶಾಲೆಗೀಗ ಇದ್ದುದರಲ್ಲಿ ಸ್ವಲ್ಪ ಸ್ಥಿತಿವಂತರಾದವರು ತಮ್ಮ ಮಕ್ಕಳು, ಮೊಮ್ಮಕ್ಕಳನ್ನು ಕಳಿಸುತ್ತಿಲ್ಲ. ಆ ಕಂದಮ್ಮಗಳು ಪಕ್ಕದ ಪಟ್ಟಣದ 'ಕನ್ನಡ ಕಾನ್ವೆಂಟ'ಗೆ ಹೋಗುತ್ತಿವೆ. ಇಂತಹ ಹೊತ್ತಲ್ಲೇ ನಮ್ಮ ಶಾಲೆಯ ಬಡ ಮಟಾಣಿಗಳು ಜಿಲ್ಲೆಯ ಎಲ್ಲ ಶಾಲೆಗಳನ್ನು (ಈ ಕನ್ನಡ ಕಾನ್ವೆಂಟ್‌ಗಳನ್ನೂ) ಹಿಂದಿಕ್ಕಿ ತಮ್ಮ ಪ್ರತಿಭೆ ಮೆರೆದು ಬಂದಿವೆ.

ನನ್ನ ಕಂದಗಳಿಗೆ ನಾನೇ ಹಾಡು-ಡ್ಯಾನ್ಸು ಕಲಿಸಿದ್ದೆ, ಎಷ್ಟು ಚೆಂದಾಗಿ ಹಾಡಿ ಕುಣಿದವು ಗೊತ್ತೆ?

'ಈ ಮಣ್ಣು ನಮ್ಮದು ಈ ಗಾಳಿ ನಮ್ಮದು
ಕಲಕಲನೆ ಹರಿಯುತಿಹ ನೀರು ನಮ್ಮದು
ಕಣಕಣದಲಿ ಭಾರತೀಯ ರಕ್ತ ನಮ್ಮದು
ನಮ್ಮದು ನಮ್ಮದು....'



* * * * * * * *

ಆದರೆ ಒಂದು ವಾರದಿಂದ ಈ ಹಾಡು ನನ್ನಲ್ಲಿ ಮೊದಲಿನ ಹೆಮ್ಮೆ ಹುಟ್ಟಿಸುವ್ವದಿರಲಿ, ಮರುಕ ಹುಟ್ಟಿಸುತ್ತಿದೆ. ಒಮ್ಮೊಮ್ಮೆ ಒಬ್ಬಳೇ ಹೊಲದ ಬಾವಿ ಕಟ್ಟೆ ಮೇಲೆ ನಿಂತು ಜೋರಾಗಿ ಈ ಹಾಡು ಹೇಳಿ ಅತ್ತಿದ್ದೇನೆ. ಈಗಂತೂ ನನಗೆ ಈ ಹಾಡು ನೆನೆದಾಗ ನಾವೆಂತಹ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದೇವೆ ಎಂದೆನಿಸಲು ಶುರುವಾಗಿದೆ.

ಯಾಕೆ ಹೀಗೆ? ಹಾಂ, ಇವಳು, ಚಿತ್ರದಲ್ಲಿ ಕಂಡ ಇವಳ ಈ ಪುಟ್ಟ ಮುಖ!

ಈ ಹುಡುಗಿ ಯಾರು? ವಾರದಿಂದ ಈ ಮುಖ ಕಾಡುತ್ತಿದೆ. ಇವಳ ತೀಕ್ಷ್ಣ ನೋಟದ ಕಣ್ಣುಗಳಲ್ಲಿ ನೋವು ಇದೆಯಾ? ನೋವು ಹೆಪ್ಪುಗಟ್ಟಿದ ಆಕ್ರೋಶವಿದೆಯಾ? ನನ್ನ ಪುಟ್ಟ ತಂಗಿಗಿಂತ ಚಿಕ್ಕ ಹುಡುಗಿ, ಕೈಲಿ ಪುಸ್ತಕ ಹಿಡಿದು ಕಾಲೇಜು ಹೊಕ್ಕಲು ತುಳಿಯಬೇಕಾಗಿದ್ದ ಈ ಹುಡುಗಿ ಬೆನ್ನಿಗೆ ಬಂದೂಕು ಏರಿಸಿಕೊಂಡು ಈ 'ಸ್ವತಂತ್ರ ಸಾರ್ವಭೌಮ' ದೇಶದ ಬಲಿಷ್ಠ ಸೈನ್ಯದವರು, ಮಾನವೀಯತೆಯೇ ಇಲ್ಲದ ಪೊಲೀಸು-ಸಲ್ವಾ ಜುಡುಂಗಳ ಎದುರು ಈ ಗುಬ್ಬಚ್ಚಿ ಹುಡುಗಿ ನಿಲ್ಲುತ್ತಾಳೆಂದರೆ, ಏನು ನಡೆಯುತ್ತಿದೆ ಅವಳ ಬದುಕಲ್ಲಿ? ಏನು ನಡೆಯಿತು ಈ ಹಿಂದೆ?

ತಾನು ನಿಂತ, ಕುಂತ, ಮಲಗಿದ ಆ ಭೂಮಿಯ ಗರ್ಭದಲ್ಲಿ ಖನಿಜ ಸಂಪತ್ತಿದ್ದುದೇ ಅವಳ ತಪ್ಪಾಯಿತೇ? ಅವಳ ಪೂರ್ವಜರು ಎಂದೂ ಮುಟ್ಟದ ಆ ಸಂಪತ್ತೇ ಇಂದು ಇವಳ ಪಾಲಿಗೆ ಜ್ವಾಲಾಮುಖಿಯಾಯಿತೆ?

ಇಲ್ಲ ಮೇಡಮ್, ಈ ಭೂಮಿ ಇವಳ ಜೊತೆಗೇ ಇದೆ. ಆದರೆ ಬಾಯಿ ತುಂಬಾ 'ವೇದಾಂತ' ಹೇಳುವ ಮಹನೀಯರು ಕಾರ್ಪೋರೇಟ್ ಕಂಪನಿಗಳ ಗುಲಾಮರಾಗಿದ್ದೇ ಇದಕ್ಕೆಲ್ಲ ಕಾರಣ ಎಂಬುದೇನೂ ಈಗ 'ಚಿದಂಬರ' ರಹಸ್ಯವಲ್ಲ ಬಿಡಿ. ಆದರೂ ನಮ್ಮ ಮೀಡಿಯಾಗಳ ಕಣ್ಣಲ್ಲಿ ಈ ನನ್ನ ಪುಟ್ಟ ತಂಗಿ ಟೆರರಿಸ್ಟ್ ಅಂತೆ! ಪ್ರಧಾನಿ ಕಣ್ಣಲ್ಲಿ ಈ ಕಂದ 'grave internal security threat' ಅಂತೆ!!

ನೀವು ಹಿಂದೊಮ್ಮೆ 'ಜನರ ಮೇಲೆ ಸರ್ಕಾರದ ಸಮರ' ಎಂದು ಬರೆದಿದ್ದು ಈಗ ಮತ್ತೆ ನೆನಪಾಗುತ್ತಿದೆ.

* * * * * * * *

ಹೋಗಿ ಕನ್ನಡಿ ಮುಂದೆ ನಿಂತರೆ ಅದೇ ಹುಡುಗಿಯ ಮುಖ. ಯಾರೀಕೆ? ನನ್ನ-ನಿಮ್ಮ ತಂಗಿಯಾ? ಗೆಳತಿಯಾ?

ಇಷ್ಟು ದಿನ ಅಚ್ಚೊತ್ತಿದ್ದ ಭಾರತಮಾತೆಯ ಕ್ಯಾಲೆಂಡರ್ ಚಿತ್ರ ಈಗ ಮಸುಕುಮಸುಕಾಗುತ್ತಿದೆ. ಅಲ್ಲಿ ಈ ಹುಡುಗಿಯ ಚಿತ್ರವೇ ದಾಖಲಾಗುತ್ತಿದೆ.

ಪುಟ್ಟ ಭಾರತಮಾತೆಯೇ ನಿನಗೆ ಲಾಲ್ ಸಲಾಮ್ ಕಣಮ್ಮ...

'ಈ ಮಣ್ಣು ನಿಮ್ಮದು, ಈ ಗಾಳಿ ನಿಮ್ಮದು.....'

ನಮಸ್ಕಾರ ಮೇಡಮ್, ಮುಂದಿನ ವಾರ ಸಿಗುವೆ.

-ಶಶಿ, ಗದಗ

(ಮಾರ್ಚ್ 29ರ 'ಔಟ್‌ಲುಕ್' ಪತ್ರಿಕೆಯ 22-23ನೇ ಪುಟದಲ್ಲಿ ಕಂಡ ಪುಟ್ಟ ಹುಡುಗಿಯ ಚಿತ್ರ ನೋಡಿ ಬರೆದದ್ದು)

ಹಾದೇವ ಅವರ ಚಿಂತನೆಯ ಬಗ್ಗೆ ಏನನ್ನು ಹೇಳದೇ ಇರುವುದೇ . ಮಹಾದೇವ ದಲಿತರಿಗೋಸ್ಕರ ಉಡುಪಿಯಲ್ಲಿ ಒಂಬತ್ತನೇ ಮಠವನ್ನು ಸಿ ಪರ್ಯಾಯದಲ್ಲಿ ಭಾಗವಹಿಸುವ ಮಹತ್ ಆಕಾಂಕ್ಷೆವುಳ್ಳವರಾಗಿದ್ದಾರೆ. ಪವರಿಂದ ದಲಿತರು ಆಧುನಿಕತೆಯತ್ತ ಸಾಗುವ ಬದಲು ಮಧ್ಯಯುಗಕ್ಕೆ ಳುತ್ತಾರೆ.

- ಜನಮೇಜಯ


ದ್ದೇ ಹೇಳೋ ಕಿಸಬಾಯಿ ದಾಸ. ಜೀವನವೆಲ್ಲಾ ಒಂದೇ ಮಂತ್ರವನ್ನು ಉಲಿಯುತ್ತಿರುವವರು ಇವರು. ಅಸ್ಪೃಶ್ಯತೆಯ ವಿರುದ್ಧ ಬರೆಯಲಿ, ರೆ ದೇವನೂರು ಮಹಾದೇವರು ಬೇರೆ ವಿಷಯಗಳ ಕಡೆಗೂ ಗಮನ ಸಬಹುದಲ್ಲ! ನಮ್ಮ ಶಾಲೆಯಲ್ಲೇ ಅನೇಕ ದಲಿತರಿದ್ದರು. ಮೇಲ್ವರ್ಗದ ಪಾಸಾಗಿ ಶಾಲೆ ಬಿಟ್ಟು ಹೋಗುತ್ತಿದ್ದರೆ ದಲಿತರು ಮಾತ್ರ ವರ್ಷಾವರ್ಷ ಗ್ಗರಿಸುತ್ತಿದ್ದರು. ಇಂಥವರು ಪೇಜಾವರ ಶ್ರೀಗಳಾದರೆ ಏನು ಗತಿ!

- (ಹೆಸರನ್ನು ಬರೆದಿಲ್ಲ)

ಓದುಗರು ಸುಲಭವಾಗಿ ಮೋಸ ಹೋಗಬಹುದಾದ, ತರ್ಕದಿಂದ ಸ್ವನನ್ನೂ ಸಾಧಿಸಬಹುದು ಎನ್ನುವ ಭ್ರಮೆಯನ್ನು ಹುಟ್ಟಿಸುವ ಲೇಖನ . ಹಾಗೆಂದು ಇದರಲ್ಲಿ ಸತ್ಯ ಇಲ್ಲ ಎಂದಲ್ಲ, ಆದರೆ ಸತ್ಯದ ಜೊತೆಗೆ ಳ್ಳು ಸೇರಿಕೊಂಡಿರುವುದರಿಂದ ಇವೆರಡನ್ನೂ ಬೇರ್ಪಡಿಸುವುದು ಗರ ವಿವೇಕಕ್ಕೆ ಬಿಟ್ಟದ್ದು.... ಇನ್ನು ಯಾರೋ ಅವಿವೇಕಿ ಬುದ್ಧಿ ಲ್ಲದ ಬಾಲಕ ತನ್ನ ತಂದೆಯ ವಯಸ್ಸಿನ ಹಿರಿಯರನ್ನು ಏಕವಚನದಲ್ಲಿ ಬೋಧಿಸಿದ - ಎಂದಮಾತ್ರಕ್ಕೆ ಬ್ರಾಹ್ಮಣರನ್ನು ಹೊಣೆ ಮಾಡುವುದು ಹ್ಮಣ ದ್ವೇಷಕ್ಕೆ ನಿದರ್ಶನ!

- Sharadhi.

ಅವಕಾಶ ಸಂದರ್ಭದಲ್ಲೂ ಪ್ರವುಳಿ ಸೌದೆಯನ್ನು ಕೊಟ್ಟು ಊದಿ ಹ್ಮಣದ್ವೇಷಾಗ್ನಿಯನ್ನು ಬೆಳೆಸುತ್ತಿರುವ ಕೆಂಡಸಂಪಿಗೆಯ ನಿಯೋನಾರಿಖು



* ಮಹಾದೇವ ಅವರೆ, ಅನಂತಮೂರ್ತಿಯವರ ಮನೆಗೆ ಬಂದಿದ್ದ ಬ್ರಾಹ್ಮಣ ಅನಂತಮೂರ್ತಿಯವರ ಮನೆಯಲ್ಲೂ ಏನನ್ನೂ ತಿನ್ನಲಿಲ್ಲ. ತಮ್ಮ ತರ್ಕದ ಪ್ರಕಾರ ಅನಂತಮೂರ್ತಿಯವರೂ ಆ ಬ್ರಾಹ್ಮಣನ ದೃಷ್ಟಿಯಲ್ಲಿ 'ಅಸ್ಪೃಶ್ಯ'ರೇ ಆಗಿದ್ದರು. ಮಡಿಯಲ್ಲಿದ್ದಾಗ ಆ ಬ್ರಾಹ್ಮಣ ಸ್ವಂತ ಪತ್ನಿಯನ್ನೂ ಮಕ್ಕಳನ್ನೂ ಮುಟ್ಟುತ್ತಿರಲಿಲ್ಲ, ಮುಟ್ಟಿಸಿಕೊಳ್ಳುತ್ತಿರಲಿಲ್ಲ. ತಮ್ಮ ತರ್ಕದ ಪ್ರಕಾರ ಅವರ ಕುಟುಂಬದವರೂ ಆ ಬ್ರಾಹ್ಮಣನ ದೃಷ್ಟಿಯಲ್ಲಿ 'ಅಸ್ಪೃಶ್ಯ'ರೇ ಆಗಿದ್ದರು. ಅಂದರೆ ಅಸ್ಪೃಶ್ಯರೆಂದರೆ ದಲಿತರಷ್ಟೇ ಅಲ್ಲ ಬ್ರಾಹ್ಮಣರೂ ಹೌದು ಎಂದರ್ಥ ಅಲ್ಲವೆ?

- ಅ.ಮೂರ್ತಿ

ವರ್ತನೆಯನ್ನು ಖಂಡಿಸುತ್ತೇನೆ. ಬ್ರಾಹ್ಮಣದ್ವೇಷವೇ ಸಂಸ್ಕೃತಿಯಾಗಿರುವ ಈ ತಾಣದಲ್ಲಿ ಜೀವಪರವಾದ ವಿಚಾರಗಳು, ನಿಲುವುಗಳು, ಕಾರ್ಯಕ್ರಮಗಳು ಅರಳಲು ಸಾಧ್ಯವೆ?

— ಪ್ರವೀಣ

* ದೇವನೂರ ಮಹಾದೇವ ಅವರು ಪಾಪ ಸಮಾಜವಾದಿ ಚಿಂತಕರಿಂದ ಮರುಳಾಗಿ ವಾಸ್ತವಿಕ ನೆಲೆಗಟ್ಟಿನಲ್ಲಿ ದಲಿತರ ಸಮಸ್ಯೆಗಳ ಬಗ್ಗೆ ಸಕ್ರಿಯ ರಾಜಕೀಯ ಮಾಡುವ ಶಕ್ತಿಯನ್ನು ಕುಂದಿಸಿಕೊಂಡು ಅಮೂರ್ತ ಚಿಂತಕರಾಗಿಬಿಟ್ಟಿದ್ದಾರೆ.... ಅಮೂರ್ತ ಚಿಂತನೆಯನ್ನು ಬದಿಗೆಸೆಯಿರಿ ಮಾದೇವ. ಚಾಮರಾಜನಗರ ಮೀಸಲು ಕ್ಷೇತ್ರದಲ್ಲಿ ಚುನಾವಣೆಗೆ ನಿಂತು ಗೆದ್ದು ಏನಾರ ರಾಜಕೀಯ ಮಾಡಿ ದಲಿತರ ಅಭಿವೃದ್ಧಿ ಮಾಡಿ ದೇವೆ!

— ನಿಂಗಯ್ಯ ಹನೂರು

* ದಲಿತ-ಬ್ರಾಹ್ಮಣ ಭಾಯಿ ಭಾಯಿ! ಮನುವಾದಿಗಳೆ, ದಲಿತರನ್ನೂ ಬ್ರಾಹ್ಮಣರನ್ನೂ ಒಡೆಯುವ ಪ್ರಯತ್ನವನ್ನು ಮಾಡಬೇಡಿ.

- (ಹೆಸರನ್ನು ಬರೆದಿಲ್ಲ)

* ದಲಿತೋದ್ಧಾರ, ದಲಿತರ ಅಭಿವೃದ್ಧಿ ಪರ ಮಾತನಾಡುವ ದಲಿತ ಮುಖಂಡರು ಗ್ರಾಮಗಳಲ್ಲಿ, ಪಟ್ಟಣಗಳಲ್ಲಿ ಏನು ಮಾಡುತ್ತಿದ್ದಾರೆಂಬುದು ಮಹಾದೇವ ಅವರಿಗೆ ಗೊತ್ತಿಲ್ಲವೇ?

* ಆಧುನಿಕ ಭಾರತದಲ್ಲಿ ಹೋಟೇಲ್, ಸಿನಿಮಾ ಮಂದಿರ, ಶಿಕ್ಷಣದಲ್ಲಿ ಸಮಾನತೆ ತಂದಿದ್ದರೂ ಇನ್ನೂ ಮಹಾದೇವ ಅವರು ಅಸಮಾಧಾನ ತೋರುತ್ತಿರುವುದು ಅರ್ಥವಾಗುತ್ತಿಲ್ಲ.

- (ಹೆಸರು ಬರೆದಿಲ್ಲ)

ಪಟ್ಟಾಭಿರಾಮ ಸೋಮಯಾಜಿ ಪರವಾಗಿ ಪ್ರತಿಭಟನಾ ಪತ್ರ

ಮಂಗಳೂರು ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಪಟ್ಟಾಭಿರಾಮ ಸೋಮಯಾಜಿಯವರು ಸಾರ್ವಜನಿಕ ಸಭೆಯೊಂದರಲ್ಲಿ ಭಾಗವಹಿಸಿದ್ದಕ್ಕಾಗಿ ವಿಶ್ವವಿದ್ಯಾಲಯದ ಕೆಂಗಣ್ಣಿಗೆ ಮತ್ತೊಮ್ಮೆ ಗುರಿಯಾಗಿದ್ದಾರೆ. ವಿವಿಯ ಈ ಕ್ರಮದ ಹಿಂದೆ ಸಂಘ ಪರಿವಾರದ ಬೆಂಬಲ ಇರುವ ವಿದ್ಯಾರ್ಥಿ ಗುಂಪೊಂದರ ಕೈವಾಡವೂ ಇದೆ. ಸಂಘ ಪರಿವಾರದ ಶಕ್ತಿಗಳಿಗೆ ಕುಮ್ಮಕ್ಕು ನೀಡುವ ರೀತಿಯಲ್ಲಿ ಅಲ್ಲಿನ ಕುಲಪತಿಗಳೂ ವರ್ತಿಸಿರುವುದು ಬಹಳ ಆತಂಕಕಾರಿ ಬೆಳವಣಿಗೆಯಾಗಿದೆ. ಈಗ ಪಟ್ಟಾಭಿಯವರ ನೆರವಿಗೆ ಬರದಿದ್ದರೆ, ಅವರಿಗೆ ಸಂಘ ಪರಿವಾರದವರಿಂದ ಮತ್ತಷ್ಟು ತೊಂದರೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಈ ಟಿಪ್ಪಣಿಯನ್ನು ಅಥವಾ ಅಲ್ಲಿನ ವಿವರಗಳನ್ನು ಆಧರಿಸಿದ ಒಂದು ಪ್ರತಿಭಟನಾ ಪತ್ರವನ್ನು ತಾವೆಲ್ಲರೂ ಮಂಗಳೂರು ವಿವಿ ಕುಲಪತಿಗಳಿಗೆ ಮತ್ತು ಅದರ ಒಂದು ಪ್ರತಿಯನ್ನು ಕುಲಾಧಿಪತಿಗಳಾದ ರಾಜ್ಯಪಾಲರಿಗೆ, ವೈಯಕ್ತಿಕವಾಗಿ ಅಥವಾ ತಮ್ಮ ಸಂಘಟನೆಗಳ ವತಿಯಿಂದ ಕಳುಹಿಸಬೇಕೆಂದು ಕೋರಿಕೆ.

ಈ ಪ್ರತಿಭಟನಾ ಪತ್ರದ ಪ್ರತಿಯನ್ನು http://www.kendaliru.blogspot.com ನಲ್ಲೂ ಹಾಕಿದ್ದೇವೆ. ಅದರ ಪ್ರಿಂಟ್ ತೆಗೆದುಕೊಂಡು ಸಹಿ ಮಾಡಿ ಪೋಸ್ಟ್ ಮೂಲಕ ಕಳುಹಿಸಬಹುದು ಅಥವಾ ಮಂಗಳೂರು ವಿಶ್ವವಿದ್ಯಾಲಯ ಕುಲಪತಿಗಳ vc@mangaloreuniversity.ac.in ಮತ್ತು ರಾಜ್ಯಪಾಲರ rbblr@vsnl.com ಎಂಬ ಈ-ಮೇಲ್ ವಿಳಾಸಗಳಿಗೂ ಕಳುಹಿಸಬಹುದು.

ನಮಸ್ಕಾರಗಳೊಂದಿಗೆ,


– ಪ್ರೊ. ನಗರಿ ಬಾಬಯ್ಯ, ಪ್ರೊ. ವಿ.ಎಸ್. ಶ್ರೀಧರ, ಪ್ರೊ.ನಗರಗೆರೆ ರಮೇಶ್ ಮತ್ತು ಪ್ರೊ. ಜಿ.ಕೆ. ರಾಮಸ್ವಾಮಿ,
ಪ್ರಜಾತಾಂತ್ರಿಕ ಜನರ ವೇದಿಕೆಯ ಪರವಾಗಿ

ಮಂಗಳೂರು ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಪಟ್ಟಾಭಿರಾಮ ಸೋಮಯಾಜಿಯವರಿಗೆ ಸಂಘಪರಿವಾರ ಪದೇಪದೇ ಕಿರುಕುಳ ನೀಡುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ಈಗ ಅವರು ಮತ್ತೊಮ್ಮೆ ಸಂಘಪರಿವಾರ ಮತ್ತು ವಿವಿಯಿಂದ ತೊಂದರೆಗೆ ಒಳಗಾಗಿದ್ದಾರೆ. ಮುಕ್ತ ಚಿಂತನೆ, ವಿಚಾರಗಳನ್ನು ಕಲಿಸಿ, ಬೆಳೆಸಬೇಕಾದ ಜವಾಬ್ದಾರಿಯಿರುವ ವಿಶ್ವವಿದ್ಯಾಲಯವೇ ಕಾಲೇಜು ಅಧ್ಯಾಪಕರ ಅಭಿಪ್ರಾಯದ ಹಕ್ಕನ್ನು ಮೊಟಕುಗೊಳಿಸಲು ಹೊರಟಿರುವುದನ್ನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಎಲ್ಲ ಪ್ರಜ್ಞಾವಂತರೂ ಪ್ರತಿಭಟಿಸಬೇಕಾಗಿದೆ.

ಸೋಮಯಾಜಿಯವರು ಕರಾವಳಿಯಲ್ಲಿ ಹೆಚ್ಚುತ್ತಿರುವ ಕೋಮುವಾದ, ಹಿಂಸೆಯ ವಿರುದ್ಧ ತಮ್ಮ ಧ್ವನಿ ಎತ್ತಿ ಮಾನವೀಯತೆ ಮತ್ತು ಕೋಮು ಸಾಮರಸ್ಯದ ಪರವಾಗಿ ನಿಂತಿರುವುದೇ ಸಂಘಪರಿವಾರದ ಆಕ್ರೋಶಕ್ಕೆ ಕಾರಣ ಎಂಬುದು ಸ್ಪಷ್ಟ. ದುರಂತವೆಂದರೆ, ಸಂಘಪರಿವಾರದ ಶಕ್ತಿಗಳನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ವಿಶ್ವವಿದ್ಯಾಲಯವೂ ಸೋಮಯಾಜಿಯವರಿಗೆ ನಿರಂತರವಾಗಿ ಕಿರುಕುಳ ಕೊಡುತ್ತಾ ಬಂದಿದೆ.

ಒಂದು ವರ್ಷದ ಹಿಂದೆ ಮಂಗಳೂರಿನಲ್ಲಿ ಕೋಮು ಗಲಭೆಯಾದಾಗ ಟಿವಿ ಚಾನೆಲ್ ಒಂದು ಅವರ ಅಭಿಪ್ರಾಯ ಪಡೆಯಲು ಅವರನ್ನು ಸಂದರ್ಶಿಸಿತ್ತು. ಅವರ ಮಾತುಗಳು ಟಿವಿಯಲ್ಲಿ ಪ್ರಸಾರವಾಗುವ ಮುನ್ನವೇ ಸಂಘಪರಿವಾರದ ಕೆಲವು ವಿದ್ಯಾರ್ಥಿಗಳು ಕಾಲೇಜಿನಲ್ಲಿ ದಾಂಧಲೆ ಎಬ್ಬಿಸಿದರು; ಬಲಾತ್ಕಾರಪೂರ್ವಕವಾಗಿ ತರಗತಿಗಳನ್ನು ನಡೆಯಲು ಬಿಡದೆ ಒಂದು ವಾರದ ಕಾಲ ಇಡೀ ಕಾಲೇಜನ್ನೇ ಹೆಚ್ಚುಕಮ್ಮಿ ಮುಚ್ಚಿಸಿಬಿಟ್ಟಿದ್ದರು. ಸಂಘಪರಿವಾರದ ಸುಮಾರು 60-70 ವಿದ್ಯಾರ್ಥಿಗಳು ಸೋಮಯಾಜಿಯವರ ವಿರುದ್ಧ ವಿವಿಗೆ ದೂರನ್ನು ನೀಡಿದ್ದರೆ ಸುಮಾರು 400-500 ವಿದ್ಯಾರ್ಥಿಗಳು ಸೋಮಯಾಜಿಯವರ ಬೆಂಬಲಕ್ಕೆ ನಿಂತು ಅವರ ಪರವಾಗಿ ವಿವಿಗೆ ಮನವಿ ಸಲ್ಲಿಸಿದ್ದರು. ಸೋಮಯಾಜಿಯವರು ಯಾವುದೇ ಕಾನೂನನ್ನು ಉಲ್ಲಂಘಿಸದಿದ್ದರೂ, ಸಂಘಪರಿವಾರದ ವಿದ್ಯಾರ್ಥಿ ಗುಂಪಿನ ದೂರನ್ನು ಪುರಸ್ಕರಿಸಿದ ಕಾಲೇಜು ಮತ್ತು ವಿವಿ, ಈ ಬಗ್ಗೆ ಸೋಮಯಾಜಿಯವರಿಗೆ ಒಂದು ನೋಟೀಸನ್ನು ಜಾರಿ ಮಾಡಿದ್ದವು. ವಿವಿಯ ಘನತೆಗೆ ತಕ್ಕುದಲ್ಲದ ಇಂಥ ಕ್ರಮದ ವಿರುದ್ಧ ಪ್ರತಿಭಟಿಸಿ ಯು. ಆರ್. ಅನಂತಮೂರ್ತಿ, ಮಂಗಳೂರಿನ ಶಾಸಕ ಯು.ಟಿ. ಖಾದರ್, ಅನೇಕ ಮಾನವ ಹಕ್ಕು ಹೋರಾಟಗಾರರು ಮತ್ತು ಲೇಖಕರ ಒಂದು ತಂಡ ವಿವಿಯ ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲರನ್ನು ಭೇಟಿಮಾಡಿ, ಮಂಗಳೂರು ವಿವಿ ಆಡಳಿತವು ರಾಜಕೀಯ ಪಕ್ಷವೊಂದರ ವಕ್ತಾರನಂತೆ ವರ್ತಿಸುವುದರ ಅಪಾಯಗಳನ್ನು ಕುರಿತಂತೆ ಮನವಿ ಸಲ್ಲಿಸಿತ್ತು. ಆಗ ಕೆಲ ದಿನ ತಣ್ಣಗಾಗಿದ್ದ ಅಲ್ಲಿನ ಸಂಘಪರಿವಾರ ಈಗ ಮತ್ತೆ ಸೋಮಯಾಜಿಯವರ ಮೇಲೆ ಹರಿಹಾಯ್ದಿದೆ. ಯಥಾಪ್ರಕಾರ ವಿವಿ ಕೂಡ ಸಂಘಪರಿವಾರದ ಶಕ್ತಿಗಳಿಗೆ ಪೂರಕವಾಗಿ ವರ್ತಿಸಿ ತನಗೆ ಸ್ವಂತ ಅಸ್ತಿತ್ವವೇ ಇಲ್ಲ ಎನ್ನುವುದನ್ನು ಮತ್ತೊಮ್ಮೆ ಸಾದರಪಡಿಸಿದೆ.

ಈಗಿನ ಪ್ರಕರಣದ ಹಿನ್ನೆಲೆ ಹೀಗಿದೆ. ಪಟ್ಟಾಭಿರಾಮ ಸೋಮಯಾಜಿಯವರು 'ಭಾರತೀಯ ಆಹಾರಪದ್ಧತಿಯ ರಕ್ಷಣಾ ಆಂದೋಳನ' ಇದರ ದ.ಕ. ಮತ್ತು ಉಡುಪಿ ಜಿಲ್ಲಾ ಘಟಕಗಳು ದಿನಾಂಕ 25-2-2010ರಂದು ಮಂಗಳೂರಿನಲ್ಲಿ ಕರೆದಿದ್ದ ಒಂದು ಜಂಟಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು. ಇದು ಯಾವುದೇ ರಾಜಕೀಯ ಪಕ್ಷದ ಸಭೆಯಾಗಿರಲಿಲ್ಲ. ಸರ್ಕಾರ ಜಾರಿಗೊಳಿಸಲು ಹೊರಟಿರುವ 'ಗೋಹತ್ಯೆ ಮಸೂದೆ'ಯಲ್ಲಿನ ಕೆಲವು ಅಂಶಗಳ ಸಾಂವಿಧಾನಿಕ ಸಾಧ್ಯತೆ-ಬಾಧ್ಯತೆಗಳನ್ನು ಚರ್ಚಿಸುವ ಸಲುವಾಗಿ ಕರೆದಿದ್ದ ಸಭೆ ಅದು. ಸೋಮಯಾಜಿ ಅವರು ವಿಶ್ವವಿದ್ಯಾಲಯದ ಸೇವಾನಿಯಮಗಳನ್ನು ಪಾಲಿಸಿ, ಸಾಂದರ್ಭಿಕ ರಜೆಯ ಅರ್ಜಿಯನ್ನು ಅದರ ಹಿಂದಿನ ದಿನವೇ ಕ್ರಮಬದ್ಧವಾಗಿ ಸಲ್ಲಿಸಿ, ಅಂದಿನ ಆ ಸಭೆಯಲ್ಲಿ ಪಾಲ್ಗೊಂಡು ಓರ್ವ ಜವಾಬ್ದಾರಿಯುತ ನಾಗರಿಕನ ಕರ್ತವ್ಯವನ್ನು ಪಾಲಿಸಿದ್ದರು. ಅವರು ಹೀಗೆ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡು ನೀತಿಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎಂಬ ನೆಪವಿಟ್ಟುಕೊಂಡು ಸಂಘಪರಿವಾರದ ಕೆಲವು ವಿದ್ಯಾರ್ಥಿಗಳು ತರಗತಿಗಳನ್ನು ಬಲಾತ್ಕಾರವಾಗಿ ಮುಚ್ಚಿಸಿ, ಗಲಾಟೆ ನಡೆಸಿ ಕ್ಯಾಂಪಸ್ ಒಳಗಡೆ ಭಯದ ವಾತಾವರಣ ಮೂಡಿಸಿದರು. ಬಳಿಕ ಕಾಲೇಜಿನ ಪ್ರಾಂಶುಪಾಲರಿಗೂ, ವಿವಿ ಕುಲಪತಿಗಳಿಗೂ ಮನವಿ ನೀಡಿ ಸೋಮಯಾಜಿ ಯವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದರು. ಪ್ರತಿಯಾಗಿ ವಿದ್ಯಾರ್ಥಿಗಳ ದೊಡ್ಡ ಗುಂಪೊಂದು ಸೋಮಯಾಜಿಯವರ ಪರವಾಗಿ ಪ್ರತಿಭಟನೆ ನಡೆಸಿ ನೂರಾರು ಸಹಿಗಳಿರುವ ಮನವಿಪತ್ರವೊಂದನ್ನು ಸಲ್ಲಿಸಿತು. ಆದರೆ ಈ ಬಾರಿಯೂ ವಿವಿ ಕೇವಲ ಸಂಘ ಪರಿವಾರದ ವಿದ್ಯಾರ್ಥಿಗಳ ದೂರನ್ನು ಮಾತ್ರ ಪುರಸ್ಕರಿಸಿದೆ. ಮತ್ತು ಅದನ್ನು ಯಥಾವತ್ತಾಗಿ ಪಾಲಿಸಲು ತಾನು ಕಟಿಬದ್ಧವೇನೋ ಎಂಬಂತೆ ಇಡೀ ಪ್ರಕರಣದ ಬಗ್ಗೆ ವಿವರಣೆ ಕೇಳಿ ಸೋಮಯಾಜಿಯವರಿಗೆ ನೋಟೀಸು ಜಾರಿ ಮಾಡಿದೆ.



ಮಾನ್ಯ ಕುಲಪತಿಗಳು ಈ ದೂರಿನ ಹಿನ್ನೆಲೆಯ ಬಗ್ಗೆ ಮತ್ತು ಸೋಮಯಾಜಿಯವರು ಈ ಸಭೆಯಲ್ಲಿ ಭಾಗವಹಿಸಿದ್ದರ ಬಗ್ಗೆ ತಾವೇ ವಿವರಗಳನ್ನು ಸಂಗ್ರಹಿಸಿದ್ದರೆ, ವಿವಿಯ ನೀತಿಸಂಹಿತೆಯನ್ನು ಉಲ್ಲಂಘಿಸುವ ಯಾವ ಅಪರಾಧವನ್ನೂ ಸೋಮಯಾಜಿಯವರು ಮಾಡಿಲ್ಲವೆಂಬುದನ್ನೂ, ಕೇವಲ ಕಿರುಕುಳವನ್ನು ಕೊಡುವ ಏಕೈಕ ಉದ್ದೇಶದಿಂದಲೇ ವಿದ್ಯಾರ್ಥಿಗಳ ಒಂದು ಗುಂಪು ಈ ದೂರನ್ನು ಸಲ್ಲಿಸಿದೆ ಎಂಬುದನ್ನೂ ಕುಲಪತಿಗಳು ಗ್ರಹಿಸಬಹುದಾಗಿತ್ತು. ಈ ಪ್ರಕರಣ ಮಾಧ್ಯಮಗಳಲ್ಲಿಯೂ ವ್ಯಾಪಕವಾಗಿ ಪ್ರಕಟವಾಗಿರುವುದರಿಂದ ವಿವರಗಳನ್ನು ಆ ಮೂಲಗಳಿಂದಲೂ ಕಲೆಹಾಕಬಹುದಾಗಿತ್ತು. ವಿಪರ್ಯಾಸವೆಂದರೆ, ವಿದ್ಯಾಭ್ಯಾಸದಲ್ಲಿ ನಿಜಕ್ಕೂ ಆಸಕ್ತಿ ಇರುವ ಮತ್ತು ಸಂಘಪರಿವಾರದ ವಿದ್ಯಾರ್ಥಿಗಳಿಂದ ನಿರಂತರ ಕಿರುಕುಳಕ್ಕೊಳಗಾಗಿರುವ ಇನ್ನೊಂದು ವಿದ್ಯಾರ್ಥಿಗಳ ದೊಡ್ಡ ಗುಂಪು ಸೋಮಯಾಜಿಯವರ ಪರವಾಗಿ ಮತ್ತು ಸಂಘಪರಿವಾರದ ಗುಂಪಿನ ದುರುದ್ದೇಶವನ್ನು ಖಂಡಿಸಿ ವಿವಿಗೆ ಮನವಿ ಸಲ್ಲಿಸಿದೆಯಾದರೂ ಈ ಮನವಿಯ ಬಗ್ಗೆ ಚಕಾರವೆತ್ತದ ವಿವಿ ಕೇವಲ ಒಂದು ಗುಂಪಿನ ಕೆಲವೇ ವಿದ್ಯಾರ್ಥಿಗಳ ಅಭಿಪ್ರಾಯವನ್ನೇ ತನ್ನ ಅಧಿಕೃತ ಮಾಹಿತಿ ಎಂಬಂತೆ ನಡೆದುಕೊಂಡು ತನ್ನ ಕುರುಡುತನವನ್ನು ಎತ್ತಿತೋರಿದೆ.

ಸೋಮಯಾಜಿಯಂಥ ಧೀಮಂತಿಕೆಯುಳ್ಳ ಅಧ್ಯಾಪಕ, ಲೇಖಕ ಮತ್ತು ಚಿಂತಕ ತನ್ನಲ್ಲಿ ಕೆಲಸ ಮಾಡುತ್ತಿರುವುದು ಯಾವುದೇ ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ವಿಷಯವಾಗಬೇಕು. ಆದರೆ, ಮಂಗಳೂರು ವಿಶ್ವವಿದ್ಯಾಲಯವು ಅಂಥವರ ಬಾಯನ್ನೇ ಮುಚ್ಚಲು ಹೊರಟು, ನಮ್ಮ ದೇಶವು ಒಪ್ಪಿಕೊಂಡಿರುವ ಸಂವಿಧಾನ, ಸಾಂಸ್ಕೃತಿಕ, ನೈತಿಕ ನೇಮಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಮಂಗಳೂರು ವಿವಿ ಈ ವಿಷಯದಲ್ಲಿ ತಪ್ಪೆಸಗುತ್ತಿದೆ ಎಂದು ಬಲವಾಗಿ ಹೇಳಬೇಕಾಗಿದೆ. ಈ ಪ್ರಕರಣ ಭಾರತದ ಪ್ರಜಾತಾಂತ್ರಿಕ ಹಕ್ಕನ್ನು ಕುರಿತಂತೆ, ಅದರಲ್ಲೂ ಉನ್ನತ ಶೈಕ್ಷಣಿಕ ಸಂಸ್ಥೆಗಳ ಅಭಿಪ್ರಾಯ, ಚಿಂತನಾ ಸ್ವಾಯತ್ತೆ ಕುರಿತಂತೆ ಅನೇಕ ಮೂಲಭೂತ ಪ್ರಶ್ನೆಗಳಿಗೆ ಎಡೆ ಮಾಡಿಕೊಡುತ್ತದೆ.

ಮೊದಲನೆಯದಾಗಿ, ಮಾನವಹಕ್ಕುಗಳನ್ನು ಕುರಿತಂತೆ ವಿಶ್ವಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಸಮುದಾಯವು ಮಾಡಿಕೊಂಡ ಒಪ್ಪಂದಗಳಿಗೆ ನ[illegible] ದೇಶವು ಸಹಿಮಾಡಿದೆ ಎನ್ನುವುದನ್ನು ನೆನೆಯಬೇಕು. ಈ ಒಪ್ಪಂದ[illegible] ಪ್ರಕಾರ ತಮಗೆ ಸರಿಕಂಡ ರಾಜಕೀಯ, ಸಾಮಾಜಿಕ, ಸಾಂಸ್[illegible] ಅಭಿಪ್ರಾಯಗಳನ್ನು ಹೊಂದಿರಲು, ಅವುಗಳನ್ನು ವ್ಯಕ್ತಪಡಿಸಲು ಮ[illegible] ಅವುಗಳಂತೆ ಬಾಳಲು ಎಲ್ಲರಿಗೂ ಹಕ್ಕಿದೆ.

ಎರಡನೆಯದು, ಒಂದು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ವಿಶ್ವವಿದ್ಯಾಲ[illegible] ಇರುವ ಕರ್ತವ್ಯ ಮತ್ತು ಜವಾಬ್ದಾರಿ ಕುರಿತದ್ದು. ಮುಕ್ತ ಚಿಂತನೆ[illegible] ಬೆಳೆಸುವ, ಭಿನ್ನಾಭಿಪ್ರಾಯಗಳೊಂದಿಗೇ ಬೌದ್ಧಿಕವಾಗಿ ಬೆಳೆಯುವ, ದೇ[illegible] ಸಂವಿಧಾನ ನೀಡಿರುವ ಹಕ್ಕುಗಳ ಬಗ್ಗೆ ಯುವ ಪೀಳಿಗೆಯನ್ನು ಎಚ್ಚರಿ[illegible] ಮತ್ತು ಈ ಹಿನ್ನೆಲೆಯಲ್ಲಿ ಸಮಾಜದ ಮತ್ತು ಪ್ರಭುತ್ವದ ದಮನ[illegible] ನೀತಿ ಹಾಗೂ ಆಚರಣೆಗಳನ್ನು ಪ್ರಶ್ನಿಸುವ ಭೂಮಿಕೆಯನ್ನು [illegible] ಮಾಡಬೇಕಾದ್ದು ಉನ್ನತ ಶೈಕ್ಷಣಿಕ ಸಂಸ್ಥೆಗಳ ಪ್ರಾಥಮಿಕ ಕರ್ತ[illegible] ಇಂಥ ಕ್ರಿಯಾಶೀಲತೆ ಮಾತ್ರ ಒಂದು ಉನ್ನತ ವಿದ್ಯಾ ಸಂಸ್ಥೆಯ[illegible] ಜೀವಂತವಾಗಿಡಲು ಸಾಧ್ಯ. ಆದರೆ ಮಂಗಳ[illegible] ವಿಶ್ವವಿದ್ಯಾಲಯದ ವರ್ತನೆ ಈ ಉದ್ದೇಶ[illegible] ಕಡೆಗಣಿಸಿದೆ; ತನ್ನ ಗುರಿ ಕೇವಲ ಉದ್ಯೋಗಿಗ[illegible] ತಯಾರು ಮಾಡುವುದು ಮಾತ್ರ ಎ[illegible] ಮಂಗಳೂರು ವಿವಿ ಅಂದುಕೊಂಡಂತಿದೆ.

ಮೂರನೆಯದು, ಅಧ್ಯಾಪಕರೂ ಸೇರಿದಂತೆ [illegible] ಸರ್ಕಾರಿ ನೌಕರರಿಗೆ ಇರುವ ಹಕ್ಕುಗಳನ್ನು ಕುರಿತ[illegible] ತನ್ನಿಂದ ಸಂಬಳ ಪಡೆಯುವವರು ತನ್ನ ವಿ[illegible] ಮಾತನಾಡಕೂಡದು ಎಂಬುದು ಒ[illegible] ಊಳಿಗಮಾನ್ಯ ವಸಾಹತುಶ[illegible] ಧೋರಣೆಯಲ್ಲದೆ ಮತ್ತೇನಲ್ಲ. ಇ[illegible] ಕೂಡ ನೀತಿಸಂಹಿತೆಯ ಹೆಸ[illegible] ಇಂಥ ಕಂದಾಚಾರದ ಕಾನೂ[illegible] ಗಳನ್ನು ಪಾಲಿಸಿಕೊಂಡು ಬರು[illegible] ಆಧುನಿಕ ಪ್ರಜಾತಾಂ[illegible] ವ್ಯವಸ್ಥೆಯ ಲಕ್ಷಣವಲ್ಲ. ಇದ[illegible] ಪ್ರಜಾಪ್ರಭುತ್ವದ ಹೆಸರಿನಲ್ಲಿ ಫ್ಯಾಸಿಸ್ಟ್ ಆಳ್ವಿಕೆಯನ್ನು ನಡೆಸುವ ಪಕ್ಷ[illegible] ನೆರವಾಗಬಹುದೇ ವಿನಃ, ನಿಜವಾದ ಪ್ರಜಾತಾಂತ್ರಿಕತೆಗೆ ಪೆಟ್ಟು ಬೀಳ[illegible] ಸೋಮಯಾಜಿಯವರ ಪ್ರಕರಣ ಸಾಬೀತು ಮಾಡುವುದು ಇ[illegible] ಈ ಸಂಹಿತೆಗಳನ್ನು ಅಕ್ಷರಶಃ ಪಾಲಿಸಲು ಹೊರಟರೆ, ನಮ್ಮ ಕಾಲೇ[illegible] ಮತ್ತು ವಿಶ್ವವಿದ್ಯಾಲಯಗಳಲ್ಲಿನ ಮಾನವಿಕ ವಿಭಾಗಗಳ[illegible] ಮುಚ್ಚಬೇಕಾಗುತ್ತದೆ. ಈ ಸಂಹಿತೆಯನ್ನು ಉಲ್ಲಂಘಿಸದೆ ಯಾವ ಪ್ರಜ್ಞಾ[illegible] ಅಧ್ಯಾಪಕರೂ ಸಾಹಿತ್ಯವನ್ನಾಗಲೀ, ಸಮಾಜ ಶಾಸ್ತ್ರವನ್ನಾಗಲೀ ಕಲಿ[illegible] ಸಾಧ್ಯವಿಲ್ಲ. ನಮ್ಮ ಪ್ರಭುತ್ವದ ಆಡಳಿತ ನೀತಿ, ಧೋರಣೆಗಳು ಇ[illegible] ಹೀನ ಸ್ಥಿತಿಗೆ ಇಳಿದಿವೆ ಎಂದರೆ, ಅರ್ಥಶಾಸ್ತ್ರದ ಪ್ರಾಥಮಿಕ ಪಾಠ[illegible] ಕೂಡ ವ್ಯವಸ್ಥೆಯ ವಿರುದ್ಧದ ಚಿಂತನೆಯ ಹಾಗೆ ಭಾಸವಾಗಲು ಸಾಧ[illegible]

ಮೇಲಿನ ಮೂರೂ ಅಂಶಗಳು ವಿಶ್ವವಿದ್ಯಾನಿಲಯಗಳ ಸಂ[illegible] ಉದ್ದಿಶ್ಯ, ಸಮಾಜದಲ್ಲಿ ಅವುಗಳಿಗೆ ಇರಬೇಕಾದ ಸ್ಥಾನ, ಅಧ್ಯಾ[illegible] ಬೌದ್ಧಿಕ ಸ್ವಾತಂತ್ರ್ಯ ಇತ್ಯಾದಿ ವಿಚಾರಗಳನ್ನು ಕುರಿತಂತೆ ಮರುಚ[illegible] ನಡೆಸುವ ಅಗತ್ಯವನ್ನು ಎತ್ತಿ ತೋರುತ್ತವೆ. ಪಟ್ಟಾಭಿಯವರ ಮೇ[illegible] ದೂರು ಕೇವಲ ಒಂದು ವ್ಯಕ್ತಿಗತ ಅಭಿಪ್ರಾಯಕ್ಕೆ ಸಂಬಂಧಪಟ್ಟ[illegible] ಎಂಬುದು ಮುಖ್ಯ. ಆದ್ದರಿಂದ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ನಂಬಿ[illegible] ರುವ, ಅಭಿಪ್ರಾಯ ಸ್ವಾತಂತ್ರ್ಯವನ್ನು ಒಪ್ಪುವ, ಕಾಲೇಜು-ವಿಶ್ವವಿದ್ಯಾಲ[illegible] ಅಧ್ಯಾಪಕರ ಮುಕ್ತ ಚಿಂತನೆಯ ಹಕ್ಕನ್ನು ಎತ್ತಿಹಿಡಿಯುವ ನಾವೆ[illegible] ಮಂಗಳೂರು ವಿಶ್ವವಿದ್ಯಾಲಯದ ಈ ಕ್ರಮವನ್ನು ಖಂಡಿಸು[illegible] ಮತ್ತು ಪಟ್ಟಾಭಿರಾಮ ಸೋಮಯಾಜಿಯವರ ಅಭಿಪ್ರಾಯ ಸ್ವಾತಂತ್ರ್ಯ[illegible] ಎತ್ತಿ ಹಿಡಿಯುತ್ತೇವೆ. ಹಾಗೆಯೇ ಸಂಘಪರಿವಾರದ ದುರುದ್ದೇಶಪ[illegible] ದೂರುಗಳನ್ನು ತಾವು ಪುರಸ್ಕರಿಸಬಾರದು ಎಂದು ಮನವಿ ಮಾಡು[illegible]

ಇತಿ ತಮ್ಮ ವಿಶ್ವಾಸಿ[illegible]
(ನಿಮ್ಮ ಹೆಸರು [illegible]

ಬಿಸಿಲು ಬೆಳದಿಂಗಳಾಗಲಿ

• ಪಿ. ಹರಿನಾಥಬಾಬು

ಆಟ ಆಡೋಣ
ಬಾ ಗೆಳೆಯ ಸುಮ್ಮನೆ
ಕುಳಿತು ಮಾಡುವುದೇನು
ವಿನಾಕಾರಣ ಬಿಮ್ಮನೆ

ಮರಳ ರಾಶಿಯೊಳಗೆ
ನಡೆವ ಪಾದಗಳ ಹುಗಿದು
ಗುಬ್ಬಚ್ಚಿ ಗೂಡು ಮಾಡಿ
ಪಾರಿವಾಳಗಳ ಹಾರಿಬಿಡುವ

ಹರಿವ ಹಳ್ಳದೊಳಗೆ
ಬರೆದ ಹಾಳೆಗಳ ಕಿತ್ತು
ಹಗುರ ದೋಣಿಯ ಮಾಡಿ
ನಪಿರಾಗಿ ತೇಲಿಬಿಡುವ

ಕಳ್ಳ ಪೊಲೀಸರಾಟದಲಿ
ಎರಡು ಬೆರಳುಗಳ ಬಂದೂಕು
ಬಡ, ರೈತ, ಭಿಕ್ಷುಕರ
ಕೊಲ್ಲದಂತೆ ನೋಡಿಕೊಳ್ಳುವ

ನೀನು ಕಲ್ಲು ತಾ
ನಾನು ಗಾರೆ ತರುವೆ
ಮನಸುಗಳ ಮನಸ ಬೆಸೆದು
ಮಹಲುಗಳ ಮೆಟ್ಟಿ ನಿಲ್ಲುವ

ಗುಡಿಯ ದೇವರುಗಳು
ಗಡಿದಾಟ ಓಡೋಡಿ ಬರಲಿ
ನಮ್ಮ ಆಟವ ನೋಡಿ
ನಕ್ಕು ನಲಿದಾಡಲಿ



ಬೆಂಗಳೂರು ಜನ ಯಾಕ್ ಓಟು ಮಾಡಲಿಲ್ಲ ಗೊತ್ತೆ?

...ಕೊದಲು ಬೇರು ಸತ್ತು ಉದುರುವಂತೆ ಹೊಡೆದ ಫಲವಾಗಿ ಒಂದು ಹದವಳೆ ಬಂದು ...ಯ್ತು. ಆದರೂ ಭೂಮಿಯ ದಾಹ ...ಲ್ಲವಾದ್ದರಿಂದ ಬಿಸಿ ಹಬೆ ನೆಲದಿಂದ ಏಳುತ್ತಿತ್ತು. ...ಮಾವ, "ನ್ಯಲ ತಂಪಾಗಬೇಕಾದ್ರೆ ಮ್ಯಾಲಿಂದ ...ಮಳೆ ಹ್ವಡಿಬೇಕು ಕಂದ್ಯ" ಎಂದ.

...ಲು ಸೀ ಮೆ ...ಪುರಾಣ

▶ಬಿ. ಚಂದ್ರೇಗೌಡ

...ಬೇಕು ಸರಿಯಪ್ಪ ಮಳೆ ನೀನೇಳಿದಂಗೆ ಕೇಳ್ತತೆ?" ...ಉಗ್ರಿ.

...ಬ್ಬ, ಆಗಿನ ಕಾಲ್ದಲ್ಲಿ ಮುಂಗಾರು ಮಳೆ ...ಗೆ ಜನ ನೇಗಲು ನ್ವಗ ತಗಂಡು ದನ ಅಟ್ಟಿಗಂಡು ... ಓಡೋರು. ಈಗ ಅದರ ಸುದ್ದಿನೆ ಇಲವಲ್ಲ ... ಎಂದ ಸೀರ.

...ನಿದ್ರೆ ತಾನೆ ಓಡೋದು. ದನವೇ ಇಲ್ಲ, ಇನ್ನೆಲ್ಲಿ ...ದರೂ."

...ಟ್ರ ಅವಲ್ಲಾ, ಅದ್ಕೆ ನಿರಾಳವಾಗ್ಯವುರೆ" ಎಂದಳು ...

...ನೇಳಿದ್ದು ನಿಜ ಕಣೆ. ಊರಲ್ಲಿ ಮೂರು ಟ್ಯಾಗುಟ್ರ ... ಅವು ನ್ಯಲ ಕ್ಯರಿತವೆ. ಅದ್ಕೆ ಜನ ನಿರಾಳವಾಗ್ಯವುರೆ." ...ಮವಸಾಯದ ಕಸುಬೇ ಯಾವನಿಗೂ ಬೇಕಿಲ್ಲವಲ್ಲ ... ಎಂದ ಕಾಳಮಾವ.

...ದೊಂದು ಬದುಕು ಕಣ ಮಾವ. ಯವಸಾಯದ ...ನಿಂದ ಬಾಳ್ವೆ ಮಾಡತಿದ್ರು. ಇವತ್ತು ಯಾವ ... ತನ್ನ ಮಗ ತನ್ನ ಕಸುಬು ಮಾಡ್ಲಿ ಅಂತ ...ದಿಲ್ಲ, ನ್ಯಲ ಕ್ಯರಿಯೋ ಕಸುಬು ನನಿಗೇ ಕಡೆಯಾಗ್ಲಿ ... ಬ್ಯಾರೆ ಏನ್ನಾರ ಮಾಡು ಅಂತ ಅಪ್ಪಂದಿರು ...ಗೇಳೋ ಕಾಲ ಬಂದದಪ್ಪ."

...ಂಗಾದರ್ಯಂಗೇ ಅಂತ" ಎಂದ ಕಾಳಮಾವ.

...ಮಂಗೇ ಅಂದ್ರೆ, ಬಂದದ್ಯಲ್ಲ ಅನುಭವುಸ್ತರೆ ಬುಡು. ...ಲದಲ್ಲಿ ಅಂಗಿತ್ತು ಆಯ್ತು, ಈಗ್ಲು ಅಂಗೆ ಇರಬೇಕು ...ಯಂಗೇ?"

...ದು ನಿಜವೆ ಬುಡು. ಆದ್ರು ನಮ್ಮಂಥೋರು ...ರ್ಮ ಕಂದ್ಯ."

...ದ್ಯಾವೇಗೌಡ್ರು ನಿನ್ನಂಗೆ ಅಂತರೆ ಕಣಮಾವ. ಆದ್ರು ...ದ್ದಿ ರಾಜಕಾರಣನೂ ಮೈಗೂಡಿಸಿಕೊಂಡು ಯಂಗೆ ...ಟ ಮಾಡ್ತ ಅವುರೆ ನೋಡು. ಅವುರ ನೋಡಿ ...ಕೋರು ಕಲ್ತಗಳದು ಭಾಳ ಆದೆ."

...ವಯಸಿನಲ್ಲೂ ಹೋರಾಟ ಮಾಡ್ತನಲ್ಲ ಹೇಳು."

"ಕನಿಷ್ಠ ಹತ್ತದನ್ನೈದು ಜನ ಮುಖ್ಯಮಂತ್ರಿ ನೋಡಿದ. ಆದ್ರು ಬೇಜಾರಾಗದಂಗೆ ರಾಜಕಾರಣ ಮಾಡ್ತ ಅವುನಲ್ಲ ಹೇಳು. ಅಂಗೆ ನೀನುವೆ ಈ ಕಾಲಕ್ಕೆ ಹೊಂದಿಕಂಡು ಬಾಳಬೇಕು ಕಣಮಾವ" ಎಂದು ಉಗ್ರಿ ಕಾಳಮಾವನಿಗೆ ಸಮಾಧಾನ ಹೇಳುವಾಗ ರೋಸಿದಂತೆ ಕಂಡ ಕಾಳಮಾವ.

"ಓ ಈ ಬಂಗಹೇಳು, ಏನೇ ಆಗ್ಲಿ ಬಂದ ಕ್ಯಲಸ ಮುಗಿಸಿಗಂಡು ಹೋಗಿ ಬುಡಬೇಕು ಕಂದ್ಯ. ಹಿಂಗೆ ಕುಂತಗಬಾರ್ದು" ಎಂದ.

"ನೀನು ಕುಂತಗಬಾರ್ದು ಅಂತೀ, ಶ್ರೀಕಂಠಯ್ಯ ಆಗ್ಲೆ ಮನಿಗಿದ್ದನಂತೆ."

"ಅಂಗರೆ ಮಗ್ಗುಲುಕೊಟ್ಟ ಅನ್ನು."

"ಊ ಕಣಮಾವ. ಇನ್ನಾಯ್ತು ಅವುನ ಕತೆ. ದ್ಯಾವೇಗೌಡ್ರ ವೈರಿಗಳ ಪೈಕಿ ಅವುನೂ ವಬ್ಬ, ಅವುನೂ ಹೋದ್ರೆ ಹಾಸನ ಜಿಲ್ಲೆಲಿ ದ್ಯಾವೇಗೌಡ್ರ ಎದುರಸೋರು ಯಾರೂ ಇಲ್ಲ."

"ಅಂಗೇಳಬ್ಯಾಡ ಕಣೊ ಉಗ್ರಿ. ಗಂಡಸಿ ಶಿವರಾಮ ತಯಾರಾಗ್ಯವುನೆ ಗೊತ್ತ" ಎಂದುಕೊಂಡು ವಾಟಿಸ್ಸೆ ಬಂದ.

"ಅಲ್ಲ ಕಂದ್ಯ, ಬೆಂಗಳೂರಲ್ಲಿ ಯಲಕ್ಸನ್ ಮಾಡಕ್ಯೋಗಿದ್ದಂತಲ್ಲಾ, ಅಲ್ಯಾರಿದ್ದರ್ಲ ನಿನ್ನ ಮಾತ ಕೇಳೋರು?" ಎಂದಳು ಜುಮ್ಮಿ.

"ಇದೇನಕ್ಕ ಹಿಂಗಂತೀ? ಇಡೀ ಶ್ರೀನಗರದಲ್ಲಿ ಯಾರವುರೆ ಅಂತ ತಿಳಕಂಡಿದ್ದೀ. ಶ್ರೀನಗರದಿಂದ ನಮ್ಮ ಏರಿಯಾಕ್ಕೆ ಜಮೀರ್‌ಮದ್ ಬಸ್ ಬುಟ್ಟವುನೆ, ನೋಡಿದ್ದಿಯಾ" ಎಂದ ವಾಟಿಸ್ಸೆ.

"ಅದೂ ಲಜ್ಜುರಿ ಬಸ್ ಬತ್ತದೇ ಕಣೇ" ಎಂದ ಉಗ್ರಿ.

"ಶ್ರೀನಗರದಲ್ಲಿರೊ ನಮ್ಮ ಕಡೆವ್ಯಲ್ಲ ಊರಿಗೆ ಬಂದು ಕಾಯಿ, ಕಸಿ, ರಾಗಿ ಕಾಳು ಹಾಯ್ಕೊಂಡೋಯ್ತವೆ. ಅಂತೂ ಜಮೀರಮದ್ ಇದೊಂದು ವಳ್ಳೆ ಕ್ಯಲಸ ಮಾಡಿದ" ಎಂದ ಸೀರ.

"ಶ್ರೀನಗರಕ್ಯೋದ್ರೆ ನಾಗಮಂಗಲಕ್ಯೋದಂಗಾಯ್ತದೆ ಕಣಕ್ಕ, ಯಾಕಂದ್ರೆ ಆ ಶಿವುರಾಮೇಗೌಡ ಬ್ಯಾನರ್ ಹಾಕಿರತನೆ. ಅವುನ ಮಗನೂ ಬ್ಯಾನರ್ ಹಾಕಿರತನೆ. ಅದನ್ಯಲ್ಲ ನೋಡಿದ್ರೆ ದಿಸೀಸ್ ರಿಯಲಿ ನಾಗಮಂಗಲ ಅನ್ನಂಗಾಯ್ತದೆ."

"ಓಹೊಹೊ, ಅದ್ಕೆ ಹೋಗಿದ್ದೇನೋ ನೀನು."


"ಊ ಕಣಕ್ಕ, ಅಲ್ಲಿ ಕಾರ್ಪೋರೇಟರ್ ಯಲಕ್ಸನ್ ನೋಡಿದ್ರೆ ಯಮ್ಮೆಲ್ಲೆ ಯಲಕ್ಸನ್ ಏನು ಮಾಡಕ್ಕೆ, ನಿಜವಾಗ್ಲು ಆ ಯಲಕ್ಸನ್ ನೋಡಿ ಬೆಂಗಳೂರಿಗೆ ಹೋಗಿ ಶೆಟ್ಟಾಗಿ ಬುಡನ ಅನ್ನಸ್ತು" ಎಂದ ವಾಟಿಸ್ಸೆ.

"ಯಲಕ್ಸನ್ ಮುಗದ ಮ್ಯಾಲೆ ನಿಮ್ಮಂಥೋರಿಗೆ ಅಲ್ಲಿ ಕ್ಯಲಸ ಇರದಿಲ್ಲ ಕಣೊ."

"ಆ ಮಾತ ವಾಪಸ್ ತಗೊ ಉಗ್ರಿ. ಇದೇ ಕ್ಯಂಪೇಗೌಡನ ಮಗ ಬೆಂಗಳೂರಲ್ಲವುನೆ. ಮರೀಗೌಡನ ಮಗ, ಬಮ್ಮಶೆಟ್ಟಿ ಮಗ ಇವುರಿಗ್ಯಲ್ಲ ಯಾವುದೇ ಅಪಾಯಿಂಟಲ್ಲಿಲ್ಲ. ಆದ್ರೂ ಯಂಗವುರೆ ಗೊತ್ತಾ, ಅದಕ್ಕಿಂತ್ಲೂ ನಮ್ಮರೈತ ಸಂಘದ ನಂಜುಂಡ ಜೆ.ಪಿ. ನಗರದಲ್ಲಿ ಮನೆ ಕಟ್ಯವುನೆ. ಐವ್ವತ್ತು ಎಂಬತ್ತರ ಸೈಟು. ನೋಡಿದ್ರೆ ಯಾವ ಕ್ಯಲಸದಲ್ಲೂ ಇಲ್ಲ, ಇವುರ್ಯಲ್ಲ ಯಂಗೆ ಕಾಲ ಮಾಡ್ತರೆ ಅಂತ ನೋಡಿಕಂಡು ಬಂದೆ."

"ಯಂಗೆ ಮಾಡ್ತರ್ಲ್ಲ?"

"ನೋಡಕ್ಕ, ಆ ಬಿಜಿನೆಸ್ ಹೇಳಿದ್ರೆ ನಿನಿಗೆ ಅರ್ಥವಾಗದಿಲ್ಲ. ಇದೇ ಕಾರ್ಪೊರೇಟ್ ಚುನಾವಣೆಲಿ, ಕೊಪ್ಪಲ ಮಂಜ, ರಮೇಸ ಮ್ಯಳ್ಳಿ ಇವುರ್ಯಲ್ಲ ಹ್ಯಂಗೆ ದುಡುದ್ರು ಅಂತೀ. ಕ್ಯಾಂಡೇಟತ್ರ ಹೋಗದು 'ನನಿಗೆ ರಾಜ್ಯಮಟ್ಟದ ಪತ್ರಿಕೆಯವರು ಗೊತ್ತು, ನಿನ್ನ ಫೋಟಾ ಹಾಕಿ ಬರುಸ್ತಿನಿ' ಅಂತ ಒಂದು ಲಕ್ಷ ಈಸಗಂಡ್ರು. ಫೋಟಾನೂ ಇಲ್ಲ, ರೈಟಿಂಗೂ ಇಲ್ಲ. ಇದು



ಪರೆಗ್‌ಜಾಂಪಲ್. ಇನ್ನ ಡ್ರಿಂಕ್ಸು, ಕ್ಯಾಸು, ಕ್ವಾತು ಅಂತ ಈಸ್ಕತ್ತರೆ. ನಾನು ಅಂದಾಜು ಮಾಡಿದ ಪ್ರಕಾರ ಈ ವರ್ಸವ್ಯಲ್ಲ ಜೀವನ ಮಾಡೋವಷ್ಟು ಕಿತಗಂಡ್ರು ಕಣಕ್ಕ."

"ಅದೂ ಒಂದು ಬಾಳೇನ್ಲ, ಕಲ್ಯಾಣ ಮಂದುರದತ್ರ ನಾಯಿರತವೆ ನೋಡು. ಎಂಜಲೆಲೆ ನೆಕ್ಕಂಡು, ಅಂತ ಜೀವನ ಅದು" ಎಂದ ಕಾಳಮಾವ.

"ದ್ವಡಪ್ಪ, ನಿನ್ನ ಮಾತ ಒಪ್ಪಿಗತ್ತಿನಿ. ಆದ್ರು ಸಿಟಿಲಿ ಕಲ್ಯಾಣ ಮಂಟಪದತ್ರ ಯಸಿಯೋ ಎಲೆಲಿ ಬಾದು, ಲಾಡು, ಜಿಲೇಬಿ ಯಲ್ಲ ಅಂಗೇ ಇರತದೆ. ಜನ ಶೋಕಿಗೆ ಊಟ ಇಕ್ಕಿಸಿಗಂಡು ಸುಮ್ಮನೆ ರುಚಿ ನೋಡಿ ಅಂಗೇ ಬುಡ್ತರೆ. ಅದೇ ತರ ಈ ಯಲಕ್ಸನ್ನು, ಅವುರ್ಗೆ ಹಣ ಖರ್ಚು ಮಾಡಕ್ಕೆ ಇದೊಂದು ಅವುಕಾಸ ಅಷ್ಟೆಯಾ. ಜನಗಳ ಕೈಗೆ ಐನೂರು ಜೊತೆಗೆ ಗಿಪುಟು ಕೊಟ್ರು ಗೊತ್ತಾ?" ಎಂದ ವಾಟಿಸ್ಸೆ.

"ಓ ಬೆಂಗಳೂರು ಜನ ಯಾಕೆ ಬಂದು ಓಟು ಮಾಡಲ್ಲ ಅನ್ನದು ಈಗ ಗೊತ್ತಾಯ್ತು ಬುಡು" ಎಂದ ಉಗ್ರಿ.

"ಯಾಕ್ ಓಟು ಮಾಡ್ತಿಲ್ಲ ಹೇಳ್ರ" ಎಂದಳು ಜುಮ್ಮಿ.

"ಓಟು ಮಾಡಕ್ಯೋದ್ರೆ, ಕ್ಯಾಂಡೇಟತ್ರ ಏನೊ ಈಸಗಂಡವುರೆ ಅಂತ ಜನಗಳು ತಿಳಕತ್ತರೆ ಅಂತ ಯಾರೂ ಓಟು ಮಾಡಕ್ಕೇ ಹೋಗಿಲ್ಲ ಕಣೇ."

"ನೀನೇಳೊ ಲಕ್ಕದಲ್ಲಿ ಓಟು ಮಾಡಿದೋರ್ಯಲ್ಲ ತಿಂದವುರೆ ಅಂತ್ಲೆ?"

"ವಸಿ ಜನ ತಿಂದಿರಬವುದು, ವಸಿ ಜನ ಅಂಗೆ ಹಾಕಿರಬವುದು. ಆದ್ರೆ ಈ ಟಿವಿಸನ ಮಕ್ಕಳು ಹಣಕಾಸು, ಬಟ್ಟೆಬರಿ ಹಂಚದ ತೋರಿದ್ರಿಂದ ಜನ ಓಟು ಮಾಡಕ್ಕೆ ಮನಿಂದ ಈಚೆಗೆ ಬರಲಿಲ್ಲ ಅಂತ ನನಿಗನ್ನಿಸ್ಯದೆ."

"ಮಿಸ್ಟರ್ ಉಗ್ರಿ, ಅದಷ್ಟು ನಿಜ ಅಲ್ಲ ಕಣೊ. ಬಿಜೆಪಿ ಮ್ಯಾಗಲ ಸಿಟ್ಟಿಗೆ ಮಧ್ಯಮ ವರ್ಗದ ಮರ್ಯಾದಸ್ಥರು ಮನೆ ಬುಟ್ಟು ಈಚೆಗೆ ಬಂದಿಲ್ಲ."

"ಅವುರನ್ಯಾಕೆ ಮರಿಯಾದಸ್ಥರು ಅಂತಿಯೋ?"

"ಆ ನನಮಕ್ಕಳು ಮಾಡಬಾರ್ದ ಮಾಡಿದ್ರೂ ನಮ್ಮನ್ನ ಆ ತರ ನೋಡ್ತರೆ ಕಣೊ. ಅದ್ಕೆ ಅವುರ ನಾನು ಮರ್ಯಾದಸ್ಥರು ಅಂತೀನಿ. ಇನ್ನು ವಸಿ ಕಾಂಗ್ರೆಸ್ಸಿನೋರು, ಜೆಡಿಎಸ್‌ನೋರು ಓಟು ಮಾಡ್ಯವುರೆ. ಯಲ್ಲಾರಿಗಿಂತ್ಲೂ ಜಾಸ್ತಿ ಓಟು ಮಾಡಿದೋರ್‍ಯಾರಪ್ಪ ಅಂದ್ರೆ ಜೆಡಿಎಸ್‌ನೋರು."


"ಅದ್ಯಂಗೇಳ್ತೀ?"


"ಯಂಗೆ ಅಂದ್ರೆ, ಅವುರ್ಯಲ್ಲ ನಿಜವಾದ ಕನ್ನಡಿಗರು. ಅದೂ ಅಲ್ದೆ ಕುಮಾರಣ್ಣ, ದೇವೇಗೌಡ್ರ ಪಾಲೋಯರ್‍ಸು. ಮತ್ತೇ ರಾಜಕಾರಣನ ಸೀರಿಯಸ್ಸಾಗಿ ತಗಂಡಿರೋ ಜನ. ಆದ್ರಿಂದ ಅವುರ್ಯಲ್ಲ ಚನ್ನಾಗಿ ಓಟು ಮಾಡಿರದ್ರಿಂದ ಎಡೂರಪ್ಪ ಜಾಪಾಳ ಮಾತ್ರೆ ತಿಂದಂಗಾದ್ತ ಅವುನೆ."

"ಅದಾಳುಬಿದ್ದೋಗ್ಲಿ, ಅವುನ್ಯಾರ್ಲ ಪಾಕಿಸ್ತಾನದೋನು ಬಂದು ಹೈದರಾಬಾದಿನ ಹುಡುಗಿಯ ಮದಿವಾದನಂತೆ. ಅಲ್ಲಿಂದ ಇಲ್ಲಿಗ್ಯಂಗೆ ಬಂದಾ?" ಎಂದ ಸೀರ.

"ಅದ್ಯಲ್ಲ ಟಿವಿಯೋರಿಗೆ ಬಿಟ್ಟ ಮ್ಯಾಟ್ರು ಚಿಗಪ್ಪ. ಅವುರು ವಿಚಾರಿಸಿಗತ್ತರೆ. ನೀನು ಈ ಟೈಮಲ್ಲಿ ನಿನ್ನ ಪರಸನಲ್ ಮ್ಯಾಟ್ರು ಬಗ್ಗೆ ಯೋಚನೆ ಮಾಡು. ಸಾಬರ ಬಗ್ಗೆ ಥಿಂಕ್ ಮಾಡಕ್ಕೆ ಚೆಡ್ಡಿಗಳವುರೆ. ಟಿ.ವಿ.ಗಳವುರೆ. ಅದರಲ್ಲೂ ಆ ಪಾಕಿಸ್ತಾನದ ಸಾಬಿ ಬಂದು ಹೈದರಾಬಾದಿನ ಸಾಬರುಡುಗಿ ಮದಿವಾಯ್ತನೆ ಅಂದ್ರೆ ನಾವ್ಯಲ್ಲ ಬಿರಿಯಾನಿ ಬಗ್ಗೆ ಯೋಚನೆ ಮಾಡಬೇಕೆ ವರತು, ತಡಿಯಕ್ಯೋಗಬಾರ್ದು ಚಿಗಪ್ಪಾ" ●

ಧೂಳು ಕೂತ ಚಿಂತನೆ





ಕೆಲವೇ ದಿನಗಳ ಹಿಂದೆ ಸಾರ್ತರ್ ಬಗ್ಗೆ ಭಾಷಣ ಮಾಡಿದ ಗೆಳೆಯನೊಬ್ಬ ತಾನು ಏನೇನು ಮಾತಾಡಿದೆ, ಎಲ್ಲೆಲ್ಲಿಂದ ವಿಷಯ ಸಂಗ್ರಹಿಸಿದೆ ಎಂದು ಒಂದೇ ಸಮನೆ ಮಾತಾಡಿ ಸಾರ್ತರ್‌ನನ್ನು ಮೆಚ್ಚುತ್ತಿದ್ದ. ನನಗೆ ಈ ಸಾರ್ತರ್ ಬಗ್ಗೆ ಮುಂಚಿನಿಂದಲೂ ಉತ್ಸಾಹ ಕಡಿಮೆ; ಯಾರಾದರೂ ಇವನನ್ನು ಹೊಗಳಿದರೆ ಕೂಡಲೆ ಆಕ್ಷೇಪಿಸುವಷ್ಟು ದ್ವೇಷವೂ ಇಲ್ಲ. ಆದ್ದರಿಂದ ಕೇಳುತ್ತಾ ಸುಮ್ಮನಿದ್ದೆ. ನಾನು ಮಾತನ್ನೇ ಆಡದಿರುವುದನ್ನು ಕಂಡು ಗೆಳೆಯ ಆ ಬಗ್ಗೆ ಕೇಳಿದ. ಅದಕ್ಕೆ ನಾನಂದೆ: "ಸಾರ್ತರ್ ತುಂಬ ಸೂಕ್ಷ್ಮವಾಗಿ ಯೋಚಿಸುವವನು, ಅಸ್ತಿತ್ವವಾದದ ಬಗ್ಗೆ ಮಾತಾಡಿದವನು, ಒಂದೆರಡು ಒಳ್ಳೆಯ ನಾಟಕ, ಕಾದಂಬರಿ ಬರೆದವನು ಎಂಬುದು ನಿಜ; ಆದರೆ ಈತ ನಿನ್ನ ಎಲ್ಲ ವೇಳೆ, ಸಾಮರ್ಥ್ಯವನ್ನು ತೊಡಗಿಸಿಕೊಳ್ಳಬಲ್ಲಂಥ ಸಾಹಿತಿಯಲ್ಲ ಎಂಬುದು ನನ್ನ ನಂಬಿಕೆ. ಈತನ ಎಲ್ಲ ಅಸ್ತಿತ್ವವಾದವನ್ನು ಮೀರಿಸುವಂತೆ 'ಹ್ಯಾಮ್ಲೆಟ್' ನಾಟಕದಲ್ಲಿ ಈ ಅಸ್ತಿತ್ವವಾದವೇ ಇದೆ; ಇವನ 'ನಾಸಿಯಾ' ಕಾದಂಬರಿ ಮೀರಿಸಬಲ್ಲಂಥ ಅನುಭವ ಆ ನಾಟಕದಲ್ಲೇ ಇದೆ. ನಾನು ಮೂಲಭೂತ ಪ್ರಶ್ನೆಯೊಂದನ್ನು ಎತ್ತುತ್ತಿದ್ದೇನೆ; ಈತ ಕೇವಲ ಒಳ್ಳೇ ಲೇಖಕ, ಕೆಟ್ಟ ಲೇಖಕ ಎಂಬುದನ್ನು ಮೀರಿದ್ದು ಈ ಪ್ರಶ್ನೆ. ಇಡೀ ಜಗತ್ತು ಕಮ್ಯುನಿಸ್ಟ್ ಮತ್ತು ಬಂಡವಾಳಶಾಹಿ ಎಂಬ ಎರಡು ಕ್ಯಾಂಪುಗಳಾಗಿ ಒಡೆದಿದ್ದಾಗ ನಾನು ಮೆಚ್ಚುವ ಲೇಖಕರು ಯಾರೂ ಇವೆರಡರಲ್ಲಿ ಒಂದು ಕ್ಯಾಂಪಿಗೆ ನಿಷ್ಠರಾಗಿರಲಿಲ್ಲ, ಕ್ಯಾಂಪುಗಳನ್ನು ಮೀರಿದ್ದು ಸಾಹಿತಿಯ ಅಂತರಂಗ, ತೊಳಲಾಟಗಳು; ಸಾರ್ತರ್ ಕೊನೆಯವರೆಗೂ ಕಮ್ಯುನಿಸ್ಟನಾಗಿರದಿದ್ದರೂ ಎಡಪಂಥೀಯ ನಿಲುವಿನಿಂದ ನೋಡಲು ಬಯಸುತ್ತಿದ್ದ; ...ವಾಳಶಾಹಿಗಳ ಚಿಲಿ, ಪನಾಮಾಗಳಲ್ಲಿ ಆಗುತ್ತಿರುವುದರ ಬಗ್ಗೆ ಬಂಡೇಳುತ್ತಿದ್ದ ಸಾರ್ತರ್‌ಗೆ ಕಮ್ಯುನಿಸ್ಟ್ ದೇಶಗಳಲ್ಲಿದ್ದ ಕೊಲೆ, ರಕ್ತಪಾತ, ದಬ್ಬಾಳಿಕೆ ಕಾಣಿಸುತ್ತಿರಲಿಲ್ಲ. ಅವೆಲ್ಲವನ್ನೂ ನೋಡಿದ್ದರೆ ...ರ್ ಮಹಾನ್ ಲೇಖಕನಾಗುತ್ತಿದ್ದ ಎಂದು ನಾನು ಹೇಳುತ್ತಿಲ್ಲ; ಆತನ ಬಗ್ಗೆ ನನಗೆ ಅತೃಪ್ತಿ ಇರಲು ಈ ನಿಲುವು ಕೂಡ ಮುಖ್ಯ. ಸಾಹಿತಿಯೊಬ್ಬ ಸರಳಗೊಳಿಸಿದ ನಿಲುವು ತೆಗೆದುಕೊಂಡೊಡನೆ ... ಚೇತನದ ಬಗ್ಗೆಯೇ ಅನುಮಾನಗಳು ಶುರುವಾಗುತ್ತದೆ. ಬಹಳ ಖ್ಯಾತಿ ಗಳಿಸಿದ್ದ ಈ ಸಾರ್ತರ್ ತನ್ನ ಬಗ್ಗೆ ವಿನೋದ ದೃಷ್ಟಿಯನ್ನೇ ಕಳೆದುಕೊಂಡಿದ್ದ. ಹಾಗೆಯೇ ಇವತ್ತು ಇವನ ಯಾವ ...ನ್ನು ತೆಗೆದುಕೊಂಡು ವಿಶ್ಲೇಷಿಸಿದರೂ ಕೊನೆಗೆ ಅವೆಲ್ಲ ಮಾತುಗಳ ಗುಂಪೆಂದು ಮಾತ್ರ ಕಾಣುತ್ತವೆ. ಆದರೆ ಸಾಹಿತ್ಯವನ್ನು ಸಾವು, ಬದುಕಿನ ಪ್ರಶ್ನೆಯೆಂದು ಪರಿಗಣಿಸಿ ಬರೆದವರಲ್ಲಿ ...ಗುವುದಿಲ್ಲ" ಅಂದೆ.


...ದೆಲ್ಲ ದೊಡ್ಡ ಚರ್ಚೆಗೇ ಆಸ್ಪದ ಕೊಡುವುದರಿಂದ ಇಷ್ಟನ್ನು ಮಾತ್ರ ಹೇಳಬಲ್ಲೆ- ಕಮ್ಯುನಿಸಂ ಸ್ವರ್ಗ ಕಾಣಿಸುತ್ತದೆ ಎಂದು ಬದುಕಿನುದ್ದಕ್ಕೂ ವಾದಿಸಿ, ಲಾಭ ಗಳಿಸಿ ಪ್ರಖ್ಯಾತರಾದ ಬುದ್ಧಿಜೀವಿಗಳು ಇವತ್ತು ಕನಸಿನಿಂದ ಎದ್ದ ಪೆದ್ದು...ಂತೆ ಆಗಿದ್ದಾರೆ; ಬಂಡವಾಳಶಾಹಿ ಕೂಡ ಬುದ್ಧಿಜೀವಿಗಳಿಗೆ ಇದನ್ನೇ ಮಾಡಬಹುದು. ಆದರೆ ಅದಕ್ಕಿಂತ ಮುಖ್ಯವಾದದ್ದು ಸೂಕ್ಷ್ಮಜ್ಞನಾದವನು ಹೇಗೆ ಎಲ್ಲವನ್ನೂ ಗ್ರಹಿಸುತ್ತಾನೆ, ತನ್ನ ಗ್ರಹಣಶಕ್ತಿಯನ್ನು ಹೇಗೆ ಕಾಪಾಡಿಕೊಳ್ಳುತ್ತಾನೆ... ಆಕ್ಟೇವಿಯ ಪಾಜ್ ಎಂಬ ಮೆಕ್ಸಿಕೊ ಕವಿ ಸಾರ್ತರ್ ಕುರಿತು ಬರೆದ; ನನ್ನ ಮನಸ್ಸಿನಲ್ಲಿದ್ದುದನ್ನೇ ಆತ ಹೇಳಿದ್ದು ನೋಡಿ ನಾನು ಚಕಿತನಾದೆ. ...ದು. ಕಮ್ಯುನಿಸಂ ಮೊನ್ನೆ ಮಣ್ಣುಮುಕ್ಕತೊಡಗಿದಾಗ ... ನೋಡದಪ್ರಶ್ನೆಯನ್ನು ಕೂಡ ಕಳೆದುಕೊಂಡವನು ನಶಿಸುತ್ತಾ ಹೋಗುತ್ತಾನೆ; ಆತ ಕೊಡುವುದರಲ್ಲಿ ಜೀವ ಇಂಗಿಹೋಗಿರುತ್ತದೆ. ರಷ್ಯಾ ಮತ್ತು ಅಮೆರಿಕ ನಡುವೆ ಶೀತಲ ಯುದ್ಧ ಶುರುವಾಗುತ್ತಿದ್ದಾಗ, ತನ್ನ ಸ್ನೇಹಿತರು ಯಾರು, ...ಳು ಯಾರು ಎಂದು ರಷ್ಯಾ ಮತ್ತು ಅಮೆರಿಕಾ ನೋಡಿಕೊಳ್ಳುತ್ತಿದ್ದಾಗ ಅಮೆರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟ್‌ನನ್ನು "ನಿಮ್ಮ ಸ್ನೇಹಿತರೆಲ್ಲ ಒಳ್ಳೆಯವರೋ? ನಿಕರಾಗುವಾದ ರಾಕ್ಷಸ ಸೊಮೋಜಾ ಬಗ್ಗೆ ಏನು ಹೇಳುತ್ತೀರಿ?" ... ಕೇಳಿದರು. ಆಗ ರೂಸ್‌ವೆಲ್ಟ್ ಹೇಳಿದ, "ಸೊಮೋಜಾ ಕೆಟ್ಟ ಸೂಳೆಮಗ (SOB), ಆದರೆ ಈತ ನಮ್ಮ ಸ್ನೇಹಿತನಾದ ಸೂಳೆಮಗ" ಎಂದು ನಕ್ಕ. ಇಷ್ಟೂ ಜೀವವಿಲ್ಲದ ಜನರ ಬಗ್ಗೆ ಏನು ಹೇಳುವುದು?

–ಆಗಸ್ಟ್ 4, 1993

ದಿವಸಕ್ಕೆ ಇಪ್ಪತ್ತೈದು ಅಂದ್ರೆ ವಸಿ ಸುಳ್ಳೈ...

ಹಾಗೆ ಇರಲಾರದು. ಹೀಯಾಳಿಸುವುದು ಅಂದರೆ ಹೀಗಾ. ಅದಕ್ಕೆ ಒಂದು ಮಿತಿ ಇರಬೇಕು. ಶ್ರೀಮಾನ್ ಯಡ್ಯೂರಪ್ಪನವರು ಒಂದು ದಿವಸಕ್ಕೆ ಕನಿಷ್ಠ ಇಪ್ಪತ್ತೈದು ಸುಳ್ಳು ಹೇಳ್ತಾರೆ ಎಂದು ಜನಾರ್ದನ ಪೂಜಾರಿಯವರು ಗೇಲಿ ಮಾಡಿದ್ದಾರೆ. ದಿನಕ್ಕೆ ಇಪ್ಪತ್ತೈದು ಸುಳ್ಳು ಅಂದರೆ ವಸಿ ಆಯಿತಾ. ತಿಂಗಳಿಗೆ, ವರ್ಷಕ್ಕೆ ಎಷ್ಟೊಂದಾಯ್ತದೆ. ಹುಟ್ಟಿದಾರಭ್ಯ ಸುಳ್ಳು ಹೇಳಲು ಪ್ರಾರಂಭಿಸಿದ್ದರು ಅಂದರೆ **25x365x65...** ಅಬ್ಬಬ್ಬಾ ಎಷ್ಟೊಂದಾಗೋಯ್ತು!

ಅಣಕ



▸▸ ಎಚ್.ಎಲ್. ಕೇಶವಮೂರ್ತಿ

ಮನುಷ್ಯ ಆದವನು ಇಷ್ಟೊಂದು ಸುಳ್ಳು ಹೇಳೋಕೆ ಸಾಧ್ಯನಾ ಅಂತ. ಸಾವಿರ ನಾಲಿಗೆ ಆದಿಶೇಷನೇ ಬರ ಬೇಕಾಯ್ತದೆ. ಇಲ್ಲ ಅವರು ಮುಖ್ಯಮಂತ್ರಿ ಆದ ನಂತರ ಹೇಳಿದ ಸುಳ್ಳು ಅಂದರೂ ಅದೂ ಕಷ್ಟವೇಯ. ಸುಳ್ಳು ಉತ್ಪಾದನಾ ಕಾರ್ಖಾನೇನೆ ಅವರೊಳಗೆ ಅಡಗಿಸಿಟ್ಟು ಕೊಂಡರೂ ಅಸಂಭವದ ಮಾತು.

ವೃಥಾದೋಷಾರೋಪಣೆ ಮಾಡಬಾರದು. ಹಂಗೆ ಲೆಕ್ಕ ಹಾಕಾನ. ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿ ಎಂದು ರಾತ್ರಿ ವೇಳೆ ಸತತ ವಿದ್ಯುತ್ ಸರಬರಾಜು ಮಾಡ್ತೀವಿ ಅಂದರು ನಿಜ. ಯಾವ ವರ್ಷ ಅಂತೇನೂ ಅವರು ಹೇಳಿರಲಿಲ್ಲ. ಆದರೂ ಇದೂ ಸುಳ್ಳು ಆಶ್ವಾಸನೆ ಲೆಕ್ಕಕ್ಕೇ ಬರಲ್ವಂತೆ. ಒಂದು ಸುಳ್ಳು ಆಯಿತು. ಉತ್ತರ ಕರ್ನಾಟಕದ ನೆರೆ ಸಂತ್ರಸ್ತರಿಗೆ ಮಳೆಗಾಲ ಪ್ರಾರಂಭ ಆಗುವುದರೊಳಗೆ ವಸತಿ ಸೌಲಭ್ಯ ಕಲ್ಪಿಸ್ತೀವಿ ಅಂದವ್ರೆ. ಈ ಸಲ ಮಳೆಗಾಲ ಆಗುವುದಿಲ್ಲವೆಂದು ಕನಸು ಬದ್ದಿರಬೇಕು. ಹಂಗೆ ಹೇಳವ್ರೆ. ಒಂದು ವೇಳೆ ಕನಸು ಸುಳ್ಳಾಯಿತು. ಮಳೆ ಬಂದೇಬಿಡ್ತು ಅನ್ನಿ. ಹೆಂಗೋ ಸುಧಾರಿಸಿಕೋಬೇಕು. ಹೋಗಲಿ ಇದು ಎರಡನೆ ಸುಳ್ಳು ಅಂದ್ಕಳಾನ. ಗೋಮಾಂಸ ನಿಷೇಧ ಮಾಡಬೇಕು ಅನ್ನೋದು ಡಾ. ಅಂಬೇಡ್ಕರ್, ವಿವೇಕಾನಂದರ ಆಶಯ ಆಗಿತ್ತು ಅಂದವ್ರೆ. ಏನೋ ಜನಕ್ಕೆ ಒಳ್ಳೇದಾಗಲಿ ಅಂತ ಹಂಗಂದವ್ರೆ. ಅವರ ಹೆಸರು ಹೇಳದೆ ಇನ್ನೇನು ಗುರು ಗೋಲ್ವಾಲ್ಕರ್ ಹಂಗಂದವ್ರೆ, ಸಾವರ್ಕರ್ ಹಿಂಗಂದವ್ರೆ ಅಂತ ಜನಕ್ಕೆ ಹೇಳಾಕಾಗುತ್ತಾ.... 'ವಿಳಯ್ಯಮ್ಯಾಕೆ' ಅಂತಾರೆ ಜನ ಅನ್ನೋರು. ಚಲಾವಣೇಲಿ ಇರೋರ ಹೆಸರು ಹೇಳ್ತಿದಾರೆ. ಸಂಘ ಪರಿವಾರದವರು ಬರೆದಿರೋ ಪುಸ್ತಕ ಗಳಲ್ಲಿ ಅವರು ಹಂಗೆ ಅಂದಿದ್ದಾರೋ ಏನೋ! ಇರಲಿ ಇದೂ ಒಂದು ಸುಳ್ಳೇ ಅನ್ನಳಾನ. ಅಲ್ಲಿಗೆ ಎಷ್ಟಾಯ್ತು... ಮೂರಾಯ್ತು.

ನೈಸ್ ಕಂಪನಿ ವಿಷಯಕ್ಕೆ ಬರೋಣವಂತೆ. ಬಹಿರಂಗ ಚರ್ಚೆಗೆ ಸಿದ್ಧ ಅಂದರು ಯಡ್ಯೂರಪ್ಪನವರು. ಬನ್ನಿ ಅಂತ ಕರೆದಾಗ ವಿಧಾನಮಂಡಳದಲ್ಲಿ ಚರ್ಚೆ ಆಗಲಿ ಅಂದರು. ಇದೂ ನ್ಯಾಯವೇಯ ಸಾವಿರಾರು ಕೋಟಿ ಅವ್ಯವಹಾರದ ಕತೆ ಅಲ್ಲವಾ. ಅಧಿವೇಶನ ಬಂತು ಹೋಯ್ತು. ಚರ್ಚಿಸೋದಕ್ಕೆ ಸಮಯವೇ ಸಿಗಲಿಲ್ಲ. ವಿಧಾನಸಭೆ ಅಧಿವೇಶ ನಾನೇ ಮುಂದುವರೆಸಬಹುದಾಗಿತ್ತು ಅನ್ನ ಬಹುದು. ಸರ್ಕಾರಕ್ಕೇನು ಅದೊಂದೇ ಕೆಲಸವಾ. ಈಗ ಹಿಂದಿನ ಮುಖ್ಯಮಂತ್ರಿ ಗಳನ್ನೆಲ್ಲ ಕರೆದು ಸಮಾಲೋಚಿಸ್ತೀನಿ ಅಂತಿದಾರೆ. ಇವರು ಕರೀಲಿ ಅಂತ ಅವರೇನು ಕಾಯ್ತಾ ಕುಂತಿದ್ದಾರಾ. ಇವರು ಕರೀತಾರೆ. ಅವರು ಬರೋದಿಲ್ಲ. ಇದನ್ನೂ ಒಂದು ಸುಳ್ಳೇ ಅನ್ನಳಾನ. ಅಲ್ಲಿಗೆಷ್ಟಾಯ್ತು... ನಾಲ್ಕು ಆಯಿತು.

ಕರ್ನಾಟಕದಲ್ಲಿರೋ ಗಣಿ ಮಾಲೀಕರೆಲ್ಲ ಸಭ್ಯರು. ನಮ್ಮಲ್ಲಿ ಗಣಿ ಲೂಟಿ ಅನ್ನೋದೆ ನಡೆದಿಲ್ಲ ಅಂತಾರಲ್ಲ... ನಂಬದೋರು ಅದ ಐದನೆಯ ಸುಳ್ಳು ಅನ್ನಲಿ. ಇನ್ನು ಫಲವತ್ತಾದ ಭೂಮಿಯನ್ನು ಕೈಗಾರಿಕೆಗಳಿಗೆ ಬಳಸುವು ದಿಲ್ಲ, ಅಂತಾ ಬಾರಿಬಾರಿ ಸಾರ್ತಾ ಅವ್ರೆ ಯಡ್ಯೂರಪ್ಪನವರು. ಸರ್ಕಾರಕ್ಕೆ ಬಂಜರು ಭೂಮಿ ಹಾಗೆ ಕಾಣೊ ಭೂಮಿ ರೈತರ ಕಣ್ಣಿಗೆ ಫಲವತ್ತಾದ ಭೂಮಿ ತರಹ ಕಾಣಿಸುತ್ತೆ ರೈತರ ಪರ ಇರೋರು ಬೇಕಾದರೆ ಇದ ಆರನೆ ಸುಳ್ಳು ಅನ್ನಳ್ಳಿ. ಹಿಂಗೇ ಲೆಕ್ಕ ಹಾಕ್ತ ಹೋದ್ರೆ ಬಂದು ನೂರು, ನೂರೈವತ್ತೊ ಸಿಗಬಹುದು. ಅಂತಹದ್ದರಲ್ಲಿ ದಿನಕ್ಕೇ ಇಪ್ಪತ್ತೈದು ಸುಳ್ಳು ಹೇಳ್ತಾರೆ ಅನ್ನೋದು ತರವಲ್ಲ ಬಿಡಿ ಪೂಜಾರರೆ.

ಸನ್ಮಾನ್ಯ ಜನಾರ್ದನ ಪೂಜಾರಿಯವರೂ ರಾಜಕಾರಣಿ. ಹೊಸಹೊಸ ಸುಳ್ಳುಗಳನ್ನು ಸೃಷ್ಟಿಸೋಲ್ಲ, ಪದೇಪದೇ ಹೇಳಿದ ಸುಳ್ಳುಗಳನ್ನೇ ಹೇಳ್ತಾರೆ ಎಂದು ಹೇಳಿ ಅನ್ನೋದು. ಅಥ್ವಾ ಹೀಗೂ ಇರಬಹುದಾ... ಸತ್ಯವನ್ನು ಎಂತಹ ದಡ್ಡ ಬೇಕಾದರೂ ಹೇಳಬಹುದು. ಸುಳ್ಳು ಹೇಳೋಕೆ ಚಾಣಾಕ್ಷತನಬೇಕು. ಪೂಜಾರಿಯವರು ಯಡ್ಯೂರಪ್ಪನವರನ್ನು 'ಸುಳ್ಳ' ಎಂದು ಕರೆದು ಪರೋಕ್ಷವಾಗಿ ಚಾಣಾಕ್ಷರು ಎಂದು ಒಪ್ಪಿಕೊಂಡ ಹಾಗಾಯಿತು ಎಂದು ಸಂಭ್ರಮಿಸುತ್ತಿರಬಹುದೋ ಏನೊ!

ಅಸಮಾನತೆ ಹೆಚ್ಚಿಸಿ ಲಾಭ ಪಡೆಯಿರಿ!

ಸರ್ಕಾರದ ಹಲವಾರು ಯೋಜನೆಗಳಿವೆ.

ಫಲಾನುಭವಿ ಆಗಲು ನಿರ್ದಿಷ್ಟ ಅರ್ಹತೆ ಇರಬೇಕು.

ವಿಧವಾವೇತನಕ್ಕೆ ವಿಧವೆ ಆಗಿರಬೇಕು.

'ಭಾಗ್ಯಲಕ್ಷ್ಮಿ' ಯೋಜನಾ ಭಾಗ್ಯ ಪಡೆಯಲು ಹೆಣ್ಣುಮಗು ಆಗಿರಬೇಕು.

ಹಸಿರು ಕಾರ್ಡ್ ಪಡೆಯಲು ಬಡತನದ ರೇಖೆ ಕೆಳಗಿರಬೇಕು.

ಹೀಗೆ....



ನೀವು ಆಗಿಲ್ಲದಿದ್ದರೆ ಆಗಲು ಪ್ರಯತ್ನಿಸಿ!

ಇದೇನು ಹುಚ್ಚಾಟ ಅನ್ನಬೇಡಿ. ಇದು ಸನ್ಮಾ ಈಶ್ವರಪ್ಪನವರ ಸಲಹೆ! ಶ್ರೀಯುತರು ಶಿವಮೊಗ್ಗದ ತಮ್ಮ ತಲೆ ಒಳಗಿರುವುದನ್ನು ಹೊರಗೆ ಹಾಕಿದ್ದಾರೆ!

ಹೆಣ್ಣುಮಕ್ಕಳಿಗಾಗಿ ಕೇಂದ್ರ ಹಾಗೂ ರಾ ಸರ್ಕಾರಗಳು ವಿವಿಧ ಯೋಜನೆಗಳನ್ನು ಜಾರಿಗೆ ತಂದಿ ಅದರ ಪ್ರಯೋಜನವನ್ನು ಜನತೆ ಸಂಪೂರ್ಣವಾ ಬಳಸಿಕೊಳ್ಳಬೇಕು ಎಂಬುದು ಅವರ ಅಭಿಪ್ರಾಯ.

ಇದಕ್ಕೆ ಏನು ಮಾಡಬೇಕು?

ಹೆಣ್ಣುಮಕ್ಕಳನ್ನು ಪಡೆಯಬೇಕು!

ಅದೂ ಒಂದು ಎರಡು ಅಲ್ಲ, ನಾಲ್ಕು! ನಾ ಏಕೆ ಅಂದರೆ ಸನ್ಮಾನ್ಯ ಈಶ್ವರಪ್ಪನವರಿಗೆ ನಾಲ್ಕು ಹೆ ಮಕ್ಕಳಿದ್ದಾರೆ!

ಮಂತ್ರಿಗಳಿಗೆ ಇರುವಷ್ಟೇ ಮಕ್ಕಳನ್ನು ದೇಶ ಪ್ರಜೆಗಳೂ ಪಡೆದಿರಬೇಕು ಎಂದಾಯಿತು!

ಆ ದಯಾಮಯನಾದ ಪರಮಾತ್ಮನು ಸನ್ಮಾನ್ಯ ಅ ನವರಿಗೆ ನಾಲ್ಕಕ್ಕಿಂತ ಹೆಚ್ಚು ಹೆಣ್ಣುಮಕ್ಕಳನ್ನು ಕರುಣಿಸಿದ್ದ ಪ್ರಜೆಗಳೂ ಅಷ್ಟೇ ಹೆಣ್ಣುಮಕ್ಕಳನ್ನು ಪಡೆದಿರಬೇಕಾಗುತ್ತಿ ಒಂದು ವೇಳೆ ಸನ್ಮಾನ್ಯರಿಗೆ ಹೆಣ್ಣು ಮಕ್ಕಳೇ ಇರದಿದ್ದಲ್ಲಿ 'ಹೆಣ್ಣುಮಕ್ಕಳನ್ನು ಹೆರುವುದ ಅಪರಾಧ' ಎಂದ ಘೋಷಿಸುತ್ತಿದ್ದರೋ ಏನೋ!

'ಆರತಿಗೆ ಒಬ್ಬ ಮಗಳು ಕೀರುತಿಗೆ ಒಬ್ಬ ಮಗ' ಆಯ್ತು 'ಒಂದು ಬೇಕು ಒಂದು ಸಾಕು' ಅದೂ ಆಯ್ತು, ಈಗ ಕುಟುಂ ಕಲ್ಯಾಣದ ಘೋಷಣೆ ಹೀಗಿರಬಹುದು: 'ತಾಯ್ತನಕ್ಕಾಗಿ ನಾಲ್ಕು ಹೆಣ್ಣು ಹೆರಿ!'

ಸನ್ಮಾನ್ಯರ ಈ ಸಂದೇಶ 'ಅಂತರರಾಷ್ಟ್ರೀಯ ಮಹಿಳಾ ದಿ ಬಂದಿದೆ!

'ವಿಶ್ವ ಅಂಗವಿಕಲರ ದಿನ' ಆಗಿದ್ದರೆ.... 'ಹುಟ್ಟುವ ಮಕ್ಕಳೇ ಅಂಗವಿಕಲರಾಗಲಿ' ಎಂದಾಗಿರುತ್ತಿತ್ತೇನೋ. ಅವರ ಜಾರಿಕೊಳ್ಳಬಹುದು. ಯಡ್ಯೂರಪ್ಪನವರು ಒಳ್ಳೆಯವರಾಗಿದ್ದಕ್ಕೆ ಸರಿಹೋಯಿತು. 'ದಿನಕ್ಕೆ ಇಪ್ಪತ್ತೈದು ಸುಳ್ಳು ಹೇಳ್ತಾರೆ ಅಂದಿದೀರಲ್ರೀ ಪೂಜಾರ್ರೆ. ಯಾವಯಾವುದು ಹೇಳ್ರಿ' ಅಂತ ತಿರುಗೇಟು ನೀಡಿದ್ರೆ ಪೂಜಾರ್ರೆ ಪುಕ್ಕ ಕಿತ್ತಂಗಾಗ್ತಿತ್ತು!

ನನಗೊಂದು ಸೋಜಿಗ ಏನು ಅಂದರೆ ಸಂಘಪರಿವಾರ ದವರು ಅಂದರೆ ಮಾತಿನಮಲ್ಲರು. ಅವರಲ್ಲಿ ಯಾರಾದರೂ ಪೂಜಾರಿಯವರಿಗೆ ಮೇಲಿನ ಪ್ರಶ್ನೆ ಹಾಕಬೇಕಿತ್ತಲ್ಲ

ಸಂದೇಶ. ಯಾಕೆ ಅಂದರೆ ಅಂಗವಿಕಲರಿಗೆ ಸರ್ಕಾ ಯೋಜನೆ ರೂಪಿಸಿದೆಯಲ್ಲ, ಅದರ ಲಾಭ ಪಡೆಯಬೇಕಲ್ಲಾ!

ಭಾರತೀಯ ಜನತಾಪಕ್ಷದ ರಾಜ್ಯಾಧ್ಯಕ್ಷರಿಗೆ ಒಂದು ಪ್ರಶ್ನೆ. ಅಸಮಾನತೆ ನಿವಾರಣೆಗೆ ಯೋಜನೆಯೊ? ಯೋಜನೆಯ ಲಾಭಕ್ಕಾಗಿ ಅಸಮಾನತೆಯೋ?

ಮುಗಿದ ಯುದ್ಧ?

ಕನ್ನಡ ವಿವಿಯ 80 ಎಕರೆ ಉಳಿಸುವ ಹೋರಾಟ ಅಭೂತಪೂರ್ವ ರೂಪ ತಳೆದು ಸರ್ಕಾರವನ್ನು ಮಣಿಸಿದ ಬಗೆ ಶ್ಲಾಘನೀಯ. ವರ್ತಮಾನದ ಬಳ್ಳಾರಿಯ ಪಾಳೆಗಾರಿಕೆಯ ಹಿನ್ನೆಲೆಯಲ್ಲಿ ನಮ್ಮ ಕನ್ನಡ ವಿವಿಯ ಅಧ್ಯಾಪಕರು ತೋರಿದ ಸ್ಥೈರ್ಯ ಅಭೂತಪೂರ್ವ. ಆದರೆ ಈ ಹೋರಾಟ ಸೀಮಿತ ಗುರಿಯದ್ದಾಯಿತೇನೊ ಎಂಬ ಭಾವನೆ ನನ್ನದು.

ನಾನು ಈ ಹೋರಾಟದ ಪರವಾಗಿ ಪತ್ರ ಬರೆದ ಬಳಿಕ, ಮುಂಗಡಪತ್ರದ ಅನುದಾನದ ವಿಕೃತಿ ಬಗ್ಗೆ ಗಮನ ಸೆಳೆಯುತ್ತಾ, ಇದರ ವಿರುದ್ಧ ಸರ್ಕಾರದ ಕಿವಿ ಹಿಂಡದಿದ್ದರೆ ಮುಂದಿನ ವರ್ಷಗಳಲ್ಲಿ ರಾಜ್ಯ ಪಾಳೆಗಾರರ ಮರ್ಜಿಗೆ ಒಳಗಾಗುವ ಸಾಧ್ಯತೆ ಇದೆ ಅಂದಿದ್ದೆ. ಈ ಬಾರಿಯ ಬಜೆಟ್‌ನಲ್ಲಿ ಈ ಸರ್ಕಾರ - ಕೃಷಿ ಸಂಶೋಧನೆ, ಪಶು ವೈದ್ಯಕೀಯ ಕಾಲೇಜು, ಆಯುರ್ವೇದ ಕಾಲೇಜು, ಹೊಸ ವಿವಿ ಸ್ಥಾಪನೆ, ಇತ್ಯಾದಿಗಳಿಗೆ ನೀಡಿರುವ ಮೊತ್ತ ರೂ.70 ಕೋಟಿ ಮೀರುವುದಿಲ್ಲ, ರಾಜ್ಯದ ರೈತರಿಗೆ ಹೊಸ ದಾರಿ ತೋರಬಲ್ಲ ಸಾವಯವ ಕೃಷಿಗೆ ನೀಡಿದ ಅನುದಾನ ಕೇವಲ 100 ಕೋಟಿ ರೂ. ಮಾತ್ರ.

ಇದೇ ಸರ್ಕಾರ, ವಿಜಯನಗರ ಪುನಶ್ಚೇತನಾ ಟ್ರಸ್ಟ್‌ಗೆ ರೂ. 50 ಕೋಟಿ ನೀಡಿದೆ. ಹಾಗೆ, ಶಿವಮೊಗ್ಗದ ಸಹ್ಯಾದ್ರಿ ಪರಂಪರೆ ಟ್ರಸ್ಟ್ ಎಂಬ ಮತ್ತೊಂದು ಗುಮಾನಿ ಸಂಸ್ಥೆಗೆ ರೂ. 20 ಕೋಟಿ ಅನುದಾನ ನೀಡಿದೆ.

ನೆರೆಪೀಡಿತರಿಗೆ ಪುನರ್ವಸತಿಗೆ ಕಾಸಿಲ್ಲದೇ ಬೀದಿಯಲ್ಲಿ ಬೇಡಿದ ಮುಖ್ಯಮಂತ್ರಿಗಳಿಗೆ, ಈಗ ಈ ಎರಡು ಸಂಶಯಾಸ್ಪದ ಸಂಸ್ಥೆಗಳಿಗೆ ರೂ. 70 ಕೋಟಿ ನೀಡುವ ಶ್ರೀಮಂತಿಕೆ ಬಂತೇ?

ನಾವು ಪ್ರಶ್ನಿಸಬೇಕಾದದ್ದು ಮತ್ತು ಹೋರಾಡಿ ನಿಲ್ಲಿಸಬೇಕಾದದ್ದು ಇಂಥಾ ಕಳ್ಳ ವ್ಯವಹಾರಗಳನ್ನು, ಹಾಗೇ ನಾವು ಸಮುದಾಯಕ್ಕೂ, ಸರ್ಕಾರಕ್ಕೂ ಮನವರಿಕೆ ಮಾಡಿಕೊಡಬೇಕಾದದ್ದು-

1. ಪುನಶ್ಚೇತನಗೊಳಿಸಬೇಕಾದದ್ದು ವರ್ತಮಾನದ ಜನರ ಬಾಳುವೆಯನ್ನು, ಇತಿಹಾಸವನ್ನಲ್ಲ,
2. ಎಲ್ಲಾ ನೆಲವೂ ನಮ್ಮದೇ, ಹಂಪಿಯ ನೆಲವಷ್ಟೇ ಅಲ್ಲ.

ಕನ್ನಡ ವಿವಿಯ ಭೂಕಬಳಿಕೆ ಹುನ್ನಾರದ ವಿಷಯಕ್ಕೆ ಬಂದರೆ, ಸಂಶಯಾಸ್ಪದ ವ್ಯವಹಾರಗಳಿಗೆ ಹಂಪಿ ವಿವಿಯ ನೆಲವಷ್ಟೆ ಅಲ್ಲ ಕನ್ನಡದ ಯಾವ ನೆಲವೂ ದೊರೆಯಬಾರದು ಎಂಬ ನಿಲುಮೆ ಇಲ್ಲದಿದ್ದರೆ, ಹಂಪಿಯ ನೆಲಕ್ಕೆ ನಾವು ಆರೋಪಿಸಿದ ಸಾಂಕೇತಿಕ ಅರ್ಥವೂ ಮುಕ್ಕಾಗುತ್ತದೆ. ಹಂಪಿ ವಿವಿ ನೆಲವೇನು ಪತ್ನಿಯ ಶೀಲವೇ, ಬಾಯಿಬಾಯಿ ಬಡಿದುಕೊಳ್ಳಲು? ನಮ್ಮಲ್ಲಿ ಬೇಡ, ಬೇರೆಲ್ಲಾದರೂ ಆದರೆ ಪರವಾಗಿಲ್ಲ ಎಂಬ ಧೋರಣೆ ಸರಿಯಾದದ್ದಲ್ಲ.

ಮೊನ್ನೆ ಹಂಪಿ ನೆಲದ ವಿಜಯದ ಬಳಿಕ ಹರಿದಾಡಿದ ಪರಸ್ಪರ ಪ್ರಶಂಸಾ ಪತ್ರಗಳನ್ನು ನೋಡಿದರೆ, ಈ ವಿವಾದವನ್ನು ಮುನ್ನೆಲೆಗೆ ತಂದ ಹಂಪಿ ವಿವಿಯ ಅಧ್ಯಾಪಕರು, ವಿವಿ ನೆಲದ ವಿವಾದವನ್ನು ನಿರ್ದಿಷ್ಟ ನೆಲದ ಪ್ರಶ್ನೆಯಾಗಿಸಿದಂತೆ ತೋರುತ್ತದೆಯೇ ವಿನಃ ನೈತಿಕ, ತಾತ್ವಿಕ ಪ್ರಶ್ನೆಯಾಗಿಸಲೇ ಇಲ್ಲ ಅನ್ನಿಸುತ್ತೆ.

ಇಂದು ವಿಶೇಷ ವಿತ್ತ ವಲಯವನ್ನು ಸ್ಥಳೀಯ ಮತ್ತು ಸೈದ್ಧಾಂತಿಕ ಪ್ರಶ್ನೆಯಾಗಿಯೇ ತಾನೇ ಪ್ರಶ್ನಿಸಿ ಹೋರಾಡುತ್ತಿರುವುದು? ಅದೇರೀತಿ, ಈ ಅಡ್ನಾಡಿ ಟ್ರಸ್ಟ್‌ಗಳ ಕಾರ್ಯಸೂಚಿ, ಸಾಂಸ್ಥಿಕ ರಚನೆ, ಕಾಣ್ಕೆ ಎಲ್ಲವೂ ಅಸಂಬದ್ಧ ಎಂದು ನಾವು ಸಮುದಾಯಕ್ಕೆ ತೋರಿಸಿಕೊಡದಿದ್ದರೆ, ಈ ಹೋರಾಟಗಳೆಲ್ಲ ವಿಸ್ತೃತ ವ್ಯಾಪ್ತಿ ಪಡೆಯದೇ ಕೇವಲ ಪಕ್ಕೊತ್ತಾಯದ ಮಟ್ಟಕ್ಕೆ ಇಳಿದು ಬಿಟ್ಟೀತು. ಸದ್ಯ ಗೆದ್ದೆವಲ್ಲ ಎಂಬ ಭಾವ ಹೋರಾಟಗಾರರಿಗೂ, ಸದ್ಯ ಇಷ್ಟಕ್ಕೇ ತಣ್ಣಗಾಯಿತಲ್ಲಾ ಎಂಬ ತೃಪ್ತಿ ಆಡಳಿತಗಾರರಿಗೂ ಬಂದುಬಿಟ್ಟರೆ ಅಲ್ಲಿಗೆ ಎಲ್ಲಾ ತಣ್ಣಗಾಗುತ್ತದೆ.

ಈ ಹೋರಾಟದಲ್ಲೂ ಅಷ್ಟೇ, ಹೋರಾಟದ ಬೀಜದಲ್ಲೇ ಸೀಮಿತ ಗುರಿ ಅಂತರ್ಗತವಾದಂತೆ ಭಾಸವಾಗುತ್ತಿದೆ. ಅದಕ್ಕೇ ಟರ್ಮಿನೇಟರ್ ಬೀಜಗಳ ಹಾಗೆ, ಹಂಪಿ ನೆಲ ಉಳಿದ ತಕ್ಷಣ ಈ ಹೋರಾಟವೂ ತುಂಗೆಯಲ್ಲಿ ಮುಳುಗಿದಂತಿದೆ. ಒಂದರ್ಥದಲ್ಲಿ ಈ ಯುದ್ಧ ಮುಗಿದ ಹಾಗೇ. ಹೀಗೆ ಯುದ್ಧ ಮುಗಿದಷ್ಟು ಬಾರಿಯೂ, ಎಲ್ಲೋ 'ನೀ ಬೇಕಾದ್ದು ಮಾಡಿಕೋ; ನಮ್ಮ ಚರ್ಮ ಮಾತ್ರ ಸುಲಿಯಬೇಡ' ಎಂಬ ನಿಲುವು ಹರಡಿ ಕೂತಿರುತ್ತದೆ. ಸರ್ಕಾರದ ವಿಕೃತ ಆದ್ಯತೆಗಳು ಹೇಗೆ ಜನವಿರೋಧಿ ಎಂಬ ಈ ತಾತ್ವಿಕ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಇದನ್ನು ವ್ಯಾಪಿಯಾಗಿಸದೇ, ಕನ್ನಡ ವಿವಿಯ ನೆಲ ಉಳಿಸಿದ್ದಕ್ಕಷ್ಟೇ ಸುಮ್ಮನಾದರೆ, ಸಮುದಾಯಕ್ಕೇ ಬಗೆದ ದ್ರೋಹವೆಂಬ ಭಾವ ನನಗಂತೂ ಕಾಡತೊಡಗಿದೆ.

ಕನ್ನಡ ವಿವಿಯ ಪ್ರಾಧ್ಯಾಪಕರು ಮತ್ತು ಈ ಹೋರಾಟದಲ್ಲಿ ಭಾಗಿಯಾದ ಕನ್ನಡದ ಚಿಂತಕರು, ಲೇಖಕರು, ಈ ತಾತ್ವಿಕ ಭೂಮಿಕೆಯನ್ನು ಮುನ್ನೆಲೆಗೆ ತಂದು, ಈ ಹೋರಾಟ ತಾರ್ಕಿಕ ಅಂತ್ಯ ಮತ್ತು ವಿಸ್ತಾರ ಪಡೆಯುವಂತೆ ಕ್ರಿಯಾಶೀಲರಾಗಬೇಕೆಂದು ಕೋರುವೆ.

ನನ್ನಂಥವರು ಸದಾ ಜೊತೆಗಿರುತ್ತೇವೆ.

- ಕೆ.ಪಿ.ಸುರೇಶ, ಮೈಸೂರು

ಹೊಗಳಿಕೆ ತೆಗಳಿಕೆ

'ಮಾಜಿ ಡಾನ್' ಒಬ್ಬನು ದೇವಸ್ಥಾನವೊಂದಕ್ಕೆ ಒಂದ ಕೋಟಿ ರೂಪಾಯಿಯ ರಥ ದಾನ ಮಾಡಿದ್ದು ವಿಚಾರವಾದಿಗ ಹೇಳುವುದನ್ನು ಮತ್ತೊಮ್ಮೆ ಸಾಬೀತುಮಾಡುತ್ತದೆ-"ಭಾರತದ ದೇವರನ್ನು ಒಬ್ಬ ಮೂರ್ಖ ಎಂದು ಭೂಗತ ಲೋಕದವರ ಭ್ರಷ್ಟ ರಾಜಕಾರಣಿಗಳು, ಲಂಪಟ ಸ್ವಾಮಿಗಳು, ಢೋಂ ಬಾಬಾ-ಅಮ್ಮ-ಗುರೂಜಿಗಳು, ಸುಲಿಗೆಕೋರ ಅರ್ಚಕರ ಭಾವಿಸುತ್ತಾರೆ"-ಎಂಬುದು.

ಅಚ್ಚ ಕನ್ನಡ ಪ್ರದೇಶ ಕಾಸರಗೋಡು ತಾಲ್ಲೂಕು ಕೇರಳ ಸೇರಿಹೋಗಿದ್ದಕ್ಕೆ, ನನ್ನ ಕಾಸರಗೋಡು-ಕನ್ನಡಿಗ ಮಿತ್ರರು ದಶಕಗಳಿಂದ ಮರುಗುತ್ತಲೇ ಇದ್ದರು. ಆದರೆ ಈ ಒಮ್ಮೆಲೇ ಅವರಿಗೆ ಖುಷಿಯಾಗಿದೆ ಕೇರಳ ಸೇರಿದ್ದ ಕಾರಣ ಕೇರಳದಲ್ಲಿ ಗೋಹತ್ಯೆ ನಿಷೇಧ ಕಾನೂನಿ ಕಾಸರಗೋಡು ಕರ್ನಾಟಕ ಸೇರಿದ್ದರೆ ಬಡವ ತಲತಲಾಂತರದಿಂದ ಅನುಸರಿಸಿಕೊಂಡು ಬಂದಿ ಆಹಾರಪದ್ಧತಿಯನ್ನು ಒಮ್ಮೆಲೆ ಬದಲಾಯಿಸಬೇಕಿತ ಬಡರೈತರಿಗೆ ಸ್ವಂತ ಮಕ್ಕಳ ಹೊಟ್ಟೆಗೆ ಊಟ ಹಾಕ ಗತಿಯಿಲ್ಲದಿದ್ದರೂ ಪರವಾಗಿಲ್ಲ ತಮ್ಮ ಮು ಜಾನುವಾರುಗಳನ್ನು ಮಾರದೇ ಇಟ್ಟುಕೊಂಡ ಅವುಗಳಿಗೆ ದುಬಾರಿ ಮೇವು ಖರೀದಿಸುತ್ತಲೇ ಇರಬೇಕಾಗಿತ


ಮೇಲಾಗಿ ಕೇರಳದಲ್ಲಿ ಜಾತಿವಾರು ಮಠಾಧೀಶರುಗಳಿ ಇರುವ ಕೆಲವೇ ಮಠಾಧೀಶರುಗಳಿಂದ ಅಡಿಗಡಿಗೆ ಕೊಳ ರಾಜಕೀಯ ಹಸ್ತಕ್ಷೇಪವಿಲ್ಲ, ಭ್ರಷ್ಟ ರಾಜಕಾರಣಿ ಹಾಗೂ ಸ್ವಾರ್ಥ ಮಠಾಧೀಶರ ಅಪವಿತ್ರ ಮೈತ್ರಿಯಿಲ್ಲ, ಮಠದ ಕೊಠಡಿಗಳ ಭ್ರಷ್ಟರು ಸೇಫ್-ಡಿಪಾಸಿಟ್-ಲಾಕರ್‌ಗಳಂತೆ ಉಪಯೋಗಿಸಲ ಆಸ್ಪದವಿಲ್ಲ, ಹಾಗಾಗಿ ಕರ್ನಾಟಕಕ್ಕಿಂತ ಕೇರಳದಲ್ಲಿ ಭ್ರಷ್ಟಾಚ ಕಡಿಮೆ. ಆದುದರಿಂದ "ಭ್ರಷ್ಟರನ್ನು ಪ್ರೋತ್ಸಾಹಿಸುವ ಮಠಾಧೀಶರ ಗುಂಡಿಕ್ಕಿ ಕೊಲ್ಲಿ" ಎಂದು ಕರೆಕೊಡುವ ಸಾಹಿತಿಗಳು ಕೇರಳದ ಇಲ್ಲ, ಆದುದರಿಂದ ಕಾಸರಗೋಡಿನ ಕನ್ನಡಿಗರು ಕೇರಳದ ಸುಖವಾಗಿ ಇರುತ್ತಾರಂತೆ! (ಕ್ಯೆಯಾರರ ಕ್ಷಮೆಕೇಳಿ)

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂ

ಸ್ಪೀಕರ್ ಆನ್-ಭರಣ ಡೌನ್!

ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭಗಳಲ್ಲಿ ಕಲಾವಿದರು ...ಾತ್ರ ಮುಖ್ಯ, ತೆರೆಮೇಲೆ ರಂಜಿಸುವ ನಟನಟಿಯರು ...ದಿಕೆ ಮೇಲೆ ಬಂದ ಮಾತ್ರಕ್ಕೆ ರಾಜ್ಯಪ್ರಶಸ್ತಿ ಸಮಾರಂಭ ...ುಗಿದಂತೆ... ಚಿತ್ರರಂಗದಲ್ಲಿ ಬಹಳ ಹಿಂದಿನಿಂದಲೂ ...ುವ ತಪ್ಪು ನಿಲುವಿದು.

ಅದೇ ನಿಲುವು ಈ ...ರ್ಷವೂ ...ುಂದುವರೆದಿದೆ. 18 ...ಂಘಗಳನ್ನು ...ೊಂದಿರುವ ...ರ್ಮಿಕರ ಒಕ್ಕೂಟದ ...ಾವ ...ದಾಧಿಕಾರಿಯನ್ನೂ ...ಹ್ವಾನಿಸದೇ ಕೇವಲ ...ಾಡೆಮಿ, ಛೇಂಬರ್ ...ುತ್ತು ಸರ್ಕಾರದ ...ವಾಗಿ ವಾರ್ತಾ ...ಾಖೆಯ ...ಧಿಕಾರಿಗಳು ...ೀಟಿಂಗ್ ನಡೆಸಿ, ತಮ್ಮ ಮೂಗಿನ ನೇರಕ್ಕೆ ಈ ...ರ್ಷದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಡೆಸಲು ...ುಂದಾಗಿದ್ದಾರೆ. ಅದರಿಂದಾಗಿ ನೂರೆಂಟು ಒಳಜಗಳ ...ು, ಕಿತ್ತಾಟಗಳು, ತರಲೆ-ತಕರಾರುಗಳು ಶುರುವಾಗಿವೆ.



ಹಾಗೆ ನೋಡಿದರೆ ಈ ವರ್ಷದ ರಾಜ್ಯ ಚಲನಚಿತ್ರ ...ಶಸ್ತಿ ಪ್ರದಾನ ಸಮಾರಂಭ ಹೆಚ್ಚು ಮಹತ್ವವನ್ನು ...ಡೆಯಬೇಕಿತ್ತು, ಯಾಕೆಂದರೆ ಸಿನಿಮಾ ಅಕಾಡೆಮಿ ...ರಂಭವಾದ ಮೇಲೆ ನಡೆಯುತ್ತಿರುವ ಮೊದಲನೇ ...ಶಸ್ತಿ ಪ್ರದಾನ ಸಮಾರಂಭವಿದು. ವಿಪರ್ಯಾಸವೆಂದರೆ, ...ೂವ ಅಕಾಡೆಮಿ ಮತ್ತದರ ಅಧ್ಯಕ್ಷ ಹಾಗು ಚಲನಚಿತ್ರ ...ಾಣಿಜ್ಯ ಮಂಡಳಿ ಮುಖ್ಯಸ್ಥರು ನಿಂತು ...ಡೀ ಚಿತ್ರರಂಗವನ್ನು ಒಗ್ಗೂಡಿಸಿ ...ಮಾರಂಭವನ್ನು ನಡೆಸಬೇಕಿತ್ತೋ ಅವರೇ ...ನತ್ತು ಪರಸ್ಪರ ಕೆಸರೆರಚಿಕೊಂಡು, ಕಾಳಗಕ್ಕೆ ...ಂತಿದ್ದಾರೆ.



ಏಪ್ರಿಲ್ ನಾಲ್ಕನೇ ತಾರೀಖು ...ವಮೊಗ್ಗದಲ್ಲಿ ಕರ್ನಾಟಕ ರಾಜ್ಯ ಚಲನಚಿತ್ರ ...ಶಸ್ತಿ ಸಮಾರಂಭವನ್ನು ಮುಖ್ಯಮಂತ್ರಿ ...ುಡ್ಡಿ ಮತ್ತವರ ಚೆಡ್ಡಿ ಪಟಾಲಂ ...ಡಂಬರದಿಂದ ಆಚರಿಸಲು ಸಿದ್ಧತೆ ಆರಂಭಿಸಿದ್ದಾರೆ. ...ದರೆ ಈ ಕಾರ್ಯಕ್ರಮಕ್ಕೆ ಚಿತ್ರರಂಗದ ತಂತ್ರಜ್ಞರನ್ನೇ ...ರಿಯಾಗಿ ಆಹ್ವಾನಿಸಿಲ್ಲ, ಸಮಾರಂಭ ಹತ್ತಿರವಾಗುತ್ತಿದ್ದರೂ ...ಾರಿಗೂ ಸರಿಯಾದ ಕರೆಯೋಲೆ ಬಾರದಿದ್ದನ್ನು ...ಮನಿಸಿದ ನಿರ್ದೇಶಕರ ಸಂಘದ ಎಂ.ಎಸ್. ರಮೇಶ್ ...ುತ್ತು ಕೆ. ನಂಜುಂಡ ಇಬ್ಬರೂ ಸಿನಿಮಾ ಅಕಾಡೆಮಿಯ ...ೂತನ ಅಧ್ಯಕ್ಷ ನಾಗಾಭರಣರ ಬಳಿ ಹೋಗಿ 'ಏಕೆ ...ೀಗೆ?' ಎಂದು ಕೇಳಿದ್ದಾರೆ. ಅದಕ್ಕೆ ಭರಣ ಲಗುಬಗು ನೋಡದೆ "ಜಯಮಾಲಾ ಮೇಡಂ ಅವರೇ ಹೇಳಿದ್ದಾರೆ. ಮೊದಲು ಕಲಾವಿದರನ್ನು ಆಹ್ವಾನಿಸುವುದು ಮುಖ್ಯ" ಅಂತ ಸಬೂಬು ನೀಡಿ ನಿರ್ದೇಶಕರ ಸಂಘದವರನ್ನು ಸಾಗಹಾಕಿದ್ದಾರೆ ಭರಣ.

ಭರಣರ ಮಾತಿನಿಂದ ವ್ಯಾಕುಲಗೊಂಡ ರಮೇಶ್ ಮತ್ತು ನಂಜುಂಡ ತಕ್ಷಣ ತಮ್ಮ ನಿರ್ದೇಶಕರ ಸಂಘದ ಸುಮಾರು ನೂರಕ್ಕೂ ಹೆಚ್ಚು ಮಂದಿಯನ್ನು ಕರೆದುಕೊಂಡುಬಂದು ವಾಣಿಜ್ಯ ಮಂಡಳಿ ಮುಂದೆ ಧರಣಿ ಕೂರಲು ಸಜ್ಜಾಗಿದ್ದರು. ಆದರೆ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಮತ್ತು ಛೇಂಬರ್‌ನ ಥಾಮಸ್ ಅವರು ಒತ್ತಾಯ ಮಾಡಿದ್ದರಿಂದ ಛೇಂಬರ್ ಒಳಗೆ ಸಭೆ ನಡೆಸಿದರು. ಅಲ್ಲಿ "ಭರಣರ ಬಳಿ ಕಲಾವಿದರಿಗೆ ಮೊದಲ ಆದ್ಯತೆ ನೀಡಿ, ಮಿಕ್ಕವರೆಲ್ಲ ಆಮೇಲೆ ಎಂದು ಯಾಕೆ ಹೇಳಿದಿರಿ" ಎಂದು ಎಲ್ಲರೂ ಮೇಡಂ ಜಯಮಾಲಾರನ್ನು ಸಿಟ್ಟಿನಿಂದ ಪ್ರಶ್ನಿಸಿದರು. ಜಯಮಾಲಾ ಮಾತ್ರ "ನಾನು ಯಾವ ಸಂದರ್ಭದಲ್ಲೂ ಭರಣರ ಬಳಿ ಹಾಗೆಲ್ಲಾ ಹೇಳಿಲ್ಲ, ಹೇಳುವ ಅಗತ್ಯವೂ ನನಗಿಲ್ಲ. ಬೇಕಿದ್ದರೇ ಭರಣ ಅವರನ್ನೇ ನನ್ನ ಮುಂದೆ ಕರೆದು ಕೇಳಿ. ನಾನು ಹೇಳಿದ್ದೇನೆ ಎನ್ನುವುದು ಹ್ರೂ ಆದರೆ ನಾನು ಯಾವ ಅಂಜಿಕೆಯೂ ಇಲ್ಲದೆ ನಿಮ್ಮಲ್ಲಿ ಕ್ಷಮೆಯಾಚಿಸುತ್ತೇನೆ" ಎಂದು ಉತ್ತರಿಸಿದರು.

ಕೂಡಲೇ ಭರಣರ ಮೊಬೈಲಿಗೇ ಕರೆ ಮಾಡಿದ ಎಂ.ಎಸ್. ರಮೇಶ್ ಸ್ಪೀಕರ್ ಆನ್ ಮಡಿ "ಏನ್ ಸಾರ್, ನೀವು ನೋಡಿದ್ರೆ ಜಯಮಾಲಾ ಅವರ ಮೇಲೆ ಹೇಳ್ತೀರ. ಅವರು ಹೇಳಿದ್ದು ನಿಜವಾ?" ಎಂದು ಪ್ರಶ್ನಿಸಿದರು. ವಾಣಿಜ್ಯ ಮಂಡಳಿಯ ಪಡಸಾಲೆಯಲ್ಲಿ ಕೂತಿದ್ದ ರಮೇಶ್ ತಮ್ಮ ಮೊಬೈಲಿನ ಸ್ಪೀಕರ್‌ಅನ್ನು ಆನ್ ಮಾಡಿದ್ದಾರೆ, ಅದನ್ನು ನೂರಾರು ಜನ ನಿರ್ದೇಶಕರು, ವಾಣಿಜ್ಯ ಮಂಡಳಿಯ ಪದಾಧಿಕಾರಿಗಳು ಕೇಳಿಸಿಕೊಳ್ಳುತ್ತಿದ್ದಾರೆ ಎಂಬುದರ ಅರಿವೇ ಇಲ್ಲದ ಭರಣ "ಹೌದು, ಮೇಡಂ ಅವರೇ ಹೇಳಿದ್ದು, ಬರೀ ಕಲಾವಿದರನ್ನು ಮಾತ್ರ ಆಹ್ವಾನಿಸೋಣ ಎಂದು ಜಯಮಾಲಾ ಅವರೇ ಹೇಳಿದ್ದಾರೆ" ಎಂದುಬಿಟ್ಟಿದ್ದಾರೆ.

ಭರಣ ಹೀಗೆ ತನ್ನ ವಿರುದ್ಧವೇ ಹೇಳಿದ್ದು ಕೇಳಿ ಮೇಡಂ ಜಯಮಾಲಾರ ಸಿಟ್ಟು ಕಟ್ಟೆಯೊಡೆದುಬಿಟ್ಟಿದೆ. ತಕ್ಷಣವೇ ಆ ಮೊಬೈಲನ್ನು ತಮ್ಮ ಕೈಯಲ್ಲಿ ಹಿಡಿದು "ಭರಣ ಅವರೇ, ನೀವು ಮಾತಾಡೋದನ್ನ ನಾವೆಲ್ಲರೂ ಕೇಳಿಸಿಕೊಳ್ಳುತ್ತಾ ಇದೀವಿ. ಯಾಕೆ ಹೀಗೆ ಇಲ್ಲಸಲ್ಲದ ಅಪವಾದವನ್ನು ಹೊರಿಸುತ್ತಿದ್ದೀರಿ? ನನ್ನ ಮೇಲೆ ನಿಮಗೇಕೆ ಇಂಥ ದ್ವೇಷ. ನಾನು ನಿಮ್ಮ ಮೂರು ಸಿನಿಮಾಗಳಲ್ಲಿ ಕೆಲಸ ಮಾಡಿದ್ದೇನೆ. ನಿಮ್ಮ ಮನನೋಯಿಸುವ ಹಾಗೆ ನಾನ್ಯಾವತ್ತೂ ನಡೆದುಕೊಂಡಿಲ್ಲ. ಇನ್ನೇನು ಏಪ್ರಿಲ್ ಎಂಟಕ್ಕೆ ಛೇಂಬರ್ ಎಲೆಕ್ಷನ್ ಬೇರೆ ಇದೆ. ಕೆಲವೇ ದಿನಗಳಲ್ಲಿ ನಾನು ಈ ಸೀಟು ಬಿಟ್ಟು ಹೋಗಲಿದ್ದೇನೆ. ಇಷ್ಟಾಗಿಯೂ ನನ್ನ ಮೇಲೆ ನಿಮಗೆ ಅಷ್ಟು ಬೇಸರವಿದ್ದರೆ, ಹೀಗೆಲ್ಲಾ ಮಾತಾಡಿ ನನ್ನ ವಿರುದ್ಧ ಅಪಪ್ರಚಾರ ಮಾಡುವುದಕ್ಕಿಂತ ಒಂದಿಷ್ಟು ಪಾಯ್ಸನ್ ಕೊಟ್ಟಿಡಿ.... ಅಕಾಡೆಮಿಯ ಅಧ್ಯಕ್ಷರಾಗಿ, ಒಂದು ಗೌರವಯುತ ಸ್ಥಾನದಲ್ಲಿದ್ದುಕೊಂಡು ನೀವು ಹೀಗೆಲ್ಲಾ ನಡೆದುಕೊಳ್ಳುವುದು ಸರಿಯಲ್ಲ..." ಎಂದು ಅಲವತ್ತುಕೊಂಡಿದ್ದಾರೆ.



ಇಷ್ಟೊತ್ತಿಗಾಗಲೇ ಭರಣ ಡಬಲ್ ಗೇಮ್ ಆಡುತ್ತಿದ್ದಾರೆ, ಸುಖಾಸುಮ್ಮನೆ ಜಯಮಾಲಾ ಅವರ ಮೇಲೆ ಆರೋಪ ಹೊರಿಸುತ್ತಿದ್ದಾರೆ ಎಂಬುದು ಅಲ್ಲಿದ್ದವರಿಗೆಲ್ಲ ಗೊತ್ತಾಗಿದೆ. ಇದನ್ನು ಇನ್ನಷ್ಟು ಬೆಳೆಯಲು ಬಿಟ್ಟರೆ ಚಿತ್ರರಂಗದ ಮರ್ಯಾದೆ ಹರಾಜಾಗಲಿದೆ ಎಂಬ ಕಾರಣಕ್ಕೆ ಅಲ್ಲಿ ನೆರೆದಿದ್ದ ನಿರ್ದೇಶಕರ ಸಂಘದವರು ಮತ್ತು ವಾಣಿಜ್ಯ ಮಂಡಳಿಯವರೆಲ್ಲಾ ಸೇರಿ "ಈ ವಿಚಾರವನ್ನು ಮಾಧ್ಯಮದ ಕಿವಿಗೆ ಬೀಳದಂತೆ ನೋಡಿಕೊಳ್ಳಬೇಕು. ಯಾರು ಏನೇ ಕೇಳಿದರೂ ಇದು ಚಿತ್ರರಂಗದ ಕುರಿತಾದ ಸಭೆ ಎಂದಷ್ಟೇ ಹೇಳಬೇಕು" ಎಂಬ ನಿರ್ಣಯಕ್ಕೆ ಬಂದಿದ್ದಾರೆ.

ಭರಣರಿಗೆ ಬೇಕಿತ್ತಾ ಇದೆಲ್ಲ?



ಹಿರಿಯರಾದ, ಸದಭಿರುಚಿ ಚಿತ್ರಗಳ ನಿರ್ದೇಶಕರೂ ಆಗಿರುವ ನಾಗಾಭರಣರಿಗೆ ಇಂಥ ಕೀಳುಮಟ್ಟದ ರಾಜಕೀಯ ಮಾಡುವ, ಜಯಮಾಲಾ ಅವರ ಮೇಲೆ ಅಪವಾದ ಹೊರಿಸುವ ಚಿಲ್ಲರೆ ಬುದ್ಧಿ ಅದ್ಯಾಕೆ ಬಂತು ಎನ್ನುವುದೇ ಈಗ ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆಯಾಗಿದೆ.

ಹಾಗೆ ನೋಡಿದರೆ, ನೂತನವಾಗಿ ಆರಂಭವಾಗಿರುವ ಸಿನಿಮಾ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಯಾರು ಸೂಕ್ತ ಎಂಬ ಪ್ರಶ್ನೆ ಎದ್ದಾಗ ಕೇಳಿಬಂದಿದ್ದು ಕೆಲವೇ ಹೆಸರುಗಳು. ಅದರಲ್ಲಿ ಭರಣರ ಬೆನ್ನಿಗೆ ನಿಂತು ತೀವ್ರ ಲಾಬಿ ಮಾಡಿದ್ದು ಕೂಡ ಇದೇ ಜಯಮಾಲಾ ಅವರೇ. ಇದು ಎಲ್ಲರಿಗೂ ಗೊತ್ತಿರುವ ವಿಚಾರವೂ ಹೌದು. ಇಂಥದ್ದರಲ್ಲಿ ಭರಣರೇಕೆ ಜಯಮ್ಮನ ವಿರುದ್ಧ ತಿರುಗಿಬಿದ್ದರು? ಅಷ್ಟಕ್ಕೂ ಭರಣರಿಗೆ ಇದೆಲ್ಲ ಬೇಕಿತ್ತಾ?

ರಾಂಗಾದ ರಾಕ್!

ಚಿತ್ರರಂಗದಲ್ಲಿ ಯಾವುದೇ ಸಮಸ್ಯೆ ಎದುರಾದರೂ, ಯಾವುದೇ ಕದನವೇರ್ಪಟ್ಟರೂ ಅಲ್ಲಿ ಮಧ್ಯಸ್ಥಿಕೆಗೆ ಬರುವುದು 'ಧೀರ' ರಾಕ್‌ಲೈನ್ ವೆಂಕಟೇಶ್. ಈ ಬಾರಿ 'ಧೀರ'ನೇ ಭರಣರ ವಿರುದ್ಧ ತಿರುಗಿಬಿದ್ದಿದ್ದಾರೆ.

"ನಾಗಾಭರಣರನ್ನು ಅಕಾಡೆಮಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಕಳಿಸಿದ್ದೇ ನಾವು. ಏನೋ ತಿಳಿದವರು ಸರ್ಕಾರಕ್ಕೆ ಹತ್ತಿರವಾಗಿದ್ದು ಚಿತ್ರರಂಗದ ಏಳ್ಗೆಗಾಗಿ ಶ್ರಮಿಸಲಿ ಎಂದರೆ ಈ ಮನುಷ್ಯ ಇಂಥ ಬೇಡದ ವಿವಾದ ಸೃಷ್ಟಿಸುತ್ತಿದ್ದಾರೆ. ನಾವೇನಾದರೂ ಸರ್ಕಾರಕ್ಕೆ ಪತ್ರ ಬರೆದು, ಭರಣ ವಿರುದ್ಧ ಒಗ್ಗೂಡಿ ನಿಂತರೆ ಅವರು ಅಧ್ಯಕ್ಷಗಾದಿಯಿಂದ ಕೆಳಗಿಳಿಯಬೇಕಾಗುತ್ತದೆ. ಈ ಸತ್ಯ ಅವರಿಗೆ ತಿಳಿಯಬೇಕಿದೆ..." ಎಂದು ಅಂದಿನ ಸಭೆಯಲ್ಲಿ ರಾಕ್ ಗುಡುಗಿದ್ದಾರೆ.

ನಾಗಾಭರಣ ಅಕಾಡೆಮಿ ಅಧ್ಯಕ್ಷರಾಗಿ ನೇಮಕಗೊಂಡು ಆರು ತಿಂಗಳೇ ಕಳೆದರೂ ಹೇಳಿಕೊಳ್ಳುವ ಯಾವ ಕಾರ್ಯಗಳೂ ಆರಂಭವಾಗಿಲ್ಲ. ಸಿನಿಮಾ ಪತ್ರಕರ್ತರೆಲ್ಲ ಸೇರಿ 'ಸಿನಿಮಾ ತಾರೆಯರ ಮಾತು ಮಂಥನ' ಎನ್ನುವ ವಿಶಿಷ್ಟ ಚಾವಡಿಯೊಂದನ್ನು ಆರಂಭಿಸಿದ್ದರು. ಅದನ್ನೇ ರೀಮೇಕ್ ಮಾಡಿದ ಭರಣ, ಅಕಾಡೆಮಿಯ ಮೂಲಕ 'ಬೆಳ್ಳಿ ಹೆಜ್ಜೆ' ಎನ್ನುವ ಅಂಥದ್ದೇ ಕಾರ್ಯಕ್ರಮವನ್ನು ಶುರು ಮಾಡಿದ್ದಾರೆ. ಬಾದಾಮಿ ಹೌಸ್‌ನಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಬಂದವರಿಗೆ ನೆಟ್ಟಗೆ ಕೂರಲೂ ಜಾಗವಿರುವುದಿಲ್ಲ.

ಬೆಂದು ಬಸವಳಿದಿರುವ ಚಿತ್ರರಂಗವನ್ನು ಉದ್ಧಾರ ಮಾಡುವ ನಿಟ್ಟಿನಲ್ಲಿ ಯಾವೊಂದು ಕಾರ್ಯವನ್ನೂ ಮಾಡದ ಅಕಾಡೆಮಿ ಮತ್ತು ಅದರ ಅಧ್ಯಕ್ಷ "ಸಿನಿಮಾ ಸಬ್ಸಿಡಿ ಮತ್ತು ಪ್ರಶಸ್ತಿ ಆಯ್ಕೆಯ ಜವಾಬ್ದಾರಿ ನಮ್ಮ ಸುಪರ್ದಿಗೆ ಬರಬೇಕು" ಎಂದು ಹಠ ಹಿಡಿದು ಕುಳಿತಿದೆ. ಆದರೆ, ವಾರ್ತಾ ಇಲಾಖೆ ಇದಕ್ಕೆ ಒಪ್ಪದೇ "ನಿಮ್ಮದೇನಿದ್ದರೂ ಕ್ರಿಯೇಟೀವ್ ಪಾರ್ಟು. ಎಲ್ಲ ಅಧಿಕಾರವನ್ನೂ ನಿಮಗೇ ವಹಿಸಲು ಸಾಧ್ಯವಿಲ್ಲ" ಎಂದು ಹೇಳುತ್ತಿದ್ದು ಈ ಸಂಬಂಧ ಭರಣ ಮತ್ತು ವಾರ್ತಾ ಇಲಾಖೆಯ ಅಧಿಕಾರಿಗಳ ಮಧ್ಯೆ ಒಳಗುದ್ದಾಟಗಳು ಆರಂಭವಾಗಿವೆ.


ಅದೆಲ್ಲ ಏನೇ ಇದ್ದರೂ ಒಟ್ಟಾರೆ ಚಿತ್ರರಂಗವನ್ನು ಉದ್ಧಾರ ಮಾಡುತ್ತೇವೆ ಎಂದು ಟೊಂಕ ಕಟ್ಟಿನಿಂತು, ಗಂಟಲು ಹರಿದುಕೊಳ್ಳುವಂತೆ ಮಾತನಾಡುವ (ಅ)ಭರಣಗಳು ಅವರಿವರ ಮೇಲೆ ಗೂಬೆ ಕೂರಿಸುವುದನ್ನು ಬಿಟ್ಟು ಚಿತ್ರರಂಗದ ಸಭೆ, ಸಮಾರಂಭಗಳಲ್ಲಿ ಕಾರ್ಮಿಕರಿಗೆ ಮತ್ತು ತಂತ್ರಜ್ಞರಿಗೆ ಸ್ಥಾನಮಾನ ನೀಡಬೇಕಿದೆ, ಅಷ್ಟೇ....

• ಅರುಣ್ ಕುಮಾರ್.ಜಿ
arunodayagc@gmail.com

ಶಿವಮೊಗ್ಗೆಯ ಪ್ರಶಸ್ತಿ ಸಮಾರಂಭ

ಮತ್ತೊಮ್ಮೆ ಅಧ್ವಾನವಾಗದಿರಲಿ...

...ಶಿವಮೊಗ್ಗೆಯಲ್ಲಿ ಬರುವ ಏಪ್ರಿಲ್ ನಾಲ್ಕರಂದು ...್ಯ ಚಲನಚಿತ್ರ ಪ್ರಶಸ್ತಿ ಸಮಾರಂಭ ನಡೆಯಲಿದೆ. ...ಶಿವಮೊಗ್ಗೆ ಅಂದಾಕ್ಷಣ ನಮ್ಮ ನೆನಪಿಗೆ ಬರುವುದು ...ಲೆನಾಡಿನ ಹಚ್ಚಹಸಿರು. ಹಾಗೆಯೇ ರಾಷ್ಟ್ರಕವಿ ...ೆಂಪು, ಜಾಣಜಾಣೆಯರ ಲಂಕೇಶ್, ಜ್ಞಾನಪೀಠ ...ಸ್ತಿ ವಿಜೇತ ಯು.ಆರ್. ಅನಂತಮೂರ್ತಿ, ಪೂರ್ಣ...ವ್ರ ತೇಜಸ್ವಿ, ಕಡಿದಾಳು ಶಾಮಣ್ಣ... ...ದಲಾದವರು. ಇಂತಹ ಸಾಹಿತಿ ಮತ್ತು ...ದ್ಧಿಜೀವಿಗಳ ನಾಡಾದ ಶಿವಮೊಗ್ಗದಲ್ಲಿ ...ಮಾ ತಾರೆಯರ ಜಾತ್ರೆ ನಡೆಯಲಿರುವುದು ...ು ರೀತಿಯಲ್ಲಿ ವಿಶೇಷವೇ ಸರಿ.




...ಶಿವಮೊಗ್ಗೆ, ಮುಖ್ಯಮಂತ್ರಿ ಯಡಿ...ೂರಪ್ಪನವರ ಜಿಲ್ಲೆಯಾಗಿರುವುದರಿಂದ ...ರು ತಮ್ಮ ಜಾಪ್ಯುಲಾರಿಟಿಯನ್ನು ...ಸಿಕೊಳ್ಳಲು ಈ ಕಾರ್ಯಕ್ರಮವನ್ನು ...ಹಮ್ಮಿಕೊಂಡಿದ್ದಾರೆ. ಆದರೆ ವೀರೇಂದ್ರ ...ಟೀಲ್, ದೇವೇಗೌಡ, ಎಸ್. ಆರ್.ಬೊಮ್ಮಾಯಿ, ...ಪ್ಪ ಮೊಯ್ಲಿ, ಜೆ.ಎಚ್. ಪಟೇಲ್, ಧರ್ಮಸಿಂಗ್, ...ಎಂ.ಕೃಷ್ಣ, ಕುಮಾರಸ್ವಾಮಿ.... ಹೀಗೆ ಬಹುತೇಕ ಎಲ್ಲಾ ಮುಖ್ಯಮಂತ್ರಿಗಳು ಅವರವರ ಜಿಲ್ಲಾ ಕೇಂದ್ರದಲ್ಲಿ ಸಿನಿಮಾ ಪ್ರಶಸ್ತಿ ಸಮಾರಂಭವನ್ನು ನಡೆಸಿದ್ದಾರೆ. ಹೀಗಾಗಿ ಯಡ್ಡಿ ಈಗ ಶಿವಮೊಗ್ಗೆಯಲ್ಲಿ ನಡೆಸುತ್ತಿರುವುದರಲ್ಲಿ ವಿಶೇಷವೇನೂ ಇಲ್ಲ.

ಇದಕ್ಕಿಂತ ಮೊದಲು ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ ಶಿವಮೊಗ್ಗೆಯ ನೆಹರೂ ಮೈದಾನದಲ್ಲಿ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಡೆಸಿದ್ದರು. ಹೀಗಾಗಿ ಶಿವಮೊಗ್ಗೆಯ ಜನತೆಗೆ ಈ ಪ್ರಶಸ್ತಿ ಸಮಾರಂಭದ ಥ್ರಿಲ್ ಹೊಸತೇನೂ ಅಲ್ಲ. ಅಂದು ಸಮಾಜವಾದಿ ಸಿದ್ಧಾಂತದ ಪಟೇಲರು ಮುಖ್ಯಮಂತ್ರಿಯಾಗಿದ್ದರೆ, ಇಂದು ಕೇಸರಿ ಸಿದ್ಧಾಂತದ ಯಡಿಯೂರಪ್ಪ ಮುಖ್ಯಮಂತ್ರಿ ಎಂಬುದಷ್ಟೇ ವ್ಯತ್ಯಾಸ.

ಈ ಬಾರಿಯ ಪ್ರಶಸ್ತಿಯ ವಿಶೇಷತೆ ಎಂದರೆ, ಈ ಪ್ರಶಸ್ತಿ 2007-08ನೇ ಸಾಲಿನದ್ದಾಗಿರುತ್ತದೆ. ಇದು ಘೋಷಣೆಯಾಗಿದ್ದು 2009ರಲ್ಲಿ, ಈಗ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯುತ್ತಿರುವುದು 2010ರಲ್ಲಿ, ಅಂದರೆ, ರಾಜ್ಯ ಸರ್ಕಾರ ಎಷ್ಟು ವೇಗವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದಕ್ಕೆ ಇದೊಂದು ಪುಟ್ಟ ಉದಾಹರಣೆ.

ಇದರಿಂದಾಗುವ ಅನಾಹುತ ನೋಡಿ. ಜೀವಮಾನದ ಶ್ರೇಷ್ಠ ಪ್ರಶಸ್ತಿಗೆ ಆಯ್ಕೆ ಸಮಿತಿ ವಿಷ್ಣುವರ್ಧನ್ ಅವರನ್ನು ಆಯ್ಕೆ ಮಾಡಿತ್ತು, ಆದರೆ ಇಂದು ಆ ಪ್ರಶಸ್ತಿಯನ್ನು ಸ್ವೀಕರಿಸಲು ವಿಷ್ಣು ನಮ್ಮ ನಡುವಿಲ್ಲ, ಮತ್ತೊಂದೆಡೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ವಿಜೇತರಾದ ರೇಣುಕಾಶರ್ಮ ಕಳೆದ ಹಲವಾರು ತಿಂಗಳುಗಳಿಂದ ತೀವ್ರ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದಾರೆ. ಏನೋ ನಮ್ಮೆಲ್ಲರ ಅದೃಷ್ಟ, ಈಗ ರೇಣುಕಾಶರ್ಮ ಗುಣಮುಖರಾಗಿದ್ದಾರೆ.



ಶಿವಮೊಗ್ಗೆಯಲ್ಲಿ ನಡೆಯಲಿರುವ ಈ ಸಮಾರಂಭದಲ್ಲಿ ವಿಷ್ಣುವರ್ಧನ್ ಬದಲಿಗೆ ಭಾರತಿ ವಿಷ್ಣುವರ್ಧನ್ ಪ್ರಶಸ್ತಿ ಸ್ವೀಕರಿಸುತ್ತಿರುವುದು ಒಂದು ಭಾವನಾತ್ಮಕ ಸಂಗತಿಯಾಗಲಿದೆ. ಹಾಗೆಯೇ ಪುನೀತ್ ರಾಜ್‌ಕುಮಾರ್ ಮತ್ತು ಪಾರ್ವತಮ್ಮ ರಾಜ್‌ಕುಮಾರ್ ಒಂದೇ ವೇದಿಕೆಯಲ್ಲಿ ಮೊದಲ ಬಾರಿಗೆ ಪ್ರಶಸ್ತಿಯನ್ನು ಸ್ವೀಕರಿಸಲಿರುವುದು ಕೂಡಾ ಅವರ ಅಭಿಮಾನಿಗಳ ಪಾಲಿಗೆ ಭಾವೋನ್ಮಾದವನ್ನುಂಟುಮಾಡಲಿದೆ. ಯಾಕೆಂದರೆ, ಪಾರ್ವತಮ್ಮ ಪ್ರಶಸ್ತಿ ವಿಜೇತರಾಗಿ ವೇದಿಕೆಯನ್ನು ಅಲಂಕರಿಸುತ್ತಿರುವುದು ಇದೇ ಮೊದಲ ಬಾರಿ.

ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿದ್ದಾಗ ನಡೆದ ಸಮಾರಂಭಕ್ಕೆ ಜನ ಕಿಕ್ಕಿರಿದು ಸೇರಿದ್ದರು. ಆದರೆ ವ್ಯವಸ್ಥೆ ಮಾತ್ರ ತೀರಾ ಅವ್ಯವಸ್ಥೆಯಿಂದ ಕೂಡಿತ್ತು. ಎಲ್ಲೀತನಕ ಎಂದರೆ, ಪ್ರಶಸ್ತಿ ಪ್ರದಾನ ಸಮಾರಂಭ ಮುಗಿದನಂತರ ಪತ್ರಕರ್ತರಿಗೆ ಊಟದ ವ್ಯವಸ್ಥೆಯೂ ಇರಲಿಲ್ಲ. ಆಗ ಸರ್ಕಾರದ ಈ ಸಮಾರಂಭವನ್ನು ಮತ್ತು ಅಧಿಕಾರಿಗಳ ಬೇಜವಾಬ್ದಾರಿತನವನ್ನು ಪ್ರತಿಭಟಿಸಿ ಪತ್ರಕರ್ತರು ದಾರಿ ಮಧ್ಯೆ ಡಾಬಾದಲ್ಲಿ ಸ್ವಂತ ಹಣದಲ್ಲೇ ಊಟ ಮಾಡಿದ್ದರು. ಆಗ ಅಲ್ಲಿಗೆ ಬಂದು ಸೇರಿದ ಲೀಲಾವತಿ ಮತ್ತು ವಿನೋದ್‌ರಾಜ್ ಬೆಳಗಿನ ಜಾವದತನಕ ಪತ್ರಕರ್ತರನ್ನು ರಂಜಿಸಿದ್ದರು. ಅಂದು ಶಿವಮೊಗ್ಗೆಯಲ್ಲಿ ನಡೆದ ಸಮಾರಂಭಕ್ಕಿಂತ ಈ ತಾಯಿ ಮಗ ಪತ್ರಕರ್ತರನ್ನು ರಂಜಿಸಿದ್ದೇ ಹೆಚ್ಚು ಆಕರ್ಷಣೆಯಾಗಿತ್ತು.

ಹೀಗೆ ಶಿವಮೊಗ್ಗೆ ಎಂದಾಕ್ಷಣ ಹಿಂದಿನ ಪ್ರಶಸ್ತಿ ಸಮಾರಂಭದ ಅವ್ಯವಸ್ಥೆಗಳೆಲ್ಲಾ ನೆನಪಾಗುತ್ತವೆ. ಈ ವರ್ಷ ಮತ್ತೆ ನಡೆಯಬಹುದಾದ ಇಂಥ ಅವ್ಯವಸ್ಥೆ ತಮಾಷೆಯ ಪ್ರಸಂಗಗಳನ್ನು ನೆನಪಿಸಿಕೊಳ್ಳುತ್ತಾ ಶಿವಮೊಗ್ಗೆಯ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಶುಭ ಹಾರೈಸೋಣ. ಮುಂದಿನ ವಾರ ಅಲ್ಲಿಯ ಸಮಾರಂಭದ ಬಗ್ಗೆ ವಿವಿಧ ವಿನೋದಾವಳಿಗಳ ಬಗ್ಗೆ ಹೇಳುವುದು ಇದ್ದೇ ಇರುತ್ತದೆ...

• ಶೆಣೈ
shenoylankesh@gmail.com

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 14-04-2010

75ರ ಸಡಗರ ನಾಯಕನಟರ ಬರ!

ಪೆರೋಲ್
ಸುಪ್ರಿತಾ







ಕನ್ನಡ ಚಿತ್ರರಂಗವು ನಾಯಕನಟರ ಕೊರತೆಯಿಂದಾಗಿ ಈಗ ವಿಚಿತ್ರವಾದ ಸಮಸ್ಯೆಗಳನ್ನು ಎದುರಿಸುತ್ತಿದೆ.

75 ವಸಂತಗಳನ್ನು ಪೂರೈಸಿರುವ ಚಿತ್ರರಂಗಕ್ಕೆ ಈ ತರಹದ ಸಮಸ್ಯೆ ಎದುರಾಗುತ್ತಿರುವುದು ಇದೇ ಮೊದಲ ಬಾರಿ. ಹಿಂದೊಂದು ಕಾಲವಿತ್ತು. ಕೆಲವು ನಾಯಕನಟರು ಎಲ್ಲಾ ತರಹದ ಪಾತ್ರಗಳಿಗೆ ಸರಿಹೊಂದುತ್ತಿದ್ದರು. ಮುಖ್ಯವಾಗಿ ಡಾ.ರಾಜ್ ಮತ್ತು ವಿಷ್ಣುವರ್ಧನ್ ಬಗ್ಗೆ ಉದ್ಯಮದವರು ಆ ರೀತಿ ಮಾತನಾಡುತ್ತಿದ್ದರು. ಅವರನ್ನು ಹಾಕಿಕೊಂಡು ನಿರ್ದೇಶಕ ಧೈರ್ಯವಾಗಿ ಚಿತ್ರವನ್ನು ಮಾಡುತ್ತಿದ್ದರು ಎಂಬುದಕ್ಕಿಂತ ತಮ್ಮ ಕಲ್ಪನೆಗೆ ನಿಲುಕಿದ ಕಥೆ, ಚಿತ್ರಕಥೆಯನ್ನು ಧೈರ್ಯವಾಗಿ ಬರೆಯುತ್ತಿದ್ದರು. ಈಗ ದುರದೃಷ್ಟವಶಾತ್ ಹಾಗೆ ಎಲ್ಲ ಪಾತ್ರಗಳಿಗೆ ಸಲ್ಲುವಂತಹ ನಾಯಕನಟರೇ ಇಲ್ಲದಂತಾಗಿದೆ.

ನೀವೇ ನೋಡಿ. ಯಾವುದೇ ಪಾತ್ರಕ್ಕೂ ಸರಿಹೊಂದುತ್ತಿದ್ದ ಡಾ.ರಾಜ್ ನಿರ್ವಹಿಸದ ಪಾತ್ರಗಳೇ ಇಲ್ಲ. ಅದು ಪೌರಾಣಿಕವಿರಬಹುದು, ಸಾಮಾಜಿಕ ಪಾತ್ರಗಳಿರಬಹುದು, ಬಾಂಡ್ ಇರಬಹುದು, ಕಳ್ಳ, ಪೊಲೀಸ್, ಭಕ್ತ, ರಾಜ, ಬಡವ... ಹೀಗೆ ಡಾ.ರಾಜ್ ಬಹುತೇಕ ನಿರ್ದೇಶಕರು ಕೊಟ್ಟ ಪಾತ್ರಗಳಿಗೆ ಜೀವ ತುಂಬಿದರು.

ಡಾ.ರಾಜ್ ನಂತರ ಅದೇ ಹಾದಿಯಲ್ಲಿ ಸಾಗಿದವರೆಂದರೆ ವಿಷ್ಣುವರ್ಧನ್. ಅಣ್ಣಾವ್ರ ತರಹ ವಿಷ್ಣು ಪೌರಾಣಿಕ ಪಾತ್ರಗಳಲ್ಲಿ ವಿಜೃಂಭಿಸಲಿಲ್ಲ ಎಂಬ ಕೊರಗನ್ನು ಬಿಟ್ಟರೆ ಬಹುತೇಕ ಬೇರೆಲ್ಲಾ ಪಾತ್ರಗಳಲ್ಲಿ ಮಿಂಚಿದ್ದಾರೆ. ಆರಂಭದಲ್ಲಿ ಆ್ಯಂಗ್ರಿ ಯಂಗ್‌ಮನ್ ಆಗಿದ್ದ ವಿಷ್ಣು ಅನಂತರ 'ಬಂಧನ' ಚಿತ್ರದ ಮುಖಾಂತರ ಭಾವಾಭಿನಯಕ್ಕೆ ಹೆಸರಾದರು. 'ಗುರುಶಿಷ್ಯರು' ಚಿತ್ರದಲ್ಲಿ ಕಾಮಿಡಿ ಕಿಂಗ್ ಎನಿಸಿಕೊಂಡರು. ಕೊನೆಕೊನೆಗೆ ಗಿರಿಜಾ ಮೀಸೆಯ ಯಜಮಾನರುಗಳ ಪಾತ್ರಗಳಲ್ಲೂ ಮಿಂಚಿದರು.

ಆದರೆ ರಾಜ್ ಮತ್ತು ವಿಷ್ಣು ನಂತರ ಚಿತ್ರರಂಗದ ದಿಗಂತದಲ್ಲಿ ಕಾಣಿಸಿಕೊಂಡ ಅನೇಕ ನಾಯಕನಟರು ಒಂದೊಂದು ಇಮೇಜಿಗೆ ಅಂಟಿಕೊಂಡರು. ಉದಾಹರಣೆಗೆ ಅಂಬರೀಶ್ 'ರೆಬೆಲ್‌ಸ್ಟಾರ್' ಇಮೇಜಿನ ಗುಂಗಿನಿಂದ ಹೊರಬರಲು ಆಗಲೇ ಇಲ್ಲ. ಹೀಗಾಗಿ ಅಂಬಿ ಚಿತ್ರಗಳು ಹೊಡಿ-ಬಡಿ-ಕಡಿಗೆ ಸೀಮಿತವಾಗಿರುತ್ತಿತ್ತು. ಅಂಬಿ ಸಮಕಾಲೀನರಾದ ಅನಂತ್ ನಾಗ್ ಮತ್ತೊಂದು ವರ್ಗದ ಪ್ರೇಕ್ಷಕರಿಗಷ್ಟೇ ಸೀಮಿತರಾದರು. ನೃತ್ಯ ಮತ್ತು ಫೈಟಿಂಗನ್ನು ಅನಂತ್ ಕೈಯಲ್ಲಿ ಮಾಡಿಸಲು ನಿರ್ದೇಶಕರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಹೀಗಾಗಿ ಅನಂತ್ ಎಂದೂ ಬಿ ಮತ್ತು ಸಿ ಕೇಂದ್ರದ ಪ್ರೇಕ್ಷಕರ ಅಚ್ಚುಮೆಚ್ಚಿನ ನಟನಾಗದೇ ಬರೀ ಮಧ್ಯಮವರ್ಗದ, ವಿದ್ಯಾವಂತರ ನಟರಾಗಿಯೇ ಉಳಿದರು.

ಈ ನಡುವೆ ರವಿಚಂದ್ರನ್ ಎಂಬ ಕ್ರೇಜಿ ಸ್ಟಾರ್ ತಾನು ಹುಟ್ಟಿರುವುದೇ ಲವ್ ಸ್ಟೋರಿಗಳನ್ನು ನಿರ್ವಹಿಸಲು ಎಂಬಂತೆ ಬರೀ ಅಂತಹ ಪಾತ್ರಗಳಲ್ಲೇ ಕಾಣಿಸಿಕೊಂಡರು. ಪ್ರೇಮ ಕಥಾವಸ್ತುವನ್ನು ಹೊಂದಿದ್ದ ಚಿತ್ರಗಳನ್ನು ಹೊರತುಪಡಿಸಿ ಈ ಕ್ರೇಜಿ ಸ್ಟಾರ್ ಈ ಕ್ಷಣದ ತನಕ ಬೇರಾವುದೇ ಪಾತ್ರಗಳನ್ನು ನಿರ್ವಹಿಸಿಲ್ಲ ಎಂದರೆ ಅಚ್ಚರಿಯಾಗುವುದಿಲ್ಲವೇ?

ಶಂಕರ್‌ನಾಗ್ ಇದ್ದ ಅತ್ಯಲ್ಪ ಸಮಯದಲ್ಲಿ ಎಲ್ಲಾ ವಯೋಮಾನದ ಪ್ರೇಕ್ಷಕರನ್ನು ಮೆಚ್ಚಿಸುವತ್ತ ಸಾಗುತ್ತಿದ್ದಾಗಲೇ ನಿಧನ ಹೊಂದಿದರು. ಟೈಗರ್ ಪ್ರಭಾಕರ್ ಆರಂಭದಲ್ಲಿ ಡಿಶ್ಯೂಂ ಡಿಶ್ಯೂಂ ಹೀರೋ ಆಗಿಯೇ ಮೆರೆದರೂ, ಒಂದೆರಡು ಬಾರಿ ತಾಯಿ ಪ್ರೇಮವನ್ನೂ ವ್ಯಕ್ತಪಡಿಸುವ ಚಿತ್ರಗಳಲ್ಲಿ ಮಿಂಚಿದರು. ಆದರೂ ಜನ ಟೈಗರ್ ಪ್ರಭಾಕರ್ ಚಿತ್ರವೆಂದರೆ ಅದರಲ್ಲಿ ಬರುಸಿನ ಫೈಟಿಂಗ್, ಅರೆನಗ್ನ ಹುಡುಗಿಯರ ನೃತ್ಯವಿರುತ್ತದೆ ಎಂದು ಕೊನೆಗೆ ತೀರ್ಮಾನಿಸುವಂತಾಯಿತು.

ಹೀಗೆ ಹಳೆ ಹುಲಿಗಳು ಆರ್ಭಟಿಸುತ್ತಿದ್ದ ಸಂದರ್ಭದಲ್ಲಿ ಚಿತ್ರರಂಗಕ್ಕೆ ಕಾಲಿಟ್ಟವರೆಂದರೆ ಶಿವರಾಜ್‌ಕುಮಾರ್, ರಮೇಶ್ ಅರವಿಂದ್, ರಾಮ್‌ಕುಮಾರ್, ಶಶಿಕುಮಾರ್, ಶ್ರೀಧರ್, ಸುನೀಲ್, ರಾಘವೇಂದ್ರ ರಾಜ್‌ಕುಮಾರ್, ದೇವರಾಜ್, ರಘುವೀರ್, ಜಗ್ಗೇಶ್, ವಿನೋದ್ ರಾಜ್, ಕುಮಾರ್ ಗೋವಿಂದ್, ಕುಮಾರ್ ಬಂಗಾರಪ್ಪ... ಇವರಲ್ಲಿ ಕೆಲವರು ಮಾತ್ರ ಚಲಾವಣೆಯಲ್ಲಿ ಉಳಿದುಕೊಂಡರು.

ಇವರಲ್ಲಿ ಶಿವರಾಜ್‌ಕುಮಾರ್ ಮಾತ್ರ ಡಿಶ್ಯುಂಡಿಶ್ಯುಂ ಮತ್ತು ಸೆಂಟಿಮೆಂಟ್ ಪಾತ್ರಗಳಲ್ಲಿ ಏಕ ಪ್ರಕಾರವಾಗಿ ಮಿಂಚಿ ನಿರ್ದೇಶಕರ ಫೇವರಿಟ್ ನಟ ಎನಿಸಿಕೊಂಡರು. ಆದರೆ ದೇವರಾಜ್ ಬರೀ ಪೊಲೀಸ್ ಪಾತ್ರಗಳಿಗಷ್ಟೇ ಮೀಸಲಾದರು. ಜಗ್ಗೇಶ್ ವಿಚಿತ್ರ ಹಾವಭಾವದ ಕಾಮಿಡಿ ಪಾತ್ರಗಳಲ್ಲಿ ಗೆದ್ದರೆ ವಿನಃ ಅವರು ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ನೋಡುವ ನಾಯಕನಟನಾಗಿ ಬೆಳೆಯಲೇ ಇಲ್ಲ. ಉಳಿದಂತೆ ಸ್ವಲ್ಪಮಟ್ಟಿಗೆ ಅನಂತ್ ನಾಗರವರ ಸ್ಥಾನವನ್ನು ಆಕ್ರಮಿಸಿದ ರಮೇಶ್ ಅರವಿಂದ್ ಬರೀ ಪಟ್ಟಣದ ಪ್ರೇಕ್ಷಕರ ಡಾರ್ಲಿಂಗ್ ಎನಿಸಿಕೊಂಡರು.

ಪರಿಸ್ಥಿತಿ ಈಗ ಇನ್ನೂ ಬಿಗಡಾಯಿಸಿದೆ. ಈಗಿರುವ ನಾಯಕನಟರತ್ತ ಕಣ್ಣು ಹಾಯಿಸಿ ನೋಡಿದರೆ ನಿಮಗೆ ಅರ್ಥವಾಗುತ್ತದೆ. ದರ್ಶನ್ ಹೊಡಿ-ಬಡಿ-ಕಡಿ ಮತ್ತು ಲಾಂಗ್ ಮಚ್ಚುಗಳ ನೆರವಿಲ್ಲದೆ ನಟಿಸಲಾರ. ಸುದೀಪ್ ಸ್ವಲ್ಪಮಟ್ಟಿಗೆ ಶಿವರಾಜ್‌ಕುಮಾರ್ ಹಾದಿಯಲ್ಲೇ ಸಾಗುತ್ತಾ ತನ್ನ ಪ್ರತಿಭಾ ಪ್ರದರ್ಶನವನ್ನು ಮಾಡಿದ್ದಾರೆ. ಆದರೆ ಅತ್ತ ಹಿಂದಿ, ಇತ್ತ ಕನ್ನಡ ಎಂದು ಬಿಜಿಯಾಗಿರುವ ಸುದೀಪ್ ನಿರ್ದೇಶಕರ ಪಾಲಿಗೆ ಗಗನಕುಸುಮವಾಗಿದ್ದಾರೆ. ಇನ್ನು ಗೋಲ್ಡನ್ ಸ್ಟಾರ್ ಗಣೇಶ್ ಚಿತ್ರದಲ್ಲಿ ಮಳೆಯಿರಲೇಬೇಕು ಎಂಬಂತಾಗಿದೆ. ಇನ್ನು ವಿಜಯ್ ತನ್ನ ಶರ್ಟ್ ತೆಗೆದು ತನ್ನ ಮೈಕಟ್ಟನ್ನು ತೋರಿಸುವುದೇ ನಟನೆಯೆಂದು ಭಾವಿಸಿದಂತಿದೆ. ಆದಿತ್ಯಾ, ಪ್ರೇಮ್, ಯೋಗೇಶ್, ವಿಜಯರಾಘವೇಂದ್ರ, ಮುರುಳಿ, ಅಜಯ್, ಪ್ರಜ್ವಲ್, ಸುನೀಲ್, ಬಾಲಾಜಿ, ನಾಗಕಿರಣ್, ಪಂಕಜ್... ಮೊದಲಾದವರನ್ನು ಪ್ರೇಕ್ಷಕರು ನಾಯಕನಟರೆಂದು ಒಪ್ಪಿಕೊಂಡಿದ್ದು ಅವರ ಅದೃಷ್ಟ. ಇವರುಗಳೆಲ್ಲಾ ಒಂದೊಂದೇ ಇಮೇಜಿಗೆ ಅಂಟಿಕೊಂಡಿದ್ದಾರೆಯೇ ವಿನಹ ಅವರಿಂದ ಎಲ್ಲಾ ತರಹದ ಪಾತ್ರಗಳನ್ನು ನಿಭಾಯಿಸುವುದು ಅಸಾಧ್ಯ. ಇವರು ಯಾವತ್ತೂ ರಾಜ್ ಮತ್ತು ವಿಷ್ಣು ತರಹ 'ಸಕಲಕಲಾವಲ್ಲಭ'ರಾಗಲಾರರು.

ಈ ಎಲ್ಲಾ ಕಾರಣಗಳಿಂದಾಗಿ ನಿರ್ದೇಶಕರಿಗೆ ಮತ್ತು ಕಥೆಗಾರರಿಗೆ ಕನ್ನಡ ಚಿತ್ರರಂಗದಲ್ಲಿ ನಾಯಕನಟರ ಕೊರತೆ ಪ್ರತಿಕ್ಷಣಕ್ಕೂ ಕಾಡುತ್ತಿದೆ....

• ಶೆಣೈ











ಲಂಕೇಶ್ ಬಳಗದ ಗೈಡ್

KAS ಪೂರ್ವಭಾವಿ ಪರೀಕ್ಷೆಗಾಗಿ....

ವಿಶೇಷ ಲೇಖನಗಳು
-2009-10ರ ಭಾರತ ಆರ್ಥಿಕ ಸಮೀಕ್ಷೆ
-ಮೊಗಲರ ಕೊಡುಗೆಗಳು
-ಭಾರತ ರಾಷ್ಟ್ರೀಯ ಚಳವಳಿ-ಕನ್ನಡ ಸಾಹಿತ್ಯ
-ಸಾಮಾನ್ಯ ಅಧ್ಯಯನ-ಮೆಂಟಲ್ ಎಬಿಲಿಟಿ
-ಪ್ರಚಲಿತ ಘಟನೆಗಳ ಸಮಗ್ರ ಮಾಹಿತಿ

ಮಾರುಕಟ್ಟೆಯಲ್ಲಿ ಬೇರೆಲ್ಲಾ ಪತ್ರಿಕೆಗಳನ್ನು ಮೀರಿಸಿರುವ...

100 ಪುಟಗಳ ವಿಶೇಷಾಂಕ

ಏಪ್ರಿಲ
ಸಂಚಿ
ಎಲ್ಲೆಡೆ ಲ

ಬೆಲೆ ರೂ
20/-

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-